ಕಳಲೆ ದಳವಾಯಿಗಳು : ಚಾರಿತ್ರಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ ಅರ್ಪಿಸುತ್ತಿರುವ ನಿಬಂಧ)

ಸಂಶೋಧಕರು

ಉಮೇಶ ಸಿ.ಜಿ.

ಮಾರ್ಗದರ್ಶಕರು

ಡಾ. ವಾಸುದೇವ ಬಡಿಗೇರ

ಪ್ರವಾಚಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯

ಕಳಲೆ ದಳವಾಯಿಗಳು : ಚಾರಿತ್ರಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ ಅರ್ಪಿಸುತ್ತಿರುವ ನಿಬಂಧ)

ಸಂಶೋಧಕರು

ಉಮೇಶ ಸಿ.ಜಿ.

ಮಾರ್ಗದರ್ಶಕರು

ಡಾ. ವಾಸುದೇವ ಬಡಿಗೇರ

ಪ್ರವಾಚಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೯

ಸಂಶೋಧಕರ ಪ್ರಮಾಣ ಪತ್ರ

ಕಳಲೆ ದಳವಾಯಿಗಳು : ಚಾರಿತ್ರಿಕ ಅಧ್ಯಯನ ಎಂಬ ಸಂಪ್ರಬಂಧವನ್ನು ಡಾ.ವಾಸುದೇವ ಬಡಿಗೇರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಸಮಾಜವಿಜ್ಞಾನಗಳ ನಿಕಾಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಉಮೇಶ ಸಿ.ಜಿ.
ಸಂಶೋಧಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 8-10-2009

ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರ ದೃಢೀಕರಣ ಪತ್ರ

ಕಳಲೆ ದಳವಾಯಿಗಳು : ಚಾರಿತ್ರಿಕ ಅಧ್ಯಯನ ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ ಉಮೇಶ ಸಿ.ಜಿ. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ವಾಸುದೇವ ಬಡಿಗೇರ
ಪ್ರವಾಚಕರು ಮತ್ತು ಮಾರ್ಗದರ್ಶಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 08/10/2009

ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ ೧

ಪ್ರಸ್ತಾವನೆ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ವಿಧಾನ

೧.೪. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

೧.೫. ಅಧ್ಯಯನದ ಸ್ವರೂಪ

೧

ಪ್ರಸ್ತಾವನೆ

ಇತ್ತೀಚಿನವರೆಗೂ ಇತಿಹಾಸವೆಂದರೆ ಪ್ರಸಿದ್ಧ ರಾಜಮನೆತನಗಳ ಬಿಡಿ ಬಿಡಿಯಾದ ಅಧ್ಯಯನ ವಿವರಗಳ ಸಂಕಲನ ಎಂಬ ಅಭಿಪ್ರಾಯ ಬೇರೂರಿತ್ತು. ಇಂತಹ ದೃಷ್ಟಿಕೋನ ಇಂದು ಸಹ ಸಂಪೂರ್ಣವಾಗಿ ಬದಲಾಗಿಲ್ಲ. ಕರ್ನಾಟಕದ ಇತಿಹಾಸದಲ್ಲಿ ಕಂಗೊಳಿಸುವ ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರದಂತಹ ಸಾಮ್ರಾಜ್ಯಗಳ ವೈಭವೀಕರಣದ ಕೆಲಸ ಸಾಕಷ್ಟು ನಡೆದಿದೆ. ಆದರೆ ಅವರ ಕೈಕೆಳಗೆ ಇದ್ದು ನಿಷ್ಠೆಯಿಂದ ತಮ್ಮ ಸೇವೆ ಸಲ್ಲಿಸಿದ ಸಾಮಂತ ನಾಯಕರ ಜೀವನ ವಿವರಗಳು ಇತಿಹಾಸ ಮಟ್ಟದಲ್ಲಿ ಗೌಣವೆಂದು ಹೇಳಬಹುದು. ರಾಜಕೀಯ ಇತಿಹಾಸಕ್ಕೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಟ್ಟು ಇಲ್ಲಿಯವರೆಗೂ ಇತಿಹಾಸವನ್ನು ರಚಿಸಿದ್ದುಂಟು. ರಾಜಕೀಯ ಘಟಕಗಳು ಕರ್ನಾಟಕವೆಂಬ ರಂಗಭೂಮಿಯಲ್ಲಿ ಯಾವ ಯಾವ ಸ್ಪಷ್ಟ ಉದ್ದೇಶಗಳಿಗೆ ಸಂಘಟಿಸಲ್ಪಟ್ಟವು ಮತ್ತು ಅಂತರಿಕ ಒಳರಚನೆ ಹಾಗೂ ಪರಸ್ಪರ ಸಂಬಂಧಗಳನ್ನು ಗುರುತಿಸುವ ಕಾರ್ಯ ಹೆಚ್ಚಾಗಿ ನಡೆದಿಲ್ಲವೆಂದು ಹೇಳಬಹುದು.

ಯಾವುದೇ ದೇಶದ ಇತಿಹಾಸದ ಅಧ್ಯಯನದಲ್ಲಿ ಎರಡು ಮುಖ್ಯವಾದ ಸ್ತರಗಳನ್ನು ಗುರುತಿಸಬಹುದು.

೧. ಮೇಲಸ್ತರದ ಇತಿಹಾಸ

೨. ಕೆಳಸ್ತರದ ಇತಿಹಾಸ

ಮೇಲಸ್ತರದ ಇತಿಹಾಸವು ದೊಡ್ಡ ದೊಡ್ಡ ಸಾಮ್ರಾಜ್ಯಗಳಿಗೆ ಸಂಬಂಧಿಸಿದ್ದಾಗಿದೆ. ಆ ಸಾಮ್ರಾಜ್ಯಗಳು ಉದಯದಿಂದ ಹಿಡಿದು ಅಂತಿಮ ಘಟ್ಟದತನಕ ವಿವರಿಸುವ, ವರ್ಗೀಕರಿಸುವ, ವಿಪುಲ ಮಾಹಿತಿಯನ್ನು ನೀಡುವಂತಹ ಸಂಶೋಧನ ಗ್ರಂಥಗಳು ತುಂಬಾ ಇವೆ. ಇಂತಹ ಸಂಶೋಧನ ಗ್ರಂಥಗಳು ಆಯಾ ಕಾಲದ ಹಾಗೂ ಸ್ಥಳದ ಇತಿಹಾಸದಲ್ಲಿನ ಏರುಪೇರುಗಳನ್ನು ಅಂಕುಡೊಂಕುಗಳನ್ನು ಸ್ಪಷ್ಟವಾಗಿ ಗುರುತಿಸಲು ನೆರವಾದರೂ ಹೆಚ್ಚಿನ ಸಂದರ್ಭದಲ್ಲಿ ವಿಫಲವಾಗುತ್ತವೆ. ಸಾಮಾನ್ಯ ರೀತಿಯ ವೈಭವೀಕರಣದಲ್ಲಿ ಮುಳುಗುವ ಸಾಧ್ಯತೆ ಇಂತಹ ಅಧ್ಯಯನದಲ್ಲಿ ಉಂಟಾಗುತ್ತಿದೆ. ನಿಜವಾದ ಚಿತ್ರ ದೊರಕಬೇಕಾದರೆ ದೊಡ್ಡ ದೊಡ್ಡ ಸಾಮ್ರಾಜ್ಯಗಳ ಆಧಾರ ಸ್ತಂಭಗಳಂತಿದ್ದ ಸಣ್ಣ ಸಣ್ಣ ರಾಜಕೀಯ

ಘಟಕಗಳ ವಿವರವಾದ ಮತ್ತು ಆಳವಾದ ಐತಿಹಾಸಿಕ ಸಂಶೋಧನೆಗಳು ಅವಶ್ಯಕ. ಈ ದಿಸೆಯಲ್ಲಿ ಕರ್ನಾಟಕದ ಇತಿಹಾಸ ಸಂಶೋಧನ ವಲಯದಲ್ಲಿ ಆಗಿರುವ ಕೆಲಸ ಅತಿ ಕಡಿಮೆ ಎಂದು ಹೇಳಬಹುದು. ಆದುದರಿಂದ ಕೆಳಸ್ತರದ ಸಂಶೋಧನೆಯ ಅವಶ್ಯಕತೆ ಬಹಳ ಮುಖ್ಯವಾದುದಾಗಿದೆ.

ಕಳಲೆ ದಳವಾಯಿಗಳು : ಚಾರಿತ್ರಿಕ ಅಧ್ಯಯನ ಎಂಬ ಶೀರ್ಷಿಕೆಯುಳ್ಳ ಪ್ರಸ್ತುತ ಅಧ್ಯಯನವು ಕೆಳಸ್ತರದ ಇತಿಹಾಸ ರಚನೆಯ ದೃಷ್ಟಿಯನ್ನು ಇಟ್ಟುಕೊಂಡು ರೂಪಿಸುವ ಪ್ರಯತ್ನವಾಗಿದೆ. ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ವ್ಯಾಪ್ತಿಗೆ ಬರುವ ಕಳಲೆ ತಾಲೂಕಿನಲ್ಲಿಯೇ ದೊಡ್ಡ ಗ್ರಾಮವಾಗಿದೆ. ಇದು ಜಿಲ್ಲಾ ಕೇಂದ್ರದಿಂದ ೩೩ ಕಿ.ಮೀ.ದೂರದಲ್ಲಿ ಹಾಗೂ ತಾಲ್ಲೂಕು ಕೇಂದ್ರದಿಂದ ೮ ಕಿ.ಮೀ. ದೂರದಲ್ಲಿದೆ.

ಹದಿನೇಳನೆಯ ಶತಮಾನದ ಆರಂಭದಲ್ಲಿ ಮೈಸೂರು ರಾಜ ಒಡೆಯರು ಕೇವಲ ೩೩ ಹಳ್ಳಿಗಳ ಒಡೆಯರಾಗಿ ೨೫೦೦೦ ಗದ್ಯಾಣಗಳ ಉತ್ಪತ್ತಿಯನ್ನು ಹೊಂದಿದ್ದಾಗ, ಕಳಲೆ ಅರಸು ಮನೆತನದವರಿಗೆ ೪೦,೦೦೦ ಗದ್ಯಾಣಗಳ ಆದಾಯವಿತ್ತು ಎಂಬುದು ಅಧಿಕ್ಯವನ್ನು ಎತ್ತಿ ಹೇಳುತ್ತದೆ. ಹೀಗಿರುವಾಗ ಹಾಲಿಗೆ ಜೇನು ಸೇರಿದಂತೆ ಈ ಎರಡು ಮನೆತನಗಳ ನಡುವೆ ವಿವಾಹ ಸಂಬಂಧ ಏರ್ಪಟ್ಟಿತ್ತು. ನಂತರ ಕಳಲೆ ಅರಸು ಮನೆತನದವರು ವಂಶಪಾರಂಪರ್ಯವಾಗಿ ಮೈಸೂರು ರಾಜ್ಯಕ್ಕೆ ದಳವಾಯಿಗಳಾಗಿ ನೇಮಿಸಲ್ಪಡುವ ಒಪ್ಪಂದವೂ ಈ ಮನೆತನಗಳ ನಡುವೆ ಆಗಿರುವುದು ಮತ್ತೊಂದು ವಿಶೇಷ. ವಿಜಯನಗರ ರಾಜಾನುಕ್ರಮಣಿಕೆಯಲ್ಲಿ ಕ್ರಿ.ಶ.೧೪೮೬ ರಿಂದ ೧೫೦೩ರವರೆಗೆ ವಿಜಯನಗರದ ಚಕ್ರಾಧಿಪತ್ಯವನ್ನು ತುಳು ವಂಶದ ನರಸಿಂಹರಾಯನು ಆಳ್ವಿಕೆ ನಡೆಸುತ್ತಿದ್ದನು. ಇದೆ ಸಮಯದಲ್ಲಿ ಕಳಲೆಯ ಮೂಲಪುರುಷರಾದ ಕಾಂತರಾಯ, ಕೃಷ್ಣರಾಯರು (ಕ್ರಿ.ಶ.೧೪೮೯ರಲ್ಲಿ) ದ್ವಾರಕೆಯಿಂದ ವಿಜಯನಗರಕ್ಕೆ ಬಂದ ಉಲ್ಲೇಖವಿದೆ.

ಆಗಿನ ಪರಿಸ್ಥಿತಿಯಲ್ಲಿ ವಿಜಯನಗರದ ಅರಸರು ಅನೇಕ ಪರಕೀಯರ ದಾಳಿಯನ್ನು ಎದುರಿಸಬೇಕಾಗಿತ್ತು. ಇದಕ್ಕಾಗಿ ಸುತ್ತಮುತ್ತಲಿನ ಸ್ಥಳೀಯ ನಾಯಕರ ನೆರವು ಎಷ್ಟಿದ್ದರೂ ಬೇಕಾಗಿತ್ತು. ರಾಜಪ್ರತಿನಿಧಿಗಳು ತಾತ್ಕಾಲಿಕ ಅಧಿಕಾರಿಗಳು, ಪಾಳೆಗಾರರ ಅವಶ್ಯಕತೆ ತುಂಬ ಇತ್ತು. ಕಾರಣ ತಮ್ಮ ದಕ್ಷತೆಯನ್ನು ಅನಿವಾರ್ಯವಾಗಿ ಬಲಪಡಿಸಿಕೊಳ್ಳಲೇಬೇಕಾಗಿದ್ದ ಸಂದರ್ಭವದು. ಮೈಸೂರು ಪ್ರಾಂತ್ಯಕ್ಕೆ ಸಂಬಂಧಿಸಿದ ಮತ್ತು ಮೈಸೂರಿನ ಸುತ್ತಮುತ್ತಲಿನ ಪ್ರದೇಶಗಳಿಗೆ ಶಕ್ತ ಅಧಿಕಾರಿಗಳನ್ನು ನೇಮಿಸುವ ಆಕಾಂಕ್ಷೆಯನ್ನು ಹೊಂದಿದ್ದನು. ತಮ್ಮ ಕಾಯಕ್ಷೇತ್ರಕ್ಕೆ ಎದುರಾಗದಂತೆ, ಅಡ್ಡಿಯಾಗದಂತೆ ಅಲ್ಲಲ್ಲಿ ಪಾಳೆಯಗಾರರನ್ನು ನೇಮಿಸಿದರು. ಒಂದು ರೀತಿಯಲ್ಲಿ ಮೈಸೂರಿನ ಅರಸರು ಸ್ವಾಮಿ ಕಾರ್ಯದ ಜೊತೆಗೆ ಸ್ವಕಾರ್ಯವನ್ನು ಕೈಗೊಂಡರು. ಅವರುಗಳನ್ನು ತಮ್ಮ ಚಕ್ರಾಧಿಪತ್ಯಕ್ಕೆ ಸ್ತಂಭಗಳಂತೆ ಮಾಡಿಕೊಳ್ಳುವುದು ವಿಜಯನಗರದ ಅರಸರಿಗೆ ಅನಿವಾರ್ಯವಾಗಿತ್ತು.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಬಂದ ಕಾಂತರಾಯ ಮತ್ತು ಕೃಷ್ಣರಾಯರು ವಿಜಯನಗರದ ಅರಸನಾದ ನರಸಿಂಹರಾಯನನ್ನು ಭೇಟಿಯಾದರು. ಇಂತಹ ಸಮಯವನ್ನೇ ಕಾಯುತ್ತಿದ್ದ ಉಮ್ಮತ್ತೂರಿನ ಪಾಳೆಗಾರನಾದ ಹರಿಹರ ರಾಯನು ಇದನ್ನು ಪ್ರತಿಭಟಿಸಿ ದಂಗೆ ಎದ್ದನು. ಈ ಪಾಳೆಗಾರನ ಬಲವನ್ನು ತಗ್ಗಿಸಬೇಕೆಂಬ ಅಭಿಪ್ರಾಯದಿಂದ ವಿಜಯನಗರದ ಅರಸರು ಉಮ್ಮತ್ತೂರು ಪಾಳೆಗಾರನಿಗೆ ರಾಯಸವನ್ನು ಬರೆದು ಅದರಲ್ಲಿ ಕಾಂತರಾಯರಿಗೆ ನಂಜನಗೂಡು ಬಳಿ ಇರುವ ಕಳಲೆ ಗ್ರಾಮ ಮತ್ತು ಅದಕ್ಕೆ ಸಂಬಂಧಪಟ್ಟ ಉಪಗ್ರಾಮಗಳನ್ನು ವಹಿಸಿಕೊಟ್ಟು ಅವರಿಗೆ ತನ್ನ ಕಡೆಯ ಉಪನಾಯಕರಾಗಿ ಪಟ್ಟಕಟ್ಟಬೇಕೆಂದು ತಿಳಿಸಿದನು. ವಿಜಯನಗರದ ದೊರೆಯು ಈ ರಾಯಸವನ್ನು ಕಾಂತರಾಯರಿಗೆ ಕೊಟ್ಟು ಕಳುಹಿಸಿದನು. ಹೀಗೆ ಕಳಲೆ ಅರಸು ಮನೆತನವು ಸ್ಥಾಪನೆಯಾಗಿ ಮುಂದೆ ದಳವಾಯಿಗಳಾಗಿ ಸೇವೆ ಸಲ್ಲಿಸಿದರು.

ದೊಡ್ಡ ದೊಡ್ಡ ಸಾಮ್ರಾಜ್ಯಗಳು ನಿರ್ಮಾಣವಾಗುವಲ್ಲಿ ಮತ್ತು ಪರಕೀಯರ ದಾಳಿಯನ್ನು ತಡೆಯುವಲ್ಲಿ ಸ್ಥಳೀಯ ದಳವಾಯಿಗಳ ಪಾತ್ರ ಉನ್ನತವಾಗಿದೆ. ಜೊತೆಗೆ ಹಲವಾರು ಜನಮುಖಿ ಕಾರ್ಯಕ್ರಮಗಳನ್ನು ನೆರವೇರಿಸಿಕೊಟ್ಟಿದ್ದರಿಂದ ಇಂದು ಚರಿತ್ರೆಯ ಪುಟಗಳಲ್ಲಿ ಅಚ್ಚಳಿಯದ ದಾಖಲೆಯಾಗಿ ಉಳಿದಿಲ್ಲದಿರಬಹುದು. ಆದರೆ ಮೌಖಿಕ ಪರಂಪರೆಯಲ್ಲಿ ಉಳಿದು ಬಂದಿದ್ದಾರೆ.

೧.೧. ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನವು "ಕಳಲೆ ದಳವಾಯಿಗಳು : ಚಾರಿತ್ರಿಕ ಅಧ್ಯಯನ" ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಅಧ್ಯಯನದ ಉದ್ದೇಶವು ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ.

ವಿಶ್ವವಿಖ್ಯಾತ ವೈಭವ ಸಾಮ್ರಾಜ್ಯ ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿ ಅಂದರೆ ಸಾಮಂತರಾಗಿ ಆಡಳಿತ ನಡೆಸಿದ ಈ ಕಳಲೆ ದಳವಾಯಿ ಅರಸರು ಮೈಸೂರಿನ ಭಾಗದಲ್ಲಿ ತಮ್ಮದೇ ಆದ ಪಾಳೆಪಟ್ಟನ್ನು ಕಟ್ಟಿಕೊಂಡು ಆಡಳಿತವನ್ನು ನಡೆಸಿದರು. ಆದರೆ ವಿಜಯನಗರದ ಪತನದ ನಂತರ ಈ ಪಾಳೆಪಟ್ಟು ಸ್ವತಂತ್ರವಾಗಿ ಆಡಳಿತವನ್ನು ನಡೆಸಿದರು. ನಂತರ ಮೈಸೂರು ಒಡೆಯರ ಕಾಲದಲ್ಲಿ ಇವರು ದಳವಾಯಿಗಳಾಗಿ ಸೇವೆ ಸಲ್ಲಿಸಿದರು.

ದಳವಾಯಿಗಳ ಅವಿರತ ಶ್ರಮ, ನಿಷ್ಠೆ ಅವರನ್ನು ದಕ್ಷರನ್ನಾಗಿ ಮಾಡಿತ್ತು. ಮುಂದುವರೆದು ಅವರು ಮೈಸೂರು ರಾಜಮನೆತನದವರೊಂದಿಗೆ ವಿವಾಹ ಸಂಬಂಧವನ್ನು ಸಹ ಏರ್ಪಡಿಸಿಕೊಂಡರು. ಈ ವಿವಾಹ ಬಾಂಧವ್ಯಗಳು ದಳವಾಯಿ ಮತ್ತು ರಾಜರ ನಡುವೆ ಗಾಢವಾದ ಸಂಬಂಧ ಬೆಳೆದು ಬರಲು ಸಹಾಯವಾದವು. ರಾಜರ ಆಡಳಿತದಲ್ಲೂ ಕೂಡ ನೇರವಾಗಿ ಭಾಗಿಯಾದರು. ರಾಜ ಮನೆತನಕ್ಕೆ ದುಸ್ಥಿತಿ ಒದಗಿದಾಗಲೆಲ್ಲಾ ತಮ್ಮ ಸಂಪೂರ್ಣ ನೆರವನ್ನು ನೀಡಿ ಅನನ್ಯವಾದ ಸೇವೆಯನ್ನು ಸಲ್ಲಿಸಿದ್ದಾರೆ. ದಳವಾಯಿಗಳು ನೀಡಿದ ಸೇವೆಗಳನ್ನು ಅಲಕ್ಷಿಸುವಂತಿಲ್ಲ.

ಇದುವರೆಗೂ ನಡೆದಿರುವ ಅಧ್ಯಯನಗಳಲ್ಲಿ ಕಳಲೆ ದಳವಾಯಿಗಳನ್ನು ಕಡೆಗಣಿಸಲಾಗಿದೆ. ಅಲ್ಲದೆ ಮೈಸೂರು ಒಡೆಯರನ್ನು ವೈಭವೀಕರಿಸುವ ಅಧ್ಯಯನಗಳು ಮಾತ್ರ ನಡೆದಿವೆ. ಕಳಲೆಯ ದಳವಾಯಿಗಳು ಮೈಸೂರು ಒಡೆಯರ ಕಾಲದಲ್ಲಿ ದಳವಾಯಿಗಳಾಗಿ ಸೇವೆ ಸಲ್ಲಿಸಿದ್ದರೂ ಸಹ ಅವರು ಎಲೆಮರೆ ಕಾಯಿಯಂತೆ ಮರೆಯಲ್ಲಿಯೇ ಉಳಿದಿದ್ದಾರೆ. ಅಲ್ಲದೆ ದುರ್ಬಲ ಅರಸರು ಅಧಿಕಾರಕ್ಕೆ ಬಂದಾಗಲೆಲ್ಲಾ ಅಧಿಕಾರವನ್ನು ವಹಿಸಿಕೊಂಡು ದಕ್ಷತೆಯಿಂದ ಅಧಿಕಾರ ನಡೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಕಳಲೆಯ ದಳವಾಯಿಗಳು ಮೈಸೂರು ಒಡೆಯರ ಕಾಲದಲ್ಲಿ ಸಲ್ಲಿಸಿದ ಸೇವೆ ಗಣನೀಯವಾದದ್ದು, ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಹಾಗೂ ಸಾಹಿತ್ಯಿಕವಾಗಿ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಆದ್ದರಿಂದ ಇವರ ಕೊಡುಗೆಗಳನ್ನು ಈ ಸಂಪ್ರಬಂಧದಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಕಳಲೆಯು ಒಂದು ವಿಶಿಷ್ಟವಾದ ಪ್ರದೇಶವಾಗಿದ್ದು, ಇದು ಮೂರು ನದಿಗಳಿಂದ ಸುತ್ತುವರಿದಿರುವ ಗ್ರಾಮವಾಗಿದೆ. ಇಲ್ಲಿ ಹಲವು ಸಮುದಾಯಗಳು, ಪಂಥಗಳು ವಾಸವಾಗಿವೆ. ಈ ಗ್ರಾಮದಲ್ಲಿ ಅರಸರ ಅರಮನೆಯ ಅವಶೇಷಗಳು, ಕೋಟೆಯ ಅವಶೇಷಗಳು, ಶಾಸನಗಳು ದೇವಾಲಯಗಳು, ಶಿಲ್ಪಗಳು ವೀರಗಲ್ಲುಗಳು, ಪ್ರಾಚೀನ ಕೆರೆಕಟ್ಟೆಗಳು ಇವೆ. ಇವುಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ ಕಳಲೆ ದಳವಾಯಿಗಳ ಬಗ್ಗೆ ಹಾಗೂ ಅವರ ಕೊಡುಗೆಗಳನ್ನು ಈ ಸಂಪ್ರಬಂಧದಲ್ಲಿ ಕಟ್ಟಿಕೊಡಲಾಗಿದೆ.

೧.೨. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನದಲ್ಲಿ ಕಳಲೆ ದಳವಾಯಿ ಅರಸರ ಪ್ರದೇಶವನ್ನು ಗಮನದಲ್ಲಿಟ್ಟುಕೊಂಡು ವಿಜಯನಗರ ಅರಸರ ತುಳುವಂಶದ ನರಸಿಂಹರಾಯನ ಕಾಲದಿಂದ ಮೈಸೂರು ಒಡೆಯರ ಆಡಳಿತಾವಧಿಯ ಕೊನೆಯ ಕಾಲಘಟ್ಟವನ್ನು ಆಯ್ದುಕೊಳ್ಳಲಾಗಿದೆ. ಈ ಕಾಲದ ನಂತರದ ಕೆಲವು ವಿಚಾರಗಳನ್ನು ಸಂದರ್ಭೋಚಿತವಾಗಿ ಬಳಸಿಕೊಳ್ಳಲಾಗಿದೆ.

೧.೩. ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನವು ಪ್ರಮುಖವಾಗಿ ಪ್ರಾಥಮಿಕ ಮತ್ತು ಅನುಷಂಗಿಕ ಮಾಹಿತಿಗಳನ್ನು ಸಂಗ್ರಹಿಸಿ ಅಧ್ಯಯನಕ್ಕೆ ಬಳಸಿಕೊಂಡು ಅಧ್ಯಯನದ ವ್ಯಾಪ್ತಿಯಲ್ಲಿ ಬರುವ ಪ್ರತಿ ಗ್ರಾಮಗಳ ಪುರಾತತ್ವ ಮತ್ತು ಇತಿಹಾಸವನ್ನು ಸಮಗ್ರವಾಗಿ ಮತ್ತು ಸೂಕ್ಷ್ಮವಾಗಿ ಅವಲೋಕಿಸಿ ವಿಶ್ಲೇಷಿಸಲಾಗಿದೆ.

ಈ ಪ್ರದೇಶದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕ್ಷೇತ್ರ ಕಾರ್ಯಕೈಗೊಂಡು ಈ ಪ್ರದೇಶದ ಪ್ರತಿಯೊಂದು ಸ್ಥಳಗಳನ್ನು ಖುದ್ದಾಗಿ ಭೇಟಿ ನೀಡಿ ಅಲ್ಲಿನ ವಿವರಗಳನ್ನು ಪರಿಶೀಲಿಸಿ ದಾಖಲಿಸಿಕೊಂಡಿದ್ದು,

ಈ ಪ್ರದೇಶದಲ್ಲಿ ಸ್ಥಳೀಯರು, ಸಂಘ ಸಂಸ್ಥೆಗಳೂ ಹಾಗೂ ವ್ಯಕ್ತಿಗಳ ನೆರವನ್ನು ಪಡೆಯಲಾಗಿದೆ. ಕ್ಷೇತ್ರಕಾರ್ಯದಲ್ಲಿ ಕಂಡುಬರುವ ದೇವಾಲಯ ಕೋಟೆ, ಕೆರೆ, ಬಾವಿ ಇತರೆ ಸ್ಮಾರಕಗಳನ್ನು ದಾಖಲೀಕರಣ ಮಾಡಿಕೊಂಡು ಛಾಯಾಚಿತ್ರ ತೆಗೆಯಲಾಗಿದ್ದು, ಇತಿಹಾಸ ಮತ್ತು ಸಾಂಸ್ಕೃತಿಕ ಅಧ್ಯಯನಗಳಲ್ಲಿ ಚಾಲ್ತಿಯಲ್ಲಿರುವ ಅಧ್ಯಯನ ವಿಧಾನಗಳನ್ನು ಅಳವಡಿಸಿಕೊಂಡು ಚಾರಿತ್ರಿಕ ಆಕರಗಳನ್ನು ಕ್ಷೇತ್ರಕಾರ್ಯದಿಂದ ಸಂಯೋಜಿಸಿ ವಿಷಯನುಸಾರ ವಿಭಾಗಿಸಿ, ವಿಶ್ಲೇಷಣೆ ಮತ್ತು ವಿಮರ್ಶೆಗಳ ಮೂಲಕ ಕಳಲೆ ದಳವಾಯಿಗಳ ಪೂರ್ಣ ಚರಿತ್ರೆಯನ್ನು ಕಟ್ಟಲು ಪ್ರಯತ್ನಿಸಲಾಗಿದೆ.

೧.೪. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಕಳಲೆ ದಳವಾಯಿಗಳಿಗೆ ಸಂಬಂಧಿಸಿದಂತೆ ಇದುವರೆಗೂ ವಿದ್ವಾಂಸರು ಬಿಡಿ ಲೇಖನಗಳನ್ನು ಸಂಗ್ರಹಿಸಿ ಸಂಪಾದಿತ ಕೃತಿಗಳನ್ನು ಪ್ರಕಟಿಸಿದ್ದಾರೆ. ಇವರು ಮೈಸೂರು ಒಡೆಯರಿಗೆ ದಳವಾಯಿಗಳಾಗಿ ಸೇವೆ ಸಲ್ಲಿಸಿದ್ದರಿಂದ ಎಲೆಮರೆ ಕಾಯಿಯಂತೆ ಉಳಿದುಕೊಂಡಿದ್ದಾರೆ. ಕಳಲೆ ದಳವಾಯಿಗಳ ಕುರಿತಂತೆ ಸಮಗ್ರ ಅಧ್ಯಯನಗಳು ನಡೆದಿಲ್ಲ. ಈ ಕೊರತೆಯನ್ನು ಈ ಅಧ್ಯಯನದ ಮೂಲಕ ತುಂಬಿಕೊಡುವ ಪ್ರಯತ್ನ ಮಾಡಲಾಗುವುದು. ಅಲ್ಲದೆ ಈಗಾಗಲೇ ನಡೆದಿರುವ ಅಧ್ಯಯನಗಳ ಆಕರಗಳನ್ನು ಬಳಸಿಕೊಳ್ಳಲಾಗುವುದು. 'ಕಳಲೆ ಮನೆತನದ ವೀರಶೈವ ದಳವಾಯಿಗಳು', 'ಕಳಲೆ ನಂಜರಾಜಯ್ಯನ ಕಾಲದ ಸಂಸ್ಕೃತಿ', 'ಕಳಲೆ ಅರಸು ಮನೆತನ', 'ಮೈಸೂರು ಸಂಸ್ಥಾನದ ಆಡಳಿತದಲ್ಲಿ ಕಳಲೆ ನಂಜರಾಜನ ಪ್ರವೇಶ', 'ಕಳಲೆ ಮನೆತನದ ವೀರಶೈವ ದಳವಾಯಿ ನಂಜರಾಜನ ಪ್ರವೇಶ' ಇವು ಪ್ರಮುಖವಾದ ಲೇಖನಗಳಾಗಿದೆ.

ಕಳಲೆ ದಳವಾಯಿಗಳ ಕೊಡುಗೆಯನ್ನು ಸಮಗ್ರವಾಗಿ ತಿಳಿಯುವ ದೃಷ್ಟಿಯಿಂದ ಈ ವಿಷಯವನ್ನು ಸಂಶೋಧನೆಗೆ ಆಯ್ದುಕೊಳ್ಳಲಾಗಿದೆ.

೧.೫. ಅಧ್ಯಯನದ ಸ್ವರೂಪ

ಕಳಲೆ ದಳವಾಯಿಗಳು : ಚಾರಿತ್ರಿಕ ಅಧ್ಯಯನ ಎಂಬ ಶೀರ್ಷಿಕೆಯುಳ್ಳ ಈ ನಿಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಆರು ಅಧ್ಯಯನಗಳಾಗಿ ವಿಭಾಗಿಸಲಾಗಿದೆ. ಇದು ಅಧ್ಯಯನದ ಸಾರವನ್ನು ಹಿಡಿಯಲು ಮಾಡಿದ ಪ್ರಯತ್ನ. ಈ ಆರು ಅಧ್ಯಾಯಗಳನ್ನು ಒಳಗೊಂಡ ವಿಷಯ ಮತ್ತು ಅದರ ತಾತ್ವಿಕ ಸ್ವರೂಪ ಹೀಗಿದೆ.

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಮೊದಲನೆ ಅಧ್ಯಾಯದಲ್ಲಿ ಸ್ಪಷ್ಟಪಡಿಸಲಾಗಿದೆ. ಜೊತೆಗೆ ಈವರೆಗೆ ನಡೆದ ಅಧ್ಯಯನ ಹಾಗೂ ಪ್ರಸ್ತುತ ಅಧ್ಯಯನದ ಸ್ವರೂಪ ಮುಂತಾದ ವಿಷಯಗಳನ್ನು ಚರ್ಚಿಸಲಾಗಿದೆ.

ಎರಡನೇಯ ಅಧ್ಯಾಯದಲ್ಲಿ 'ಭೌಗೋಳಿಕ ಹಿನ್ನೆಲೆ ಮತ್ತು ಐತಿಹಾಸಿಕ ಹಿನ್ನೆಲೆ ಕುರಿತು ಕಳಲೆ ಪರಿಸರದ ಹವಾಗುಣ, ಜನಸಂಖ್ಯೆ, ಮಣ್ಣು, ಜಲ ಸಂಪತ್ತು ಮುಂತಾದ ವಿಷಯಗಳನ್ನು ಚರ್ಚಿಸಲಾಗಿದೆ.

ಪ್ರಬಂಧದ ಮುಖ್ಯ ಭಾಗವಾದ ಮೂರನೇಯ ಅಧ್ಯಾಯದಲ್ಲಿ ಕಳಲೆ ದಳವಾಯಿಗಳ ರಾಜಕೀಯ ವ್ಯವಸ್ಥೆ, ಆಡಳಿತ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಸ್ಥಿತಿಗಳ ಬಗ್ಗೆ ಸ್ಥೂಲವಾದ ಅಧ್ಯಯನ ನಡೆಸಲಾಗಿದೆ. ಹಾಗೂ ಇದಕ್ಕೆ ಸಂಬಂಧಿಸಿದಂತೆ ಶಾಸನಗಳು, ಹಸ್ತಪ್ರತಿಗಳು ಹಾಗೂ ಸಾಹಿತ್ಯಿಕ ಆಕರಗಳನ್ನು ಬಳಸಿಕೊಳ್ಳಲಾಗಿದೆ.

ನಾಲ್ಕನೇಯ ಅಧ್ಯಾಯದಲ್ಲಿ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಕಳಲೆ ದಳವಾಯಿಗಳ ಕೊಡುಗೆ ಏನು ಎಂಬುದನ್ನು ಅವರು ನಿರ್ಮಿಸಿದ ದೇವಾಲಯಗಳು, ಮೂರ್ತಿಶಿಲ್ಪಗಳು ಹಾಗೂ ಇತರ ಅವಶೇಷಗಳನ್ನು ಬಳಸಿಕೊಂಡು ಚರ್ಚಿಸಲಾಗಿದೆ.

ಐದನೇಯ ಅಧ್ಯಾಯದಲ್ಲಿ ಸಾಹಿತ್ಯದ ಬಗ್ಗೆ ಚರ್ಚಿಸಲಾಗಿದ್ದು. ಕಳಲೆ ದಳವಾಯಿಗಳ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಈ ಅಧ್ಯಾಯದಲ್ಲಿ ಕಟ್ಟಿಕೊಡಲು ಪ್ರಯತ್ನ ಮಾಡಲಾಗಿದೆ.

ಕೊನೆಯ ಅಧ್ಯಾಯ ಸಮಾರೋಪವಾಗಿದ್ದು ಇದು ಒಟ್ಟಾರೆ ಅಧ್ಯಯನದ ಸಂಕ್ಷಿಪ್ತ ರೂಪ ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡ ಪ್ರಮುಖ ಸಂಗತಿಗಳ ಸಮೀಕ್ಷೆಯನ್ನು ಹಾಗೂ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನಲ್ಲದೆ ನಿರ್ಧಾರಗಳನ್ನು ತಿಳಿಸಲಾಗಿದೆ.

ಹೀಗೆ ಕಳಲೆ ದಳವಾಯಿಗಳು : ಚಾರಿತ್ರಿಕ ಅಧ್ಯಯನದಲ್ಲಿ ದಳವಾಯಿಗಳ ಸಮಗ್ರ ಚಿತ್ರಣವನ್ನು ಈ ಅಧ್ಯಯನದಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ ೨

ಭೌಗೋಳಿಕ ಮತ್ತು ಐತಿಹಾಸಿಕ ಹಿನ್ನೆಲೆ

೨.೧. ಭೌಗೋಳಿಕತೆ

೨.೨. ಐತಿಹಾಸಿಕ ಹಿನ್ನೆಲೆ

೨.೩. ಸ್ಥಳ ಪುರಾಣ

೨

ಭೌಗೋಳಿಕ ಮತ್ತು ಐತಿಹಾಸಿಕ ಹಿನ್ನೆಲೆ

೨.೧. ಭೌಗೋಳಿಕತೆ

ಒಂದು ಪ್ರದೇಶದ ಅಧ್ಯಯನವನ್ನು ಕೈಗೊಳ್ಳುವ ಮೊದಲು ಆ ಪ್ರದೇಶದ ಭೌಗೋಳಿಕ ವಿವರಗಳನ್ನು ತಿಳಿದುಕೊಳ್ಳುವುದು ಅವಶ್ಯಕ. ಏಕೆಂದರೆ ಆಯಾ ಪ್ರದೇಶದ ಸ್ವರೂಪ-ಸ್ವಭಾವಗಳು ಹಾಗೂ ಭೌಗೋಳಿಕ ವೈಶಿಷ್ಟ್ಯತೆಗಳು ಮತ್ತು ಜನಜೀವನ ಸಾಂಸ್ಕೃತಿಕ ಚರಿತ್ರೆಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಈ ಹಿನ್ನೆಲೆಯಲ್ಲಿ ಆಯಾ ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿಯ ಬೆಳವಣಿಗೆಯಲ್ಲಿ ನಿಸರ್ಗ ಸಂಪತ್ತು ಮತ್ತು ವೈಶಿಷ್ಟ್ಯತೆಗಳು ಬಹುಮುಖ್ಯವಾದ ಪಾತ್ರ ವಹಿಸುತ್ತವೆ. ಆ ಪರಿಸರದ ರಾಜಕೀಯ ಸಮಾಜಿಕ ಹಾಗೂ ಆರ್ಥಿಕ ಅಂಶಗಳು ನೈಸರ್ಗಿಕ ಸಂಪತ್ತನ್ನು ಅವಲಂಬಿಸಿ ರೂಪುಗೊಂಡಿರುವ ಸಂಗತಿಗಳನ್ನು ತಿಳಿಯಬಹುದಾಗಿದೆ. ಆದ್ದರಿಂದ ಯಾವುದೇ ಪ್ರದೇಶದ ಅಧ್ಯಯನ ಕೈಗೊಳ್ಳುವ ಸಂದರ್ಭದಲ್ಲಿ ಭೌಗೋಳಿಕತೆಯನ್ನು ಮರೆತು ಇತಿಹಾಸವನ್ನು ರಚಿಸಲು ಸಾಧ್ಯವಿಲ್ಲವೆಂದು ಹೇಳಿದರೆ ತಪ್ಪಾಗಲಾರದು.

ಭೌಗೋಳಿಕ ಪರಿಸರ ಇತಿಹಾಸವನ್ನು ಮೂಡಿಸುವ ಮಾತೃಕೆ. ಪ್ರಕೃತಿಯ ಹಿನ್ನೆಲೆಯಲ್ಲಿ ಜರುಗುವ ಮಾನವನ ಏಳುಬೀಳುಗಳ ಚಿತ್ರಣವೆ ಚರಿತ್ರೆ. ಭೂಗೋಳ ಶಾಸ್ತ್ರ ಚರಿತ್ರೆಯ ಒಂದು ಕಣ್ಣು. ಕಾಲಮಾನ ಅದರ ಮತ್ತೊಂದು ಅಂಶ. ಕಾಲಮಾನದ ಚೌಕಟ್ಟಿನಲ್ಲಿ ಭೌಗೋಳಿಕ ನೆಲೆಗಟ್ಟಿನ ಮೇಲೆ ನಡೆಯುವ ಪ್ರಕ್ರಿಯೆ ಇತಿಹಾಸ, ಆದ್ದರಿಂದ ಕಳಲೆಯ ಭೌಗೋಳಿಕ ಪರಿಸರದ ಪರಿಚಯ ಮಾಡಿಕೊಡುವ ಒಂದು ಸ್ಥೂಲ ಸಮೀಕ್ಷೆಯಾಗಿದೆ.

೨.೧.೧. ಭೌಗೋಳಿಕ ಸ್ಥಾನಮಾನ

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ವ್ಯಾಪ್ತಿಗೆ ಬರುವ ಕಳಲೆ ಗ್ರಾಮವು ಇಂದು ನಂಜನಗೂಡು ತಾಲ್ಲೂಕಿನಲ್ಲಿಯೇ ಅತ್ಯಂತ ದೊಡ್ಡ ಗ್ರಾಮವಾಗಿದೆ.[೧] ಇದು ಜಿಲ್ಲಾ ಕೇಂದ್ರದಿಂದ ೩೩ ಕಿ.ಮೀ ದೂರದಲ್ಲಿ ಹಾಗೂ ತಾಲ್ಲೂಕು ಕೇಂದ್ರದಿಂದ ೮ ಕಿ.ಮೀ ದೂರದಲ್ಲಿದೆ.

ಸಮುದ್ರ ಮಟ್ಟದಿಂದ ೨೪೦೦ ಅಡಿಗಳಷ್ಟು ಎತ್ತರದಲ್ಲಿರುವ ಕಳಲೆ ಗ್ರಾಮವು ಏರುಪೇರಿನಿಂದ ಕೂಡಿರುವ ಪ್ರದೇಶವಾಗಿದೆ.[೨] ಕಳಲೆಯ ಉತ್ತರ ಅಕ್ಷಾಂಶ ೧೨°-೧೧' ರಿಂದ ೧೩°-೧೦' ಹಾಗೂ ಪೂರ್ವ ರೇಖಾಂಶ ೭೬°-೯' ರಿಂದ ೭೭°-೧'ರ ಆಗಿವೆ.[೩]

ಕಳಲೆ ಗ್ರಾಮವು ಉತ್ತರಕ್ಕೆ ನಂಜನಗೂಡು, ದಕ್ಷಿಣಕ್ಕೆ ಏಚಗುಡ್ಲೆ, ಪೂರ್ವಕ್ಕೆ ವುಚ್ಚರಹಳ್ಳಿ, ಪಶ್ಚಿಮಕ್ಕೆ ಕರ್ಲಾಪುರ, ಹಾಗೆಯೇ ಆಗ್ನೇಯಕ್ಕೆ ದೇವಿರಮ್ಮನಹಳ್ಳಿ, ವಾಯವ್ಯಕ್ಕೆ ಸಿಂಧುವಳ್ಳಿ, ನೈರುತ್ಯಕ್ಕೆ ಮುದ್ದನಹಳ್ಳಿಗಳನ್ನು ಒಳಗೊಂಡಿದೆ.[೪] ಕಳಲೆ ಕೌಂಡಿನ್ಯ ಅಥವಾ ಗುಂಡ್ಲನದಿ ಪರಿಸರಕ್ಕೆ ವರಪ್ರಸಾದ. ಕಳಲೆ ಪ್ರಕೃತಿಯ ಕೊಡುಗೆ, ನೈಸರ್ಗಿಕ ಗಡಿಗಳಿಂದ ಪಾಳೆಪಟ್ಟಾಗಿಯೇ ಮೈದಳೆದು ನಿಂತ ಅಪೂರ್ವವಾದ ನೆಲೆಯಾಗಿದೆ.

ಪ್ರಸ್ತುತ ಕಳಲೆ ಗ್ರಾಮದ ಒಟ್ಟು ವಿಸ್ತೀರ್ಣ ೨೫೮೯ ಎಕರೆಗಳು. ಇದರಲ್ಲಿ ಊರಿನ ವಿಸ್ತೀರ್ಣ ೧೨೦ ಎಕರೆಗಳಾಗಿದೆ. ಉಳಿದಂತೆ ೨೩೮೯ ಎಕರೆಗಳಷ್ಟು ಭೂಮಿ ಸಾಗುವಳಿಗೆ ಬಳಸಿಕೊಳ್ಳಲಾಗುತ್ತಿದೆ.[೫] ಇಲ್ಲಿಯ ಜನಸಂಖ್ಯೆಯು ೧೧,೩೦೦ ಎಂದು ದಾಖಲಾಗಿದೆ.[೬]

೨.೧.೨. ಭೂವಿನ್ಯಾಸ

ಪ್ರಪಂಚದ ಗಮನಾರ್ಹ ಪ್ರಸ್ಥಭೂಮಿಗಳಲ್ಲಿ ಒಂದಾದ ದಖನ್ ಪ್ರಸ್ಥಭೂಮಿಯ ಬಹುತೇಕ ಮಧ್ಯಭಾಗದಲ್ಲಿ ನಿರ್ಮಿತವಾಗಿರುವ ಈ ಪ್ರದೇಶವು ಪ್ರಥಮ ಯುಗದ ಪುರಾತನ ಶಿಲೆಗಳಾದ ಗ್ರಾನೈಟ್ ಮತ್ತು ಚಾರ್ನೋಕೈಟ್ ಶಿಲೆಗಳಿಂದ ಕೂಡಿದ ಭದ್ರ ಬುನಾದಿಯನ್ನು ಹೊಂದಿದೆ.[೭]

ಈ ಪ್ರದೇಶವು ಮರಳು ಮೆಕ್ಕಲು ಮಿಶ್ರಿತವಾದ ಕೆಂಪು ಮಣ್ಣಿನಿಂದ ಕೂಡಿದ್ದು ವ್ಯವಸಾಯಕ್ಕೆ ಉತ್ಕೃಷ್ಟವಾಗಿದೆ.[೮] ಕಳಲೆ ಪ್ರದೇಶವು ಈಶಾನ್ಯ ದಿಕ್ಕಿಗೆ ಇಳಿಜಾರಾಗಿರುವುದರಿಂದ ನೀರಾವರಿಯ ದೃಷ್ಟಿಯಿಂದ ಭೌಗೋಳಿಕವಾಗಿ ವೈಶಿಷ್ಟತೆಯಿಂದ ಕೂಡಿದ ಪ್ರದೇಶವಾಗಿದೆ. ಮೂರು ನದಿಗಳಿಂದ ಸುತ್ತವರೆದಿರುವ ಈ ಗ್ರಾಮವು ಬಹಳ ಸಮೃದ್ಧವಾಗಿದೆ. ಹಾಗೂ ಸಣ್ಣ ಪುಟ್ಟ ಝರಿ, ಹಳ್ಳ, ಕೊಳ್ಳಗಳೂ ಇಲ್ಲಿವೆ. ಕಳಲೆಯ ಜನ ಕೆರೆ-ಕಟ್ಟೆಗಳನ್ನು ನಿರ್ಮಿಸಿ ಬೇಸಾಯವನ್ನು ಅಭಿವೃದ್ಧಿಗೊಳಿಸಿದರು. ಈ ಪ್ರದೇಶದಲ್ಲಿ ಖುಷ್ಕ, ತರಿ, ಬಾಗಾಯಿತು. ಗೋಮಾಳಗಳ ಹಾಗೂ ಬೇಸಾಯಕ್ಕೆ ಜಾನುವಾರುಗಳ ಸಾಕಾಣಿಕೆಗೆ ಉತ್ತಮ ಪ್ರದೇಶವಾಗಿದ್ದು, ಜನರ ಕೆಲವು ಅವಶ್ಯಕತೆಗಳನ್ನು ಈ ಪಶುಪಾಲನೆ ಪೂರೈಸುತ್ತಿದೆ.

೨.೧.೩. ವಾಯುಗುಣ

ವಾಯುಗುಣದ ದೃಷ್ಟಿಯಿಂದ ಪರಿಶೀಲಿಸಿದರೆ ಇದು ದಖನ್ ಪ್ರಸ್ಥಭೂಮಿಯ ಮಧ್ಯದ ಭೂಭಾಗವಾಗಿದೆ. ಇದು ಸಮುದ್ರ ಮಟ್ಟದಿಂದ ೨೪೦೦ ರಿಂದ ೨೬೦೦ ಅಡಿ ಎತ್ತರವಿರುವ ಏರು ಪೇರಿನಿಂದ ಕೂಡಿದ ಪ್ರದೇಶ. ಇಲ್ಲಿ ಉಷ್ಣವಲಯದ ಮಾನ್‌ಸೂನ್ ಮಾದರಿಯ ವಾಯುಗುಣವಿದೆ.[೧೦]

ಬಯಲು ಸೀಮೆಯ ಇತರೆಡೆಗಳಲ್ಲಿರುವಂತೆ ಇಲ್ಲಿಯೂ ಸಹ ಬೇಸಿಗೆ ಕಾಲ, ಮಳೆಗಾಲ, ಚಳಿಗಾಲಗಳನ್ನು ಗುರುತಿಸಬಹುದು. ಮಳೆಯ ಆಧಾರದಿಂದ ಹೇಳುವುದಾದರೆ ವರ್ಷದಲ್ಲಿ ಮಾರ್ಚ್ ಪ್ರಾರಂಭದಿಂದ ಮೇ, ಅಂತ್ಯದವರೆಗೆ ಶುಷ್ಕ ಹವೆಯಿಂದ ಕೂಡಿದ ಬಿಸಿಲು ಕಾಲ. ಜೂನ್ ಪ್ರಾರಂಭದಿಂದ ಸೆಪ್ಟೆಂಬರ್ ಅಂತ್ಯದವರೆಗೆ ನೈರುತ್ಯ ಮಾನ್‌ಸೂನ್ ಅಥವಾ ಮುಂಗಾರು ಮಳೆಗಾಲ. ಅಕ್ಟೋಬರ್-ನವೆಂಬರ್ ತಿಂಗಳು ಈಶಾನ್ಯ ಮಾರುತ ಅಂದರೆ ಹಿಂಗಾರು ಮಳೆಗಾಲ, ಡಿಸೆಂಬರ್ ನಿಂದ ಫೆಬ್ರವರಿವರೆಗೆ ಆದ್ರ ಹವೆಯಿಂದ ಕೂಡಿದ ಚಳಿಗಾಲ ಈ ನಾಲ್ಕು ರೀತಿಯ ಋತುಗಳನ್ನು ಈ ಪ್ರದೇಶದಲ್ಲಿ ಕಾಣಬಹುದಾಗಿದೆ.

ಮಾರ್ಚ್‌ನಿಂದ ಮೇ ತಿಂಗಳವರೆಗೆ ಉಷ್ಣತೆಯು ಒಂದೇ ರೀತಿಯಲ್ಲಿ ಹೆಚ್ಚಾಗುತ್ತ ಹೋಗುತ್ತದೆ. ಸಾಧಾರಣವಾಗಿ ಏಪ್ರಿಲ್ ಮಾಹೆಯು ತಾಪಭರಿತ ಮಾಸವಾಗಿರುತ್ತದೆ. ಈ ಸಮಯದಲ್ಲಿ ಗರಿಷ್ಠ ಉಷ್ಣಾಂಶ ೪೪° ಸೆ. ವರೆಗೂ ಏರುತ್ತದೆ. ಏಪ್ರಿಲ್-ಮೇನಲ್ಲಿ ಮಳೆಯು ಪ್ರಾರಂಭವಾಗುತ್ತದೆ. ಜೂನ್ ನಲ್ಲಿ ಬೀಸುವ ನೈರುತ್ಯ ಮಾನ್‌ಸೂನ್ ಮಾರುತಗಳಿಂದ ಉಷ್ಣತೆ ಇಳಿಮುಖವಾಗುತ್ತದೆ.[೧೧] ಈ ಕಾಲದಲ್ಲಿ ದಟ್ಟವಾದ ಮೋಡಗಳು ಮೇಳಯಿಸಿದ್ದು ಸಂಜೆಯ ನಂತರ ಬಿರುಸಾದ ಮಳೆ ಸುರಿಯುತ್ತದೆ. ಕ್ರಮೇಣ ಹಿಂಗಾರಿನ ಅವಧಿಗೆ ಮೋಡಗಳ ದಟ್ಟತೆಯೂ ತೆಳುವಾಗುತ್ತ ಬರುತ್ತವೆ. ಜೊತೆಗೆ ನವೆಂಬರ್ ತಿಂಗಳ ಮಧ್ಯಭಾಗದಿಂದ ದಿನದ ರಾತ್ರಿಯ ಉಷ್ಣತೆಯಲ್ಲೂ ಗಣನೀಯವಾಗಿ ಇಳಿಮುಖವಾಗುತ್ತದೆ. ಡಿಸೆಂಬರ್ ತಿಂಗಳು ಅತಿ ತಂಪಾದ ತಿಂಗಳಾಗಿದ್ದು ೧೭° ಸೆ.ನಷ್ಟು ಕನಿಷ್ಠ ಉಷ್ಣಾಂಶವನ್ನು ಹೊಂದಿರುತ್ತದೆ. ವಾರ್ಷಿಕ ಸರಾಸರಿ ಮಳೆ ೨೫ ರಿಂದ ೩೦ ಅಂಗುಲ.[೧೨] ಇಲ್ಲಿನ ಸಮದಾತುವಾದ ಹಿತಕರವಾದ ವಾಯುಗುಣ ಈ ಪ್ರದೇಶದಲ್ಲಿ ಒಂದು ಬಲವಾದ ರಾಜ್ಯ ನಿರ್ಮಾಣಕ್ಕೆ ಅನುಕೂಲಕರವಾಗಿತ್ತು ಎಂದು ಹೇಳಬಹುದಾಗಿದೆ.

೨.೧.೪. ನದಿಜಾಲ

ಭಾರತದ ಪರ್ಯಾಯ ದ್ವೀಪದ ಪ್ರಸ್ಥಭೂಮಿಯಲ್ಲಿ ಪಶ್ಚಿಮ ಹಾಗೂ ಪೂರ್ವಘಟ್ಟಗಳು ಸಂಧಿಸುವ ಕೊನೆಯಲ್ಲಿ ಪವಡಿಸಿರುವ ತಪ್ಪಲು ಪ್ರದೇಶ. ಕಳಲೆಯು ಕಪಿಲಾ ನದಿಯ ಬಲದಂಡೆಯ ಮೇಲಿದೆ. ಗುಂಡ್ಲನದಿಯ ಹರಿವು ಅನುಭವಿಸಿದವರೆ ಮಾತ್ರ ವೇದ್ಯ. ಕಳಲೆ ಕಪಿಲಾ ನದಿಯ ಬಲ ದಂಡೆಯ ಮೇಲಿದೆ. ಈ ಪರಿಸರದಲ್ಲಿ ಗುಂಡ್ಲನದಿ ಮತ್ತು ಸುವರ್ಣಾವತಿ ಎಂಬ ಇನ್ನೂ ಎರಡು ನದಿಗಳಿವೆ. ಈ ಕಾರಣದಿಂದ ಕಳಲೆಯನ್ನು ಮೂರು ನದಿಗಳಿಂದ ಸುತ್ತುವರೆದ ನಾಡು ಎಂದು ಕರೆಯಲಾಗಿದೆ.

ಕಳಲೆಗೆ ಕೌಂಡಿನ್ಯ ಅಥವಾ ಗುಂಡ್ಲ ನದಿಯು ವರಪ್ರಸಾದವಾಗಿದೆ. ಮೂರು ಕಡೆಯು ಮೂರು ಪವಿತ್ರ ನದಿಗಳಿಂದ ಕೂಡಿರುವ ಅಸಾಮಾನ್ಯ ಜಲಾನಯನ ಹಾಗೂ ಅಲ್ಲದೆ ಗಿರಿಶಿಖರಗಳಲ್ಲಿದ ನದಿ ಹಳ್ಳಗಳಿಂದ ಕೂಡಿದ ಪ್ರದೇಶವಾಗಿದೆ.

೨.೧.೫. ಕಪಿಲಾ ನದಿ

ಕಾವೇರಿ ನದಿಯ ಮುಖ್ಯ ಉಪನದಿಯಾದ ಕಪಿಲಾ ಜೀವಂತ ನದಿಯಾಗಿದೆ. ಪಶ್ಚಿಮ ಘಟ್ಟದ ಕೇರಳದ ಉತ್ತರ ವೈನಾಡಿನಲ್ಲಿ ಸುಮಾರು ೨೧೪೦ ಮೀ. ಉತ್ತರದಲ್ಲಿ ಹುಟ್ಟುತ್ತದೆ. ಈ ನದಿಯ ಒಟ್ಟು ಉದ್ದ ೨೩೦ ಕಿ.ಮೀ.ಗಳು ಎಂದು ಗುರುತಿಸಲಾಗಿದೆ.[೧೫]

ಈ ನದಿಯು ಹೆಗ್ಗಡದೇವನ ಕೋಟೆ ಸಮೀಪದ ಬಾವಲಿ ಎಂಬಲ್ಲಿ ಕರ್ನಾಟಕಕ್ಕೆ ಪ್ರವೇಶಿಸುವ ಈ ನದಿ ತಾರಕ ಮತ್ತು ನುಗು ನದಿಗಳನ್ನು ತನ್ನೊಳಗೆ ಸಂಯೋಜಿಸಿಕೊಂಡು ಕಪಿಲಾ ನದಿಯು ಕಳಲೆಯ ಬಲ ಭಾಗದಲ್ಲಿ ಹರಿದು ನಂಜನಗೂಡನ್ನು ತಲುಪಿ ಮುಂದೆ ತಿರುಮಕೂಡಲು ನರಸೀಪುರದ ಬಳಿ ಕಾವೇರಿ ನದಿಯಲ್ಲಿ ವಿಲೀನವಾಗುತ್ತದೆ. ವರ್ಷವಿಡೀ ನೀರಿನ ಹರಿವನ್ನು ಪಡೆದಿರುವ ಈ ನದಿಗೆ ಬಿದರ ಹಳ್ಳಿಯ ಬಳಿ ದೊಡ್ಡದಾದ ಅಣೆಕಟ್ಟು ಮತ್ತು ಅತ್ತಾಳು ಗ್ರಾಮದ ಬಳಿ ಚಿಕ್ಕ ಕಟ್ಟೆಗಳನ್ನು ನಿರ್ಮಿಸಲಾಗಿದೆ. ಈ ಕಾರಣದಿಂದ ಬೇಸಿಗೆಯಲ್ಲಿ ಈ ನದಿಯ ನೀರಿನ ಹರಿವು ಕಡಿಮೆಯಾಗುತ್ತದೆ.

೨.೧.೬. ಗುಂಡ್ಲುನದಿ

ಗುಂಡ್ಲುಪೇಟೆಯ ಹಿಮವದ್ ಗೋಪಾಲಸ್ವಾಮಿಬೆಟ್ಟದಲ್ಲಿ ಸುಮಾರು ೧೬೭೮ ಮೀ. ಎತ್ತರದಲ್ಲಿ ಹುಟ್ಟಿ ಗುಂಡ್ಲುಪೇಟೆ, ಬಾಗೂರು, ಎಡತಲೆ, ಕಳಲೆಗಳ ಮೂಲಕ ೮೪ ಕಿ.ಮೀ.ವರೆಗೆ ಹರಿದು ನಂಜನಗೂಡಿನ ಪೂರ್ವದಿಕ್ಕಿನಲ್ಲಿ ಕಪಿಲಾ ನದಿಯೊಡನೆ ಸೇರುತ್ತಿತ್ತು.[೧೬] ಆದರೆ ಈಗ ನೀರಿನ ಸೆಲೆಯು ಸಂಪೂರ್ಣವಾಗಿ ಬತ್ತಿ ಹೋಗಿದೆ. ಬೆಟ್ಟದಲ್ಲಿ ವಿರಳವಾಗುತ್ತಿರುವ ವನ ಪ್ರದೇಶದ ಜೊತೆಗೆ, ಬಾಗೂರು ಸಮೀಪ ನಿರ್ಮಿಸಿರುವ ಚಿಕ್ಕ ಅಣೆಕಟ್ಟೆಯು ಸಹ ನೀರಿನ ಹರಿವು ಕಡಿಮೆಯಾಗಲು ಕಾರಣವಾಗಿದೆ. ಇದರಿಂದ ಮುಂದೆ ನದಿ ಪಾತ್ರದಲ್ಲಿ ನೀರಿನ ಪಸೆಯೂ ಉಳಿಯುವುದಿಲ್ಲ. ಆದರೆ ದೇವರಸನಹಳ್ಳಿಯ ಸಮೀಪದಲ್ಲಿ ನಿರ್ಮಿಸಿರುವ ನರಸಾಂಬುದ್ದಿ ಕೆರೆ ತುಂಬಿ ಕೋಡಿ ಬಿದ್ದರೆ ಆ ನೀರು ಮಳೆಗಾಲದ ಅವಧಿಯಲ್ಲಿ ಈ ನದಿಯ ಪಾತ್ರದಲ್ಲಿ ಹರಿದು ಸಂಗಮ ಸ್ಥಾನವನ್ನು ಸೇರುತ್ತದೆ.

೨.೧.೭. ವ್ಯವಸಾಯ

ಮನುಕುಲದ ಪ್ರಮುಖ ಕಸುಬಾದ ವ್ಯವಸಾಯದ ಆವಿಷ್ಕಾರದಿಂದ ಅಲೆಮಾರಿ ಮಾನವ ಒಂದೆಡೆ ನೆಲೆಯೂರಲು ನೆರವಾಯಿತು. ಅಷ್ಟೆ ಅಲ್ಲದೆ ಅವನ ಆಲೋಚನ ಶಕ್ತಿ ಬೆಳೆಯಲು ಮತ್ತು ಉತ್ತಮ ಸಂಸ್ಕೃತಿಯನ್ನು ರೂಪಿಸಿಕೊಳ್ಳಲು ಪ್ರೇರಣೆಯನ್ನು ನೀಡಿತು. ಇಂದಿಗೂ ಸಹ ಬಹುತೇಕ ರೈತರು ಪರಂಪರಾಗತವಾಗಿ ಬಂದ ಸಾಂಪ್ರದಾಯಿಕವಾದ ಕಂಠಸ್ಥ ಮೂಲದ ವ್ಯವಸಾಯ ಕ್ರಮದ ಕಡೆಗೆ ಹೆಚ್ಚಿನ ಒಲವು ತೋರಿಸುತ್ತದೆ.

ವ್ಯವಸಾಯವನ್ನು ಮೊದಲು ರೂಢಿಗೆ ತಂದವರು ಪಾಂಡವರು ಎಂಬ ನಂಬಿಕೆ ಜನಪದ ಸಮಾಜದ್ದು. ಕಳಲೆ ಪ್ರದೇಶದಲ್ಲಿ ಆಚರಣೆಯಲ್ಲಿರುವ ಕುಂತಿ ಪೂಜೆಯಲ್ಲಿ ಐದು ಕಲ್ಲುಗಳನ್ನು ಪೂಜಿಸುವಲ್ಲಿ ಈ ಅಂಶ ಸಾಂಕೇತಿಕವಾಗಿ ಹೊರಹೊಮ್ಮುತ್ತದೆ. ಜನ ನದಿ ಬಯಲುಗಳಲ್ಲಿ ನೆಲೆ ನಿಲ್ಲಲು ಆರಂಭವಾದಂದಿನಿಂದಲೇ ವ್ಯವಸಾಯದ ರೂಪುರೇಷೆಗಳು ಮೂಡಿಬಂದವು ಎಂಬುದು ನಿರ್ವಿವಾದವಾದರೂ, ರಾಜರಾಗಿಯೂ ಕೂಡ ಕಷ್ಟ ಕೋಟಲೆಗೆ ಒಳಗಾದ ವನವಾಸದ ಭಂಗವನ್ನು ಅನುಭವಿಸಿ ಸಾಮಾನ್ಯ ಜನರೊಡನೆ ಹತ್ತಿರದಿಂದ ಬೆರೆತು ಪಾಂಡವರು ತಮ್ಮ ಜೀವನದ ಉಸಿರಾದ ಬೇಸಾಯದೊಡನೆ ಬೆರೆಸುವುದರಲ್ಲೂ ಔಚಿತ್ಯವಿದೆ ಎನಿಸುತ್ತದೆ.

ನಂಜನಗೂಡು ಪ್ರದೇಶಕ್ಕೆ ಸೇರಿದ ಶಾಸನಗಳು[೧೫] ಇಲ್ಲಿನ ಗದ್ದೆ, ಬೆದ್ದಲು, ತೋಟ, ತುಡಿಕೆ, ಕಳ, ಕೋಠಾರಗಳನ್ನು ಉಲ್ಲೇಖಿಸುತ್ತ ಇಲ್ಲಿ ಬೇರು ಬಿಟ್ಟಿದ್ದ ವ್ಯವಸಾಯ ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತದೆ.

ಪ್ರಸ್ತುತ ಕಳಲೆ ಗ್ರಾಮವು ಮೂರು ನದಿಗಳಿಂದ ಸುತ್ತುವರೆದಿರುವುದರಿಂದ ನೀರಾವರಿಯ ಬೆಳೆಗಳನ್ನು ಇಲ್ಲಿ ಗಮನಿಸಬಹುದು. ಕಳಲೆ ಪ್ರದೇಶದ ಮುಖ್ಯವಾದ ಬೆಳೆ ಎಂದರೆ ಭತ್ತ ೧೮೦೦ ಎಕರೆ ಪ್ರದೇಶದಲ್ಲಿ ಭತ್ತವನ್ನು ಬೆಳೆಯಲಾಗುತ್ತದೆ.[೧೬] ಉಳಿದಂತೆ ರಾಗಿ, ಜೋಳ, ತೊಗರಿ, ಎಳ್ಳು, ದ್ವಿದಳ ಧಾನ್ಯಗಳು ಮುಂತಾದ ಆಹಾರ ಬೆಳೆಗಳನ್ನು ಬೆಳೆಯುತ್ತಾರೆ. ವಾಣಿಜ್ಯ ಬೆಳೆಗಳಾದ ಕಬ್ಬು[೧೬] ಹತ್ತಿ, ಅರಿಶಿಣ, ತೆಂಗು, ಬಾಳೆ, ಮಾವು, ತರಕಾರಿ ಹೂವುಗಳು ಮುಂತಾದವುಗಳನ್ನು ಬೆಳೆಯುವುದು ಇಲ್ಲಿ ಕಂಡುಬರುತ್ತದೆ.

೨.೧.೮. ಪ್ರಾಣಿವರ್ಗ

ಈ ಪ್ರದೇಶದಲ್ಲಿ ವಿವಿಧ ರೀತಿಯ ಸಾಕು ಪ್ರಾಣಿಗಳನ್ನು ನಾವು ನೋಡಬಹುದು. ಇತ್ತೀಚಿನ ವರ್ಷಗಳಲ್ಲಿ ಗೋಮಾಳ ಮತ್ತು ಕಾಡುಗಳನ್ನು ನಾಶ ಮಾಡಿ ಬೇಸಾಯವನ್ನು ಮಾಡುತ್ತಿದ್ದರು. ಇಂದು ಸುಮಾರು ೮೦೦೦ಕ್ಕೂ ಹೆಚ್ಚಿನ ಕುರಿ ಮೇಕೆಗಳನ್ನು ಈ ಕಳಲೆಯ ಗ್ರಾಮದಲ್ಲಿ ನೋಡಬಹುದಾಗಿದೆ. ಅಲ್ಲದೆ ಇವರ ಆರ್ಥಿಕ ಮಟ್ಟವನ್ನು ಸುಧಾರಿಸುವಲ್ಲಿ ಹೈನು ಉದ್ಯಮ ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿದೆ. ಪ್ರಸ್ತುತ ಇಲ್ಲಿ ೨೮೦೦ ಹಸುಗಳು ಇದ್ದು ಪ್ರತಿ ದಿನ ೪೦೦೦ ಲೀಟರ್ ಹಾಲು ಸಹಕಾರ ಸಂಘದ ಮೂಲಕ ಜಿಲ್ಲಾ ಕೇಂದ್ರಕ್ಕೆ ರವಾನೆಯಾಗುತ್ತದೆ.[೧೮]

ಕ್ರಿ.ಶ.೧೮೦೦ರಲ್ಲಿ ಇಲ್ಲಿಗೆ ಭೇಟಿ ನೀಡಿದ್ದ ಬುಕಾನನ್ ಕಳಲೆ ಪ್ರದೇಶವು ದಟ್ಟ ಅರಣ್ಯದಿಂದ ಕೂಡಿದ್ದು, ಇಲ್ಲಿ ಕಾಡು ಪ್ರಾಣಿಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತಿದ್ದವು ಎಂದು ಹೇಳಿದ್ದಾನೆ. ಅಲ್ಲದೆ ಬೆಲೆ ಬಾಳುವ ಮರಗಳಾದ ಶ್ರೀಗಂಧ, ಮತ್ತಿ, ನಂದಿ, ಬಿದಿರು ಮುಂತಾದ ಬೆಲೆ ಬಾಳುವ

ಮರಗಳು ಕಂಡುಬರುತ್ತದೆ. ಅಲ್ಲದೆ ಈ ಗ್ರಾಮಕ್ಕೆ ಪ್ರತಿ ನಿತ್ಯ ಅವಶ್ಯವಿದ್ದ ಮರಮುಟ್ಟು, ಉರುವಲು, ಗಿಡ ಮೂಡಿಕೆಗಳು ಅಧಿಕವಾಗಿದ್ದವು. ಕಳಲೆಯು ಬನಗಳ ಭಂಡಾರ ಇಲ್ಲಿ ಈಚಲು, ತುಳಸಿ ವನಗಳು, ಕದಳಿ, ವೀಳ್ಯೆದೆಲೆ ಅಡಿಕೆ ಮತ್ತು ತೆಂಗಿನ ತೋಟಗಳು, ಬಿದಿರಿನ ಗಿಡಗಳಿಂದ ಆವರಿಸಿದ್ದವು. ಆದರೆ ಇಂದು ವ್ಯವಸಾಯದ ದೃಷ್ಟಿಯಿಂದ ಕಾಡನ್ನು ಕಡಿಯಲಾಗಿದೆ ಹಾಗೂ ಒಂದು ದೊಡ್ಡ ಕೆರೆಯನ್ನು ನಿರ್ಮಿಸಿರುವುದರಿಂದ ಇಂದು ಅಂದಿನ ರೀತಿಯ ಸಸ್ಯ ಸಂಪತ್ತು ಉಳಿದಿಲ್ಲ.

೨.೨. ಐತಿಹಾಸಿಕ ಹಿನ್ನೆಲೆ

ಇತಿಹಾಸವು ಮಾನವನ ಉಗಮ ಮತ್ತು ವಿಕಾಸದ ಬಗೆಗೆ ತಿಳುವಳಿಕೆ ನೀಡುವುದರ ಜೊತೆಗೆ ತಮ್ಮ ಪ್ರಾಚೀನ ಪರಂಪರೆಯ ಮೇಲೂ ಬೆಳಕು ಚೆಲ್ಲುತ್ತದೆ. ಒಂದು ಸಮಾಜದ ಸರ್ವೋತೋಮುಖ ಅಭಿವೃದ್ಧಿಯ ಒಟ್ಟು ಚಿತ್ರಣವನ್ನು ನೀಡುವ ಐತಿಹಾಸಿಕ ಜ್ಞಾನ ಮಾನವ ಜ್ಞಾನದ ಪೂರ್ವತೆಗೆ ಅವಶ್ಯಕವಾಗಿದ್ದು, ಈ ಕಾರಣಗಳಿಂದ ಒಂದು ಪ್ರದೇಶದ ಬಗ್ಗೆ ಅಧ್ಯಯನ ಮಾಡುವಾಗ ಆ ಪ್ರದೇಶದ ಐತಿಹಾಸಿಕ ಮಹತ್ವವನ್ನು ಅರಿಯುವುದು ಬಹಳ ಮುಖ್ಯ.

ಪ್ರಾಚೀನ ಭಾರತದ ಇತಿಹಾಸವು ನಿರೀಕ್ಷಿಸುವಷ್ಟು ಸದೃಢವಾಗಿ ರೂಪುಗೊಂಡಿಲ್ಲ. ಅಲ್ಲಲ್ಲಿ ದೊರೆಯುವ ಸಣ್ಣಪುಟ್ಟ ಎಳೆಗಳಿಂದಲೇ ಇತಿಹಾಸದ ವಸ್ತ್ರವನ್ನು ನೇಯಬೇಕಾಗಿದೆ. ಇಂತಹ ಎಳೆಗಳೆಂದರೆ ಶಾಸನಗಳು, ಚಾರಿತ್ರಿಕ ಕಾವ್ಯಗಳು, ಕೈಫಿಯತ್ತುಗಳು, ಹಸ್ತಪ್ರತಿಗಳು, ಕಲಾಕೃತಿಗಳು, ವಿದೇಶಿ ಯಾತ್ರಿಕರ ವರ್ಣನೆಗಳು, ಸ್ಥಳನಾಮಗಳು, ಐತಿಹ್ಯಗಳು, ಪ್ರಾಚ್ಯವಸ್ತು ಸಂಶೋಧನ ವರದಿಗಳು. ಇವೇ ಮುಂತಾದ ಸಾಧನಗಳನ್ನು ಬಳಸಿಕೊಳ್ಳಬಹುದು. ಇವುಗಳ ಮೂಲಕ ಗತಕಾಲದ ಘಟನಾಂಶಗಳನ್ನು ಹುಡುಕಿ ದೊರೆಯುವ ಚೂರುಪಾರುಗಳನ್ನು ಅರ್ಥವತ್ತಾಗಿ, ಕ್ರಮಬದ್ಧವಾಗಿ ಜೋಡಿಸಿ ಅಧ್ಯಯನ ಮಾಡುವುದರ ಮೂಲಕ ನಮ್ಮ ಇತಿಹಾಸ ಮತ್ತು ಸಂಸ್ಕೃತಿಗಳ ಬಗೆಗೆ ಬೆಳಕು ಚೆಲ್ಲಬೇಕಾಗಿದೆ.

ಈ ರೀತಿ ಇತಿಹಾಸದ ಪುನರ್ ರಚನೆಗೆ ಸಹಾಯಕವಾಗುವ ಮಾಹಿತಿಗಳಲ್ಲಿ ಪೂರ್ವಾಗ್ರಹ, ವೈಭವೀಕರಣ, ಅತೀರೇಕ ಮುಂತಾದ ಪರ ವಿರೋಧ ಭಾವನೆಗಳು ಹೆಚ್ಚಿನ ಮಟ್ಟದಲ್ಲಿದ್ದು, ಹಿಟ್ಟಿಗಿಂತ ಹೊಟ್ಟೆ ಜಾಸ್ತಿಯಾಗಿರುವುದು ಸಾಧ್ಯ. ಆದುದರಿಂದ ಇವುಗಳನ್ನು ಉಪಯೋಗಿಸಿಕೊಳ್ಳುವಾಗ ವಸ್ತು ನಿಷ್ಠ ದೃಷ್ಟಿ ಮತ್ತು ಆ ಕಾಲದ ತಾತ್ವಿಕ ಹಿನ್ನೆಲೆಯ ಅರಿವು ಮುಖ್ಯವಾಗುತ್ತದೆ.

ಮಹಾಭಾರತದ ಸಭಾಪರ್ವ ಮತ್ತು ಭೀಷ್ಮಪರ್ವಗಳಲ್ಲಿ ಉಲ್ಲೇಖಿತವಾಗಿರುವ 'ಮಹಿಷಕ' ಎಂಬ ಪದವನ್ನು ಮೈಸೂರಿನೊಂದಿಗೆ ಸಮೀಕರಿಸುವ ಪ್ರಯತ್ನ ನಡೆದಿದೆ.[೨೦] ಕ್ರಿ.ಶ.೨ನೇ ಶತಮಾನದಲ್ಲಿ ರಚಿತವಾಗಿರಬಹುದಾದ 'ಹನಾನೂರು' ಎಂಬ ತಮಿಳುಗ್ರಂಥವು ಎರುಮೈನಾಡಿನ ಬಗ್ಗೆ ಪ್ರಸ್ತಾಪಿಸುತ್ತದೆ.[೨೧] ಸಂಘಂ ಯುಗದ ಪ್ರಾಚೀನ ತಮಿಳು ಕೃತಿಗಳು 'ಪುನ್ನಾಡು' ವಿಷಯದ ಬಗ್ಗೆ ಹೇಳುತ್ತವೆ.[೨೨] ಇದೇ

ಕಾಲದ ವಿದೇಶಿ ಪ್ರವಾಸಿ ಟಾಲೆಮಿಯು ತನ್ನ ಗ್ರಂಥದಲ್ಲಿ ಪುನ್ನಾಡಿನ ವೈಭವದ ವರ್ಣನೆಯನ್ನು ನೀಡುತ್ತಾನೆ.

ಹೀಗೆ ಕ್ರಿ.ಶ.ದ ಆರಂಭದಿಂದಲೂ ಪ್ರಸಿದ್ಧಿಯಲ್ಲಿರುವ ಮೈಸೂರಿನ ದಕ್ಷಿಣದಲ್ಲಿ ಮತ್ತು ಪುನ್ನಾಡಿನ ಉತ್ತರದಲ್ಲಿ ನಂಜನಗೂಡಿಗೆ ಸೇರಿದಂತೆ ಕಳಲೆಯ ವ್ಯಾಪ್ತಿಯು ಹರಡಿದೆ. ಆದರೆ ಕಳಲೆಯ ಊರಿನ ಅಸ್ತಿತ್ವ ಎಂದಿನಿಂದ ಪ್ರಾರಂಭವಾಯಿತು? ಇದಕ್ಕೂ ಮೊದಲು ಈ ಪ್ರದೇಶ ಏನಾಗಿತ್ತು? ಇಲ್ಲಿ ಆಡಳಿತ ನಡೆಸಿದ ರಾಜ ಪಾಳೆಯಗಾರರ ವಿವರಗಳೇನು? ಇವೇ ಮೊದಲಾದ ಪ್ರಶ್ನೆಗಳಿಗೆ ಖಚಿತವಾದ ಉತ್ತರ ಕಾಲಗರ್ಭದಲ್ಲಿ ಹುದುಗಿ ಹೋಗಿದೆ. ಆದರೂ ಪುರಾಣ ಮತ್ತು ಇತಿಹಾಸ ಈ ಸಮಸ್ಯೆಯನ್ನು ತಮ್ಮದೇ ಆದ ರೀತಿಯಲ್ಲಿ ಬಿಡಿಸಲು ಯತ್ನಿಸಿವೆ. ಪುರಾಣವನ್ನು ಜನರ ಮನಸ್ಸಿನ ಪ್ರತೀಕ ಎಂಬ ಕಾರಣದಿಂದಲೂ ಮತ್ತು ಇತಿಹಾಸವನ್ನು ವಾಸ್ತವದ ವಿವರಗಳನ್ನು ಪಡೆಯುವ ಕುತೂಹಲದಿಂದಲೂ ಗಮನಿಸುವುದು ಅವಶ್ಯಕವಾಗಿದೆ.

೨.೩. ಸ್ಥಳ ಪುರಾಣ

ಕಳಲೆ ಎಂಬ ಹೆಸರು ಈ ಪ್ರದೇಶಕ್ಕೆ ಹೇಗೆ ಬಂದಿತೆಂಬುದರ ಬಗ್ಗೆ ಹಲವಾರು ಸ್ಥಳ ಪುರಾಣಗಳು, ದಂತ ಕಥೆಗಳು ಹೆಣೆದುಕೊಂಡಿವೆ. ಕಳಲೆ ಎಂದರೆ ಬಿದಿರು ಎಂದರ್ಥ. ಈ ಬಿದಿರಿನ ಕುಡಿಯನ್ನು ಕಳಿಲೆ ಎಂದು ಕರೆಯಲಾಗುತ್ತದೆ. ಕಳಿಲೆಯನ್ನು ಜನರು ಆಹಾರವಾಗಿ ಉಪಯೋಗಿಸುತ್ತಾರೆ. ಕಳಲೆ ಗ್ರಾಮವು ಪೂರ್ಣವಾಗಿ ಬಿದಿರು ಮೆಳೆಗಳಿಂದ ಆವೃತ್ತವಾಗಿತ್ತೆಂದು, ಆದ್ದರಿಂದ ಸಹಜವಾಗಿ[೨೩] ಕಳಲೆ ಎಂಬ ಹೆಸರು ಬಂದಿರಬೇಕೆಬುಂದು ವಿದ್ವಾಂಸರ ಅಭಿಪ್ರಾಯ. ಈ ಪ್ರದೇಶಕ್ಕೆ ಕಪಿಲಾಶ್ರಮ, ವೇಣುಪುರಿ, ತುಳಸಿಕಾನನ ಇತ್ಯಾದಿ ಹೆಸರುಗಳೂ ಇತ್ತೆಂಬುದಾಗಿ ತಿಳಿದುಬರುತ್ತದೆ. ಕಪಿಲಮಹರ್ಷಿಗಳು ಈ ಪ್ರದೇಶದಲ್ಲಿ ತಪಸ್ಸು ಕೈಗೊಂಡಿದರಿಂದ ಕಪಿಲಾಶ್ರಮ ಎಂದೂ, ವೇಣುಗೋಪಾಲನ ಆವಾಸ ಸ್ಥಾನ ಎಂಬ ಕಾರಣಕ್ಕಾಗಿ ವೇಣುಪುರಿ ಎಂದು, ಹಾಗೂ ತುಳಸೀ ಗಿಡಗಳು ಕಾಡಿನಂತೆ ಬೆಳೆದಿದ್ದರಿಂದ ತುಳಸೀ, ಕಾನನ ಎಂದೂ ಕರೆಯಲಾಗುತ್ತಿತ್ತೆಂದು ಸ್ಥಳ ಪುರಾಣಗಳಿಂದ ವ್ಯಕ್ತವಾಗುತ್ತದೆ.[೨೪]

'ಕಳಲೆ' ಎಂಬ ಸ್ಥಳನಾಮಕ್ಕೆ ಬಹುಶಃ ಅಲ್ಲಿನ ಭೌಗೋಳಿಕ ಹಿನ್ನೆಲೆಯಲ್ಲಿದ್ದ ವಿಪುಲವಾದ ಬಿದಿರು, ಕಳಿಲೆ ಬಿದಿರಿನ ಕೋಮಲ ಕುಡಿ ಜನ ಭಕ್ಷವಾಗಿ ಭೋಜಿಸುತ್ತಿದ್ದ ವಸ್ತು. ಈ ಕಳಿಲೆ ಎಂಬ ಪದ ಶ್ರೀಸಾಮಾನ್ಯನ ನುಡಿಯ ವೈಖರಿಯಂತೆ ಕಾಲಾಂತರದಲ್ಲಿ ಕಳಲೆ ಎಂದು ರೂಪಾಂತರಗೊಂಡಿರ ಬಹುದು.[೨೫] ಉಚ್ಚಾರಣೆಗೆ ಕ್ಲಿಷ್ಟವಾದ ಪದಗಳನ್ನು ಲಘುಗೊಳಿಸುವುದು ಮಾನವನ ಸಹಜ ಪ್ರವೃತ್ತಿ. ಹೀಗಾಗಿ ಕಳಿಲೆಯು ಕಳಲೆಯಾಗಿ ಕರೆಯಲ್ಪಟ್ಟಿರಬಹುದು.

ಕ್ರಿ.ಶ.೨ನೇ ಶತಮಾನದ ಪುನ್ನಾಡು ಅರಸರ ಕಾಲದಲ್ಲಿ ಇತಿಹಾಸದ ಮೆರಗು ಹೊತ್ತಿಸಿರುವ ಕೆಲವು ಸಂಗತಿಗಳು ಈ ಪ್ರದೇಶದಲ್ಲಿ ಗೋಚರಿಸುತ್ತವೆ. ಪುನ್ನಾಡು ಮನೆತನವು ಕ್ರಿ.ಶ.೨ನೇ ಶತಮಾನದಿಂದಲೋ ಇತಿಹಾಸದಲ್ಲಿ ಗಣನೀಯವಾದ ಸ್ಥಾನವನ್ನು ಪಡೆದಿದ್ದ ಅಂಶವು ಕೆಲವು ತಮಿಳು ಕೃತಿಗಳಿಂದ ಮತ್ತು ಟಾಲೆಮಿಯ ಗ್ರಂಥದಿಂದ ತಿಳಿದುಬರುತ್ತದೆ.[೮] ಈ ಪುನ್ನಾಡಿನ ದೊರೆ ಸ್ಕಂದವರ್ಮನೆಂದು ಗುರುತಿಸಲಾಗಿರುವ ತಾಮ್ರಶಾಸನವೊಂದು ನಂಜನಗೂಡಿಗೆ ೨ ಕಿ.ಮೀ. ದೂರದ ಬಸವನಪುರ ಎಂಬ ಗ್ರಾಮದಲ್ಲಿ ದೊರೆತಿದೆ.[೯] ಇದು ಸ್ಕಂದವರ್ಮನು ವಿಜಯಶಿಖರವೊಂದರಲ್ಲಿ ಕಪಿಲಾ ತೀರದ 'ಮುಟ್ಟಲದ್ವಿಯಾರು' ಎಂಬ ಗ್ರಾಮವನ್ನು ದ್ವಿವೇದಿ ಕೊತ್ತಮರಸವೆಂಬ ಬ್ರಾಹ್ಮಣನಿಗೆ ದತ್ತಿ ನೀಡಿದ್ದನ್ನು ಉಲ್ಲೇಖಿಸುತ್ತದೆ. ಈ ಪುನ್ನಾಡನ್ನು ಕಪಿಲಾ ಕಾವೇರಿಯಿಂದ ಆಲಂಕೃತಗೊಂಡ ನಾಡು ಎಂದು ಮಾಂಬಳಿ ಶಾಸನದಲ್ಲಿ[೧೦] ವರ್ಣಿಸುವುದರಿಂದ ಕಳಲೆಯ ಪ್ರದೇಶವು ಪುನ್ನಾಡಿನ ವ್ಯಾಪ್ತಿಗೆ ಸೇರಿತ್ತು ಎಂಬುದನ್ನು ಖಚಿತವಾಗಿ ಹೇಳಬಹುದಾಗಿದೆ. ಆದರೆ ಆಗಿನ ಕಳಲೆಯ ಗ್ರಾಮದ ಬಗ್ಗೆ ಮಾತ್ರ ಮಾಹಿತಿ ಲಭ್ಯವಾಗುವುದಿಲ್ಲ.

ಕಳಲೆಯ ಪ್ರಾರಂಭದ ಇತಿಹಾಸವನ್ನು ಸ್ಪಷ್ಟವಾದ ರೇಖೆಗಳಿಂದ ಗುರ್ತಿಸುವುದು ಕಷ್ಟಸಾಧ್ಯ. ಆದರೆ ೧೦ನೇ ಶತಮಾನದ ಕೆಲವು ಮಾಹಿತಿಗಳು ದೊರೆಯುವುದರಿಂದ ಕಳಲೆಯೂ ೧೦ನೇ ಶತಮಾನದಲ್ಲಿಯೇ ನಂಜನಗೂಡಿನ ಪ್ರದೇಶದ ವ್ಯಾಪ್ತಿಗೆ ಒಳಪಟ್ಟಿತ್ತು ಎಂಬುದನ್ನು ತಿಳಿಯಬಹುದಾಗಿದೆ. ಕಳಲೆಯ ಪ್ರದೇಶದ ಮೇಲೆ ಸಾಮ್ರಾಜ್ಯಶಾಹಿ ಹಾಗೂ ಸಾಮಂತ ಮನೆತನಗಳೆರಡೂ ಪ್ರಭಾವ ಬೀರಿದ. ಇದನ್ನು ಪ್ರತ್ಯೇಕವಾದ ವಿಭಾಗಗಳಲ್ಲಿ ಅಭ್ಯಾಸ ಮಾಡಲಾಗಿದೆ.

ಅಡಿಟಿಪ್ಪಣಿಗಳು

೧. ೨೦೦೫-೨೦೦೬ರ ಸುವರ್ಣ ಗ್ರಾಮೋದಯ ವರದಿ.

೨. ಸೂರ್ಯನಾಥ ಯು ಕಾಮತ್, ೧೯೮೮, ಮೈಸೂರು ಜಿಲ್ಲಾ ಗೆಜೆಟಿಯರ್, ಪು.೨

೩. ಅದೇ, ಪು.೩

೪. ಕ್ಷೇತ್ರಕಾರ್ಯದಲ್ಲಿ ಕಂಡುಬಂದದ್ದು-ಕಳಲೆ ಗ್ರಾಮದ ನಕಾಶೆಯನ್ನು ಆಧಾರವಾಗಿಟ್ಟುಕೊಂಡು.

೫. ೨೦೦೫ನೇ ಸಾಲಿನಲ್ಲಿನ ಕೃಷಿ ಇಲಾಖೆ ವರದಿ.

೬. ಜನಗಣತಿ ವರದಿ ೨೦೦೦-೨೦೦೧

೭. ಸೂರ್ಯನಾಥ ಯು. ಕಾಮಥ್, ೧೯೮೮, ಮೈಸೂರು ಜಿಲ್ಲಾ ಗೆಜೆಟಿಯರ್, ಪು.೨೧೯

೮. ಅದೇ, ಪು.೯

೧೦. ಅದೇ, ಪು.೩೫

೧೧. ಅದೇ, ಪು.೩೬

೧೨. ಅದೇ, ಪು.೩೫

೧೩. ಅದೇ, ಪು.೯

೧೪. ಅದೇ, ಪು.೧೦

೧೫. ಎ.ಕ.ಸಂ.III ೧೩೫, ನಂಜನಗೂಡು, ಕ್ರಿ.ಶ.೧೩೯೯

೧೬. ಸೂರ್ಯನಾಥ ಯು. ಕಾಮತ್, ೧೯೮೮, ಮೈಸೂರು ಜಿಲ್ಲಾ ಗ್ಯಾಜೆಟಿಯರ್, ಪು.೨೧೯

೧೭. ೨೦೦೬ನೇ ಸಾಲಿನ ಬಣ್ಣಾರಿ ಅಮ್ಮನ ಸಕ್ಕರೆ ಕಾರ್ಖಾನೆಯ ವರದಿ.

೧೮. ೨೦೦೫ರ ಕಳಲೆ ಗ್ರಾಮದ ಹಾಲು ಸಹಕಾರ ಸಂಘದ ವಾರ್ಷಿಕ ವರದಿ.

೨೦. ಕರೀಂಖಾನ್ ಎಸ್.ಕೆ.(ಸಂ), ೧೯೮೯, ಕರ್ನಾಟಕ ಜನಪದ, ಬೆಂಗಳೂರು, ಪು.೫

೨೧. ಅದೇ, ಪು.೬

೨೨. ಅದೇ, ಪು.೬

೨೩. ಗುರುಸ್ವಾಮಿ, ಕಳಲೆ ಕನ್ನಡಪ್ರಭ ದಿನಪತ್ರಿಕೆ, ೮-೩-೧೯೮೭

೨೪. ರಾಮಚಂದ್ರರಾವ್ ಎಂ.ಎಸ್., ೧೯೬೮, ಕಪಿಲಾಶ್ರಮ ವೈಭವ, ಮೈಸೂರು, ಪು.೪,

೨೫. ಅದೇ, ಪು.೬

೨೬. ಕರೀಂಖಾನ್ ಎಸ್.ಕೆ.(ಸಂ) ೧೯೮೯, ಕರ್ನಾಟಕ ಜನಪದ, ಬೆಂಗಳೂರು, ಪು.೧೧೪,

೨೭. ಎ.ಕ., ಸಂಪುಟ III, ನಂಜನಗೂಡು, ೧೭೫, ಕ್ರಿ.ಶ.೭-೮ಏ ಶತಮಾನ

೨೮. ಎ.ಕ.ಸಂಪುಟ IV, ಯಳಂದೂರು, ೨೭೮, ಕ್ರಿ.ಶ.೫೫೦

ಅಧ್ಯಾಯ ೩

ಕಳಲೆ ದಳವಾಯಿಗಳು

೩.೧. ರಾಜಕೀಯ ಇತಿಹಾಸ

೩.೨. ಆಡಳಿತ ಪದ್ಧತಿ

೩.೩. ಸಾಮಾಜಿಕ, ಆರ್ಥಿಕ, ಧಾರ್ಮಿಕ ಸ್ಥಿತಿಗತಿ

೩

ಕಳಲೆ ದಳವಾಯಿಗಳು

೩.೧. ರಾಜಕೀಯ ಇತಿಹಾಸ

ರಾಜಕೀಯ ಚರಿತ್ರೆ ಇಲ್ಲದೆ ಯಾವುದೇ ಸಾಂಸ್ಕೃತಿಕ ಅಧ್ಯಯನವನ್ನು ಸಮರ್ಪಕವಾಗಿ ಊಹಿಸಿಕೊಳ್ಳುವುದು ಕಷ್ಟವಾಗುತ್ತದೆ. ಒಂದು ರಾಜಮನೆತನ ಯಾವ ರೀತಿಯಲ್ಲಿ ಆರಂಭವಾಗಿ ಬೆಳೆದು ಅವನತಿ ಹೊಂದಿತು ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ರಾಜಕೀಯ ವ್ಯವಸ್ಥೆಯ ಸ್ಥಾಪನೆ ಪೋಷಣೆ ಮತ್ತು ರಕ್ಷಣೆ ಬಹಳ ಮುಖ್ಯ ಅಂಶಗಳಾಗಿ ನಾವು ಗಮನಿಸಬೇಕು. ಇದರ ಜೊತೆಗೆ ರಾಜ್ಯದಲ್ಲಿ ಜನಪದ ನೆಲೆಯೂರಿ ಪ್ರಭುತ್ವಕ್ಕೆ ನಿಷ್ಠೆ ತೋರಬೇಕಾದರೆ ಒಂದು ಸ್ಪಷ್ಟವಾದ ಆಡಳಿತ ವ್ಯವಸ್ಥೆ ಇರಬೇಕಾಗುತ್ತದೆ. ಈ ಪರಿಸರದಲ್ಲಿ ಆಳ್ವಿಕೆ ಮಾಡಿದ ಅರಸು ಮನೆತನಗಳು ಇವುಗಳನ್ನು ಕುರಿತು ಕಳಲೆ ದಳವಾಯಿಗಳ ಮನೆತನಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಮುಂದೆ ಚರ್ಚಿಸಲಾಗಿದೆ.

ಯಾವುದೇ ರಾಜವಂಶದ ಮೂಲವನ್ನು ಹುಡುಕುವುದು ಇತಿಹಾಸಕಾರರಿಗೆ ಒಂದು ಕುತೂಹಲಕಾರಿ ವಿಷಯವಾಗಿರುತ್ತಿದೆ. ದಕ್ಷಿಣ ಭಾರತದ ಪ್ರಧಾನ ರಾಜಮನೆತನಗಳ ಮೂಲವನ್ನು ನೋಡುವ ಸಾಹಸ ಮಾಡಿದ ಪಕ್ಷದಲ್ಲಿ ನಮಗೆ ಕೆಲವು ಸಮಾನ ಅಂಶಗಳು ದೊರೆಯುತ್ತದೆ. ಒಂದನೇಯದಾಗಿ ಈ ಪ್ರಸಿದ್ಧ ಅಳರಸರ ಮೂಲ ಪುರುಷ ಶಿಷ್ಟ ಸಂಸ್ಕೃತಿಯ ಆರ್ಯಸಂಪ್ರಾದಾಯಕ್ಕೆ ಸೇರಿದವರಾಗಿರುತ್ತಾರೆ.[೧] ಎರಡನೇಯದಾಗಿ ಆ ವಂಶದ ಮೂಲಪುರುಷರು ಉತ್ತರ ಭಾರತದ ಅಯೋಧ್ಯೆ, ಕುರುಕ್ಷೇತ್ರ, ದ್ವಾರಕಗಳಿಂದ ಬಂದವರಾಗಿರುತ್ತಾರೆ. ಮೂರನೇಯದಾಗಿ ಪ್ರಸಿದ್ಧ ಋಷಿಗಳು ಮೂಲಪುರುಷರನ್ನು ಸೃಷ್ಟಿಸಿರುತ್ತಾರೆ. ಪ್ರಸಿದ್ಧ ರಾಜಮನೆತನಗಳ ಮೂಲದ ಬಗೆಗೆ ಸಾಕಷ್ಟು ಭಿನ್ನಾಭಿಪ್ರಾಯಗಳಿರುವಾಗ ಕ್ರಿ.ಶ.೧೪ನೇಯ ಶತಮಾನದಿಂದ ಕ್ರಿ.ಶ.೧೮ನೇ ಶತಮಾನಗಳಲ್ಲಿ ದಕ್ಷಿಣ ಕರ್ನಾಟಕದ ಅನೇಕ ಪ್ರದೇಶಗಳಲ್ಲಿ ತಲೆ ಎತ್ತಿದ ಕಿರಿಯ ಅರಸು ಮನೆತನಗಳ ಮೂಲಪುರುಷರ ಬಗೆಗಂತೂ ಸ್ಪಷ್ಟವಾಗಿ ಏನನ್ನು ಹೇಳುವುದು ಅಸಾಧ್ಯವಾಗಿದೆ. ಆದಾಗ್ಯೂ ದೊರಕುವ ಆಕರಗಳಿಂದ ಅರಸುಮನೆತನದ ಮೂಲದ ಬಗೆಗೆ ಕೆಲವಾರು ವಿಷಯಗಳನ್ನು ಚರ್ಚಿಸುವುದು ಅನಿವಾರ್ಯವಾಗುತ್ತದೆ.

ಕಳಲೆಯ ಪ್ರದೇಶದ ಪ್ರಾರಂಭದ ಇತಿಹಾಸವನ್ನು ತೀರಾ ಸ್ಪಷ್ಟವಾದ ರೇಖೆಗಳಿಂದ ಗುರ್ತಿಸುವುದು ಕಷ್ಟ. ಆದರೆ ಕ್ರಿ.ಶ.೧೦ನೇ ಶತಮಾನದ ನಂತರ ನಂಜನಗೂಡಿಗೆ ಸಂಬಂಧಿಸಿದ ಶಾಸನ ಮತ್ತು

ಆಕರಗಳು ಕಳಲೆಯ ಪ್ರದೇಶದ ಬಗ್ಗೆ ಕೆಲವು ಮಾಹಿತಿಗಳು ದೊರೆಯುವುದರಿಂದ ಈ ಪ್ರದೇಶವು ೧೧ನೇ ಶತಮಾನದಲ್ಲಿಯೇ ನಂಜನಗೂಡಿನ ಪ್ರದೇಶದ ವ್ಯಾಪ್ತಿಗೆ ಒಳಪಟ್ಟಿದ್ದಿತು ಎಂಬುದನ್ನು ತಿಳಿಯಬಹುದಾಗಿದೆ. ಈ ಪ್ರದೇಶದ ಮೇಲೆ ಸಾಮ್ರಾಜ್ಯಶಾಹಿ ಹಾಗೂ ಸಾಮಂತ ಮನೆತನಗಳೆರಡು ಪ್ರಭಾವ ಬೀರಿವೆ.[೨]

ಗಂಗರು

ತಲಕಾಡಿನ ಗಂಗರು ಸುಮಾರು ಎಂಟು ಶತಮಾನಗಳಿಗಿಂತಲೂ ಅಧಿಕ ಕಾಲ ಕನ್ನಡನಾಡಿನ ದಕ್ಷಿಣ ಭಾಗದಲ್ಲಿ ಆಡಳಿತ ನಡೆಸಿ ಪ್ರಸಿದ್ಧರಾಗಿದ್ದಾರೆ. ದುರ್ವಿನಿತನ ಕಾಲದಲ್ಲಿ ಪೊನ್ನಾಡಿನೊಂದಿಗೆ ಕಳಲೆಯ ಪ್ರದೇಶವು ಗಂಗರ ಆಡಳಿತದ ವ್ಯಾಪ್ತಿಗೆ ಗಂಗವಾಡಿ-೬೦೦೦ದಲ್ಲಿ ಸೇರಿಹೋಗಿತ್ತು. ನಂಜನಗೂಡಿನ ಸುತ್ತಮುತ್ತಲ ಪ್ರದೇಶದಲ್ಲಿ ದೊರೆಯುವ ಸುಮಾರು ೨೪ ಶಾಸನಗಳ ಈ ಪ್ರದೇಶ ಗಂಗರ ಆಡಳಿತವನ್ನು ಸಮೃದ್ಧವಾಗಿ ಅನುಭವಿಸಿತ್ತು ಎಂಬುದನ್ನು ಸಮರ್ಥಿಸುತ್ತದೆ.[೩] ಒಂಬತ್ತನೆಯ ಶತಮಾನದ ಆದಿಭಾಗದಲ್ಲೇ ಗಂಗರು ರಾಷ್ಟ್ರಕೂಟರ ಅಧೀನಕ್ಕೆ ಒಳಗಾಗಿರುವುದರ ಕುರುಹುವಾಗಿ ರಾಷ್ಟ್ರಕೂಟ ದೊರೆ ಧ್ರುವನ ಮಗ ಕಂಬಯ್ಯನ ಶಾಸನವು ಇಲ್ಲಿ ದೊರೆತಿದೆ.

ಚೋಳರು

ಕ್ರಿ.ಶ.೧೦೦೪ರಲ್ಲಿ ಒಂದನೇ ರಾಜರಾಜ ಚೋಳನು ತಿರುಮಕೂಡಲು ನರಸೀಪುರದ ಕಲಿಯೂರಿನ ಬಳಿ ಗಂಗರನ್ನು ಪೂರ್ಣವಾಗಿ ಸೋಲಿಸಿ ಗಂಗವಾಡಿಯನ್ನು ವಶಪಡಿಸಿಕೊಳ್ಳುವುದರ ಮೂಲಕ ನಂಜನಗೂಡಿನ ಪ್ರದೇಶದ ಮೇಲೂ ತನ್ನ ಅಧಿಕಾರ ಸ್ಥಾಪಿಸಿದನು.[೪] ಅಂದಿನಿಂದ ಸುಮಾರು ೧೫೦ ವರ್ಷಗಳ ಕಾಲ ಅನ್ಯಭಾಷಾ ಸಂಸ್ಕೃತಿಯ ಆಡಳಿತಕ್ಕೆ ಈ ಪ್ರದೇಶ ಒಳಗಾಗಬೇಕಾಯಿತು.

ಹೊಯ್ಸಳರು

ಕನ್ನಡ ನಾಡಿನ ಇತಿಹಾಸದಲ್ಲಿ ಒಂದು ಉಜ್ವಲವಾದ ಮತ್ತು ಸ್ಮರಣೀಯವಾದ ಅಧ್ಯಾಯವನ್ನು ಪ್ರಾರಂಭಿಸಿದವರು ಹೊಯ್ಸಳರು. ವಿಷ್ಣುವರ್ಧನನು ಕ್ರಿ.ಶ.೧೧೧೪ರಲ್ಲಿ ಗಂಗವಾಡಿಯನ್ನು ಚೋಳರ ಹಿಡಿತದಿಂದ ಬಿಡಿಸಿ ಹೊಯ್ಸಳ ವಿಜಯಪಾತಕೆಯನ್ನು ಹಾರಿಸುವುದರ ಮೂಲಕ ನಂಜನಗೂಡು ಪ್ರದೇಶವನ್ನು ತನ್ನ ಆಡಳಿತದ ವ್ಯಾಪ್ತಿಗೆ ಸೇರಿಸಿಕೊಂಡನು. ಆ ವೇಳೆಗೆ ಕಳಲೆಯ ಪ್ರದೇಶವು ನಂಜನಗೂಡಿನ ವ್ಯಾಪ್ತಿಗೆ ಒಳಪಟ್ಟಿದ್ದಿತು.[೫]

ವಿಜಯನಗರದ ಅರಸರು

ಕರ್ನಾಟಕ ಇತಿಹಾಸ ಪುಟಗಳಲ್ಲಿ ಹೊಯ್ಸಳ ದೊರೆ ಮೂರನೇ ವೀರಬಲ್ಲಾಳನ ಅಂತ್ಯ ಅತ್ಯಂತ ಧಾರುಣ ಘಟನೆಯಾದರೂ, ಆ ಸಾಮ್ರಾಜ್ಯದ ದೇದಿಪ್ಯಮಾನವಾದ ಜ್ಯೋತಿಯ ಒಂದು ಕಿಡಿಯಿಂದ

ಉದಯವಾದ ವಿಜಯನಗರ ಸಾಮ್ರಾಜ್ಯ ಕನ್ನಡನಾಡಿನ ಸಂಸ್ಕೃತಿಯನ್ನು ರಕ್ಷಿಸುವುದರಲ್ಲಿ ಮಹತ್ತರವಾದ ಪಾತ್ರವಹಿಸಿ ನೂತನ ಅಧ್ಯಾಯವೊಂದನ್ನು ಆರಂಭಿಸಿತು.

ಬುಕ್ಕರಾಯನ ಕಾಲದಲ್ಲಿ (೧೩೫೯-೧೩೫೭) ಇವರ ಮಗ ವೀರಕಂಪಣ್ಣನಾಯಕನು ದಕ್ಷಿಣ ಪ್ರದೇಶದಲ್ಲಿ ರಾಜ ಪ್ರತಿನಿಧಿಯಾಗಿದ್ದನೆಂದು, ನಂಜನಗೂಡು ಪ್ರದೇಶವು ಅವನ ಆಳ್ವಿಕೆಗೆ ಒಳಗಾಗಿತ್ತೆಂದು, ಕ್ರಿ.ಶ.೧೩೬೮ರ ಶಾಸನದಿಂದ ತಿಳಿದುಬರುತ್ತದೆ.[೬] ಕ್ರಿ.ಶ.೧೪೯೬-೧೫೦೩ರವರೆಗೆ ವಿಜಯನಗರ ಚಕ್ರಾಧಿಪತ್ಯವನ್ನು ಆಳಿದ ತುಳುವ ವಂಶದ ನರಸಿಂಹರಾಯ ಆಳ್ವಿಕೆಯ ಕಾಲದಲ್ಲಿ ನಂಜನಗೂಡು ಪ್ರದೇಶದ ಕಳಲೆ ಎಂಬಲ್ಲಿ ಒಂದು ಪಾಳೆಪಟ್ಟನ್ನು ಕಟ್ಟಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ.[೭]

ಈ ಕಳಲೆಯ ಪಾಳೆಯಪಟ್ಟು ಮುಂದೆ ಅಂದರೆ ವಿಜಯನಗರ ಸಾಮ್ರಾಜ್ಯದ ಪತನ ನಂತರ ಸ್ವಾತಂತ್ರವಾಗಿ ಆಡಳಿತವನ್ನು ನಡೆಸುವುದರ ಮೂಲಕ ಕಳಲೆಯ ದಳವಾಯಿಗಳು ಎಂದು ಪ್ರಸಿದ್ಧವಾಯಿತು.

ಮೈಸೂರು ಒಡೆಯರು

ವಿಜಯನಗರ ಸಾಮ್ರಾಜ್ಯದ ಪತನದ ನಂತರ ಅನೇಕ ಸಣ್ಣ ಪುಟ್ಟ ರಾಜ್ಯಗಳು ತಲೆಯೆತ್ತಿದವು. ಅಲ್ಲದೆ ಸ್ವತಂತ್ರ ಅಸ್ತಿತ್ವವನ್ನು ಗಳಿಸಿಕೊಂಡವು. ಅವುಗಳಲ್ಲಿ ಕೆಳದಿ ಮತ್ತು ಮೈಸೂರು ಪ್ರಮುಖವಾದ ಸ್ಥಾನ ಪಡೆದಿವೆ. ವಿಜಯನಗರ ಸಾಮ್ರಾಜ್ಯ ನಾಶವಾದ ಈ ರೀತಿಯು ಕರ್ನಾಟಕದಲ್ಲಿ ಹಿಂದೂ ಸಾಮ್ರಾಜ್ಯಗಳು ಮತ್ತೆಂದೂ ತಲೆ ಎತ್ತಲಾರವು ಎಂಬಂತಹ ದುಃಸ್ಥಿತಿ ನಿರ್ಮಾಣವಾಗಿತ್ತು. ಆದರೆ ಇಂತಹ ಸಂದರ್ಭದಲ್ಲೂ ಮೈಸೂರು ಸಂಸ್ಥಾನ ತನ್ನ ಸಾಮರ್ಥ್ಯದ ಕಾರಣದಿಂದ ದೃಢವಾಗಿ ನಿಲ್ಲಲು ಸಾಧ್ಯವಾಯಿತು.

ಹದಿನೇಳನೆಯ ಶತಮಾನದ ಆರಂಭದಲ್ಲಿ ಮೈಸೂರು ಸಂಸ್ಥಾನವನ್ನು ಆಳುತ್ತಿದ್ದ ರಾಜ ಒಡೆಯರು ಕಳಲೆಯ ಪ್ರದೇಶವನ್ನು ತಮ್ಮ ಆಡಳಿತಕ್ಕೆ ಸೇರಿಸಿಕೊಂಡರು.[೮] ಆದರೆ ಈ ವೇಳೆಗಾಗಲೆ ಕಳಲೆಯ ಪ್ರದೇಶವು ಕಳಲೆಯ ಅರಸರ ಆಡಳಿತಕ್ಕೆ ಒಳಪಟ್ಟಿತ್ತು. ಅಲ್ಲದೆ ಮೈಸೂರು ಸಂಸ್ಥಾನಕ್ಕಿಂತ ಶ್ರೀಮಂತವಾಗಿತ್ತು. ಅಂದರೆ ಮೈಸೂರಿನ ರಾಜ ಒಡೆಯರು ಕೇವಲ ೩೩ ಹಳ್ಳಿಗಳ ಒಡೆಯರಾಗಿ ೨೫೦೦೦ ಗದ್ಯಾಣಗಳ ಉತ್ಪತ್ತಿಯನ್ನು ಹೊಂದಿದ್ದಾಗ, ಕಳಲೆ ಅರಸು ಮನೆತನದವರಿಗೆ ೪೦,೦೦೦ ಗದ್ಯಾಣಗಳ ಆದಾಯವಿತ್ತು.[೯] ಹೀಗಿರುವಾಗ ಹಾಲಿಗೆ ಜೇನು ಸೇರಿದಂತೆ ಈ ಎರಡು ಮನೆತನಗಳ ನಡುವೆ ವಿವಾಹ ಸಂಬಂಧ ಏರ್ಪಟ್ಟಿತು. ನಂತರ ಕಳಲೆ ಅರಸು ಮನೆತನದವರು ವಂಶಪಾರಂಪರ್ಯವಾಗಿ ಮೈಸೂರು ರಾಜ್ಯಕ್ಕೆ ದಳವಾಯಿಗಳಾಗಿ ನೇಮಿಸಲ್ಪಡುವ ಒಪ್ಪಂದವೂ[೧೦] ಈ ಮನೆತನಗಳ ನಡುವೆ ಆಗಿರುವುದು ಮತ್ತೊಂದು ವಿಶೇಷ.

ವಿಜಯನಗರ ರಾಜಾನುಕ್ರಮಣಿಕೆಯಲ್ಲಿ ಕ್ರಿ.ಶ.೧೪೯೬-೧೫೦೩ರವರೆಗೆ ವಿಜಯನಗರದ ಆಡಳಿತದ ಚುಕ್ಕಣಿಯನ್ನು ಹಿಡಿದ ತುಳುವ ವಂಶದ ನರಸಿಂಹರಾಯನ ಕಾಲದಲ್ಲಿ ಕಳಲೆಯ ಮೂಲಪುರುಷರಾದ ಕಾಂತರಾಯ, ಕೃಷ್ಣರಾಯರು(ಕ್ರಿ.ಶ.೧೪೯೯) ದ್ವಾರಕೆಯಿಂದ ವಿಜಯನಗರಕ್ಕೆ ಬಂದರು.[೧೧]

ಆಗಿನ ಪರಿಸ್ಥಿತಿಯಲ್ಲಿ ವಿಜಯನಗರದ ಅರಸರು ಅನೇಕ ಪರಕೀಯರ ದಾಳಿಯನ್ನು ಎದುರಿಸಬೇಕಾಗಿದ್ದಿತು. ಇದಕ್ಕಾಗಿ ಅನೇಕ ಹಿಂದೂನಾಯಕರ ನೆರವು ಬೇಕಾಗಿದ್ದಿತು. ಇಂತಹ ಪರಿಸ್ಥಿತಿಯಲ್ಲಿ “ವಿಜಯನಗರಕ್ಕೆ ಬಂದಿದ್ದ ಕಾಂತರಾಯ, ಕೃಷ್ಣರಾಯರಿಂದ ತನಗೆ ಅನುಕೂಲವಾಗ ಬಹುದೆಂದು ತಿಳಿದು ಆ ಇಬ್ಬರನ್ನು ನರಸನಾಯಕನು ತನ್ನ ಬಳಿ ಕರೆಸಿಕೊಂಡನು. ದ್ವಾರಕಾಧೀಶನಾದ ಶ್ರೀಕೃಷ್ಣಪರಮಾತ್ಮನನ್ನು ಧ್ಯಾನಿಸುತ್ತ ಇಬ್ಬರು ವಿಜಯನಗರದ ರಾಜನ ಅರಮನೆಯ ಒಳಗೆ ಬಂದರು. ಇವರು ಬಂದಿರುವ ವಿಷಯವನ್ನು ತಿಳಿದು ಅವರನ್ನು ಗೌರವಧಾರಗಳಿಂದ ಬರಮಾಡಿಕೊಂಡನು. ಇದರ ಪೂರ್ವ ವೃತ್ತಾಂತವನ್ನೆಲ್ಲ ಸವಧಾನವಾಗಿ ಕೇಳಿದನು. ತನ್ನಂತೆಯೇ ಈ ವೀರರು ಸ್ವದೇಶವನ್ನು ಬಿಟ್ಟು ಬಂದಿರುವುದು ಗೊತ್ತಾಗಿ ಇವರುಗಳಲ್ಲಿ ಪರಸ್ಪರ ಬಂಧು ಭಾವನೆ ಉತ್ಪನ್ನವಾಯಿತು. ಅಲ್ಲದೆ ದ್ವಾರಕೆಯಿಂದ ಬಂದ ಈ ಸಹೋದರರು ದ್ವಾರಕಿಯ ಬಳಿ ರಾಜರಾಗಿ ಆಳುತ್ತಿದ್ದ ವಿಚಾರವನ್ನು ತಿಳಿದು ಇವರನ್ನು ಗೌರವಿಸಿ ಕೆಲವು ಕಾಲ ಅರಮನೆಯಲ್ಲಿಯೇ ಉಳಿಸಿಕೊಂಡಿದ್ದನು.”[೧೨]

ಇಂತಹ ಸಮಯವನ್ನೇ ಕಾಯುತ್ತಿದ್ದ ಉಮ್ಮತ್ತೂರಿನ ಪಾಳೆಗಾರನಾದ ಹರಿಹರರಾಯನು ಇದನ್ನು ಪ್ರತಿಭಟಿಸಿ ದಂಗೆ ಎದ್ದನು.[೧೩] ಈ ಪಾಳೆಗಾರನ ಬಲವನ್ನು ತಗ್ಗಿಸಬೇಕೆಂಬ ಉದ್ದೇಶದಿಂದ “ವಿಜಯನಗರದ ಅರಸನು ಉಮ್ಮತ್ತೂರಿನ ಪಾಳೆಗಾರನಿಗೆ ಒಂದು ರಾಯಸವನ್ನು ಬರೆದನು. ಅದರಲ್ಲಿ ಕಾಂತರಾಯರಿಗೆ ನಂಜನಗೂಡು ಬಳಿ ಇರುವ ಕಳಲೆ ಗ್ರಾಮ ಮತ್ತು ಇದಕ್ಕೆ ಸಂಬಂಧಪಟ್ಟ ಉಪಗ್ರಾಮಗಳನ್ನು ವಹಿಸಿಕೊಟ್ಟು ಅವರಿಗೆ ತನ್ನ ಕಡೆಯ ಉಪನಾಯಕನಾಗಿ ಪಟ್ಟಕಟ್ಟಬೇಕೆಂದು ತಿಳಿಸಿದನು. ವಿಜಯನಗರದ ದೊರೆಯು ಈ ರಾಯಸವನ್ನು ಕಾಂತರಾಯರಿಗೆ ಕೊಟ್ಟು ದಿವ್ಯವಾದ ವಸ್ತ್ರಭರಣಗಳನ್ನಿತ್ತು ಕಳಹಿಸಿದನು. ಆಗ ಕಾಂತರಾಯ, ಕೃಷ್ಣರಾಯರು, ಬಹು ಸಂತೋಷದಿಂದ ತಮ್ಮ ಆರಾಧ್ಯ ದೇವತೆಯಾದ ಶ್ರೀ ಲಕ್ಷ್ಮೀಕಾಂತ ಮೂರ್ತಿಯನ್ನು ತೆಗೆದುಕೊಂಡು ತಮ್ಮ ಕುಟುಂಬ ಪರಿವಾರದೊಂದಿಗೆ ಉಮ್ಮತ್ತೂರಿಗೆ ಬಂದು ಅಲ್ಲಿನ ಪಾಳೆಯಗಾರನಿಗೆ ರಾಜನ ರಾಯಸವನ್ನು ಕೊಟ್ಟರು. ಆತನು ಅಧಿರಾಜನ ಅಪ್ಪಣೆಯನ್ನು ಪಾಲಿಸಬೇಕಾಗಿ ಬಂದಿತು. ಇದೇ ವೇಳೆಯಲ್ಲಿ ಈ ರಾಯಸದ ವಾರ್ತೆಯನ್ನು ತಿಳಿದ ಕಳಲೆಯ ಹಿರಿಯರೆಲ್ಲರೂ ಸೇರಿ ಉಮ್ಮತ್ತೂರಿನ ಪಾಳೆಗಾರನ ಬಳಿ ಬಂದು ಕಳಲೆ ಪಟ್ಟವನ್ನು ಕಾಂತರಾಯರಿಗೆ ಕಟ್ಟಬೇಕೆಂದು ಕೇಳಿಕೊಂಡರು. ಆಗ ಉಮ್ಮತ್ತೂರು ಒಡೆಯನು

ವಿಧಿಯಿಲ್ಲದೆ ಹಾಗೆಯೇ ಆಗಲಿ ಎಂದು ಹೇಳಿ ತನ್ನ ಕಡೆಯಿಂದ ರಾಜಮರ್ಯಾದೆಗಳೊಡನೆ ಕಳುಹಿಸಿ ತನ್ನ ಕಡೆಯ ಉಪನಾಯಕನಾಗಿ ಕಾಂತರಾಯರಿಗೆ ಪಟ್ಟಕಟ್ಟಿ, ಆ ವಿಚಾರವನ್ನು ವಿಜಯನಗರದ ಚಕ್ರವರ್ತಿಗೆ ಹೇಳಿಕಳುಹಿಸಿದನು."[೧೪]

ಶ್ರೀಕಾಂತರಾಯರು ತಮ್ಮ ವಂಶಾನು ಕ್ರಮದಿಂದ ಬಂದ "ಶ್ರೀ ಮುದ್ರಾಜಾಧಿರಾಜ ಪರಮೇಶ್ವರ" ಎಂಬ ಬಿರುದನ್ನು ಹೊಂದಿ ಕಾಂತ ಒಡೆಯರೆಂಬ ಅಭಿದಾನದಿಂದ ಪಟ್ಟಾಭಿಷಕ್ತರಾಗಿ ತಮ್ಮ ತಮ್ಮಂದಿರಾದ ಕೃಷ್ಣರಾಯರಿಂದಲೊ ತಮ್ಮ ಬಂಧುಜನದ ಪರಿಜನ ನಾಡ ಜನರಿಂದಲೂ ಕೂಡಿ ಕಳಲೆಯ ಅರಸರೆಂದು ಹೊಗಳಿಸಿಕೊಂಡರು. ಇವರಿಗೆ ಒಂದು ಅರಮನೆಯು ನಿರ್ಮಾಣವಾಯಿತು. ಕೋಟೆ ಕೊತ್ತಲೆಗಳು ಕಟ್ಟಲ್ಪಟ್ಟವು ಸಹೋದರರಿಬ್ಬರು ನಿತ್ಯವೂ ಬಿಡದೆ ಪೂಜಿಸುತ್ತಿದ್ದ ಲಕ್ಷ್ಮೀಕಾಂತ ಮೂರ್ತಿಯನ್ನು ಅರಮನೆಯಲ್ಲಿಯೇ ಇಟ್ಟುಕೊಂಡು ಪೂಜಿಸುತ್ತಿದ್ದರು.[೧೫] ಹೀಗೆ ಕಾಂತರಾಯರು ಐದು ವರ್ಷ ಎರಡು ತಿಂಗಳ ಕಾಲ ತಮ್ಮನಾದ ಕೃಷ್ಣರಾಯರ ಸಚಿವತ್ವದಲ್ಲಿ ರಾಜ್ಯವಾಳಿದ ನಂತರ ತಮ್ಮ ವೃದ್ಯಾಪ್ಯೇ ದೆಸೆಯಿಂದ ರಾಜ್ಯಾಡಳಿತವನ್ನು ತಮ್ಮಿಂದ ನಿರ್ವಯಿಸುವುದು ಕಷ್ಟವೆಂದು ಅರಿತು. ತಮ್ಮ ತಮ್ಮನಿಗೆ ಈ ವಿಷಯವನ್ನು ತಿಳಿಸಿದರು. ಆಗ ಕೃಷ್ಣರಾಯನು ಈ ಕೆಳಗಿನಂತೆ ಹೇಳುತ್ತಾನೆ.

"ಆಗ್ರಜಾ ದ್ವಾರಕಾಧೀಶನ ಪ್ರೇರಣೆಯಿಂದ ನಾವು ಈ ಸ್ಥಳಕ್ಕೆ ಬಂದು ನೆಲೆಸಿದವು. ತಮಗೆ ಈಗ ಉಳಿದಿರುವುದು ನಾಲ್ಕು ಕೆಲಸಗಳು. ಒಂದನೇಯದು ನಿಮ್ಮ ಮಗನಾದ ಮಲ್ಲರಾಜನಿಗೆ ಈ ರಾಜ್ಯದಲ್ಲಿ ಪಟ್ಟಾಭಿಷೇಕ ಮಾಡಬೇಕು. ಎರಡನೇಯದಾಗಿ ಸ್ವಪ್ನದಲ್ಲಿ ಗೋಚರವಾದ ಈ ಸ್ಥಳದಲ್ಲಿ ಪ್ರಾದುರ್ಭವಿಸಿರುವ ಶ್ರೀ ಲಕ್ಷ್ಮೀಕಾಂತನ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ಅಲ್ಲಿಗೆ ನಿಮ್ಮ ಉತ್ಸವ ಮೂರ್ತಿಯನ್ನು ಬಿಜಯ ಮಾಡಿಸಿ, ಆ ದೇವದೇವನ ಪೂಜಾದಿಗಳಿಗೆ ಮಾನ್ಯವನ್ನು ಮಾಡುವುದು. ಮೂರನೇಯದಾಗಿ ಈ ಗ್ರಾಮಕ್ಕೆ ಆದಿ ದೇವತೆಯಾದ ಕೈವಲ್ಯಾದೇವಿಗೆ ಒಂದು ಮಂದಿರವನ್ನು ನಿರ್ಮಿಸುವುದು. ನಾಲ್ಕನೇಯದಾಗಿ ನಾವಿಬ್ಬರೂ ನಶ್ವರವಾದ ಈ ದೇಹಗಳಿರುವತನಕ ಲಕ್ಷ್ಮೀಕಾಂತ ರೂಪಿ ಆ ದ್ವಾರಕಾಧೀಶನನ್ನು ಈ ದೇವಾಲಯದಲ್ಲಿ ಸ್ಮರಿಸುತ್ತ ತಮ್ಮ ಕೊನೆಗಾಲವನ್ನು ಕಳೆಯುವುದು."[೧೬] ಇದು ನನ್ನ ಅಭಿಮತವೆಂದನು.

ಇದನ್ನು ಕೆಳಿ ಕಾಂತಒಡೆಯರು ತಮ್ಮ ತಮ್ಮನನ್ನು ಬಾಚಿ ತಬ್ಬಿಕೊಂಡು ನಿನ್ನಂತಹ ಅನುಜನನ್ನು ಪಡೆದಿರುವುದು ತನ್ನ ಭಾಗ್ಯೋದಯವೇ ಸರಿ ಎಂದು ಹೇಳಿ ವಿಜಯನಗರದ ಪ್ರಭುಗಳಿಗೂ ಕಾಗದ ಬರೆದು, ಉಮ್ಮತ್ತೂರಿನ ನಾಯಕನಿಗೂ ತಿಳಿಸಿ ತನ್ನ ಮಗನಾದ ಮಲ್ಲರಾಜನಿಗೆ ಕೃಷ್ಣ ಒಡೆಯರೆಂಬ ಅಭಿದಾನದಿಂದ ಶಾಲಿವಾಹನ ಶಕ ೧೪೨೮ (ಕ್ರಿ.ಶ.೧೫೦೬) ಕ್ರೋಧನ ಸಂವತ್ಸರದ ಚೈತ್ರ ಶುದ್ಧ ದಶಮಿ ಶುಕ್ರವಾರದಂದು ಪಟ್ಟಕಟ್ಟಿಸಿದರು.[೧೭]

ಈ ಕಾಲದಲ್ಲಿ ಕಳಲೆ ಅರಸರಿಗೆ ರಾಯರೇಖೆ ೪೭ ಗ್ರಾಮಗಳು ೨೨ ಕೆರೆಗಳು ೧೦ ಕೊಪ್ಪಲುಗಳು, ಕಪಿಲಾ ನದಿ, ಗುಂಡ್ಲು ಹೊಳೆ, ಒಂದು ಅಣೆಕಟ್ಟು ಇಷ್ಟೂ ಸೇರಿದ್ದವು. ಕಳಲೆಯ ಶ್ರೀ ಲಕ್ಷ್ಮೀಕಾಂತ ದೇವಾಲಯದ ಪೂಜೆಗಾಗಿ ದ್ವಾರಕೆಯಿಂದ ಕಾಂತರಾಯ, ಕೃಷ್ಣರಾಯರ ಜೊತೆಯಲ್ಲಿ ದೇವರ ಕಾರ್ಯಕ್ಕೆ ಬಂದಿದ್ದ ಬ್ರಾಹ್ಮಣರನ್ನು ನೇಮಿಸಿ, ಆ ದೇವಾಲಯದ ಕಟ್ಟಡವನ್ನು ಹೆಚ್ಚಿಸಿ, ಪಡಿತರ ದೀಪಾರಾಧನೆಗೆ ೧೩,೭೮೫ ಹಣ ತಸ್ತಿಕು ಮಾಡಿದರು ಮತ್ತು ತಾವು ದ್ವಾರಕೆಯಿಂದ ತಂದಿದ್ದ ಶ್ರೀ ಲಕ್ಷ್ಮೀಕಾಂತನ ಉತ್ಸವಮೂರ್ತಿಯನ್ನು ಅದೇ ದೇವಾಲಯದಲ್ಲಿರಿಸಿ ಉತ್ಸವಾದಿಗಳಿಗೆ ಏರ್ಪಾಡು ಮಾಡಿದರು.[೧೯] ಗ್ರಾಮ ದೇವತೆ ಕೈವಲ್ಯದೇವಿಗೆ ಭವ್ಯವಾದ ಮಂದಿರವನ್ನು ಕಟ್ಟಿಸಿ ನಿತ್ಯ ಪೂಜಾದಿಗಳಿಗೆ ಏರ್ಪಾಡು ಮಾಡಿದರು. ಇವರ ದಿನಚರಿಯು ಸಕಲರಿಗೂ ಆದರ್ಶಪ್ರಾಯವಾಗಿದ್ದಿತು. ಉಷಃಕಾಲದಲ್ಲಿ ಎದ್ದು ಶೌಚಸ್ನಾನಾದಿಗಳನ್ನು ಪೂರೈಸಿ, ಸಂಧ್ಯಾವಂದನಾದಿ ಕಾರ್ಯಗಳನ್ನು ಮುಗಿಸಿ ದೇವಾಲಯಕ್ಕೆ ಬಂದು ಅಲ್ಲಿ ದೇವರ ಸನ್ನಿಧಿಯಲ್ಲಿ ಧ್ಯಾನಾಸಕ್ತರಾಗಿ ಕುಳಿತರೆಂದರೆ ಇಹಲೋಕದ ವಿಚಾರಗಳು ಅವರ ಬಳಿ ಸುಳಿಯುತ್ತಲೇ ಇರಲಿಲ್ಲ. ಹೀಗೆ ಸರ್ವದಾ ದೇವಸನ್ನಿಧಿಯಲ್ಲೆ ಕಾಲಕಳೆಯುತ್ತಾ ತಮ್ಮ ಅಂತಿಮ ದಿನಗಳನ್ನು ನೂಕಿದರು.

ಹೀಗೆ ಮಲ್ಲರಾಜರು ಸುಖವಾಗಿ ರಾಜ್ಯವಾಳುತ್ತಿರುವಾಗ ಉಮ್ಮತ್ತೂರಿನ ಹರಿಹರರಾಯನ ಮಗ ನಂಜರಾಯನು ಕಳಲೆಯ ಮೇಲೆ ದ್ವೇಷ ಸಾಧಿಸುತ್ತಿದ್ದನು. ವಿಜಯನಗರದ ಪ್ರಭುಗಳು ಕಾಂತ ಒಡೆಯನನ್ನು ಕಳಲೆಯ ಅಧಿಪತಿಗಳನ್ನಾಗಿ ಮಾಡಿದುದ್ದು ಇವನಿಗೆ ಇಷ್ಟವಿರಲಿಲ್ಲ. ಆದರೆ ವಿಜಯನಗರದ ಪ್ರಭುಗಳ ಅಪ್ಪಣೆಗೆ ವಿರುದ್ಧವಾಗಿ ನಡೆಯಲು ಧೈರ್ಯವಿರಲಿಲ್ಲ. ಆದರೂ ಈ ವಿಷಬೀಜವು ಉಮ್ಮತ್ತೂರು ನಂಜರಾಜನ ಮನಸ್ಸಿನೊಳಗೆ ಕೊರೆಯುತ್ತಿದ್ದಿತ್ತು. ಆದ್ದರಿಂದ ಕಳಲೆಯ ಪ್ರಭುಗಳ ಮೇಲೆ ಮರ್ಮವನ್ನು ತಾಳಿ ಯಾವ ಬಗೆಯಲ್ಲಾದರೂ ಅವರಿಗೆ ಕಷ್ಟ ಕೊಡಬೇಕೆಂದು ಯೋಚಿಸುತ್ತಿದ್ದನು.

"ಕೃಷ್ಣ ಒಡೆಯರ (ಮಲ್ಲರಾಜ ಒಡೆಯರ) ಬಳಿಯಲ್ಲಿ ಒಂದು ಜಾತ್ಯಶ್ವವಿದ್ದಿತು ಅದನ್ನು ಅವರು ಬಹಳ ಪ್ರೀತಿಯಿಂದ ಸಾಕುತ್ತಿದ್ದರು. ಉಮ್ಮತ್ತೂರು ನಂಜರಾಜನು ಈ ಕುದುರೆಯನ್ನು ತಾನು ಅಪಹರಿಸಬೇಕೆಂದು ನಿಶ್ಚಯಿಸಿ ಕಳಲೆಗೆ ತನ್ನ ಕಡೆಯ ಕಳ್ಳಭಂಟರನ್ನು ಕಳುಹಿಸಿದನು. ಯಾವ ಬಗೆಯಿಂದಾದರೂ ಆ ಕುದುರೆಯನ್ನು ತೆಗೆದುಕೊಂಡು ಬರುವಂತೆ ಆಜ್ಞಾಪಿಸಿದನು. ಆದರೆ ಈ ಕಳ್ಳ ಭಂಟರು ಎಷ್ಟು ಪ್ರಯತ್ನಿಸಿದರು ಸಹ ಕುದುರೆಯನ್ನು ಪಡೆಯಲು ಸಾಧ್ಯವಾಗಲಿಲ್ಲ."[೨೦]

ಒಂದು ದಿನ ಕಳಲೆಯ ರಾಜ ಕೃಷ್ಣ ಒಡೆಯರು ಶಿವದರ್ಶನಕ್ಕಾಗಿ, ಸಮೀಪದ ಊರಾದ ಸಿಂಧುವಳ್ಳಿಯಲ್ಲಿ ಶ್ರೀ ಶ್ರೀಕಂಠೇಶ್ವರ ಸ್ವಾಮಿ ಸನ್ನಿಧಿಗೆ ಈ ಕುದುರೆಯ ಮೇಲೆ ಕುಳಿತು ಹೋಗಿದ್ದರು. ದೇವರ ದರ್ಶನ ನಂತರ ಊರಿಗೆ ವಾಪಸ್ಸು ಬರುವ ಮಾರ್ಗದಲ್ಲಿ ಈ ಕಳ್ಳಭಟ್ಟರು ಕಾದಿದ್ದು ಅಡ್ಡಗಟ್ಟಿದರು. ಕೃಷ್ಣ ಒಡೆಯರ ಅಂಗರಕ್ಷಕರಿಗೂ, ಕಳ್ಳಭಂಟರಿಗೂ ಪ್ರಭಲವಾದ ಕಾದಾಟ

ಪ್ರಾರಂಭವಾಯಿತು. ಕುದುರೆಯು ಈ ಸಂದರ್ಭವನ್ನು ತಿಳಿದು ಕ್ಷಣ ಮಾತ್ರದಲ್ಲಿ ಕೃಷ್ಣ ಒಡೆಯರನ್ನು ಕಂಟಕದಿಂದ ಪಾರು ಮಾಡಿ ಕಳಲೆಗೆ ತಂದು ಬಿಟ್ಟಿತು. ಕೂಡಲೇ ಕೃಷ್ಣ ಒಡೆಯರು ತನ್ನ ಇತರ ಅಂಗರಕ್ಷಕರನ್ನು ಸಹಯಕ್ಕಾಗಿ ಕಳುಹಿಸಿದರು. ಆ ಕಳ್ಳಭಂಟರನ್ನೆಲ್ಲಾ ನಾಶಪಡಿಸಿದರು. ಇದನ್ನು ತಿಳಿದು ಕೃಷ್ಣ ಒಡೆಯರು ಆಶ್ಚರ್ಯಪಟ್ಟು ಆ ಕುದುರೆಯನ್ನು ಕೋಟೆಯಲ್ಲಿ ಬಚ್ಚಿಟ್ಟು ತನ್ನ ಕುದುರೆ ಸತ್ತು ಹೋಯಿತೆಂದು ಹೇಳಿ ಕಳುಹಿಸಿದರು. ನಂಜರಾಜನು ಗೂಢಚಾರರಿಂದ ಕುದುರೆ ಇರುವ ಸ್ಥಳವನ್ನು ತಿಳಿದು, ಕೃಷ್ಣ ಒಡೆಯರನ್ನು ಹೇಗಾದರೂ ಮಾಡಿ ನಾಶಪಡಿಸಬೇಕೆಂಬ ದುರ್ಬುದ್ಧಿಯಿಂದ ಸಮಯವನ್ನು ಕಾಯುತ್ತಿದ್ದನು.

ನಂಜರಾಜನು ಕಳಲೆಯ ಸಮೀಪದಿಂದ ನಂಜನಗೂಡು ಶ್ರೀಕಂಠೇಶ್ವರಸ್ವಾಮಿಯ ಸೇವಾ ವ್ಯಾಜವನ್ನಿಟ್ಟುಕೊಂಡು ನಂಜನಗೂಡಿಗೆ ಬಂದು ಅಲ್ಲಿಗೆ ಕೃಷ್ಣ ಒಡೆಯರನ್ನು ಬರಮಾಡಿಕೊಂಡು ಹೀಗೆ ಹೇಳಿದನು. "ನೀನು ಕಳಲೆಯಲ್ಲಿ ವಿಷ್ಣುದೇವಾಲಯವಿದೆ ಶಿವ ದೇವಾಲಯವಿಲ್ಲ. ನಿಮ್ಮ ಪೂರ್ವಿಕ ಪುಣ್ಯಭೂಮಿಯಾದ ಸೌರಾಷ್ಟ್ರದಲ್ಲಿ ಲೋಕ ಪ್ರಸಿದ್ಧವಾದ ವಿಷ್ಣು(ದ್ವಾರಕೇಶ), ಶಿವ(ಸೋಮನಾಥ) ದೇವಾಲಯಗಳೆರೆಡು ಇವೆ ಆದರೆ ನಿಮ್ಮ ಕಳಲೆಯಲ್ಲಿ ದ್ವಾರಕೇಶನ ದೇವಾಲಯಕ್ಕೆ ಬದಲು ಲಕ್ಷ್ಮೀಕಾಂತನ ದೇವಾಲಯವಿದೆ. ಆದರೆ ಅಲ್ಲಿರುವ ಸೋಮನಾಥೇಶ್ವರ ದೇವಾಲಯಕ್ಕೆ ಬದಲಾಗಿ ಶಿವದೇವಾಲಯವಿಲ್ಲ ಆದ ಕಾರಣ ಕಳಲೆಯಲ್ಲಿ ಒಂದು ಶಿವದೇವಾಲಯವನ್ನು ಕಟ್ಟಿಸಿ" ಎಂದು ಹೇಳಿ ಉಮ್ಮತ್ತೂರಿಗೆ ಸಾಗಿದನು.[೨೦]

ಕೃಷ್ಣ ಒಡೆಯರು ಇದು ನ್ಯಾಯಸಮ್ಮತವೆಂದು ತಿಳಿದು ಕಳಲೆಯಲ್ಲಿ ಸೋಮೇಶ್ವರ ಸ್ವಾಮಿ ದೇವಾಲಯವನ್ನು ಕಟ್ಟಿಸಿದನು.[೨೧] ಉಮ್ಮತ್ತೂರು ಅರಸರು ಈ ದೇವಾಲಯವನ್ನು ನೋಡುವ ನೆಪದಲ್ಲಿ ಕಳಲೆಗೆ ಬಂದು ಕೂಡಲಾಪುರದ ಬಳಿ 'ಗದಾವುಣೆಗದ್ದೆ"[೨೨] ಎಂಬಲ್ಲಿ ಬಿಡಾರ ಮಾಡಿ ಅಲ್ಲಿನ ಸ್ಥಿತಿಗತಿಗಳನ್ನೆಲ್ಲ ಅರಿತು ಕೃಷ್ಣ ಒಡೆಯರನ್ನು ಬರೆಮಾಡಿಕೊಂಡನು. ಆದರೆ ಉಮ್ಮತ್ತೂರಿನ ಅರಸನ ಕಪಟವನ್ನರಿಯದ ಕೃಷ್ಣ ಒಡೆಯರು ತಮ್ಮ ಬಂಧು ಬಳಗದೊಡನೆ ಕುಟುಂಬ ಸಮೇತರಾಗಿ ಕಳಲೆಯಿಂದ ಬಿಡಾರದ ಬಳಿಗೆ(ಕ್ರಿ.ಶ.೧೫೩೦) ಹೊರಟರು. ದಾರಿಯಲ್ಲಿ ಉಮ್ಮತ್ತೂರಿನ ನಂಜರಾಜನ ಕಡೆಯ ದಂಡಾಳುಗಳು ತಮ್ಮ ಅರಸರ ಅಪ್ಪನೆಯ ಮೇರೆಗೆ ಇವರನ್ನು ಅಡ್ಡಗಟ್ಟಿ ಕೊಲ್ಲುವುದಕ್ಕೆ ಸಿದ್ಧಾರಾಗಿ ನಿಂತರು. ಕೃಷ್ಣ ಒಡೆಯರಿಗೆ ದಿಕ್ಕು ತೋಚಲಿಲ್ಲ. ಹೆಂಡತಿಯನ್ನು ಕರೆದು ನಿಜಸ್ಥಿತಿಯನ್ನು ಅವಳಿಗೆ ತಿಳಿಸಿದರು. ಮಕ್ಕಳು ಬಂಧುಬಾಂಧವರನ್ನೆಲ್ಲಾ ದೇವದೇವನಾದ ದ್ವಾರಕನಾಥನನ್ನು ನೆನೆಯುತ್ತಾ ನಿಲ್ಲುವಂತೆ ಹೇಳಿದರು. ತಮ್ಮ ಮೆಚ್ಚಿನ ಭಂಟರಿಗೆ ಹೆಂಗಸರು ಮಕ್ಕಳನ್ನು ಕಾಯುವಂತೆ ಹೇಳಿ ವೀರ ಕತ್ತಿಯನ್ನು ಒರೆಯಿಂದ ಹಿಡಿದು ತಮ್ಮ ಬಂಧುಗಳಿಗೂ ಯುದ್ಧರಂಗಕ್ಕೆ ಇಳಿಯಿರೆಂದು ಹೇಳಿ ರೋಷಾ ವೇಷಾದಿಂದ ಕಾದಡಲು ಅನುವಾದರು.

ಕೃಷ್ಣ ಒಡೆಯರು ಶೌರ್ಯದಿಂದ ಹೋರಾಡಿ ಪ್ರಾಣ ಬಿಟ್ಟರು. ಹಾಗೆಯೇ ಕಳಲೆಯ ಎಲ್ಲಾ ಸೈನಿಕರು ಪ್ರಾಣದಾಸೆಯನ್ನು ತೊರೆದು ಹೋರಾಡಿದರು, ಎಷ್ಟೆ ಪ್ರಯತ್ನ ಪಟ್ಟರು ನಂಜರಾಜನನ್ನು ಸೋಲಿಸಲು ಸಾಧ್ಯವಾಗದೆ ಎಲ್ಲರೂ ವೀರ ಮರಣವನ್ನು ಹೊಂದಿದರು. ನಂಜರಾಜನ ಸೈನ್ಯವು ಮಕ್ಕಳು ಮರಿಗಳೆನ್ನದೆ ಎಲ್ಲರನ್ನು ಸಂಹರಿಸಿತು.

ಉಮ್ಮತ್ತೂರಿನ ನಂಜರಾಜನ ಹಾಳು ಹೃದಯವು ಆ ಮಹಿಮಾನ್ವಿತವಾದ ಭಗ್ನವಷೇಷವನ್ನು ನೋಡಿ ಅವನು ತನ್ನನ್ನು ತಾನೇ ಶಪಿಸಿಕೊಳ್ಳುವಂತಾಯಿತು. ಕಳಲೆಯ ಪ್ರಭುಗಳ ಜೊತೆಯಲ್ಲಿ ಪ್ರಾಣತೆತ್ತ ಎಲ್ಲಾ ಮಹಾ ಪುರುಷರ ಕೀರ್ತಿ, ಚಿಹ್ನೆಗಳು ಎತ್ತ ತಿರುಗಿದರೆ ಅತ್ತ ಆ ನಂಜರಾಜನನ್ನು "ಪಾಪಿ" ಎಂದು ಸದ್ದು ಮಾಡದೆ ದಿಕ್ಕರಿಸುತ್ತಿದ್ದವು. ಇಷ್ಟೆಲ್ಲ ಅದರೂ ಸಹ ಉಮ್ಮತ್ತೂರು ನಂಜರಾಜನ ಬಯಕೆ ಈಡೇರಲಿಲ್ಲ. ಕಳಲೆಯ ನೃಪರ ವಂಶಾಂಕುರವು ದೈವಲೀಲೆಯಿಂದ ಉಳಿಯಿತು.[೨೩]

ಮೇಲ್ಕಂಡಂತೆ ಕಾಳಗ ನಡೆದಾಗ ಹತ್ಯಾಕಾರರ ಲವಲೇಶ ಕರುಣೆಯಿಂದಲೋ ಏನೋ ಕೃಷ್ಣ ಒಡೆಯರ ಪುತ್ರ ಎರಡನೇಯ ಮಲ್ಲರಾಜರ ಮಗುವೊಂದು ಆ ರಣರಂಗದಲ್ಲಿಯೇ ಬದುಕಿ ಉಳಿಯಿತು. ಹೆಣದ ರಾಶಿಗಳ ಮಧ್ಯೆ ಆ ಮಗುವು ಚಂದ್ರಹಾಸನಂತೆ ಅಳುತ್ತಾ ತಾಯಿಯನ್ನು ಕಾಣದೆ ಬಂಧು ಬಾಂಧವರ ಮೃತ ದೇಹಗಳ ಭೀಕರ ದೃಷ್ಯದಿಂದ ಹೆದರಿ ರೋಧನ ಮಾಡುತ್ತಿದ್ದಿತು. ಬಾಪನಕರಿಯ ಎಂಬ ಕುರುಬನು ಆ ಮಗುವನ್ನು ನೋಡಿದನು. ಅದೇ ಮಾರ್ಗವಾಗಿ ಬರುತ್ತಿದ್ದ ಅಗಸಗಿತ್ತಿಯೊಬ್ಬಳು ಆ ಮಗುವನ್ನು ನೋಡಿದಳು, ಆ ಅಗಸಗಿತ್ತಿಯು ಉಪ್ಪನಹಳ್ಳಿಯಿಂದ ಹುರ ಗ್ರಾಮಕ್ಕೆ ಮದುವೆಯಾಗಿದ್ದು ತವರು ಮನೆಯಾದ ಉಪ್ಪನಹಳ್ಳಿಗೆ ಬಂದಿದ್ದಳು. ಅವಳು ತನ್ನ ಗಂಡನ ಮನೆಗೆ ಹೋಗುವಾಗ ಈ ಮಗುವನ್ನು ನೋಡಿ ಈ ಮಗು ನಮ್ಮ ಹುರದ ಗೌರಮ್ಮಣ್ಣಿಯವರದೆಂದು ಪತ್ತೆಹಚ್ಚಿದಳು.[೨೪] (ಗೌರಮ್ಮಣಿಯವರು ಕೃಷ್ಣ ಒಡೆಯರ ದ್ವಿತೀಯ ಪುತ್ರ ಎರಡನೆ ಮಲ್ಲಿರಾಜನ ಹೆಂಡತಿ).

ಬಾಪನಕರಿಯ ಮತ್ತು ಆ ಅಗಸಗಿತ್ತಿ ಸೇರಿ ಆ ಮಗುವನ್ನು ಎತ್ತಿಕೊಂಡು ಹೋಗಿ ಹುರದಲ್ಲಿದ್ದ ಆ ಮಗುವಿನ ಸೋದರ ಮಾವನಾದ ಹುರದ ಹೊನ್ನುಗ್ಗೆ ಮಾಧವರಾಯರಿಗೆ ತಂದುಕೊಟ್ಟು ಎಲ್ಲಾ ವಿಷಯಗಳನ್ನು ತಿಳಿಸಿದರು. ಕಳಲೆ ಮಹಾ ಪ್ರಭುಗಳ ವಂಶದಲ್ಲಿ ಹುಟ್ಟಿದ ಮುದ್ದು ಬಾಲಕನಿಗೆ ಉಂಟಾದ ದುರ್ಗತಿಯನ್ನು ತಿಳಿದ ಗ್ರಾಮದ ಜನತೆ ಮರುಗಿದರು. "ಈ ಮಗು ತಬ್ಬಲಿ, ಕಳಲೆ ವಂಶಕ್ಕೆ ಉಳಿದಿರುವುದು ಇದೊಂದೇ ಮಗು"[೨೫] ಎಂದು ಎಲ್ಲರು ತಮ್ಮ ಕಂದನಿಗಿಂತ ಹೆಚ್ಚಾಗಿ ಈ ಮಗುವನ್ನು ಸಾಕಿದರು. ಅಲ್ಲದೆ ರಾಜಯೋಗ್ಯವಾದ ವಿದ್ಯಾಬುದ್ಧಿಗಳನ್ನು ಕಲಿಸಿದರು. ಹೊನ್ನುಕ್ಕೆ ಮಾಧವರಾಯರು ಆ ಗ್ರಾಮದ ಮಲ್ಲಿಕಾರ್ಜುನ ಅಂಕಿತವಾಗಿ ಆ ಮಗುವಿಗೆ ಮಲ್ಲರಾಜ ಒಡೆಯರೆಂದು ನಾಮಕರಣ ಮಾಡಿದರು. ಆ ಮಗುವನ್ನು ಮುದ್ದಿಗಾಗಿ ಮುದ್ದು ಮಲ್ಲರಾಜ ಎಂದು ಕರೆಯುತ್ತಿದ್ದರು.[೨೬]

ಈ ಕಡೆ ಉಮ್ಮತ್ತೂರು ಅರಸರು ತನ್ನ ಆಸೆಯೆಲ್ಲಾ ಈಡೇರಿತೆಂದೂ, ಆದರೆ ಕಳಲೆಯ ಮನೆನತದವರಿಗೆ ರಾಜ್ಯವನ್ನು ಕೂಡದೆ ತಾನೇ ದಕ್ಕಿಸಿಕೊಂಡರೆ ವಿಜಯನಗರದ ಅರಸರಿಂದ ತನಗೆ ತೊಂದರೆಯಾಗಬಹುದೆಂಬ ಭಯದಿಂದ ತನ್ನ ಬಿಡಾರದಲ್ಲಿಯೇ ಇದ್ದ ಕಳಲೆಯ ಕಾಂತಣ್ಣ ಎಂಬುವನಿಗೆ ಪಟ್ಟಕಟ್ಟಿದನು. ಕೃಷ್ಣ ಒಡೆಯರ ವಂಶವನ್ನು ಹಾಳು ಮಾಡಬೇಕೆಂದಿದ್ದ ತನ್ನ ಅಭಿಲಾಷೆ ಇಂದಿಗೆ ಈಡೇರಿತೆಂದು ಸಂತೋಷದಿಂದ ಇದ್ದನು. ಆದರೂ ತಾನು ಮಾಡಿದ ನೀಚಕೃತ್ಯಕ್ಕೆ ಹೆದರಿ ಕುದ್ರೋಷ ನಿವಾರಣೆಗಾಗಿ ಸಿಂಧುವಳ್ಳಿ ಶಂಕರಸ್ವಾಮಿ ದೇವಾಲಯವನ್ನು ಜೀರ್ಣೋದ್ಧಾರ ಮಾಡಲು ಕಾಂತಣ್ಣನಿಗೆ ಹೇರಳವಾದ ದ್ರವ್ಯವನ್ನು ಕೊಟ್ಟು ಉಮ್ಮತ್ತೂರಿಗೆ ಸಾಗಿದನು.[೨೭]

ಕಾಂತಣ್ಣನು ತನಗೆ ರಾಜ್ಯ ದೊರೆತರು ಅದು ತನ್ನದೆಂದು ಭಾವಿಸದೆ ತನ್ನ ಒಡೆಯನಾದ ಕೃಷ್ಣ ಒಡೆಯರ 'ಹಾವಿಗೆ'ಯನ್ನು ಸಿಂಹಾಸನದ ಮೇಲಿರಿಸಿ ಅದನ್ನು ಪೂಜಿಸಿಕೊಂಡು ಹಲವು ವರ್ಷಗಳ ಕಾಲ ರಾಜ್ಯವಾಳಿದನು.[೨೮] ರಾಜವಂಶಕ್ಕೆ ಸಂಬಂಧಪಟ್ಟ ಒಡೆಯರ ವಂಶಜರು ಯಾರಾದರೂ ಸಿಕ್ಕಿದರೆ ಅವರಿಗೆ ಪಟ್ಟಕಟ್ಟಿಸಿ ತಾನೂ ವಿಶ್ರಾಂತಿ ಪಡೆಯಾವೆನೆಂದೂ ತನ್ನ ಅಭಿಲಾಷೆಯನ್ನು ಪ್ರಜೆಗಳ ಮುಂದೆ ಹೇಳಿಕೊಂಡನು. ಇದೆ ಸಮಯದಲ್ಲಿ ತನ್ನ ಹೆಂಡತಿಯನ್ನು ಕರೆತರಲು ಹುರ ಗ್ರಾಮಕ್ಕೆ ಹೋಗಿದ್ದ ಒಬ್ಬ ತೊರೆಯನು ಕಳಲೆ ವಂಶಾಂಕುರವು ಹುರದಲ್ಲಿ ವರ್ಧಿಸುತ್ತಿರುವ ವಿಷಯವನ್ನು ಕಾಂತಣ್ಣನಿಗೆ ತಿಳಿಸಿದನು. ಕೂಡಲೇ ಕಾಂತಣ್ಣನು ಅವನಿಗೆ ಹೇರಳವಾಗಿ ಬಹುಮಾನ ನೀಡಿದನು.

ಸ್ವಲ್ಪ ದಿನಗಳಲ್ಲಿ ಉಮ್ಮತ್ತೂರು ನಂಜರಾಜನು ನಂಜನಗೂಡು ಜಾತ್ರೆಗೆ ಬಂದು ಅಲ್ಲಿಂದ ಕಾಂತಣ್ಣನಿಗೆ ಜೀರ್ಣೋದ್ಧಾರ ಮಾಡಲು ಹೇಳಿದ್ದ ಸಿಂಧುದಳ್ಳಿಯ ಶಂಕರೇಶ್ವರ ದೇವಾಲಯವನ್ನು ನೋಡಲು ಹೋದನು. ಕಾಂತಣ್ಣನು ದೇವಾಲಯವನ್ನು ಚೆನ್ನಾಗಿ ಸರಿಪಡಿಸಿದ್ದನ್ನು ನೋಡಿ ಸಂತೋಷಪಟ್ಟನು. ನಂಜರಾಜನು ಕಾಂತಣ್ಣನನ್ನು ಉದ್ದೇಶಿಸಿ "ನಿನ್ನ ಈ ಕೆಲಸದಿಂದ ನನಗೆ ತುಂಬಾ ಸಂತೋಷವಾಯಿತು. ನಿನಗೆ ಇಷ್ಟವಾದದ್ದನ್ನು ಕೇಳು ನಡೆಸಿಕೊಡುವೆನು"[೨೯] ಎಂದು ಹೇಳಿದನು. ಇದೆ ಸರಿಯಾದ ಸಮಯವೆಂದು ತಿಳಿದ ಕಾಂತಣ್ಣನು ಹುರಗ್ರಾಮದಲ್ಲಿ ಕೃಷ್ಣ ಒಡೆಯರ ವಂಶಾಂಕುರವು ಬೆಳೆಯುತ್ತಿದ್ದು ಈಗ ಆ ಮಗುವು ಪ್ರಾಪ್ತ ವಯಸ್ಸಿಗೆ ಬಂದಿರುವ ವಿಷಯವನ್ನು ತಿಳಿಸಿದನು. ಅಲ್ಲದೆ ಆ ಮಗುವಿಗೆ ಕಳಲೆಯ ಪಟ್ಟವನ್ನು ಕಟ್ಟಲು ತಾನು ಬಯಸಿರುವುದಾಗಿ ತಿಳಿಸಿದನು. ಈ ವಿಷಯವನ್ನು ಕೇಳಿ ನಂಜರಾಜನು ಚಕಿತನಾಗಿ ಕೊನೆಗೆ ತನ್ನ ಕೊಟ್ಟ ಮಾತಿನಂತೆ ಕಾಂತಣ್ಣನ ಬೇಡಿಕೆಗೆ ಒಪ್ಪಿಕೊಂಡನು. ಕೂಡಲೇ ಕಾಂತಣ್ಣನು ತಾನೇ ಹುರಕ್ಕೆ ಹೋಗಿ ಹೊನ್ನುಕೈ ಮಾಧವರಾಯರನ್ನು ಕಂಡು ತಾವು ಕಳಲೆಯ ಪಟ್ಟವನ್ನು ನಿಮ್ಮ ಅಳಿಯನಾದ ಮುದ್ದು ಮಲ್ಲರಾಜನಿಗೆ ಕಟ್ಟಬೇಕೆಂದು ಕೇಳಿಕೊಂಡನು.[೩೦] ಈ ವೇಳೆಗಾಗಲೇ ಪ್ರಾಪ್ತವಯಸ್ಸಿಗೆ ಬಂದಿದ್ದ ಮುದ್ದುಮಲ್ಲರಾಜರಿಗೆ ಮಾಧವರಾಯರು ತನ್ನ ಮಗಳಾದ ದೇವಿರಮ್ಮಣಿಯನ್ನು ಕೊಟ್ಟು ಲಗ್ನ ಮಾಡಿ ಕಾಂತಣ್ಣನ ಸಂಗಡ ಕಳುಹಿಸಿಕೊಟ್ಟನು. ತದನಂತರ

ಕಳಲೆಯ ಪಟ್ಟವನ್ನು ಮುದ್ದುಮಲ್ಲರಾಜನಿಗೆ ಮುದ್ದುಮಲ್ಲರಾಜ ಒಡೆಯರೆಂಬ ಅಭಿದಾನದಿಂದ ಪಟ್ಟಕಟ್ಟಿದರು.[೩೧] ನಂತರ ಇವರ ಮಗ ಹಿರಿಮಲ್ಲರಾಜುನು ರಾಜ್ಯವಾಳಲಿಲ್ಲ. ಇವನ ಮಗ ತಿಮ್ಮರಾಜನು ಅಧಿಕಾರ ವಹಿಸಿಕೊಂಡನು.

ಈ ತಿಮ್ಮರಾಜ ಒಡೆಯರು ಕ್ರಿ.ಶ.೧೪೫೦ನೇ ಸಾರ್ವಜನಿಕ ಸಂವತ್ಸರದ ಕಾರ್ತಿಕ ಶುದ್ಧ ಪಂಚಮಿಯಿಂದ ೧೪೭೮ನೇ ಪರಾಭವ ಸಂವತ್ಸರದ ವೈಶಾಖ ಶುದ್ಧ ಬಿದಿಗೆವರೆಗೆ ರಾಜ್ಯವಾಳಿದರು.[೩೨] ಇವರಿಗೆ ೪ ಜನ ಹೆಂಡತಿಯರಿದ್ದರು.[೩೩] ಇವರೆ ಕಾಲಾನಂತರ ಅಧಿಕಾರಕ್ಕಾಗಿ ಇವರ ಮಕ್ಕಳಲ್ಲಿ ಒಳಜಗಳಗಳು ಪ್ರಾರಂಭವಾದವು.

ಇವರ ಕಾಲಾನಂತರ ಕಳಲೆಯ ಹಳಬರೆಲ್ಲಾ ಕೂಡಿ ಕಳಲೆ ಪಟ್ಟವನ್ನು ತಿಮ್ಮರಾಜ ಒಡೆಯರ ಹಿರಿಹೆಂಡತಿಯ ಪುತ್ರರಾದ ಲಕ್ಷ್ಮೀಕಾಂತ ಒಡೆಯರಿಗೆ ಕಟ್ಟಿದರು. ಆದರೆ ತಿಮ್ಮರಾಜ ಒಡೆಯರ ಎರಡನೆ ಹೆಂಡತಿ ಚನ್ನಾಜಮ್ಮಣಿಯು ತನ್ನ ಮಕ್ಕಳಿಗೆ ರಾಜ್ಯ ಸಿಗಲಿಲ್ಲವೆಂಬ ಆಕ್ರೋಶದಿಂದ ಹಲವು ಪ್ರಯತ್ನಗಳನ್ನು ಮಾಡಿ ಲಕ್ಷ್ಮೀಕಾಂತ ಒಡೆಯರನ್ನು ಮೋಸದಿಂದ ಕೊಲ್ಲಿಸಿದಳು. ಇಷ್ಟೆ ಅಲ್ಲದೆ ತಿಮ್ಮರಾಜ ಒಡೆಯರ ಮೂರನೇ ಹೆಂಡತಿ ದೇವಮ್ಮಣಿಯವರ ಮಗ ಕರಿಕಾಲು ಮಲ್ಲಿರಾಜ ಒಡೆಯನನ್ನು ಕೊಲ್ಲಬೇಕೆಂದು ಹುಡುಕಿಸಿದಳು ಆದರೆ ಸಾಧ್ಯವಾಗಲಿಲ್ಲ.

ಲಕ್ಷ್ಮೀಕಾಂತ ಒಡೆಯರ ಪತ್ನಿ ಲಿಂಗಾಜಮ್ಮಣಿಯವರು ತಮ್ಮ ಪತಿಯ ಅಕಾಲ ಮರಣಕ್ಕೆ ಮಮ್ಮಲ ಮರುಗಿದರು. ಪತಿಯೇ ಜೀವವು ಸರ್ವಸ್ವವು ಎಂದುಕೊಂಡಿದ್ದ ಈಕೆಗೆ ದಿಕ್ಕು ತೋಚಲಿಲ್ಲ ಚೆನ್ನಾಜಮ್ಮಣಿಯ ಕ್ರೌರ್ಯದಿಂದ ಬೇಸತ್ತು ತಾನು ಇನ್ನೂ ಬದುಕುವುದು ಸರಿಯಲ್ಲವೆಂದು ನಿಶ್ಚಯಿಸಿದಳು. ತನ್ನ ಪತಿಗಾಗಿ ಪ್ರಾಣದಾನ ಮಾಡಲು ಸಿದ್ಧಳಾದಳು. ದೊರೆಯನ್ನು ಮದುವೆಯಾಗಿ ಬೇಕಾದ ಸೌಖ್ಯವನ್ನು ಅನುಭವಿಸಿ, ಮಹಾ ಪದವಿಯ ಗೌರವನ್ನು ಕಾಪಾಡಿಕೊಂಡಿದ್ದ ಈಕೆಗೆ ಇತರರ ಹಂಗಿನ ಕೂಳಿನಲ್ಲಿ ಜೀವಿಸುವುದಕ್ಕಿಂತಲೂ ಪತಿಯೊಂದಿಗೆ ಸಹಗಮನ ಹೊಂದುವುದೆ ಲೇಸು ಎಂದು ತಿಳಿಧು ಈ ಕೆಳಗಿನಂತೆ ಹೇಳಿ ಅಗ್ನಿಯನ್ನು ಪ್ರವೇಶಿಸಿದಳು.[೩೪]

೧. ಕೂಡಲಪುರದ ಗದ್ದೆ ಅಕ್ಕಿ ರಕ್ತದ ಕೊಳು ಕಲಸಿದಂತೆ ಇರಲೆಂದೂ

೨. ತನ್ನ ಗಂಡನನ್ನು ಕೊಲ್ಲಿಸಿದ ಚೆನ್ನಾಜಮ್ಮಣಿಯ ಮಕ್ಕಳ ವಂಶ ಬೆಳೆಯದಿರಲೆಂದು.[೩೫]

ಎಂದು ಹೇಳುತ್ತ ದೇವಮ್ಮಣ್ಣಿಯವರಿಗೆ ವೀಳ್ಯವನ್ನು ಕೊಟ್ಟು ದೇವರ ಧ್ಯಾನ ಮಾಡುತ್ತ ತನ್ನ ಪತಿಯ ಚಿತೆಯನ್ನೇರಿ ದೇಹವನ್ನು ಪರಿತ್ಯಜಿಸಿದಳು. ಹೀಗೆ ಈ ಮಹಾ ಸತಿಯು ಈ ಭೂಮಿಯನ್ನು ಬಿಟ್ಟು ಹೊರಟಳು. ಆ ಪುರದ ಜನರೆಲ್ಲಾ ಶೋಕ ಸಾಗರದಲ್ಲಿ ಮುಳುಗಿದರು. ಈಗಲೂ ಆಕೆ ಸತಿಯಾದ ಸ್ಥಳದಲ್ಲಿ ಒಂದು ವೇದಿಕೆಯಿದೆ ಅದರ ಮೇಲೆ ಸ್ಮಾರಕವಾಗಿ ಒಂದು ಪ್ರತಿಮೆ ಇದೆ. ಇದಕ್ಕೆ ನಿತ್ಯ

ಪೂಜೆಗೆ ಏರ್ಪಾಡು ಮಾಡಿರುತ್ತಾರೆ. ಇದನ್ನು ಇಟ್ಟಿಗೆ ಮಹಾಲಿಂಗಮ್ಮನವರ ದೇವಸ್ಥಾನವೆಂದು ಕರೆಯುತ್ತಾರೆ.

ಲಕ್ಷ್ಮೀಕಾಂತ ಒಡೆಯರ ಬಳಿಕ ರಾಜ್ಯಕ್ಕಾಗಿ ಚೆನ್ನಾಜಮ್ಮಣಿಯವರ ಮಕ್ಕಳಲ್ಲಿ ತಿಕ್ಕಾಟವುಂಟಾಯಿತು. ಮೈಸೂರು ದೇವಮ್ಮಣ್ಣಿಯವರ ಕುಮಾರ ಕರಿಕಾಲು ಮಲ್ಲರಾಜನು ತನ್ನ ಸೋದರಮಾವನಾದ ಮೈಸೂರು ರಾಜ ಒಡೆಯರ ಬಳಿ ಬೆಳೆಯುತ್ತಿದ್ದರು. ರಾಜ ಒಡೆಯರು ತಮ್ಮ ಸೋದರಳಿಯನಾದ ಮಲ್ಲಿರಾಜರಿಗೆ ಅವರ ಮುಂದಿನ ಪದವಿಗೂ ಗೌರವಕ್ಕೂ ಉಚಿತವಾದ ಮತ್ತು ರಾಜ್ಯಭಾರ ಕರ್ತವ್ಯಗಳನ್ನು ನೆರವೇರಿಸುವುದಕ್ಕೆ ಬೇಕಾದ ಸಾಮರ್ಥ್ಯವನ್ನುಂಟು ಮಾಡುವ ವಿದ್ಯಾಭ್ಯಾಸವನ್ನು ಕೊಡಿಸಿದರು.

ಆಗ ರಾಜ ಒಡೆಯರು ಪ್ರವರ್ಧಮಾನಕ್ಕೆ ಬಂದಿದ್ದ ಮಲ್ಲಿರಾಜರನ್ನು ತಮ್ಮ ಸ್ನೇಹಿತರಾದ ಯಳಂದೂರು ಹಿರಿಯ ರಾಮರಾಜ ಒಡೆಯರ ಬಳಿಗೆ ಕೆಲವು ಅಧಿಕಾರಿಗಳೊಡನೆ ಬಂದು ನಿರೂಪವನ್ನು ಬರೆದು ಕಳುಹಿಸಿಕೊಟ್ಟರು. ಯಳಂದೂರು ಹಿರಿಯ ರಾಮರಾಜರು ಮಲ್ಲರಾಜರನ್ನು ಆದರದಿಂದ ಬರಮಾಡಿಕೊಂಡು, ರಾಜ ಒಡೆಯರ ಪತ್ರವನ್ನು ಓದಿ ನೋಡಿ ತಮಗೆ ಸರಿಸಮಾನರಾದ ಅರಸರು ತಮ್ಮಲ್ಲಿಗೆ ಬಂದರೆಂದು ರಾಜ ಮರ್ಯಾದೆಯಿಂದ ಕಂಡು, ಇವರ ವಿಚಾರವನ್ನು ಅಮೂಲಾಗ್ರವಾಗಿ ವಿಚಾರಿಸಿದರು. ನಂತರ ಯಾವ ಬಗೆಯಲ್ಲಾದರೂ ನಿಮ್ಮ ಕಳಲೆಯ ಪಟ್ಟವನ್ನು ನಿಮಗೆ ದೊರೆಯುವಂತೆ ಮಾಡುತ್ತೇನೆ ಎಂದು ತಮ್ಮಲ್ಲಿಯೇ ಇಟ್ಟುಕೊಂಡಿದ್ದರು.

ಇತ್ತ ಕಳಲೆಯಲ್ಲಿ ಉಮ್ಮತ್ತೂರು ನಾಯಕನ ಪ್ರೇರಣೆಯಿಂದ ಚೆನ್ನಾ ಜಮ್ಮಣ್ಣಿಯವರು ತಮ್ಮ ಮೂರು ಜನ ಮಕ್ಕಳಲ್ಲಿ ಒಬ್ಬರಾದ ಚಂದ್ರಶೇಖರ ಒಡೆಯರಿಗೆ ಪಟ್ಟಕಟ್ಟಿದರು. ಆದರೆ ಇದಕ್ಕೆ ಪ್ರಜಾಸಮ್ಮತಿ ಇರಲಿಲ್ಲ.

ಯಳಂದೂರಿನ ದೊರೆಗಳಾದ ರಾಮರಾಜರ ಆಶ್ರಯದಲ್ಲಿಯೇ ಮಲ್ಲರಾಜರು ಬೆಳೆಯುತ್ತಿದ್ದರು. ಆ ದೊರೆಗಳಿಗೆ ದೇವಿರಮ್ಮಣ್ಣಿಯೆಂಬ ಮಗಳಿದ್ದಳು ಅವಳು ಮಲ್ಲರಾಜರನ್ನು ಮದುವೆಯಾಗಲು ಬಯಸಿದಳು ಇದನ್ನು ತಿಳಿದ ಆಕೆಯ ಮಾತೃಪಿತೃಗಳು ಸಂತೋಷದಿಂದ ಲಗ್ನ ಮಾಡಿಕೊಟ್ಟರು. ಆದರೆ ಈ ಮದುವೆಯ ಸಂದರ್ಭದಲ್ಲಿ ಮದುವೆಯು ಮುಗಿದು ವಧು-ವರರನ್ನೂ ಒಳಕೆ ಕರೆತರೂತ್ತಿದ್ದಾಗ ಆಕಸ್ಮಿಕವಾಗಿ ಮದುವೆ ಚಪ್ಪರಕ್ಕೆ ಅಗ್ನಿಯ ಪ್ರವೇಶವಾಯಿತು. ಅದನ್ನು ಕಂಡು ಮಲ್ಲರಾಜರು ತನ್ನ ಪತ್ನಿಯ ಕೈಹಿಡಿದುಕೊಂಡು ಹೊರಗೆ ಬರುವ ಸಂದರ್ಭದಲ್ಲಿ ಇವರ ಕಾಲ ಮೇಲೆ ಬೆಂಕಿಯು ಬಿದ್ದಿತ್ತು. ಇದರಿಂದ ಅವರ ಕಾಲು ಹುಣ್ಣಾಯಿತು. ಅದಕ್ಕೆ ಇವರಿಗೆ ಕರಿಕಾಲು ಮಲ್ಲರಾಜ ಒಡೆಯರೆಂದು ಕರೆಯಲಾಗಿದೆ. ಯಳಂದೂರು ರಾಮರಾಜರು ಅಳಿಯನಿಗೆ ಹಣವನ್ನು ಸೈನ್ಯವನ್ನು ಕೊಟ್ಟು ಕಳಲೆಯನ್ನು ವಶಪಡಿಸಿಕೊಳ್ಳಲು ಕಳುಹಿಸಿದರು. ಅವರು ಕ್ರಮವಾಗಿ ಉಪ್ಪನಹಳ್ಳಿ, ಸಿಂಧುವಳ್ಳಿ ಮುಂತಾದ

ಗ್ರಾಮಗಳನ್ನು ವಶಪಡಿಸಿಕೊಂಡು ಅವುಗಳ ಬೀಗ ಮುದ್ರೆಯನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡರು. ಇತ್ತ ಕಳಲೆಯನ್ನು ಆಳುತ್ತಿದ್ದ ಚಂದ್ರಶೇಖರ ಒಡೆಯರು ಈ ವಿಷಯವನ್ನು ತಿಳಿದು ಮೈಸೂರು ಅರಸರ ಸಹಾಯವನ್ನು ಪಡೆದು ತಮ್ಮ ಮೇಲೆ ದಂಡೆತ್ತಿ ಬರುತ್ತಿರುವ ಬಲಿಷ್ಠರಾದ ಮಲ್ಲರಾಜರನ್ನು ತಡೆಯುವುದು ಸಾಧ್ಯವಿಲ್ಲವೆಂದು. ಇಷ್ಟು ದಿನ ರಾಜ್ಯವಾಳುವ ಯೋಗ ಇಂದಿಗೆ ಕಳೆದು ಹೋಯಿತು ಎಂದು ತಿಳಿದು ತಮ್ಮ ತಾಯಿ ಮಾಡಿದ ಪಾಪ ಕಾರ್ಯಗಳನ್ನು ಸ್ಮರಿಸಿ ಅದಕ್ಕೆ ಹೇಸಿ ಕಳಲೆಯ ಬೀಗಮುದ್ರೆಯ ಮೋಹರನ್ನು ಮಲ್ಲರಾಜರಿಗೆ ಕಳುಹಿಸಿ, ಯಾರಿಗೂ ತಾವೂ ಸಿಗಬಾರದೆಂದು ಯೋಚಿಸಿ, ತಲೆ ತಪ್ಪಿಸಿಕೊಂಡು ಮಲೆಯಾಳಕ್ಕೆ ಹೊರಟು ಹೋದರು. ಆಗ ಕಳಲೆಯ ಜನಗಳೆಲ್ಲಾ ಮಲ್ಲರಾಜನನ್ನು ಎದುರುಗೊಂಡು ನೀವು ನಮಗೆ ರಾಜರಾಗಿ ನಮ್ಮನ್ನೆಲ್ಲಾ ಕಾಪಾಡಬೇಕೆಂದು ಕೇಳಿಕೊಂಡರು.[೩೬]

ಈ ಕರಿಕಾಲು ಮಲ್ಲರಾಜ ಒಡೆಯರು ತಮ್ಮ ತಾಯಿಯನ್ನು ಬಂಧನದಲ್ಲಿರಿಸಿದ್ದ ಜಾಗಕ್ಕೆ ಧಾವಿಸಿ ಅಲ್ಲಿ ತಮ್ಮ ತಾಯಿಯನ್ನು ಸಂದರ್ಶಿಸಿ ಅವರ ಪಾದ ಕಮಲಗಳಿಗೆ ನಮಸ್ಕರಿಸಿ, ತಾಯಿಯನ್ನು ಸಂತೈಸಿದರು. ನಂತರ ಇವರು ಶುಭ ಮುಹೂರ್ತದಲ್ಲಿ ಕಳಲೆಯ ರಾಜರಾಗಿ ಪಟ್ಟಾಭಿಷಕ್ತರಾದರು. ಇವರು ಪಟ್ಟಕ್ಕೆ ಬಂದ ಮೇಲೆ ಮೈಸೂರು ದೊರೆಗಳಿಗೂ ಕಳಲೆಯ ಅರಸರಿಗೂ ಸ್ನೇಹ ಸಂಬಂಧಗಳು ಹೆಚ್ಚಾದವು. ಉಮ್ಮತ್ತೂರು ಪಾಳೆಗಾರನ ಪುಂಡಾಟದಿಂದ ಅನೇಕ ದುರ್ಗಟನೆಗಳು ಕಳಲೆಯಲ್ಲಿ ನಡೆಯುತ್ತಿವೆ ಎಂದು ಪ್ರಜಾಕ್ಷೋಭೆಯಾಗುತ್ತಿದೆ ಎಂದು ಕರಿಕಾಲು ಮಲ್ಲರಾಜ ಒಡೆಯರು ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರ ಪ್ರತಿನಿಧಿಗಳಿಗೆ ತಿಳಿಸಿ ತಾವು ಸ್ವಾತಂತ್ರರಾದರು. ತಮ್ಮ ನಾಡಿನ ಕೋಟೆಕೊತ್ತಲಗಳನ್ನು ಭದ್ರಪಡಿಸಿಕೊಂಡು ತಮ್ಮ ಸೈನ್ಯವನ್ನು ಬಲಪಡಿಸಿ ಪ್ರಜಾನುರಾಗಿಗಳಾಗಿ ಆಳತೊಡಗಿದರು.[೩೭]

ಕರಿಕಾಲು ಮಲ್ಲರಾಜ ಒಡೆಯರು

ಇವರು ಕಳಲೆ ನೃಪ ತಿಮ್ಮರಾಜ ಒಡೆಯರ ಮೂರನೇ ಹೆಂಡತಿ ದೇವಜಮ್ಮಣಿಯವರ ಪುತ್ರ. ಕಳಲೆಯಲ್ಲಿ ನಡೆದ ದುರ್ಘಟನೆಯಲ್ಲಿ ತಪ್ಪಿಸಿಕೊಂಡು ಬದುಕಿ ಮೈಸೂರು ಅರಮನೆಯಲ್ಲಿ ತಮ್ಮ ಸೋದರ ಮಾವಂದಿರಾದ ರಾಜ ಒಡೆಯರ ಆಶ್ರಯದಲ್ಲಿ ಬೆಳೆದು ವಿದ್ಯಾಬುದ್ಧಿಗಳನ್ನು ಕಲಿತು. ಯಳಂದೂರು ಪ್ರಭು ರಾಮರಾಜರ ಪುತ್ರಿ ದೇವಿರಮ್ಮಣಿಯವರನ್ನು ವಿವಾಹವಾಗಿ ಕಳಲೆಗೆ ಬಂದು ಅದನ್ನು ಸ್ವಾಧೀನ ಪಡಿಸಿಕೊಂಡು ಕಳಲೆಯ ರಾಜರಾದರು.

ಕರಿಕಾಲು ಮಲ್ಲರಾಜ ಒಡೆಯರು ಕಳಲೆಯಲ್ಲಿ ರಾಜ್ಯವಾಳುತ್ತಿದ್ದಾಗ ಇವರ ರಾಜ್ಯವು ೪೬ ಗ್ರಾಮಗಳಿಂದ ಕೂಡಿದ್ದಿತು. ರಾಜ್ಯದ ಒಟ್ಟು ಆದಾಯ ೪೦,೦೦೦ ಗದ್ಯಾಣದಷ್ಟಿತ್ತು. ಆ ಸಮಯದಲ್ಲಿ ಇವರ ಸೋದರ ಮಾವನವರಾದ ಮೈಸೂರು ರಾಜ ಒಡೆಯರು ೩೩ ಹಳ್ಳಿಗಳಿಂದ ಕೂಡಿದ ೨೫,೦೦೦ ಗದ್ಯಾಣಗಳು ಆದಾಯವುಳ್ಳ ರಾಜ್ಯವನ್ನು ಆಳುತ್ತಿದ್ದರು.[೩೮]

ಕ್ರಿ.ಶ.೧೫೬೫ರಲ್ಲಿ ನಡೆದ ತಾಳಿಕೋಟೆಯ ಯುದ್ಧದಲ್ಲಿ ವಿಜಯನಗರ ಚಕ್ರಾಧಿಪತಿಯಾದ ರಾಮರಾಯನು ಮರಣ ಹೊಂದಿದ ಮೇಲೆ ಮೈಸೂರು ಒಡೆಯರು ಹಾಗೂ ಕಳಲೆಯ ಅರಸರುಗಳು ಸ್ವತಂತ್ರವಾಗಿ ಆಡಳಿತ ನಡೆಸಲು ಪ್ರಾರಂಭಿಸಿದರು. ಇದೇ ವೇಳೆಯಲ್ಲಿ ಮಧುರೆಯ ನಾಯಕನು ಕಪ್ಪಕಾಣಿಕೆಯನ್ನು ಸಲ್ಲಿಸಲು ನಿರಾಕರಿಸಿ ಸ್ವತಂತ್ರನಾಗಲು ಅವಣಿಸುತ್ತಿದ್ದನು. ಇವನ ಮೇಲೆ ಯುದ್ಧ ಮಾಡಿದ ರಾಜ ಒಡೆಯರು ಆತನನ್ನು ಸೋಲಿಸಿದರು. ನಂತರ ರಾಜ ಒಡೆಯರು ಶ್ರೀರಂಗಪಟ್ಟಣವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು. ಆದರೆ ಉಮ್ಮತ್ತೂರು ನಾಯಕನು ಶ್ರೀರಂಗಪಟ್ಟಣವು ತನಗೆ ಸೇರಬೇಕೆಂದು ರಾಜ ಒಡೆಯರಿಗೆ ಹೇಳಿ ಕಳುಹಿಸಿದನು. ರಾಜ ಒಡೆಯರು ತಾವು ಶ್ರೀರಂಗಪಟ್ಟಣವನ್ನು ಬಿಟ್ಟುಕೊಡಲು ನಿರಾಕರಿಸಿದರು. ಅಲ್ಲದೆ ಶ್ರೀರಂಗಪಟ್ಟಣದ ಮೇಲೆ ಉಮ್ಮತ್ತೂರು ನಾಯಕನಿಗೆ ಯಾವ ಅಧಿಕಾರವೂ ಇಲ್ಲವೆಂದು ಹೇಳಿ ಕಳುಹಿಸಿದನು. ಇದರಿಂದ ಕೋಪಗೊಂಡ ಉಮ್ಮತ್ತುರು ನಾಯಕನು ರಾಜ ಒಡೆಯರ ಮೇಲೆ ಯುದ್ಧ ಮಾಡಲು ನೆರೆಯ ಪಾಳೆಗಾರನ ಸಹಾಯವನ್ನು ಪಡೆದುಕೊಂಡು ಯುದ್ಧ ಮಾಡಿದನು. ಆದರೆ ಯುದ್ಧದಲ್ಲಿ ಪರಜಯ ಹೊಂದಿ ಅಲ್ಲಿಂದ ಕಾಲ್ ತೆಗೆಯಬೇಕಾಯಿತು.[೬೯] ಈ ಯುದ್ಧದ ನಂತರ ಮೈಸೂರು ಸಂಸ್ಥಾನವು ಒಂದು ವಿಶಾಲವಾದ ಪ್ರದೇಶವನ್ನೆ ಒಳಗೊಂಡಿತು.

ರಾಜ್ಯಾಡಳಿತವನ್ನು ನೋಡಿಕೊಳ್ಳಲು ಕಂದಾಯವನ್ನು ವಸೂಲಿ ಮಾಡಲು ಒಬ್ಬ ಸರಿಯಾದ ಸಹಾಯಕ ಬೇಕಾದುದದನ್ನು ಮನಗಂಡ ರಾಜ ಒಡೆಯರು ತಮ್ಮ ಸೋದರ ಅಳಿಯನಾದ ಹಾಗೂ ಉಮ್ಮತ್ತೂರಿನ ನಾಯಕನ ಶತ್ರುವು ಆದ ಕರಿಕಾಲು ಮಲ್ಲರಾಜ ಒಡೆಯರಿಗೆ ಹೇಳಿ ಕಳುಹಿಸಿದರು. ನಂತರ ಇಬ್ಬರು ಮಾತನಾಡಿಕೊಂಡು ಶ್ರೀರಂಗಪಟ್ಟಣವನ್ನು ಉಮ್ಮತ್ತೂರು ನಾಯಕನಿಗೆ ಬಿಟ್ಟುಕೊಡದಂತೆ ಉಭಯತ್ರಿಯರು ಪ್ರಯತ್ನಿಸಲು ಒಪ್ಪಿಕೊಂಡರು. ನಂತರ ಮೈಸೂರು ರಾಜ್ಯದ ಒಡೆತನ ಮೈಸೂರು ದೊರೆಗಳಿಗೆಂದು, ಮೈಸೂರು ರಾಜ್ಯದ ದಳವಾಯಿತನ ಕಳಲೆಯ ಅರಸರಿಗೆಂದು ಚಾಮುಂಡೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಭಾಷಾ ಪತ್ರವನ್ನು ಮಾಡಿಕೊಂಡರು. ಇದಾದರೂ ಸಹ ಕಳಲೆಯ ಅಧಿಪತ್ಯ ಕರಿಕಾಲು ಮಲ್ಲರಾಜನ ಒಡೆಯರಿಗೆ ಇದ್ದಿತು."[೭೦]

ಮೈಸೂರಿನ ದಳವಾಯಿಗಳಾಗಿ ಕಳಲೆ ಅರಸರು

ದಳವಾಯಿ ಎಂಬುದರ ಬಗೆಗೆ ಒಂದೆರಡು ವಾಕ್ಯಗಳನ್ನು ತಿಳಿಸುವುದು ಸೂಕ್ತವೆನಿಸುತ್ತದೆ. ದಳ ಮತ್ತು ವಾಯಿ ಎಂಬೆರೆಡು ಪದಗಳ ಸಂಯೋಜನೆಯಿಂದ ದಳವಾಯಿ ಎಂದಾಗಿರುವುದಾಗಿ ಬಿ.ಎಲ್ ರೈಸ್ ರವರ ಅಭಿಪ್ರಾಯ. ದಳವಾಯಿ ಎಂದರೆ ಚಮೂಪತಿ ಅಥವಾ ಸೈನ್ಯಕ್ಕೆ ಅಧಿಪತಿ ಎಂದು ಅರ್ಥೈಸಬಹುದು. ತಲಕಾಡಿನ ಗಂಗರ ಕಾಲದಿಂದಲೂ ಇದ್ದ ದಂಡನಾಯಕ ಪದವಿಗೆ ಮೈಸೂರಿನ ಒಡೆಯರ ಕಾಲದ ದಳವಾಯಿ ಹುದ್ದೆಗೆ ಸರಿಸಮಾನವಾಗಿತ್ತು. ರಾಜ ಪ್ರಭಲವಾಗಿದ್ದಾಗ ದಳವಾಯಿ

ಕೇವಲ ಸೈನ್ಯದ ಅಧಿಪತಿ ಎನಿಸುತ್ತಿದ್ದನು. ಮೈಸೂರಿನ ಒಡೆಯರ ಸಮಕಾಲೀನರಾಗಿದ್ದ ಮಧುರೆಯ ನಾಯಕರ ಆಡಳಿತದಲ್ಲಿ ದಳವಾಯಿಯು ಸೈನ್ಯದ ಮೇಲ್ವಿಚಾರಣೆಯ ಜೊತೆಗೆ ಪ್ರಧಾನಿ ಸ್ಥಾನವನ್ನೂ ಹೊಂದಿರುತ್ತಿದ್ದನು. ಆದರೆ ತಂಜಾವೂರಿನ ರಾಜರುಗಳ ಆಡಳಿತದಲ್ಲಿ ಮೈಸೂರು ಸಂಸ್ಥಾನದಲ್ಲಿದ್ದಂತೆಯೇ ದಳವಾಯಿ ಸೈನ್ಯದ ಮೇಲ್ವಿಚಾರಣೆಯನ್ನು ನಿರ್ವಹಿಸುತ್ತಿದ್ದನು. ಅಗತ್ಯವಿದ್ದಾಗ ದಳವಾಯಿ ರಾಜನಿಗೆ ಆಡಳಿತದಲ್ಲಿ ಸಹಕಾರ ನೀಡುತ್ತಿದ್ದನಲ್ಲದೆ, ರಾಜ್ಯದ ಪರವಾಗಿ ಸಂಧಾನಗಳನ್ನೂ ರಾಜನ ನಿರೂಪಕ್ಕೊಳಪಟ್ಟು ನಡೆಸುತ್ತಿದ್ದನು. ಈತ ಮಂತ್ರಾಲೋಚನ ಸಭೆಯ ಸದಸ್ಯನೂ ಆಗಿದ್ದ ಕಾರಣ ರಾಜಕೀಯ ವ್ಯವಹಾರಗಳಲ್ಲಿ ದಳವಾಯಿಯ ಪ್ರಭಾವ ಅಪಾರವಾಗಿತ್ತು. ಮರಣೋನ್ಮುಖ ರಾಜನು ರಾಜ ಸೂತ್ರಗಳನ್ನು ವಹಿಸಿ ತನ್ನ ಉತ್ತರಾಧಿಕಾರಿಯನ್ನು ಅರಿಸುವ ಗುರುತರವಾದ ಹೊಣೆಗಾರಿಕೆಯನ್ನು ದಳವಾಯಿಗೆ ವಹಿಸಿಕೊಟ್ಟಿದ್ದ ದೃಷ್ಟಾಂತಗಳು ಮೈಸೂರಿನ ಒಡೆಯರ ಇತಿಹಾಸದಿಂದ ತಿಳಿದುಬರುತ್ತಿದೆ.

ಒಂದನೇ ರಾಜ ಒಡೆಯರು ಕ್ರಿ.ಶ.೧೬೧೪ರ ವೇಳೆಗೆ ಮೈಸೂರು ಸಂಸ್ಥಾನವನ್ನು ಗಣನೀಯವಾಗಿ ವಿಸ್ತರಿಸಿದರು. ಕ್ರಿ.ಶ.೧೬೧೦ರಲ್ಲಿ ವಿಜಯನಗರದ ಪ್ರತಿನಿಧಿ ತಿರುಮಲರಾಯನಿಂದ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡು ತಮ್ಮ ರಾಜಧಾನಿಯನ್ನು ಮೈಸೂರಿನಿಂದ ಶ್ರೀರಂಗಪಟ್ಟಣಕ್ಕೆ ವರ್ಗಾಯಿಸಿದರು.[೪೧] ವಿಜಯನಗರ ಸಾಮ್ರಾಜ್ಯದ ಆಡಳಿತದ ಅನೇಕ ಅಂಶಗಳನ್ನು ಮೈಗೂಡಿಸಿ ಆಡಳಿತಕ್ಕೂ ಪರಿಚಯಿಸಿದರು. ವಿಸ್ತಾರವಾದ ಮೈಸೂರು ಸಂಸ್ಥಾನಕ್ಕೆ ಭದ್ರತೆ ಒದಗಿಸಲು ಹಾಗೂ ಸಂಸ್ಥಾನವನ್ನು ವಿಸ್ತರಿಸುವ ಉದ್ದೇಶದಿಂದ ವಿಜಯನಗರ ಸಾಮ್ರಾಜ್ಯದ ಆಡಳಿತದಲ್ಲಿ ದಳವಾಯಿ ಹುದ್ದೆಯನ್ನು ಮೈಸೂರು ಸಂಸ್ಥಾನದಲ್ಲಿ ಪುನಃ ಅಸ್ತಿತ್ವಕ್ಕೆ ತರಲು ತೀರ್ಮಾನಿಸಿದರು(ಮೈಸೂರು ಪ್ರದೇಶವನ್ನಾಳುತ್ತಿದ್ದ ಚಾಮರಾಜ ಒಡೆಯರ ಮರಣಾನಂತರ ಆತನ ವಿಧವೆ ಪತ್ನಿ ಪುತ್ರಿಯರೊಂದಿಗೆ ದಳವಾಯಿ ಕಾರುಗನಹಳ್ಳಿ ಮಾರನಾಯಕ ಅನುಚಿತವಾಗಿ ವರ್ತಿಸಿದ್ದುದರ ಹಿನ್ನೆಲೆಯಲ್ಲಿ ಒಡೆಯರ ಮನೆತನದ ಮೂಲ ಪುರುಷರು ದಳವಾಯಿ ಹುದ್ದೆಯ ನೇಮಕಾತಿಯನ್ನು ಸ್ಥಗಿತಗೊಳಿಸಿದ್ದರು). ಸುಮಾರು ಇನ್ನೂರು ವರ್ಷಗಳ ನಂತರ ಪುನಃ ಅದರ ಅವಶ್ಯಕತೆಯನ್ನು ಕಂಡುಕೊಂಡ ರಾಜ ಒಡೆಯರು ಕ್ರಿ.ಶ.೧೬೧೪ರಲ್ಲಿ ಆ ಪದವಿಯನ್ನು ಪುನರ್ ಪ್ರತಿಷ್ಠಾಪಿಸಿದರು.[೪೨]

ಮೈಸೂರು ಸಂಸ್ಥಾನದ ದಳವಾಯಿಯಾಗಿ ಅಧಿಕಾರ ಸ್ವೀಕರಿಸಿದ ಕರಿಕಾಲು ಮಲ್ಲರಾಜ ಒಡೆಯರು ಕೇವಲ ಎಂಟು ದಿನಗಳ ನಂತರ ದಳವಾಯಿ ಹುದ್ದೆಯನ್ನು ತ್ಯಜಿಸಿದರು. ಈ ಹುದ್ದೆಗೆ ತನ್ನ ಮೊಮ್ಮಗನಾದ ನಂದಿನಾಥಯ್ಯನನ್ನು ನೇಮಿಸಿ ರಾಜ ಒಡೆಯ ಬಳಿಗೆ ಕಳುಹಿಸಿಕೊಟ್ಟನು.

ಎರಡನೆ ದಳವಾಯಿ ನಂದಿನಾಥಯ್ಯ

ಇವನು ಕರಿಕಾಲು ಮಲ್ಲರಾಜ ಒಡೆಯರ ಮೊಮ್ಮಗ ಶ್ರೀರಂಗಪಟ್ಟಣದಲ್ಲಿ ದಳವಾಯಿ ಪದವಿಗೆ ಬಂದು ಅಲ್ಲಿ ಕೆಲಸ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದರು. ಈ ನಂದಿನಾಥಯ್ಯನವರು ತಮ್ಮ ಕಳಲೆ

ರಾಜ್ಯದ ಮತ್ತು ಮೈಸೂರಿನ ಸೈನ್ಯಗಳನ್ನು ಒಂದುಗೂಡಿಸಿ ಸುತ್ತಮುತ್ತಲಿನ ಪಾಳೆಗಾರರನ್ನು ಗೆದ್ದು ರಾಜ್ಯವನ್ನು ವಿಸ್ತರಿಸಿದರು. ತಲಕಾಡು, ಬನ್ನೂರು, ಮೂಗುರು, ಹುಲ್ಲಹಳ್ಳಿ, ಬಿಳಿಕೆರೆ, ಹೆಗ್ಗಡದೇವನ ಕೋಟೆ, ಕಟ್ಟೆ ಮಳಲವಾಡಿ, ಮುಂತಾದ ನಾಡಿನ ನಾಯಕರನ್ನು ಸೋಲಿಸಿದರು. ಈ ಸಂದರ್ಭದಲ್ಲಿ ಅಲಂಬಾವಾಡಿ ನಾಯಕ ಮತ್ತು ಹಾಗಲವಾಡಿ ನಾಯಕ ಇಬ್ಬರು ಸೇರಿ ತೊಂದರೆ ಕೊಡುತ್ತಿದ್ದರು. ಇವರಿಬ್ಬರನ್ನು ಸಹ ಸೋಲಿಸಿದರು. ಹರದನಹಳ್ಳಿ, ಸತ್ತಗಾಲ, ಉಮ್ಮತ್ತೂರು ಸೀಮೆಗಳನ್ನು ಗೆದ್ದು ಅಲ್ಲಿ ಸಿಕ್ಕಿದ ಆನೆ, ಕುದುರೆ, ಒಡವೆ ಮುಂತಾದವುಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಇವರು ರಾಜ್ಯವಿಸ್ತಾರಣೆಗಷ್ಟೆ ಮಹತ್ವವನ್ನು ಕೊಡದೆ ಧಾರ್ಮಿಕ ಕಾರ್ಯಗಳಿಗೂ ಸಹ ಉತ್ತಮ ಪ್ರೋತ್ಸಾಹ ನೀಡಿದರು. ಅಗ್ರಹಾರ, ದೇವಾಲಯ, ಬ್ರಹ್ಮದಾಯ ಮುಂತಾದವುಗಳಿಗೆ ದಾನದತ್ತಿಗಳನ್ನು ಹಿಂದಿನಂತೆ ನಡೆಸಿಕೊಂಡು ಬಂದರು. ಕ್ರಿ.ಶ.೧೬೧೭ರಲ್ಲಿ ರಾಜ ಒಡೆಯರು ಕಾಲವಾದಾಗ ಇವರ ಮೊಮ್ಮಗ ಆರನೆ ಚಾಮರಾಜ ಒಡೆಯರಿಗೆ ಪಟ್ಟವಾಯಿತು. ಇವರ ಆಳ್ವಿಕೆಯಲ್ಲಿ ದಳವಾಯಿ ನಂದಿನಾಥಯ್ಯನವರು ಮದ್ದೂರು, ಚನ್ನಪಟ್ಟಣಗಳನ್ನು ಗೆದ್ದು ಅಲ್ಲಿನ ಐಶ್ವರ್ಯವನ್ನು ವಶಪಡಿಸಿಕೊಂಡರು.[೪೩]

ಆರನೆ ಚಾಮರಾಜ ಒಡೆಯರ ನಂತರ ಅವರ ಮಕ್ಕಳಾದ ಎರಡನೆ ರಾಜ ಒಡೆಯರು ಅಧಿಕಾರಕ್ಕೆ ಬಂದರು. ಇದರ ನಂತರ ರಣಧೀರ ಕಂಠೀರವ ನರಸರಾಜರು ಪಟ್ಟಾಭಿಷಕ್ತರಾದರು. ಇವರು ಪಟ್ಟಕ್ಕೆ ಬಂದ ಸ್ವಲ್ಪ ದಿನಗಳಲ್ಲಿಯೇ ನಂದಿನಾಥಯ್ಯನವರು ಇಹಲೋಕವನ್ನು ತ್ಯಜಿಸಿದರು.

ಮೂರನೆಯ ದಳವಾಯಿ ಕೊಮಾರಯ್ಯನವರು

ನಂದಿನಾಥಯ್ಯನವರ ತರುವಾಯ ಇವರು ತಮ್ಮ ಕೊಮಾರಯ್ಯನವರು ದಳವಾಯಿಯಾಗಿ ರಣಧೀರ ಕಂಠೀರವ ನರಸರಾಜರಿಂದ ದಳವಾಯಿತನದ ಅಧಿಕಾರವನ್ನು ಪಡೆದುಕೊಂಡರು.[೪೪]

ಈ ಸಮಯದಲ್ಲಿ ಬಿಜಾಪುರದ ಸೇನಾಧಿಪತಿ ರಣದುಲ್ಲಾಖಾನನು ತನ್ನ ಸೈನ್ಯದೊಡನೆ ಶ್ರೀರಂಗಪಟ್ಟಣವನ್ನು ಮುತ್ತಿದನು. ದಳವಾಯಿ ಕೊಮಾರಯ್ಯನು ತಮ್ಮ ಪರಾಕ್ರಮದಿಂದ ಅವನನ್ನು ಸೋಲಿಸಿ ಶ್ರೀರಂಗಪಟ್ಟಣದಿಂದ ಓಡಿಸಿದನು. ನಂತರ ಪಿರಿಯಪಟ್ಟಣವನ್ನು ಗೆದ್ದು, ಅನಂತರ ಮಧುರೆಯ ವೀರಪ್ಪ ನಾಯಕನನ್ನು ಸೋಲಿಸಿ ಸತ್ಯಮಂಗಲ ಕೋಟೆಯನ್ನು ವಸಪಡಿಸಿಕೊಂಡು 'ಪರರಾಜಹರಿಣಶಾರ್ದೂಲ" ಎಂದು ಬಿರುದನ್ನು ಪಡೆದರು. ಇದಾದ ಮೇಲೆ ದಳವಾಯಿ ಕೊಮಾರಯ್ಯನು ಯಲಹಂಕ ನಾಡನ್ನು ಗೆದ್ದು. ಮಾಗಡಿಗೆ ಮುತ್ತಿಗೆ ಹಾಕಿದರು. ಅಲ್ಲಿಯ ಪಾಳೆಗಾರನು ಶರಣಾಗತನಾದನು. ಆದ್ದರಿಂದ ಪುನಃ ಮಾಗಡಿಯನ್ನು ಆತನಿಗೆ ಕೊಟ್ಟು, ಅಲ್ಲಿಂದ ಮುಂದೆ ಕರ್ನೂಲ್, ಕಡಪ ತುರುವೆಕೆರೆ, ಮಾಯಸಂದ್ರ, ಮುಂತಾದ ಸ್ಥಳಗಳನ್ನು ವಶಪಡಿಸಿಕೊಂಡು ರಾಜ್ಯವನ್ನು ವಿಸ್ತಾರಿಸಿದರು. ಈ ವೇಳೆಗೆ ಕಂಠೀರವ ನರಸರಾಜ ಒಡೆಯರು ಸ್ವರ್ಗಸ್ಥರಾದರು. ಇವರ ತರುವಾಯ ದೊಡ್ಡ ದೇವರಾಜ ಒಡೆಯರು ಪಟ್ಟಾಭಿಷೇಕ್ತರಾದರು.[೪೫] ಇವರ ಆಳ್ವಿಕೆಯಲ್ಲಿ ಕೆಳದಿಯ ಶಿವಪ್ಪನಾಯಕನು ಶ್ರೀರಂಗಪಟ್ಟಣದ ಮೇಲೆ

ದಂಡೆತ್ತಿ ಬಂದನು. ಇವನ ಮೇಲೆ ಯುದ್ಧ ಮಾಡಿದ ಕೊಮಾರಯ್ಯನು ಅವನನ್ನು ಸೋಲಿಸಿ ಅವನ ಸೀಮೆಗಳಾದ ಸಕ್ರಪಟ್ಟಣ, ವಸುಧಾರ, ಹಾಸನ, ಮುಂತಾದವುಗಳನ್ನು ವಶಪಡಿಸಿಕೊಂಡನು. ನಂತರ ತಿರುಚನಪಳ್ಳಿಗೆ ಮುತ್ತಿಗೆ ಹಾಕಿ ಅಲ್ಲಿ ಚೊಕ್ಕನಾಥ ನಾಯಕನನ್ನು ಸೋಲಿಸಿದನು. ಅವನಿಂದ ಅನೇಕ ದ್ರವ್ಯವಸ್ತ್ರಭರಣಗಳನ್ನು ಪಡೆದು ಅವುಗಳಿಂದ ದೊಡ್ಡದೇವರಾಜ ಒಡೆಯರ ಪಾದುಕೆಗಳನ್ನು ಆಲಂಕರಿಸಿದನು. ತಾನು ಗೆದ್ದ ದ್ರವ್ಯದಲ್ಲಿ ಅನೇಕ ಭಾಗವನ್ನು ಧರ್ಮಾರ್ಥವಾಗಿ ಉಪಯೋಗಿಸಿದರು. ತಿರುಪತಿಯ ವೆಂಕಟರಮಣ ಸ್ವಾಮಿಗೆ ಅನೇಕ ರತ್ನಭರಣಗಳನ್ನು ಸಮರ್ಪಿಸಿ ಅನೇಕ ಸೇವಾರ್ಥಗಳು ಶಾಶ್ವತವಾಗಿ ನಡೆಯುವಂತೆ ನೋಡಿಕೊಂಡರು. ಈ ವೇಳೆಗೆ ದೊಡ್ಡದೇವರಾಜ ಒಡೆಯರು ಕಾಲವಾದರು. ನಂತರ ಚಿಕ್ಕ ದೇವರಾಜ ಒಡೆಯರ್ ಪಟ್ಟಕ್ಕೆ ಬಂದರು.[೪೬] ನಂತರ ಕೊಮಾರಯ್ಯನು ಗಗನಗಿರಿ ದುರ್ಗವನ್ನು ಗೆದ್ದುಕೊಂಡನು. ಬೆಂಗಳೂರಿನ ಶಿವಾಜಿರಾವ್ ಎಂಬ ಮರಾಠಿ ಪಾಳೆಗಾರನನ್ನು ಸೋಲಿಸಿದನು. ಇದೇ ಸಮಯವನ್ನು ಕಾಯುತ್ತಿದ್ದ ಇಬ್ಬರು ಮರಾಠ ಸರದಾರರು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದರು. ಈ ಸಮಯದಲ್ಲಿ ಕೊಮಾರಯ್ಯನು ತಿರುಚನಪಳ್ಳಿಯ ಯುದ್ಧದಲ್ಲಿ ನಿರತನಾಗಿದ್ದನು. ಆದ್ದರಿಂದ ತನ್ನ ಚಿಕ್ಕಪ್ಪನ ಮೊಮ್ಮಗನಾದ ದೊಡ್ಡಯ್ಯನನ್ನು ಚಿಕ್ಕದೇವರಾಜ ಒಡೆಯರ ಬಳಿಗೆ ಕಳುಹಿಸಿದನು. ಆಗ ಚಿಕ್ಕದೇವರಾಜ ಒಡೆಯರು ದೊಡ್ಡಯ್ಯನನ್ನು ದಳವಾಯಿಯಾಗಿ ಗೊತ್ತು ಮಾಡಿ ಶ್ರೀರಂಗಪಟ್ಟಣದ ಬಿಡುಗಡೆಗೆ ಕಳುಹಿಸಿದರು.

ನಾಲ್ಕನೆ ದಳವಾಯಿ ದೊಡಯ್ಯ

ದೊಡಯ್ಯನು ಮರಾಠರು ಬಿಡಾರ ಹೂಡಿದ್ದ ಕಾಸರಗೆರೆ, ಕೊತತ್ತಿಗಳ ಸಮೀಪಕ್ಕೆ ಗೋಪ್ಯವಾಗಿ ಬಂದರು. ಆಗ ರಾಜಧಾನಿಯಲ್ಲಿ ಸ್ವಲ್ಪವೇ ಸೈನ್ಯವಿದ್ದಿತು. ತಾನು ಬಂದಿರುವ ವಿಷಯವನ್ನು ದೊರೆಗಳಿಗೆ ತಿಳಿಸಿ. ತಮ್ಮ ಒಂದು ಸಮಾಲೋಚನೆಯನ್ನು ಅವರಿಗೆ ಬರೆದು ಕಳುಹಿಸಿದರು. ಅದೇನೆಂದರೆ "ತಾವು ರಾತ್ರಿಯಾದ ಕೂಡಲೇ ತಮ್ಮ ದಂಡಿನಲ್ಲಿರುವ ಮೂರು ಸಾವಿರ ಎತ್ತುಗಳ ಕೊಂಬುಗಳಿಗೆ ಉರಿಯುವ ಪಂಜನ್ನು ಕಟ್ಟಿ ಆದರೆ ಎತ್ತುಗಳಿಗೆ ತೊಂದರೆಯಾಗದಂತೆ. ಮರಾಠಿಯವರ ಪಾಳೆಯದ ಕಡೆಗೆ ಬಿಡಿಸುವೆನೆಂದು, ಆಗ ಮರಾಠಿಯವರು ಆಗಾಧವಾದ ಬೆಳಕನ್ನು ಕಂಡು ಭ್ರಾಂತರಾಗಿ ಆ ಬೆಳಕು ಬರುವ ಕಡೆಯಿಂದಲೇ ನಮ್ಮ ಸೈನ್ಯ ಬರುತ್ತಿದೆ ಎಂದು ತಿಳಿಯುತ್ತದೆ. ಆಗ ನಾವು ಪಟ್ಟಣದೊಳಗೆ ಸೇನಾ ಸಮೇತರಾಗಿ ಹಿಂದುಗಡೆಯಿಂದ ಬಂದು ಶತ್ರುಗಳ ಮೇಲೆ ದಾಳಿ ಮಾಡಬೇಕು. ಆ ಸಮಯಕ್ಕೆ ಸರಿಯಾಗಿ ನಾನೂ ನನ್ನಲ್ಲಿರುವ ಸೈನ್ಯದೊಡನೆ ನೆರವಾಗುವೆನು"[೪೭] ಎಂದು ಪತ್ರದಲ್ಲಿ ಬರೆದು ಕಳುಹಿಸಿದನು. ಈ ವಿಷಯವನ್ನು ತಿಳಿದ ಚಿಕ್ಕದೇವರಾಜ ಒಡೆಯರು ಅದಕ್ಕೆ ಅನುಮತಿಯನ್ನು ನೀಡಿದರು. ಆ ದಿನ ಕತ್ತಲೆಯಾಗುತ್ತಿದ್ದಂತೆಯೇ ದೊಡ್ಡಯ್ಯ ಮೇಲೆ ಹೇಳಿದಂತೆ ತನ್ನ ಕಾರ್ಯಚರಣೆಯನ್ನು ಪ್ರಾರಂಭಿಸಿದನು. ಇದರಿಂದ ಮರಾಠಿಯವರು ಗಾಬರಿಯಿಂದ ದಿಕ್ಕಪಾಲಾಗಿ ಓಡತೊಡಗಿದರು.

ಈ ಇಬ್ಬರು ಮರಾಠ ಸರದಾರರನ್ನು ಹಿಡಿದು ಅವರ ತಲೆಗಳನ್ನು ಖಂಡರಿಸಿದರು ಮತ್ತು ಅವರ ತಲೆಗಳೆರಡನ್ನು ಬರ್ಜಿಗೆ ಸಿಕ್ಕಿಸಿಕೊಂಡು ರಾಜಧಾನಿಗೆ ಹಿಂದುರುಗಿದರು. ಚಿಕ್ಕ ದೇವರಾಜ ಒಡೆಯರು ದಳಪತಿ ದೊಡ್ಡಯ್ಯನವರ ಸಾಹಸವನ್ನು ಮೆಚ್ಚಿದರು.

ಈ ವಿಚಾರವನ್ನು ತಿಳಿದ ದೆಹಲಿಯ ರಾಜನಾದ ಔರಂಗಜೆಬ್ ದೊಡ್ಡಯ್ಯನಿಗೆ ತನ್ನ ಮಗಳನ್ನು ಮದುವೆ ಮಾಡಿ ಕೊಡುವೆ ಎಂದು ಹೇಳಿಕಳುಹಿಸಿದನು. ಆದರೆ ಚಿಕ್ಕದೇವರಾಜ ಒಡೆಯರು ದೊಡ್ಡಯ್ಯನನ್ನು ದೆಹಲಿಯ ರಾಜನ ಬಳಿಗೆ ಕಳುಹಿಸಲು ಒಪ್ಪಲಿಲ್ಲ. ಅದರ ಬದಲಾಗಿ ದೊಡ್ಡಯ್ಯನವರು ಯುದ್ಧದಲ್ಲಿ ಮರಣ ಹೊಂದಿದರು ಎಂದು ಹೇಳಿಕಳುಹಿಸಿದರು. ಈ ವಿಚಾರವನ್ನು ತಿಳಿದ ದೆಹಲಿಯ ರಾಜ ದುಃಖಿತನಾದನು. ದೆಹಲಿಯ ರಾಜನು ಒಂದು ಬೇಡಿಕೆಯನ್ನು ಸಲ್ಲಿಸಿದನು ಅದೇನೆಂದರೆ, ದೊಡಯ್ಯನವರ ತೈಲಚಿತ್ರವನ್ನು ಹಾಗೂ ಅವರು ಹಿಡಿಯುತ್ತಿದ್ದ ಕತ್ತಿಯನ್ನು ಕಳುಹಿಸಿಕೊಡುವಂತೆ ಕೇಳಿಕೊಂಡನು. ಅವುಗಳನ್ನು ತರಿಸಿಕೊಂಡು ಆ ಕತ್ತಿಗೂ ಪಟಕ್ಕೂ ತನ್ನ ಮಗಳನ್ನು ಮದುವೆ ಮಾಡಿದನು. ದಳವಾಯಿಗಳ ಪೀಳಿಗೆಯಲ್ಲಿ ದಳವಾಯಿತನ ಮಾಡಿದವರಲ್ಲಿ ಕೊನೆಯವರದ ವೀರರಾಜಯ್ಯನವರು ಬರೆದ "ಸಕಲ ವೈದ್ಯ ಸಂಹಿತಂಸಾರ್ಣವ" ಎಂಬ ಗ್ರಂಥದ ಪೀಠಿಕೆಯಲ್ಲಿ ದಳವಾಯಿ ದೊಡಯ್ಯನವರ ಬಗ್ಗೆ ಬರೆದಿದ್ದಾರೆ.[೪೮]

ಐದನೆಯ ದಳವಾಯಿ ಕಾಂತಯ್ಯ

ಇವರು ದಳವಾಯಿ ದೊಡಯ್ಯನವರ ತಮ್ಮಂದಿರು. ದೊಡಯ್ಯನವರು ವಿಧಿವಶರಾದ ಮೇಲೆ ಕಾಂತಯ್ಯನವರ ದಳವಾಯಿತನವನ್ನು ಚಿಕ್ಕದೇವರಾಜ ಒಡೆಯರು ಇವರಿಗೆ ಕೊಟ್ಟರು. ಇದಾದ ಕೆಲವೇ ದಿನಗಳಲ್ಲಿ ಚಿಕ್ಕದೇವರಾಜ ಒಡೆಯರು ಸ್ವರ್ಗಸ್ತರಾದರು. ಇವರ ಕಾಲಾನಂತರ ಕಂಠೀರವ ಒಡೆಯರಿಗೆ ಪಟ್ಟವಾಯಿತು. ಇವರ ಕಾಲದಲ್ಲಿ ಚಿಕ್ಕ ಬಳ್ಳಾಪುರದ ಮೇಲೆ ದಂಡೆತ್ತಿ ಹೋದ ಕಾಂತಯ್ಯನವರು ಅಲ್ಲಿಯೇ ಕೊಲ್ಲಲ್ಪಟ್ಟರು. ನಂತರ ಆರನೆಯ ದಳವಾಯಿ ನಂಜರಾಜಯ್ಯನವರು ದಳವಾಯಿಯಾಗಿ ನೇಮಿಸಲ್ಪಟ್ಟರು. ಇವರು ಸಹ ಚಿಕ್ಕಬಳ್ಳಾಪುರ ಕಾಳಗದಲ್ಲಿ ಮರಣ ಹೊಂದಿದರು.

ಏಳನೆಯ ದಳವಾಯಿ ಬಸವರಾಜಯ್ಯ

ಇವರು ಚಿಕ್ಕಬಳ್ಳಾಪುರಕ್ಕೆ ಹೋಗಿ ಅಲ್ಲಿಯ ಪಾಳೆಗಾರನಾದ ಬೈಚೋಗೌಡನ ಮೇಲೆ ಪರಾಕ್ರಮದಿಂದ ಕಾದಾಡಿ ಅವನನ್ನು ಸೋಲಿಸಿ ಕಪ್ಪ ಕಾಣಿಕೆಗಳನ್ನು ಕೂಡುವಂತೆ ಮಾಡಿದರು. ಅಲ್ಲದೆ 'ಶರಣಗತ ವಜ್ರ ಪಂಜರ' ಎಂದು ಹೊಗಳಿಸಿಕೊಂಡು ಬಂದರು. ನಂತರ ಇವರು ಇಕ್ಕೇರಿ ದೊರೆಯ ಮೇಲೆ ದಂಡೆತ್ತಿ ಹೋಗಿ ಅವನನ್ನು ಸೋಲಿಸಿ ಮತ್ತು ಇಕ್ಕೇರಿಗೆ ಸೇರಿದ ಚಿಕ್ಕ ಮಂಗಳೂರು, ಬಾಣಾವಗ,

ಮಹಾರಾಜನ ದುರ್ಗ ಇವುಗಳನ್ನು ಸ್ವಾಧೀನಪಡಿಸಿಕೊಂಡರು. ಆದಾದ ಸ್ವಲ್ಪ ದಿನಗಳಲ್ಲಿಯೇ ಇವರು ಮರಣ ಹೊಂದಿದರು.

ಎಂಟನೆಯ ದಳವಾಯಿ ಮಲ್ಲರಾಜಯ್ಯ

ದಳವಾಯಿ ಬಸವರಾಜಯ್ಯನ ನಂತರ ದಳವಾಯಿತನ ಈತನ ಚಿಕ್ಕಪ್ಪ ಮಲ್ಲರಾಜಯ್ಯನಿಗೆ ಬಂದಿತು. ಈತನು ತನ್ನ ಹಿಂದಿನವರಂತೆ ಕೊಯಮತ್ತೂರು ಸತ್ಯಮಂಗಲ ಮುಂತಾದ ನಾಡುಗಳ ಪಾಳೆಗಾರರನ್ನು ಯುದ್ಧದಲ್ಲಿ ಸೋಲಿಸಿದನು. ಈ ಸಮಯಕ್ಕೆ ಕಂಠೀರವ ಒಡೆಯರು ಕಾಲಾವಾಗಿ ದೊಡ್ಡ ಕೃಷ್ಣರಾಜ ಒಡೆಯರು ಪಟ್ಟಾಭಿಷಕ್ತರಾದರು. ಇದಾದ ಸ್ವಲ್ಪ ಕಾಲದಲ್ಲಿಯೇ ಮಲ್ಲರಾಜರು ಕಾಲವಾದರು.

ದಳವಾಯಿ ದೇವರಾಜಯ್ಯ ಮತ್ತು ನಂಜರಾಜಯ್ಯ

೧೮ನೇ ಶತಮಾನದ ಮೈಸೂರಿನ ಇತಿಹಾಸದಲ್ಲಿ ಕಳಲೆಯ ದಳವಾಯಿಗಳು ಮಹತ್ವದ ಪಾತ್ರವನ್ನು ವಹಿಸಿ ರಾಜ್ಯದ ರಾಜಕೀಯದ ಮೇಲೆ ತಮ್ಮದೇ ಆದ ಮುದ್ರೆಯನ್ನು ಒತ್ತಿದ್ದಾರೆ. ಈ ದಳವಾಯಿ ಯುಗದ ಅತ್ಯಂತ ಪ್ರಮುಖವಾದ ವ್ಯಕ್ತಿಗಳೆಂದರೆ, ದಳವಾಯಿ ದೇವರಾಜಯ್ಯ ಮತ್ತು ನಂಜರಾಜಯ್ಯ ನವರು.[೪೯] ಕಳಲೆಯ ದಳವಾಯಿಗಳು ತಮ್ಮ ಕ್ಷೇತ್ರವಾದ ಕಳಲೆಯ ದೊರೆಗಳೆನಿಸಿ ಕೊಂಡಿದ್ದು. ಮೈಸೂರು ಸಂಸ್ಥಾನದಲ್ಲಿ ಮುಖ್ಯ ಸ್ಥಾನದಲ್ಲಿದ್ದುಕೊಂಡೇ ಆಡಳಿತವನ್ನು ನಿರ್ದೇಶಿಸುತ್ತಿದ್ದರು. ದೊರೆ ದೊಡ್ಡಕೃಷ್ಣರಾಜ ಒಡೆಯರು ದಳವಾಯಿ ವೀರರಾಜಯ್ಯನ ಮಗ ದೇವರಾಜಯ್ಯನವರಿಗೆ ದಳವಾಯಿತನವನ್ನು ನೀಡಿದರು. ಇದೇ ವೇಳೆಯಲ್ಲಿ ದೇವರಾಜಯ್ಯನ ಸೋದರ ನಂಜರಾಜಯ್ಯನು ಸಹ ಸರ್ವಾಧಿಕಾರಿಯಾಗಿ ಮೈಸೂರಿನ ದೊರೆಗಳ ಸೇವೆಯನ್ನು ಸಲ್ಲಿಸುತ್ತಿದ್ದನು.[೫೦]

ಮೈಸೂರು ಸಂಸ್ಥಾನದಲ್ಲಿ ಚಿಕ್ಕದೇವರಾಜ ಒಡೆಯರ ನಂತರ ಬಂದ ದೊರೆಗಳು ಅಸಮರ್ಥರಾಗಿದ್ದರು. ಇದೆ ಸಮಯವನ್ನು ಕಾಯುತ್ತಿದ್ದ ಸುತ್ತಮುತ್ತಲಿನ ಶತ್ರುಗಳು ಮೈಸೂರು ಸಂಸ್ಥಾನವನ್ನು ಕೊಳ್ಳೆ ಹೊಡೆಯಲು ಅವಣಿಸುತ್ತಿದ್ದರು. ಆದರೆ ಒಡೆಯರ ಅಸಮರ್ಥತೆಯ ಲಾಭವನ್ನು ಪಡೆದ ಕಳಲೆ ದಳವಾಯಿಗಳು ಬಲಿಷ್ಠರಾದರು. ದೇವರಾಜಯ್ಯ ಮತ್ತು ನಂಜರಾಜಯ್ಯ ಇಬ್ಬರು ಸೇರಿ ಮೈಸೂರಿನ ಮೇಲೆ ದಾಳಿ ನಡೆಸಿದ ಪೇಶ್ವೆ ಬಾಜಿರಾಯನ ಸೈನ್ಯವನ್ನು ಹಿಮ್ಮೆಟಿಸಿದರು.[೫೧] ಇದು ಈ ಇಬ್ಬರು ದಳವಾಯಿಗಳಕ ಶೌರ್ಯದ ಒಂದು ಮುಖ್ಯ ಉದಾಹರಣೆಯಾಗಿದೆ. ಇಡೀ ಹಿಂದುಸ್ಥಾನದಲ್ಲೆ ಅಜೇಯನೆನಿಸಿಕೊಂಡಿದ್ದ ಪೇಶ್ವೆ ಭಾಜಿರಾಯನು ೧೭೨೪ರಲ್ಲಿ ಶ್ರೀರಂಗಪಟ್ಟಣದ ಮೇಲೆ ದಾಳಿ ಮಾಡಿದನು. ಆದರೆ ದೇವರಾಜಯ್ಯಯನ ಮುಂದಲೋಚನೆಯಿಂದ ಅಂದರೆ ಪಿರಂಗಿಗಳ ಪರಿಣಾಮಕಾರಿ ಬಳಕೆಯಿಂದ ಶತ್ರುಸೈನ್ಯವನ್ನು ದೂಳಿಪಟ ಮಾಡಿದ. ಯುದ್ಧ ವೀರರಾದ ಮರಾಠರು ಮೈಸೂರು ಸೈನ್ಯದ

ಶೌರ್ಯವನ್ನು ಹಾಗೂ ಅದರ ದಕ್ಷತೆಯನ್ನು ಮೆಚ್ಚಿಕೊಂಡು ಇದು ಶ್ರೀರಂಗಪಟ್ಟಣವಲ್ಲ ಪಿರಂಗಿಪಟ್ಟಣ[೫೧] ಎಂದುಕೊಂಡು ಹಿಂದುರುಗಿದರು.

ಯುದ್ಧರಂಗದಲ್ಲಿ ಅಪ್ರತಿಮನಾಗಿದ್ದಂತೆ ದೇವರಾಜಯ್ಯನು ರಾಜಕೀಯ ವ್ಯವಹಾರಗಳಲ್ಲೂ ದೂರದೃಷ್ಟಿಯುಳ್ಳವನಾಗಿದ್ದನು. ಮೈಸೂರು ರಾಜ್ಯದ ವಿಸ್ತರಣೆಗೆ ಅಡ್ಡಿಯಾಗಿದ್ದ ಅನೇಕ ಪಾಳೆಗಾರರನ್ನು ಇವನು ನಿರ್ಮೂಲ ಮಾಡಿದ. ೧೭೨೮ರಲ್ಲಿ ಮಾಗಡಿಯಲ್ಲಿದ್ದ ಗೌಡರ ಆಳ್ವಿಕೆಯನ್ನು ಕೊನೆಗೊಳಿಸಿ ಅವರ ರಾಜಧಾನಿಯಲ್ಲಿದ್ದ ಅಪಾರ ಸಂಪತ್ತಿನ್ನು ಮತ್ತು ಅವರ ರಾಜ್ಯವನ್ನು ವಶಪಡಿಸಿಕೊಂಡನು. ಮಾಗಡಿ ದೊರೆ ಮುಮ್ಮಡಿ ಕೆಂಚ ವೀರಪ್ಪನನ್ನು ಬಂಧಿಸಿ ಸೆರೆಯಲಿಟ್ಟನು. ಇದಾದ ನಂತರ ಪೂರ್ವದಲ್ಲಿ ರತ್ನಗಿರಿ ಸೇಲಂವರೆಗಿನ ಅನೇಕ ಪಾಳೆಗಾರರನ್ನು ಸೋಲಿಸಿ ಅವರಿಂದಲೇ ಸಾಕಷ್ಟು ಸಂಪತ್ತನ್ನು ಸಂಗ್ರಹಿಸಿ ಕೃಶವಾಗಿದ್ದ ಮೈಸೂರಿನ ಭಂಡಾರವನ್ನು ತುಂಬುತ್ತಾ ಹೋದನು.

ಈ ರೀತಿಯಲ್ಲಿ ಒಡೆಯರನ್ನು ಕೇವಲ ನಾಮಮಾತ್ರ ದೊರೆಗಳನ್ನಾಗಿ ಮಾಡಿ. ದೇವರಾಜಯ್ಯನು ತನ್ನ ಅಧಿಕಾರವನ್ನು ವಿಸ್ತಾರಿಸುತ್ತ ಹೋದನು ನಂತರ ಇವರ ಸೋದರನಾದ ಸರ್ವಾಧಿಕಾರಿ ನಂಜರಾಜಯ್ಯನ ಜೊತೆ ಸೇರಿ ಇಬ್ಬರು ರಾಜ್ಯದ ಆದಾಯದ ಒಂದು ಭಾಗವನ್ನು ತಮ್ಮ ವಶಕ್ಕೆ ತೆಗೆದುಕೊಂಡು. ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಂಡರು.

ದೇವರಾಜಯ್ಯ ಮತ್ತು ನಂಜರಾಜಯ್ಯನವರು ದಿನೇ ದಿನೇ ಪ್ರಬಲರಾಗುತ್ತಿದ್ದದ್ದನು ಗಮನಿಸಿದ ದೊರೆ ಚಾಮರಾಜ ಒಡೆಯರ್ ಇವರಿಬ್ಬರನ್ನು ವಜಾ ಮಾಡಿ ಬೇರೆ ಅಧಿಕಾರಿಗಳನ್ನು ನೇಮಿಸಿಕೊಂಡನು.[೫೩] ಆದರೆ ಮೈಸೂರಿನ ರಾಜಕೀಯದಲ್ಲಿ ಬಹು ಪ್ರಬಲರಾಗಿದ್ದ ದೇವರಾಜಯ್ಯ ಮತ್ತು ನಂಜರಾಜಯ್ಯನವರನ್ನು ಅಧಿಕಾರದಿಂದ ಕೆಳಗಿಳಿಸುವುದು ಅಷ್ಟು ಸುಲಭವಾಗಿರಲಿಲ್ಲ. ದೇವರಾಜಯ್ಯ ತನ್ನದೇ ಆದ ಸೈನ್ಯವನ್ನು ಸಜ್ಜುಗೊಳಿಸಿಕೊಂಡು ಅರಮನೆಯನ್ನು ಮುತ್ತಿದನು. ರಾಜ ಮತ್ತು ಅವನ ಮೂರು ಜನ ರಾಣಿಯರನ್ನು ರಾಜ ನೇಮಿಸಿದ್ದ ಅಧಿಕಾರಿಗಳನ್ನು ಬಂಧಿಸಿ ಸೆರೆಮನೆಯಲ್ಲಿಟ್ಟನು. ಮೈಸೂರು ಸಂಸ್ಥಾನದ ಮುಂದಿನ ದೊರೆಯಾದ ಇಮ್ಮಡಿ ಕೃಷ್ಣರಾಜ ಒಡೆಯರು ಚಿಕ್ಕವನಾಗಿದ್ದರಿಂದ ದೇವರಾಜಯ್ಯನೇ ಅಧಿಕಾರದ ಸೂತ್ರಗಳನ್ನು ಪೂರ್ಣವಾಗಿ ತನ್ನ ಕೈಗೆ ತೆಗೆದುಕೊಂಡನು. ಇಷ್ಟೆ ಅಲ್ಲದೆ ಕಳಲೆಯ ದೊರೆ ಪಟ್ಟದಲ್ಲಿದ್ದುಕೊಂಡೆ ದೇವರಾಜಯ್ಯನು ಮೈಸೂರಿನ ಆಡಳಿತವನ್ನು ತನ್ನ ಕೈಯಲ್ಲಿ ಕೇಂದ್ರೀಕರಿಸಿಕೊಂಡನು. ಇದೇ ಸಮಯದಲ್ಲಿ ಇವನ ಸೋದರನಾದ ಸರ್ವಾಧಿಕಾರಿ ನಂಜರಾಜಯ್ಯನು ಮರಣ ಹೊಂದಿದನು. ಇದು ದೇವರಾಜಯ್ಯನಿಗೆ ತುಂಬಲಾರದ ನಷ್ಟವಾಯಿತು. ಆದರೂ ಸಹ ಎದೆಗುಂದದೆ ತನ್ನ ಇನ್ನೊಬ್ಬ ಸಹೋದರನಾದ ಕರಾಚೂರಿ ನಂಜರಾಜಯ್ಯನನ್ನು ಸರ್ವಾಧಿಕಾರಿಯನ್ನಾಗಿ ನೇಮಿಸಿಕೊಂಡನು. ಈ ರೀತಿ ಮೈಸೂರಿನ ಆಡಳಿತ ಸಂಪೂರ್ಣವಾಗಿ ದೇವರಾಜಯ್ಯ, ಮತ್ತು ಕರಾಚೂರಿ ನಂಜರಾಜಯ್ಯ ಸಹೋದರರ ಕೈಸೇರಿತು.[೫೪] ಮೈಸೂರಿನ ವ್ಯವಹಾರಗಳನ್ನು ತನಗೆ ಅನುಕೂಲವಾಗಿರುವಂತೆ ವ್ಯವಸ್ಥೆಗೊಳಿಸಿದನು.

ದೇವರಾಜಯ್ಯನು ಪಶ್ಚಿಮಭಿಮುಖವಾಗಿ ದಾಳಿಗಳನ್ನು ಕೈಗೊಂಡನು. ಮೈಸೂರಿನ ಸೈನ್ಯವು ಮಲಬಾರಿನ ಜಾಮೊರಿಯನ್ನನ ರಾಜ್ಯದ ಮೇಲೆ ದಾಳಿ ಕೈಗೊಂಡು ಪೆನ್ನಾರ್ ನದಿಯವರೆಗೂ ಮುಂದುವರೆಯಿತು. ಆದರೆ ಮೊಘಲರು ಈ ವೇಳೆಗಾಗಲೇ ದಕ್ಷಿಣದಲ್ಲಿ ತಮ್ಮ ಆಡಳಿತವನ್ನು ವಿಸ್ತರಿಸಲು ತೀವ್ರ ಪ್ರಯತ್ನವನ್ನು ನಡೆಸುತ್ತಿದ್ದರು. ಮೊಘಲ್ ಸಾಮ್ರಾಜ್ಯದ ಪ್ರತಿನಿಧಿ ಆರ್ಕಾಟಿನ ನವಾಬ್ ಅಲಿ ದೋಸ್ತ್ ಖಾನ್ ಮೈಸೂರಿನ ಸಂಪತ್ತನ್ನೆಲ್ಲಾ ದೋಚಬೇಕೆಂಬ ಉದ್ದೇಶ ಇಟ್ಟುಕೊಂಡು ೧೭೩೫ರಲ್ಲಿ ದಾಳಿ ನಡೆಸಿದ.[೫೧] ಹಲವಾರು ದಳಪತಿಗಳ ನೇತೃತ್ವದಲ್ಲಿ ದೇವರಾಜಯ್ಯನ್ನು ಬಲವಾದ ಸೈನ್ಯದೊಂದಿಗೆ ಮುನ್ನುಗ್ಗಿ ಮೊಘಲ್ ಸೈನ್ಯವನ್ನು ಚನ್ನಪಟ್ಟಣದ ಕೈಲಾಚದ ಬಳಿ ಸೋಲಿಸಿದನು. ಈ ಯುದ್ಧದಲ್ಲಿ ಮೊಘಲರ ಪಾಳೆಯದಲ್ಲಿ ಮಂಚೂಣಿಯಲ್ಲಿದ್ದ ಮುರಾದ್ ಖಾನ್, ಖಾನಂಖಾನ್, ಸಿಕಂದರ್ ಖಾನ್, ಬಹದೂರ್ ಖಾನ್, ಮೊದಲಾದ ಸೇನಾನಿಗಳು ದೇವಾರಾಜಯ್ಯನಿಂದ ಹತರಾದರು. ಇಂತಹ ಬಲಿಷ್ಠ ಶತ್ರು ಶೈನ್ಯವನ್ನು ಸೋಲಿಸಿದ ದೇವರಾಜಯ್ಯನು ಮೈಸೂರಿನ ಸೈನ್ಯದ ಶ್ರೇಷ್ಠತೆಯನ್ನು ಪ್ರದರ್ಶಿಸಿದನು. ಇದೆ ಸಮಯದಲ್ಲಿ ಮೊಘಲ್ ಮರಾಠರ ಜಗಳದಲ್ಲಿ ಮೈಸೂರು ಸೆಳೆಯಲ್ಪಟ್ಟಿತು. ದೂರ ದೃಷ್ಟಿಹೊಂದಿದ್ದ ದೇವರಾಜಯ್ಯನು ಮರಾಠರ ನೆರವಿನಿಂದ ಆರ್ಕಾಟಿನ ಚಂದಾಸಾಹೇಬನನ್ನು ಸೋಲಿಸಿ ತಿರುಚನಾಪಳ್ಳಿಯಲ್ಲಿ ಮದುರೆ ನಾಯಕರ ಆಳ್ವಿಕೆಗೆ ಅನುವು ಮಾಡಿಕೊಟ್ಟನು. ಅಲ್ಲದೆ ದಕ್ಷಿಣ ಭಾರತದ ಆಯಕಟ್ಟಿನ ಸ್ಥಳವಾದ ತಿರುಚನಪಳ್ಳಿಯನ್ನು ಅಂತಿಮವಾಗಿ ಮೈಸೂರು ರಾಜ್ಯದಲ್ಲಿ ವಿಲೀನಗೊಳಿಸುವುದು ದೇವರಾಜಯ್ಯನ ಗುರಿಯಾಗಿತ್ತು. ದೇವರಾಜಯ್ಯನು ಅಪ್ರತಿಮ ವೀರನಾಗಿ ಹಲವಾರು ವಿಜಯಗಳ ಶಿಲ್ಪಿಯಾಗಿದ್ದರೂ ಹೈದರಾಬಾದಿನ ನಾಸಿರ್‌ಜಂಗ್ ಮೈಸೂರಿನ ಮೇಲೆ ದಂಡೆತ್ತಿ ಬಂದಾಗ ಅದನ್ನು ತಡೆಯಲು ಶಕ್ತನಾಗಲಿಲ್ಲ. ನಾಸಿರ್‌ಜಂಗನು ಶ್ರೀರಂಗಪಟ್ಟಣವನ್ನು ಮುತ್ತಿದಾಗ ೨೨ ಲಕ್ಷ ರೂ ಕೊಡಲು ಒಪ್ಪಿ ಒಪ್ಪಂದ ಮಾಡಿಕೊಳ್ಳಬೇಕಾಯಿತು.[೫೨]

ಹದಿನೆಂಟನೆಯೇ ಶತಮಾನದ ಮಧ್ಯೆ ಭಾಗದಲ್ಲಿ ತನ್ನ ತಮ್ಮನಾದ ನಂಜರಾಜಯ್ಯನಿಗೆ ದಳವಾಯಿತನವನ್ನು ವಹಿಸಿಕೊಟ್ಟು ನಂತರ ದೇವರಾಜಯ್ಯ ಒಳಾಡಾಳಿತದಲ್ಲಿ ತೊಡಗಿಸಿಕೊಂಡನು. ಮೈಸೂರಿನ ರಾಜಕೀಯ ಬಹು ಜಟಿಲವಾಯಿತು. ಆದರೆ ಇದೆ ಸಮಯದಲ್ಲಿ ಉತ್ಸಾಹಿ, ಮಹಾತ್ವಕಾಂಕ್ಷಿಯಾಗಿದ್ದ ಕರಾಚೂರಿ ನಂಜರಾಜಯ್ಯನಿಗೂ, ನಿಷ್ಠವಂತ ದೇವರಾಜಯ್ಯನಿಗೂ ಭಿನ್ನಾಭಿಪ್ರಾಯ ತಲೆದೂರಿತು. ಇದರಿಂದ ಮನನೊಂದ ದೇವರಾಜಯ್ಯನು ಮೈಸೂರಿನ ರಾಜಕೀಯದಿಂದ ನಿರ್ಗಮಿಸುವ ಉದ್ದೇಶದಿಂದ ಸತ್ಯಮಂಗಲಕ್ಕೆ ಹೋಗಿ ನೆಲೆಸಿದನು.[೫೩] ಇದೆ ವೇಳೆಯಲ್ಲಿ ಮೈಸೂರಿನ ಸೇನೆಯ ದಳಪತಿಯಾಗಿದ್ದ ಹೈದರ ಆಲಿಯು ದಳವಾಯಿ ಸಹೋದರರ ಮಧ್ಯೆ ಉತ್ತಮ ಬಾಂಧವ್ಯವನ್ನು ಏರ್ಪಡಿಸಿದನು.

ಕರಾಚೂರಿ ನಂಜರಾಜಯ್ಯ

ಸರ್ವಾಧಿಕಾರಿಯಾಗಿ ನೇಮಕಗೊಂಡು (೧೭೪೬) ಕಾಲು ಶತಮಾನ ಮೈಸೂರು ರಾಜಕೀಯವನ್ನು ನಿಯಂತ್ರಿಸಿದ ಕರಾಚೂರಿ ನಂಜರಾಜಯ್ಯ ಕಳಲೆಯು ಕರ್ನಾಟಕಕ್ಕೆ ನೀಡಿದ ಮತ್ತೊಬ್ಬ ಸಮರ್ಥ ಸೇನಾನಿ ಹಾಗೂ ಆಡಳಿತಗಾರ. ದಕ್ಷಿಣ ಭಾರತದ ಪ್ರಮುಖ ರಾಜ್ಯಗಳಲ್ಲಿ ತೀವ್ರ ಸೆಣಸಾಟವು ಕಾಣಿಸಿಕೊಂಡು ವಿದೇಶಿಯರ ಮಧ್ಯೆ ಪ್ರವೇಶದಿಂದ ಪರಿಸ್ಥಿತಿ ಮತ್ತಷ್ಟು ಪ್ರಕ್ಷುಬ್ಧವಾಗಿದ್ದ ಸಮಯದಲ್ಲಿ ನಂಜರಾಜಯ್ಯನು ಮೈಸೂರಿನ ಆಡಳಿತ ಸೂತ್ರವನ್ನು ಹಿಡಿದಿದ್ದನು. ತನ್ನ ಅಣ್ಣನಾದ ದೇವರಾಜಯ್ಯನು ದಳವಾಯಿಯಾಗಿದ್ದ ಕಾಲದಿಂದಲೂ ರಾಜ್ಯದ ವ್ಯವಹಾರಗಳನ್ನು ಗಮನಿಸುತ್ತ ನೆರವಾಗುತ್ತ ಬಂದಿದ್ದನು. ಈ ಅನುಭವವು ಇವನಿಗೆ ಮೈಸೂರಿನ ಅಡಳಿತವನ್ನು ನಿರ್ವಹಿಸಲು ಸಹಾಯಕವಾಯಿತು.[೫೮] ದೊಡ್ಡ ಬಳ್ಳಾಪುರದ ರಂಗೇಗೌಡನು ಮರಾಠಿ ಮತ್ತು ಮೊಘಲ್ ಸೈನ್ಯದ ಸಹಾಯದಿಂದ ದೇವನ ಹಳ್ಳಿಯನ್ನು ವಶಪಡಿಸಿಕೊಂಡಾಗ ನಂಜರಾಜಯ್ಯನು ಅವನನ್ನು ಸಂಪೂರ್ಣವಾಗಿ ಸೋಲಿಸಿ ದೇವನಹಳ್ಳಿಯನ್ನು ವಶಪಡಿಸಿಕೊಂಡನು.

ಹೈದಾರಾಬಾದಿನ ಉತ್ತರಾಧಿಕಾರಿ ಜಗಳದಲ್ಲಿ ಮೈಸೂರು ಸಂಸ್ಥಾನವು ನಾಸಿರ್‌ಜಂಗ್‌ನನ್ನು ಬೆಂಬಲಿಸಿತ್ತು. ದಕ್ಷಿಣ ಭಾರತದಲ್ಲಿ ಎಲ್ಲೆಲ್ಲೂ ಅಭದ್ರತೆಯ ರಾಜಕೀಯ ವ್ಯವಸ್ಥೆಯು ಸಾಮಾನ್ಯವಾಗಿತ್ತು ಹೈದರಾಬಾದಿನ ಸಲಾಬರ್ ಜಂಗ್ ದಕ್ಷಿಣದ ಅನೇಕ ರಾಜ್ಯಗಳನ್ನು ಕೊಳ್ಳೆ ಹೊಡೆಯುತ್ತಾ ಬಂದು ಮೈಸೂರಿಗೆ ಮುತ್ತಿಗೆ ಹಾಕಿ ಆ ರಾಜ್ಯಕ್ಕೆ ೫೬ ಲಕ್ಷ ಪೊಗದಿಯನ್ನು ಹಾಕಿದನು. ಇದೆ ಸಮಯದಲ್ಲಿಯೇ ಆರ್ಕಾಟಿನಲ್ಲಿ ಉತ್ತರಾಧಿಕಾರಿಯ ವಿವಾದವು ಪ್ರಾರಂಭವಾಗಿದ್ದು ಮಹಮ್ಮದ್ ಆಲಿಯ ನಂಜರಾಜಯ್ಯನ ಸಹಾಯವನ್ನು ಯಾಚಿಸಿದನು.[೫೯] ದೇವರಾಜಯ್ಯನ ಸಲಹೆಯನ್ನು ತೆಗೆದುಕೊಳ್ಳದೆ ನಂಜರಾಜಯ್ಯ ೨೦,೦೦೦ ಸೈನಿಕರೊಂದಿಗೆ ಮಹಮ್ಮದ ಅಲಿಯ ನೆರವಿಗೆ ಧಾವಿಸಿದನು. ಆದರೆ ಈ ಯುದ್ಧದಲ್ಲಿ ನಂಜರಾಜಯ್ಯ ಯಶಸ್ವಿಯಾಗಲಿಲ್ಲ ಇದರಿಂದ ಮೈಸೂರು ಸಂಸ್ಥಾನಕ್ಕೆ ೩ ರಿಂದ ೪ ಕೋಟಿ ರೂಪಾಯಿಗಳಷ್ಟು ನಷ್ಟವಾಯಿತು. ಇದರಿಂದ ರಾಜ್ಯದ ಆರ್ಥಿಕ ಸ್ಥಿತಿ ಅದಗೆಟ್ಟಿತು. ಮರಾಠರಿಗೂ, ಸಲಾಬತ್ ಜಂಗನಿಗೂ ಒಪ್ಪಂದದಂತೆ ಕೊಡಬೇಕಾಗಿದ್ದ ಹಣವನ್ನು ಕೊಡಲಾಗಲಿಲ್ಲ. ನಂಜರಾಜಯ್ಯನು ತಿರುಚಾನಪಳ್ಳಿಯನ್ನು ಮಹಮ್ಮದ್ ಅಲಿ ಮತ್ತು ಇಂಗ್ಲೀಷರಿಂದ ವಶಪಡಿಸಿಕೊಳ್ಳಲು ಪದೇ ಪದೇ ಪ್ರಯತ್ನಿಸಿ ಸೋತನು. ಮಹಮ್ಮದ್ ಆಲಿಯ ದ್ರೋಹವು ಬಯಲಾಗುವ ವೇಳೆಗೆ ಕಾಲವು ಮಿಂಚಿ ಹೋಗಿದ್ದಿತು. ಇದೇ ಸಮಯದಲ್ಲಿ ಹೈದರ ಆಲಿಯು ಇಂಗ್ಲೀಷರ ವಂಚನೆಯ ಬಗ್ಗೆ ನಂಜರಾಜಯ್ಯನಿಗೆ ಹಿತನುಡಿಯನ್ನು ಹೇಳಿದ್ದನು. ಇದೇ ಸಮಯವನ್ನು ಕಾಯುತ್ತಿದ್ದ ಮೈಸೂರಿನ ಒಡೆಯರು ದಳವಾಯಿಗಳ ಆಡಳಿತದಿಂದ ಬೇಸತ್ತು ನಂಜರಾಜಯ್ಯನ ಸೋಲು ಅವನ ದುಸ್ಥಿತಿ ಮೈಸೂರಿನ ಅಭದ್ರಸ್ಥಿತಿಯ ಪ್ರಯೋಜನವನ್ನು ಪಡೆದುಕೊಳ್ಳಲು ಪ್ರಯತ್ನಿಸಿದರು.[೬೦] ಕೃಷ್ಣರಾಜ ಒಡೆಯರು ಈ ಸಮಯವನ್ನು

ಉಪಯೋಗಿಸಿಕೊಂಡು ಸ್ವಾತಂತ್ರವನ್ನು ಪಡೆಯಲು ಖಂಡೆರಾವ್ ಮೊದಲಾದವರ ಸಹಾಯದಿಂದ ಯತ್ನಿಸಿದರು. ಆದರೆ ಅದು ಸಾಧ್ಯವಾಗಲಿಲ್ಲ.

ಮೈಸೂರು ಸಂಸ್ಥಾನವು ಈ ವೇಳೆಗಾಗಲೇ ಸಂಪೂರ್ಣವಾಗಿ ದಿವಾಳಿಯಾಗಿತ್ತು. ಇದೇ ವೇಳೆಯಲ್ಲಿ ಮರಾಠರ ಸೈನ್ಯವು ಶ್ರೀರಂಗಪಟ್ಟಣದ ಮೇಲೆ ದಾಳಿ ಮಾಡಿತು. ನಂಜರಾಜಯ್ಯನು ಈ ದಾಳಿಯನ್ನು ತಡೆಯಲು ವಿಫಲನಾಗಿ ಮರಾಠರೊಂದಿಗೆ ಒಂದು ಒಪ್ಪಂದ ಮಾಡಿಕೊಂಡನು. ಆದರ ಪ್ರಕಾರ ೩೨ ಲಕ್ಷ ರೂಪಾಯಿಗಳನ್ನು ಮರಾಠರಿಗೆ ಕೊಡಬೇಕಾಯಿತು.[೬೧] ೬ ಲಕ್ಷ ನಗದು ಹಣವನ್ನು ಕೊಡಲಾಯಿತು. ಉಳಿದ ಹಣಕ್ಕಾಗಿ ೧೩ ತಾಲೂಕುಗಳನ್ನು ಮರಾಠರಿಗೆ ವಹಿಸಿಕೊಡಲಾಯಿತು. ಇಂತಹ ಸಂದರ್ಭದಲ್ಲಿಯೇ ಸೈನಿಕರು ನಂಜರಾಜಯ್ಯನ ಮನೆ ಮೂಂದೆ ಧರಣಿ ಹೂಡಿದರು. ಪರಿಸ್ಥಿತಿಯು ತೀರ ಹದಗೆಟ್ಟಿರುವುದನ್ನು ಗಮನಿಸಿದ ಹೈದರ ಆಲಿ ಸತ್ಯಮಂಗಲಕ್ಕೆ ಹೋಗಿ ದೇವರಾಜಯ್ಯನ ಮನಹೋಲಿಸಿ ಇಬ್ಬರು ಸಹೋದರರನ್ನು ಒಂದುಗೂಡಿಸಿದನು.[೬೨] ನಂಜರಾಜಯ್ಯನು ಹೈದರನಿಗೆ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಸರಿಪಡಿಸುವಂತೆ ಸಲಹೆ ನೀಡಿದ. ಹೈದರನು ರಾಜ್ಯದ ಆಸ್ತಿಪಾಸ್ತಿಗಳನ್ನು ಮಾರಿ ಕೆಲವು ಉಗ್ರಕ್ರಮಗಳನ್ನು ಕೈಗೊಂಡು ಸೈನಿಕರಿಗೆ ಸಂಬಳವನ್ನು ನೀಡಿದನು. ಈ ಪರಿಸ್ಥಿತಿಯು ಹೈದರ ಆಲಿಯು ಮೈಸೂರು ರಾಜ್ಯದಲ್ಲಿ ಮತ್ತಷ್ಟು ಬಲಿಷ್ಠವಾಗುವಂತೆ ಮಾಡಿತು. ಹೈದರನಿಗೆ ಕೊಟ್ಟ ಜಾಗೀರುಗಳಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಮತ್ತಷ್ಟು ದುರ್ಬಲವಾಯಿತು. ನಂಜರಾಜಯ್ಯನ ಮೇಲೆ ಸೇಡು ತೀರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ಕೃಷ್ಣರಾಜ ಒಡೆಯರ್ ಈ ಸಮಯವನ್ನು ಉಪಯೋಗಿಸಿಕೊಂಡು ಸೈನಿಕರು ದಳವಾಯಿ ನಂಜರಾಜಯ್ಯನ ಮನೆಯ ಮುಂದೆ ಧರಣಿ ಹೂಡುವಂತೆ ಪ್ರೇರೇಪಿಸಿದರು. ಪರಿಸ್ಥಿತಿಯು ಕೈಮೀರಿತ್ತೆಂಬುದನ್ನು ಅರಿತ ನಂಜರಾಜಯ್ಯ ತಾನು ನಿವೃತ್ತನಾಗುವ ನಿರ್ಧಾರವನ್ನು ಪ್ರಕಟಿಸಿದರು. ಈ ಸಂದರ್ಭದಲ್ಲಿ ಹೈದರ್‌ನು ನಂಜರಾಜಯ್ಯನ ಜೊತೆ ಸಂಬಂಧವನ್ನು ಪೂರ್ಣವಾಗಿ ಕಡಿದು ಹಾಕಬೇಕೆಂದು ಕೃಷ್ಣರಾಜ ಒಡೆಯರ ಒತ್ತಾಯ ಮಾಡಿದರು. ಈ ಬಿಕ್ಕಟ್ಟಿನ ಸಂಪೂರ್ಣ ಲಾಭವನ್ನು ಹೈದಾರ ಆಲಿ ಪಡೆದು ಕೊಂಡನು. ಆದರೆ ನಷ್ಟವಾಗಿದ್ದು ಮೈಸೂರು ಸಂಸ್ಥಾನಕ್ಕೆ, ಅಧಿಕಾರದಿಂದ ಕೆಳಗಿಳಿದ ನಂಜರಾಜಯ್ಯನಿಗೆ ಜೀವನ ನಿರ್ವಹಣೆಗಾಗಿ ಮೂರು ಲಕ್ಷ ಪಗೋಡಗಳ ಬೆಲೆಯುಳ್ಳ ಜಾಗೀರನ್ನು ಕೊಡಲಾಯಿತು.[೬೩]

ನಂಜರಾಜಯ್ಯನು ಮೈಸೂರಿನಲ್ಲಿ ನೆಲೆಸಿದಾಗ ಅವನು ಮತ್ತೆ ಪ್ರಬಲನಾಗಬಹುದೆಂಬ ಭಯದಿಂದ ಜಾಗೀರನ್ನು ಮೂರನೆಯ ಭಾಗದಷ್ಟು ಇಳಿಸಲಾಯಿತು. ನಂಜರಾಜಯ್ಯನು ಮೈಸೂರನ್ನು ಬಿಟ್ಟು ಹೋಗದೆ ಇದ್ದಾಗ ಹೈದರನ ಸೈನ್ಯ ನಂಜರಾಜಯ್ಯನ ಮೇಲೆ ದಾಳಿ ಮಾಡಿತು ನಂಜರಾಜಯ್ಯನ ಬೆಂಬಲಕ್ಕೆ ಬದ್ಧವಾಗಿದ್ದ ಪೋರ್ಚುಗೀಸ್ ಅಧಿಕಾರಿ ಬೆಂಬೋಡಿ ಕಂಪೋಸ್ ದ್ರೋಹ ಬಗೆದು ಹೈದರನ ಕಡೆ ಸೇರಿದ. ಇದರಿಂದ ನಿಸ್ಸಾಯಕನಾಗಿ ನಂಜರಾಜಯ್ಯನು ಮೈಸೂರನ್ನು ಬಿಟ್ಟು ಕೋಣನೂರಿಗೆ ಹೋಗಿ

ನೆಲೆಸಿದನು. ಇಷ್ಟಾದರೂ ಸಹ ನಂಜರಾಜಯ್ಯ ಪ್ರತಿಷ್ಠೆ ಪ್ರಭಾವ ಕುಗ್ಗಿರಲಿಲ್ಲ. ಅದರೂ ಸಹ ಹೈದರನು ಸಂಪೂರ್ಣ ಅಧಿಕಾರವನ್ನು ತಾನೇ ಚಲಾಯಿಸಲು ಆರಂಭಿಸಿದನು. ಇದೇ ವೇಳೆಯಲ್ಲಿ ದೇವರಾಜಯ್ಯನು ಮರಣ ಹೊಂದಿದನು. ಇದು ನಂಜರಾಜಯ್ಯನಿಗೆ ಬಾರಿ ಹೊಡೆತವನ್ನು ನೀಡಿತು ಮತ್ತು ಅವನು ತನ್ನ ಎಲ್ಲಾ ಶಕ್ತಿಗಳನ್ನು ಕಳೆದುಕೊಂಡು ಹೈದರನು ಹೇಳಿದ ಹಾಗೆ ಕೇಳುವ ಸ್ಥಿತಿಗೆ ತಲುಪಿದನು. ದಕ್ಷಿಣ ಭಾರತದ ಇತಿಹಾಸವನ್ನು ಅಭ್ಯಾಸ ಮಾಡುವವರಿಗೆ ದಳವಾಯಿ ಸೋದರರ ಪಾತ್ರ ಅಲ್ಲಿ ಸರಿಯಾಗಿ ಚಿತ್ರಿತವಾಗಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಅವರ ಸೋಲುಗಳಿಂದ ಅವರ ಕೊಡುಗೆಯನ್ನು ತೀರ್ಮಾನಿಸುವುದು ಸಮಂಜಸವಾಗಲಾರದು.

ಹಿಂದೂಸ್ಥಾನದಲ್ಲಿ ಮೈಸೂರು ಮಹಾಶಕ್ತಿಗಳು ಪ್ರಾಭಲ್ಯಕ್ಕಾಗಿ ಸೆಣಸಾಟ ನಡೆಸುತ್ತಿದ್ದ ಕಾಲದಲ್ಲಿ ಇವರು ಅಧಿಕಾರದಲ್ಲಿದ್ದರು ಎಂಬುದನ್ನು ನೆನಪಿನಲ್ಲಿಡಬೇಕು. ಮೈಸೂರಿಗೆ ಮಹತ್ವದ ಸ್ಥಾನವನ್ನು ಒದಗಿಸಿಕೊಟ್ಟ ಕೀರ್ತಿ ದಳವಾಯಿಗಳದು. ಇವರು ರಾಜಕೀಯ ಚದುರಂಗದಾಟದಲ್ಲಿ ಒಮ್ಮೆ ಗೆದ್ದರೆ ಒಮ್ಮೆ ಸೋತರು. ದಳವಾಯಿಗಳ ಯುಗ ಭಾರತದ ಇತಿಹಾಸದಲ್ಲಿ ಒಂದು ಪರ್ವ ಕಾಲ ಇದನ್ನು ಮಧ್ಯಯುಗ ಮತ್ತು ಆಧುನಿಕ ಯುಗಗಳ ಸಂಧಿಕಾಲ ಎಂದು ಕರೆಯಬಹುದು.[೬೪] ಮೈಸೂರಿನಲ್ಲಿ ಆಧುನಿಕ ಯುಗದ ಆರಂಭ ಒಂದು ರೀತಿಯಲ್ಲಿ ದಳವಾಯಿಗಳ ಕಾಲದಲ್ಲಿ ನಡೆಯಿತೆಂದು ಹೇಳಬಹುದು. ಮೈಸೂರಿನ ರಾಜಕೀಯದಲ್ಲಿ ಉಂಟಾಗಿದ್ದ ಶೂನ್ಯವನ್ನು ತುಂಬಿದ ದಳವಾಯಿ ಸಹೋದರರು ಕೇವಲ ಅವರ ನೀತಿಗೆ ಅಂಟಿಕೊಂಡಿರಲಿಲ್ಲ. ಎರಡು ರಾಜ್ಯಗಳ ಆಳ್ವಿಕೆಯ ಅನುಭವ ಹೊಂದಿದ್ದ ಇವರು ಮೈಸೂರಿನ ಸಂಸ್ಥಾನದ ರಾಜಕೀಯ ಭೂಪಟವನ್ನೆ ಬದಲಾಯಿಸಿದರು. ಇವರು ಅನುಭವಿ ರಾಜಕಾರಣಿಗಳು, ನುರಿತ ಯೋಧರು, ಆರ್ಥಿಕ ರಾಜಕೀಯ ಸುಧಾರಕರೂ ಪ್ರಬುದ್ಧ ಆಡಳಿತಗಾರರು ಆಗಿದ್ದರು. ಇವರು ರಾಜ್ಯದಲ್ಲಿದ್ದ ಊಳಿಗಮಾನ್ಯ ಪದ್ಧತಿಯ ಹಲವಾರು ನ್ಯೂನ್ಯತೆಗಳನ್ನು ನಿರ್ಮೂಲಗೊಳಿಸಿ ವ್ಯವಸ್ಥಿತವಾದ ಆಡಳಿತ ವ್ಯವಸ್ಥೆಯನ್ನು ರೂಪಿಸಿದರು.

ಇವರ ಸೈನಿಕ ಸಾಧನೆಗಳನ್ನು ಕುರಿತು ಪ್ರತ್ಯೇಕವಾದ ಅಧ್ಯಯನ ನಡೆಸಬಹುದಾಗಿದೆ. ಅಂದಿನ ಅತ್ಯಂತ ಪ್ರಬಲ ಶಕ್ತಿಯಾದ ಮೊಘಲರನ್ನು ಮರಾಠರನ್ನು ಸೋಲಿಸಿ ಹಿಮ್ಮೆಟಿಸಿದ ಇವರ ಸಾಧನೆ ಸಾಮಾನ್ಯವಾದುದಲ್ಲ ಬಿಲ್ಲು ಬಾಣಗಳಿಲ್ಲದ, ಆಧುನಿಕ ತುಪಾಕಿ ಪರಂಗಿಗಳ ಬಳಕೆಯಲ್ಲೂ ನಿಪುಣರಾಗಿದ್ದು ಹಲವಾರು ಕಾಳಗಗಳಿಂದ ಸ್ಪಷ್ಟವಾಗುತ್ತಿದೆ. ಈ ಸಹೋದರರ ಸೈನಿಕ ಕಾರ್ಯಚರಣೆಯಿಂದ ಹೈದರ ಅನುಭವ ಸಂಪಾದಿಸಿದನೆಂಬ ವಿಷಯ ಅವರ ಶೌರ್ಯ ಪರಕ್ರಮಗಳನ್ನು ಸೂಚಿಸುತ್ತದೆ. ಮೈಸೂರು ರಾಜ್ಯವನ್ನು ಎಲ್ಲಾ ದಿಕ್ಕುಗಳಲ್ಲಿಯೂ ಅದರಲ್ಲೂ ಮುಖ್ಯವಾಗಿ ದಕ್ಷಿಣದಲ್ಲಿ ವಿಸ್ತರಿಸಿದ ಕೀರ್ತಿ ಈ ಸಹೋದರರಿಗೆ ಸಲ್ಲುತ್ತದೆ.[೬೫] ರಾಜ್ಯವು ವಿಸ್ತಾರವಾದಂತೆ ರಾಜ್ಯದ ಆದಾಯವು ಹೆಚ್ಚಾಗುತ್ತ ಹೋಯಿತು. ಆದರೆ ಅನಿವಾರ್ಯವಾದ ಯುದ್ಧಗಳಿಂದ ರಾಜ್ಯದ ಬೊಕ್ಕಸ ಬರಿದಾಗುತ್ತ ಹೋಗಿದ್ದು ದುರದೃಷ್ಟಕರವಾದ ವಿಷಯ.

ಮೈಸೂರಿನ ವಿದೇಶಾಂಗ ನೀತಿಯನ್ನು ರೂಪಿಸುವಲ್ಲಿ ಇವರು ಮಹತ್ವದ ಪಾತ್ರವಹಿಸಿದ್ದರು. ಇದರ ಪ್ರಯೋಜನ ಮುಂದೆ ಹೈದರನ ಕಾಲದಲ್ಲಿ ಗೋಚರವಾಗಿದ್ದು ಎಲ್ಲಾರಿಗೂ ತಿಳಿದ ವಿಷಯ.

ಹೀಗೆ ಎಲ್ಲಾ ರೀತಿಯಲ್ಲೂ ಸಮರ್ಥರೂ, ಪ್ರತಿಬಾನ್ವಿತರೂ, ದೇಶ ಭಕ್ತರೂ ಆಗಿದ್ದ ದಳವಾಯಿಗಳು ಕುಟಿಲೋಪಾಯ, ವಂಚನೆ, ದ್ರೋಹ, ಪಿತೂರಿ, ಸಂಚುಗಳನ್ನು ನಡೆಸದೆ ಹೋದರೂ, ಹಿಂದಿನ ಮೌಲ್ಯಗಳಿಗೆ ಕಟ್ಟುಬಿದ್ದುದೂ ಅವರ ಸಾಧನೆಗಳಿಗೆ ಮಿತಿಯನ್ನು ಹಾಕಿದಂತಾಯಿತು. ಹೈದರನ ಸಮಯ ಪ್ರಜ್ಞೆ, ಸಾಹಸ, ಪರಿಸ್ಥಿತಿಯ ಅರಿವು ಎಲ್ಲಕ್ಕೂ ಮಿಗಿಲಾದ ಅದೃಷ್ಟವಿಲ್ಲದಿದ್ದರಿಂದ ದಳವಾಯಿಗಳ ಆಳ್ವಿಕೆ ಅಷ್ಟು ಯಶಸ್ವಿಯಾಗದೆ ಹೋಯಿತು. ಯೋರೋಪಿಯನ್ನರ ಶ್ರೇಷ್ಠ ರಾಜತಂತ್ರಿಕತೆ ಅವರ ಆಧುನಿಕ ಶಸ್ತ್ರಾಸ್ತ್ರಗಳ ಬಳಕೆಯ ಮುಂದೆ ದಳವಾಯಿಗಳು ತಮ್ಮ ಸಾಮರ್ಥ್ಯವನ್ನು ಮೆರೆಯಲಾಗಲಿಲ್ಲ. ಹಾಗಿದ್ದರೂ ರಾಜಕೀಯ, ಸೈನಿಕ, ಸಾಹಿತ್ಯಕ, ವ್ಯವಸಾಯ, ವ್ಯಾಪಾರ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅವರ ಕೊಡುಗೆ, ಮೈಸೂರಿನ ಇತಿಹಾಸದಲ್ಲಿ ಅವರಿಗೆ ಮಹತ್ವದ ಸ್ಥಾನವನ್ನು ದೊರಕುವಂತೆ ಮಾಡಿದೆ.

೩.೨. ಆಡಳಿತ ಪದ್ಧತಿ

ಸಮಾಜದ ರಾಜಕೀಯ ಸಂಘಟನೆಯೇ ರಾಜ್ಯ. ಪ್ರಧಾನವಾಗಿ ಅದು ಆರ್ಥಿಕ ಮತ್ತು ಭೌದ್ಧಿಕ ಪ್ರಾಭಲ್ಯಗಳನ್ನು ಪಡೆದುಕೊಂಡಿದ್ದ ವರ್ಗಗಳ ಅಧಿಕಾರಾಂಗವಾಗಿದ್ದು ಸಾಮಾನ್ಯ ಜನತೆಯಿಂದ ಬೇರೆಯಾಗಿ ಅದು ಅವರ ಮೇಲೆ ನಿಂತಿತ್ತು. ದಂಡ ಮತ್ತು ಧರ್ಮ ಶಕ್ತಿ, ಅದರ ಪ್ರಧಾನ ಸಾಧಗಳಾಗಿದ್ದವು. ಹೆಚ್ಚಾಗಿ ಉನ್ನತ ವರ್ಗಗಳ ಹಿತಾಸಕ್ತಿಯ ರಕ್ಷಣೆಗೆ ಕಂಕಣ ಬದ್ಧವಾಗಿದ್ದ ರಾಜ್ಯಗಳು, ಗುಲಾಮ, ಒಡೆಯರು ಮತ್ತು ಸಾಮಂತ ರಾಜ್ಯಗಳ ಅಂಶಗಳನ್ನು ತನ್ನ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡಿದ್ದವು. ಇಂತಹ ಸಾಮಾನ್ಯ ಸ್ವರೂಪಗಳೆಲ್ಲ ಕಳಲೆ ಮತ್ತು ಮೈಸೂರು ಸಂಸ್ಥಾನದಲ್ಲಿ ಇದ್ದವು.

ಪ್ರಜಾಕ್ಷೇಮ, ಸಾಮಾಜಿಕ ಸ್ಥಿರತೆ ಮತ್ತು ರಕ್ಷಣೆಗಳಂತಹ ಧ್ಯೇಯಗಳನ್ನು ಹೊಂದಿದ್ದ ಕಳಲೆ ದಳವಾಯಿಗಳು, ಕೋಶ, ಬಲ ಮತ್ತು ಸರ್ಕಾರಕ್ಕೆ ಸಹಜವಾಗಿರುವ ಅನುದಾನ ಶಕ್ತಿಯ ಬಳಕೆಯಿಂದ ಅವುಗಳನ್ನು ಸಾಧಿಸಲು ಪ್ರಯತ್ನಿಸಿದರು. ಕಳಲೆ ದಳವಾಯಿಗಳು ತಮ್ಮದೇ ಆದ ಪ್ರತ್ಯೇಕ ರಾಜ್ಯ ಘಟಕವನ್ನು ಹೊಂದಿದ್ದರೂ ಸಹ ಶ್ರೀರಂಗಪಟ್ಟಣವನ್ನು ಕೇಂದ್ರವಾಗಿಟ್ಟುಕೊಂಡು ಆಳುತ್ತಿದ್ದರು. ಮೈಸೂರು ಒಡೆಯರ ಆಡಳಿತ ವ್ಯವಸ್ಥೆಯು ಬಾಹ್ಯ ಅಂಗವಾಗಿದ್ದರು ಸಪ್ತಾಂಗಗಳಲ್ಲಿ ಬಹು ಮುಖ್ಯ ಅಂಗಗಳಾದ ಬಲ ಮತ್ತು ಕೋಶ ಇವರ ವಶದಲ್ಲಿತ್ತು. ರಾಜರು ದುರ್ಬಲರಾಗಿದ್ದ ಸಂದರ್ಭದಲ್ಲಿ ಮೈಸೂರಿನ ಆಡಳಿತದಲ್ಲಿ ಇವರದೆ ಮೇಲುಗೈ, ದಳವಾಯಿಗಳಾಗಿದ್ದ ದೇವರಾಜಯ್ಯ ಮತ್ತು

ನಂಜರಾಜಯ್ಯರ ಕಾಲಕ್ಕೆ ಕಳಲೆಯ ಮನೆತನದ ಅಧಿಕಾರ ಔನ್ನತ್ಯವನ್ನು ಪಡೆದುಕೊಂಡಿತ್ತು. ೧೭೦೪ರಲ್ಲಿ ಮೈಸೂರು ರಾಜ್ಯ ೧೫,೦೦೦ ಚದರ ಮೈಲಿಗಳಷ್ಟಿದ್ದು ಅದರ ವಾರ್ಷಿಕ ಆದಾಯ ೫೦ ಲಕ್ಷ ರೂಪಾಯಿಗಳೆಂದು ಒಂದು ಬ್ರಿಟಿಷ್ ದಾಖಲೆ ತಿಳಿಸುತ್ತದೆ.[೬೬]

ಮೈಸೂರು ರಾಜ್ಯದ ಆಡಳಿತ ವ್ಯವಸ್ಥೆಯ ಪ್ರಧಾನ ಸ್ವರೂಪಗಳಲ್ಲಿ ಪ್ರಮುಖವಾದದ್ದು ಅದರ ದ್ವಂದ್ವ ರೀತಿಯ ನಿಯಂತ್ರಣ ಮೈಸೂರು ರಾಜ್ಯದ ಪರಮಾಧಿಕಾರ ಎರಡು ಕೇಂದ್ರಗಳಲ್ಲಿ ಹಂಚಿ ಹೋಗಿತ್ತು. ಒಂದು ಶ್ರೀರಂಗಪಟ್ಟಣದಲ್ಲಿ ಇನ್ನೊಂದು ಕಳಲೆಯಲ್ಲಿ. ಒಡೆಯ ಅಥವಾ ರಾಜ ಶ್ರೀರಂಗಪಟ್ಟಣದಲ್ಲಿ ದಳವಾಯಿ ಸರ್ವಾಧಿಕಾರಿ ಕಳಲೆಯಲ್ಲಿ.

ಕಳಲೆಯ ಮನತನದ ದಳವಾಯಿಗಳು ಪ್ರಬಲರಾಗಿದ್ದು ಹದಿನೆಂಟನೆಯ ಶತಮಾನಕ್ಕೂ ಬಹಳ ಮುಂಚೆಯೇ, 'ದಳವಾಯಿ' ಎಂಬ ಅಧಿಕಾರ ಸ್ಥಾನ ಮೈಸೂರು ಆಡಳಿತ ವ್ಯವಸ್ಥೆಯಲ್ಲಿ ನಡೆದುಕೊಂಡು ಬಂದಿತ್ತು. ಪ್ರಪ್ರಥಮ ಬಾರಿಗೆ ಸೈನ್ಯದ ಕಾರ್ಯಚರಣೆಗಾಗಿ ದಳವಾಯಿ ಪದ್ಧತಿಯನ್ನು ಜಾರಿಗೆ ತಂದವರು ಮೊದನೆಯ ರಾಜ ಒಡೆಯರ್ (೧೫೫೨-೧೬೧೭). ಇವರ ನಂತರ ಐದನೆಯ ಚಾಮರಾಜ ಒಡೆಯರ್ (೧೬೧೭-೧೬೩೭) ಮತ್ತು ಎರಡನೇಯ ರಾಜ ಒಡೆಯರು(೧೬೩೭-೧೬೩೮)ರವರ ಕಾಲಕ್ಕೆ ಅರಸೊತ್ತಿಗೆಯ ಮೇಲೆ ದಳವಾಯಿಗಳ ಪ್ರಭಲ್ಯ ಅಧಿಕಗೊಳ್ಳುತ್ತಾ ಬಂದಿತು.[೬೭]

ಈ ರೀತಿಯ ದ್ವಂದ್ವ ನಿಯಂತ್ರಣಕ್ಕೆ ಒಳಪಟ್ಟ ಮೈಸೂರಿನ ಆಡಳಿತ ವ್ಯವಸ್ಥೆಯಲ್ಲಿ ಅಧಿಕಾರದ ಹಂಚಿಕೆಗಿಂತ ಒಡೆಯ ಮತ್ತು ದಳವಾಯಿಗಳ ನಡುವೆ ಪೈಪೋಟಿ, ಮತ್ಸರ, ಒಳಸಂಚು ಮತ್ತು ಪ್ರತಿಸ್ಪರ್ಧೆಗಳು ಹೆಚ್ಚಾಗುವಂತಾಗಿ ರಾಜ್ಯದ ವ್ಯವಹಾರಗಳ ಮೇಲೆ ಅನೇಕ ರೀತಿಯ ಪರಿಣಾಮಗಳನ್ನು ಬೀರಿದವು. ಇಂತಹ ಪರಿಸ್ಥಿತಿಯು ಒಡೆಯ ದುರ್ಬಲನಾಗಿದ್ದಾಗ ಉಂಟಾಗುತ್ತಿತ್ತು. ಈ ರೀತಿಯ ಪರಿಸ್ಥಿತಿಯ ನಿರ್ಮಾಣವಾದದ್ದಕ್ಕೆ ಪ್ರೇರಕವಾದ ಕೆಲವು ಉದಾಹರಣೆಗಳಿವೆ.

ಒಂದನೆಯದಾಗಿ ಆಡಳಿತ ವ್ಯವಸ್ಥೆಯಲ್ಲಿ ಮುಖ್ಯನಾಗಿದ್ದ ಪ್ರಧಾನಿ ಅಥವಾ ಅಮಾತ್ಯ ಮತ್ತು ದಳವಾಯಿ ಇಬ್ಬರು ಸೇರಿಕೊಂಡು ರಾಜನ ನಿಯಂತ್ರಣವನ್ನು ಮಾಡಿದ್ದ ಪ್ರಸಂಗವೂ ಇದ್ದಿತು. ಎರಡನೆ ಕಂಠೀರವ ನರಸರಾಜನ ಒಡೆಯರ ಕಾಲದಲ್ಲಿ ಪ್ರಧಾನಿ ತಿರುಮಲಯ್ಯ ಮತ್ತು ದಳವಾಯಿ ಕಾಂತರಾಜಯ್ಯ ಪ್ರಬಲರಾಗಿದ್ದು, ಆಡಳಿತದಲ್ಲಿ ಒಡೆಯನ ಪಾತ್ರ ಮಸುಕಾಗಿತ್ತು.[೬೮]

ಎರಡನೆಯದಾಗಿ 'ಒಡೆಯ' ಅಂಗವಿಕಲನಾಗಿದ್ದ ಸಂದರ್ಭದಲ್ಲಿ ದಳವಾಯಿಗಳು ಆಡಳಿತವನ್ನು ತಮ್ಮ ಅತೋಟಿಗೆ ತೆಗೆದುಕೊಳ್ಳುತ್ತಿದ್ದರು. ಎರಡನೆ ಕಂಠೀರವ ನರಸರಾಜ ಒಡೆಯರು ಮೂಕರಾಗಿದ್ದರಿಂದ ಕಳಲೆ ದಳವಾಯಿ ಮನೆತನದ ಕಾಂತರಾಜಯ್ಯನದೇ ಆಡಳಿತದಲ್ಲಿ ಮೇಲುಗೈಯಾಗಿತ್ತು.

ಮೂರನೆಯದಾಗಿ ದಳವಾಯಿ ಪ್ರಭಾವ ಹೆಚ್ಚಿಸಿಕೊಳ್ಳಲು ಅನುಸರಿಸುತ್ತಿದ್ದ ಮಾರ್ಗವೆಂದರೆ ಒಡೆಯನಿಗೆ ತಮ್ಮ ವಂಶದ ಹೆಣ್ಣು ಮಕ್ಕಳನ್ನು ಕೊಟ್ಟು ವಿವಾಹ ಮಾಡುವುದರೊಂದಿಗೆ ಉತ್ತಮ ಬಾಂಧವ್ಯವನ್ನು ಸಹ ಏರ್ಪಡಿಸಿಕೊಳ್ಳುತ್ತಿದ್ದರು. ದಳವಾಯಿ ಕಾಂತರಾಜಯ್ಯನು ತನ್ನ ಮಗಳನ್ನು ಮೂಕರಸು ಕಂಠೀರವ ನರಸರಾಜ ಒಡೆಯರಿಗೆ ವಿವಾಹ ಮಾಡಿಕೊಡುವುದರೊಂದಿಗೆ ತನ್ನ ಪ್ರತಿಷ್ಠೆ ಗೌರವವನ್ನು ಹೆಚ್ಚಿಸಿಕೊಂಡಿದ್ದನು.

ನಾಲ್ಕನೆಯದಾಗಿ 'ಒಡೆಯ' ಅಪ್ರಾಪ್ತ ವಯಸ್ಸಿಗೆ ಸಿಂಹಾಸನಕ್ಕೆ ಬಂದರೆ ದಳವಾಯಿಯದೇ ದರ್ಬಾರು. ಅಂತೆಯೇ ಒಡೆಯ ಪ್ರಾಪ್ತ ವಯಸ್ಸಿಗೆ ಬಂದು ಸ್ವತಂತ್ರನಂತೆ ಆಡಳಿತ ನಡೆಸಲು ಪ್ರಯತ್ನಿಸಿದರೆ ಒಡೆಯ ಮತ್ತು ದಳವಾಯಿಗಳ ನಡುವೆ ಆಡಳಿತ ಕ್ಷೇತ್ರದಲ್ಲಿ ಘರ್ಷಣೆಗಳು ಉಂಟಾಗುತ್ತಿದ್ದವು. ಇದನ್ನು ಪುಷ್ಟಿಕರಿಸಲು ಉದಾಹರಣೆಗಳನ್ನು ನೀಡಬಹುದು.

ಐದನೆಯ ಚಾಮರಾಜ ಒಡೆಯರ್ (೧೬೭೭-೮೭) ಇವರ ಕಾಲದಲ್ಲಿ ಬೆಟ್ಟದ ಅರಸು ಅಥವಾ ಚಾಮಪ್ಪ ಎಂಬುವನು ದಳವಾಯಿಯಾಗಿದ್ದನು. ಒಡೆಯನು ೧೮ನೆ ವಯಸ್ಸಿಗೆ ಬರುವವರೆಗೆ ದಳವಾಯಿ ಆಡಳಿತದಲ್ಲಿ ಸರ್ವತಂತ್ರ ಸ್ವತಂತ್ರನಂತೆ ವರ್ತಿಸುತ್ತಿದ್ದ. ಒಡೆಯನು ಪ್ರಾಪ್ತವಯಸ್ಸಿಗೆ ಬಂದ ತರುವಾಯ ದಳವಾಯಿ ಚಾಮಪ್ಪ ಮತ್ತು ಒಡೆಯನ ನಡುವೆ ವೈಮನಸ್ಸೆ ಉಂಟಾಯಿತು. ಒಡೆಯನು ದಳವಾಯಿಯ ಹಸ್ತಕ್ಷೇಪವನ್ನು ಸಹಿಸದಾದನು. ಇದನ್ನು ಗಮನಿಸಿದ ಚಾಮಪ್ಪ ಒಡೆಯನನ್ನು ಕೊಲ್ಲಲು ಪಿತೂರಿ ನಡೆಸಿದನು. ಆದರೆ ಆದನ್ನು ತಿಳಿದ ಒಡೆಯನು ದಳವಾಯಿ ಚಾಮಪ್ಪನನ್ನು ಮರನದಂಡನೆಗೆ ಗುರಿಪಡಿಸಿದನು.[೮]

ಸಪ್ತಾಂಗದಲ್ಲಿ ಕೋಶದ ಜವಾಬ್ದಾರಿಯನ್ನು ಹೊತ್ತ ದಳವಾಯಿಗಳು ಬೊಕ್ಕಸ ಕಾರಣಾಂತರದಿಂದ ಬರಿದಾದಾಗ ಅದನ್ನು ತುಂಬಲು ಸಾಧ್ಯವಾದಷ್ಟು ಪ್ರಯತ್ನಿಸುತ್ತಿದ್ದರು. ಮೈಸೂರು ರಾಜ್ಯವು ಶ್ರೀಮಂತಿಕೆಗೆ ದೇಶದಲ್ಲೇ ಪ್ರಸಿದ್ಧಿಯಾಗಿದ್ದಿತು. ಅದರ ಶ್ರೀಮಂತಿಕೆಯನ್ನು ಲೂಟಿ ಹೊಡೆಯಲು ಮೊಘಲರು ಮತ್ತು ಮರಾಠರು ಪ್ರತಿಸ್ಪರ್ಧೆಯನ್ನು ನಡೆಸುತ್ತಿದ್ದರು. ಎರಡನೆ ಕಂಠೀರವ ನರಸರಾಜ ಒಡೆಯರ್ (೧೭೦೪-೧೭೧೩)ರ ಕಾಲದಲ್ಲಿ ದಳವಾಯಿ ಕಳಲೆ ಕಾಂತರಾಜಯ್ಯನು ಮೊಘಲ ಚಕ್ರವರ್ತಿ ಔರಂಗಜೇಬನ ಸೇನೆ ಶ್ರೀರಂಗಪಟ್ಟಣವನ್ನು ಮುತ್ತಿ ಹಣ ಲೂಟಿ ಮಾಡಿದಾಗ ಆ ಹಣವನ್ನು ತುಂಬಲು ಚಿಕ್ಕಬಳ್ಳಾಪುರದ ಮೇಲೆ ಆಕ್ರಮಣ ಮಾಡಿದನು. ಹಾಗೆಯೇ ಮೊದಲನೆಯ ಕೃಷ್ಣರಾಜ ಒಡೆಯರ ಕಾಲದಲ್ಲಿ(೧೭೧೩-೧೭೩೮) ಬಾಲಾಘಾಟಿನ್‌ನ ಸಾದುತುಲ್ಲಾಖಾನ್ ಕಡಪ, ಕರ್ನೂಲ್ ನವಾಬರು, ಗುತ್ತಿಯ ಮರಾಠ ನಾಯಕ ಮತ್ತು ಶಿರಾದ ಅಮ್ಮರ್ ಖಾನ್ ಒಟ್ಟಾಗಿ ಶ್ರೀರಂಗಪಟ್ಟಣದ ಮೇಲೆ ಆಕ್ರಮಣ ಮಾಡಿದಾಗ ಒಡೆಯನು ಅವರಿಗೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟು ಕಳುಹಿಸಿದನು. ಮತ್ತೆ ಎರಡು ವರ್ಷಗಳ ನಂತರ ಇದೆ ಪುನರಾವರ್ತಿಯಾದಾಗ ಬರಿದಾದ ರಾಜ್ಯದ ಕೋಶವನ್ನು ತುಂಬಲು ೧೭೨೮ರಲ್ಲಿ

ದಳವಾಯಿ ದೇವರಾಜಯ್ಯನು ಮಾಗಡಿ ಕೆಂಪೇಗೌಡನು ಸಾವನದುರ್ಗದಲ್ಲಿ ಶೇಖರಿಸಿದ್ದ ಹಣವನ್ನು ಲೂಟಿ ಮಾಡಿದನು. ಹೀಗೆ ಅಂದಿನ ಆಡಳಿತ ವ್ಯವಸ್ಥೆಯಲ್ಲಿ ಹಣವನ್ನು ಕ್ರೋಢೀಕರಿಸಲು ಇತರರಂತೆ ದಳವಾಯಿಗಳು ಅನುಸರಿಸುತ್ತಿದ್ದ ಮಾರ್ಗ ಸ್ವಾರಸ್ಯವಾಗಿತ್ತು.

ಪ್ರಧಾನವಾಗಿ ಯೋಗ್ಯತೆಗೆ ಪುರಸ್ಕಾರ ಎಂಬುದು ದಳವಾಯಿಗಳ ಆಡಳಿತದ ಒಂದು ಸೂತ್ರವಾಗಿತ್ತು. ಧರ್ಮ ಮತ ಜಾತಿ ಮತ್ತು ಭಾಷೆಯಂತಹ ಸಂಕುಚಿತ ಅಂಶಗಳನ್ನು ಬಗೆಹರಿಸಲು ಸಾಧ್ಯವಿರುವ ಸಮರ್ಥ ವ್ಯಕ್ತಿಗಳನ್ನು ಆಯ್ಕೆ ಮಾಡುತ್ತಿದ್ದರು. ಆರನೆ ಚಾಮರಾಜ ಒಡೆಯರು ಅಧಿಕಾರಕ್ಕೆ ಬಂದ ಮೇಲೆ ಈ ಕಳಲೆ ದಳವಾಯಿಗಳಾದ ದೇವರಾಜಯ್ಯ ಮತ್ತು ನಂಜರಾಜಯ್ಯನವರು ಆಡಳಿತದಲ್ಲಿ ಪ್ರಭಲರಾಗಿದ್ದರು. ರಾಜ್ಯದ ಆಡಳಿತದ ಹಣಕಾಸಿನ ವ್ಯವಹಾರದ ಜೊತೆಗೆ ಅರಮನೆ ಆಡಳಿತ ಹಾಗೂ ರಾಜನಿಗೆ ಸೇರಿದ ಆದಾಯದ ಮೂಲಗಳ ಮೇಲೆ ಹಿಡಿತವನ್ನು ಸ್ಥಾಪಿಸಿಕೊಂಡಿದ್ದರು.

ಇದೇ ವೇಳೆಯಲ್ಲಿ ಚಾಮರಾಜ ಒಡೆಯರ ಪ್ರಬಲ್ಯವನ್ನು ಕಡಿಮೆ ಮಾಡಲು ದಳವಾಯಿಗಳು ಹಾಗೂ ಒಡೆಯನ ಸಾಕು ತಾಯಿಯು ಆಗಿದ್ದ ದೇಜಮ್ಮಣಿಗೆ ಸೂಚನೆ ನೀಡಿ ಅವಳಿಂದಲೇ ಅಧಿಕಾರ ಚಲಾಯಿಸಲು ವಾಗ್ದಾನ ಪಡೆಯುವ ಪ್ರಯತ್ನ ಮಾಡಿದರು. ಇದನ್ನು ಅರಿತ ಚಾಮರಾಜ ಒಡೆಯರು ೧೭೩೨ರಲ್ಲಿ ದಳವಾಯಿಗಳ ಅಧಿಕಾರವನ್ನು ಕಿತ್ತು ಹಾಕಿ ತನ್ನ ಆಪ್ತರನ್ನು ನೇಮಿಸಿಕೊಂಡು ಸ್ವತಂತ್ರವಾಗಿ ಆಳುವ ಪ್ರಯತ್ನ ಮಾಡಿದ. ಆದರೆ ಆಡಳಿತದ ಮೇಲೆ ಸಂಪೂರ್ಣ ಅತೋಟಿಯನ್ನು ಹೊಂದಿದ್ದ ಈ ದಳವಾಯಿಗಳು ಒಡೆಯನಿಗೆ ಸೆಡ್ಡು ಹೊಡೆದು ನಿಂತರು. ಅಲ್ಲದೆ ಒಡೆಯನ ಈ ನೀತಿಯಿಂದ ಅಲ್ಲಲ್ಲಿ ದಂಗೆಗಳು ಪ್ರಾರಂಭವಾದವು ಇದರಿಂದ ಚಾಮರಾಜ ಒಡೆಯರು ಅನಿವಾರ್ಯವಾಗಿ ದಳವಾಯಿಗಳನ್ನು ಮತ್ತೆ ಕರೆಸಿಕೊಂಡು ಅವರಿಗೆ ಆಡಳಿತ ಸೂತ್ರವನ್ನು ನೀಡಿದನು. ಈ ಒಂದು ಸುಸಮಯವನ್ನು ಸರಿಯಾಗಿ ಉಪಯೋಗಿಸಿಕೊಂಡ ದಳವಾಯಿ ಸಹೋದರರು ೧೭೩೪ರಲ್ಲಿ ರಾಜನನ್ನು ಅಧಿಕಾರದಿಂದ ಕಿತ್ತು ಹೊಗೆದು ರಾಜ ಹಾಗೂ ಅವನ ಕುಟುಂಬ ವರ್ಗದವರನ್ನು ಸೆರೆಯಲಿಟ್ಟರು. ದಳವಾಯಿಗಳು ಒಡೆಯನನ್ನು ನಿಯಂತ್ರಣದಲ್ಲಿಡಲು ತಮಗೆ ಅತ್ಯಂತ ನಂಬಿಕಸ್ಥ ಹಾಗೂ ನಿಷ್ಠೆಯಿಂದ ಇರುವಂತಹ ವ್ಯಕ್ತಿಯನ್ನೆ ಪ್ರಧಾನಿಯಾಗಿ ಆಡಳಿತದಲ್ಲಿ ನೇಮಿಸುತ್ತಿದ್ದರು.[೭೦] ಹೀಗೆ ಆಡಳಿ ವ್ಯವಸ್ಥೆಯಲ್ಲಿ ದಳವಾಯಿಯ ಸ್ಥಾನಮಾನಗಳು ಸಾಮಾನ್ಯವಾಗಿ ಏರುಪೇರುಗಳಿಂದ ಕೂಡಿದ್ದಿತು.

ಕಳಲೆ ದಳವಾಯಿಗಳು ಪ್ರಬುದ್ಧಮಾನಕ್ಕೆ ಬಂದದ್ದು ೧೮ನೇ ಶತಮಾನದಲ್ಲಿ. ಜಪಾನ್ ದೇಶದ ಊಳಿಗಮಾನ್ಯ ವ್ಯವಸ್ಥೆಯಲ್ಲೂ ಇಂತಹದ್ದೆ ವ್ಯವಸ್ಥೆ ಅಸ್ತಿತ್ವದಲ್ಲಿ ಇದ್ದದ್ದು ಕುತೂಹಲಕಾರಿಯದ ವಿಷಯವಾಗಿದೆ. ಜಪಾನ್‌ನಲ್ಲಿ ಅಂದು ಚಕ್ರವರ್ತಿ ನೆಪಮಾತ್ರಕ್ಕೆ ಸಾರ್ವಭೌಮ ಆದರೆ ಎಲ್ಲಾ ಆಡಳಿತ ನಡೆಯುತ್ತಿದ್ದುದು ಅವನ ಹೆಸರಿನಲ್ಲೆ. ಅವನು ವಾಸಮಾಡುತ್ತಿದ್ದುದು ಕೀಯಾಟ್ ನಗರದಲ್ಲಿ ಆದರೆ ಕಳೆಯ ದಳವಾಯಿಗಳಂತೆ ನಿಜವಾದ ಅಧಿಕಾರ ಇದ್ದುದು ಟೋಕೂಗಾಸವ ಮನೆತನದ 'ಶೋಗಾನ್

ಎಂಬ ಅಧಿಕಾರಸ್ಥ ಮುಖಂಡನಲ್ಲಿ. ಅವರ ಅಧಿಕಾರ ಕೇಂದ್ರ ಟೋಕಿಯಾ ಬಳಿಯ ಒಂದು ಸ್ಥಳದಲ್ಲಿ ಕೇಂದ್ರಿಕೃತವಾಗಿತ್ತು. ಕಳಲೆಯ ಮನೆತನದ ದಳವಾಯಿಗಳು ಸಹ ಜಪಾನಿನ ಶೋಗಾನ್ ರಂತೆ ಮೈಸೂರಿನ ಒಡೆಯರನ್ನು ಹದಿನೆಂಟನೆಯ ಶತಮಾನದಲ್ಲಿ ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದರು.

ಮೈಸೂರು ರಾಜ್ಯದ ವಿಸ್ತರಣೆಯಲ್ಲಿ ದಳವಾಯಿಗಳ ಪಾತ್ರ ಮಹತ್ವದಾಗಿತ್ತು ಅನೇಕ ವೇಳೆ ಇಂತಹ ವಿಸ್ತರಣೆಯ ಸಂದರ್ಭದಲ್ಲಿ ದಳವಾಯಿಗಳು ತಮ್ಮ ಪ್ರಾಣವನ್ನು ಒತ್ತೆ ಇಟ್ಟು ಹೋರಾಡಿ ವೀರ ಮರಣ ಹೊಂದಿದ ಉದಾಹರಣೆಗಳು ಇತಿಹಾಸ ಪುಟಗಳಲ್ಲಿ ದೊರೆಯುತ್ತದೆ. ಕಂಠೀರವ ನರಸರಾಜನ ಕಾಲದಲ್ಲಿ (೧೬೩೮-೫೯) ದಳವಾಯಿಯಾಗಿದ್ದ ನಂಜರಾಜಯ್ಯ ಎಂಬುವನು ತುರುವೆಕೆರೆಯ ಯುದ್ಧದಲ್ಲಿ ಬಿಜಾಪುರದ ಸೈನ್ಯದೊಡನೆ ಹೋರಾಡಿ ಸತ್ತನು.[೭೧] ಕ್ರಿ.ಶ.೧೬೨೬ರಲ್ಲಿ ಐದನೆ ಚಾಮರಾಜ ಒಡೆಯರ ಕಾಲದಲ್ಲಿ (೧೬೧೬-೩೭) ಇದ್ದ ಲಿಂಗಣ್ಣ ಎಂಬ ದಳವಾಯಿಯು ಚನ್ನಪಟ್ಟಣ ಕಾಳಗದಲ್ಲಿ ಮರಣ ಹೊಂದಿದನು. ಹೀಗೆ ಹಲವು ದಳವಾಯಿಗಳು ಕರ್ತವ್ಯ ನಿಷ್ಠೆಯಿಂದ ರಾಜ್ಯ ರಕ್ಷಣೆಗಾಗಿ ವೀರ ಮರಣವನ್ನು ಹೊಂದಿದ್ದಾರೆ.

ಸಮಾಜಕ್ಕೆ ರಕ್ಷಣೆ ಒದಗಿಸುವ ದೃಷ್ಟಿಯಿಂದ ಇವರು ಆಡಳಿತದ ಕಕ್ಷೆಯೊಳಗೆ ಬರುವ ಪ್ರಜೆಗಳು ತೆರಿಗೆಳನ್ನು ಕೊಡಬೇಕಾದುದು ಹಿಂದಿನಿಂದಲೂ ಎಲ್ಲರೂ ಒಪ್ಪಿಕೊಂಡು ಬಂದಿದ್ದ ಸೂತ್ರವಾಗಿತ್ತು. ಗ್ರಾಮಗಳ ಮೇಲೆ ಹಾಕುತ್ತಿದ್ದ ತೆರಿಗೆಗಳ ವಿಷಯ ಶಾಸನಗಳಲ್ಲಿ ಬರುತ್ತದೆ. ಹದಿನೆಂಟನೆಯ ಶತಮಾನದ ಪೂರ್ವಾರ್ಧದ ಒಂದು ಶಾಸನದಲ್ಲಿ ತೆರಿಗೆಯ ವಿವರಗಳನ್ನು ಸೂಚಿಸಲಾಗಿದೆ.[೭೨]

ತೆರಿಗೆ ಅಧಿಕಾರಿಯ ವಿಭಾಗವನ್ನು ಮಹಿದ ಪೈಕ ಎಂದು ಕರೆಯುತ್ತಿದ್ದರು.[೭೩] ರೆವಿನ್ಯೂ ಇಲಾಖೆಗೆ ಎರಡು ಹೆಸರುಗಳು ಉಲ್ಲೇಖವಾಗಿವೆ ಒಂದು ಅಠಾವಣೆ, ಎರಡು ವಿಚಾರದ ಚಾವಡಿ.[೭೪] ಅಠಾವಣೆಗೆ ಎಂಬುದು ಕೆಳಹಂತದ ರೆವಿನ್ಯೂ ಬಾಬ್ತುಗಳನ್ನು ನೋಡಿಕೊಳ್ಳುತ್ತಿದ್ದ ವಿಭಾಗವಾಗಿದೆ. ವಿಚಾರದ ಚಾವಡಿಯು ಶ್ರೀರಂಗಪಟ್ಟಣದಲ್ಲಿದ್ದ ಕೇಂದ್ರ ಇಲಾಖೆಯಾಗಿದ್ದಿತು.[೭೫] ವಿಚಾರದ ಚಾವಡಿಯಲ್ಲಿ ಕರಣಿಕರು ಕಂದಾಯದ ಆಡಳಿತಕ್ಕೆ ಸಂಬಂಧಪಟ್ಟ ವಿವರಗಳನ್ನು ಇಟ್ಟುಕೊಂಡಿದ್ದರು. ಗ್ರಾಮ ಶ್ಯಾನುಭೋಗನು ಆ ಕಾರ್ಯವನ್ನು ನಿರ್ವಹಿಸುತ್ತಿದ್ದನು. ಒಂದು ಶಾಸನದಲ್ಲಿ "ವಿಚಾರದ ಚಾವಡಿ ಕರಣಿಕ ವೆಂಕಟಕೃಷ್ಣಯ್ಯ ಮತ್ತು ಶ್ಯಾನುಭೋಗ ವೆಂಕಟರಮಣಯ್ಯ ಬರೆದು ಕೊಂಡ ಲೆಕ್ಕ"[೭೬] ಎಂಬ ಉಲ್ಲೇಖವಿದೆ. ಗ್ರಾಮವು ಕಂದಾಯ ವ್ಯವಸ್ಥೆಯ ಮೂಲ ಘಟಕವಾಗಿದ್ದು ದೊಡ್ಡ ದೊಡ್ಡ ಗ್ರಾಮಗಳಿಗೆ ಉಪಗ್ರಾಮಗಳು ಇರುತ್ತಿದ್ದವು. ದೊಡ್ಡ ಗ್ರಾಮಗಳನ್ನು ಮಾತೃಗ್ರಾಮಗಳೆಂದು ಕರೆಯುತ್ತಿದ್ದರು.

ಗ್ರಾಮವೊಂದರ ಭೌಗೋಳಿಕ ಅಸ್ತಿತ್ವವನ್ನು ಗುರುತಿಸುವ ಶಾಸನಗಳು ಈ ರೀತಿಯ ಉಲ್ಲೇಖಗಳನ್ನು ನೀಡುತ್ತವೆ.

೧. "ಪಟ್ಟಣದ ಹೋಬಳಿ ವಿಚಾರದ ಚಾವಡಿವಳಿತದ ಚನ್ನಪಟ್ಟಣದ ಸ್ಥಳದಲ್ಲಿದ್ದ ಮೈಲನಾಯಕ ಹಳ್ಳಿ.

೨. ಮೈಸೂರು ನಗರದ ಹೋಬಳಿ ವಿಚಾರ ಚಾವಡಿವಳಿತದ ತಾಯಾರು ಸ್ಥಳದಲ್ಲಿದ್ದ ಕಾಮಹಳ್ಳಿ.[೭೭]

ಭೂಹಿಡಿವಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ದಳವಾಯಿ ಆಡಳಿತ ವ್ಯವಸ್ಥೆಯಲ್ಲಿ ಭೂಮಿಗೆ ಸಂಬಂಧಿಸಿಸದ ವಿವರಗಳ ಮತ್ತು ಹಕ್ಕುಗಳ ಪ್ರಸ್ತಾಪ ಬಂದಾಗ ಆದಿ, ಕ್ರಯ, ಧಾನ ಪರಿವರ್ತನೆಗಳನ್ನೊಳಗೊಂಡ ವ್ಯವಹಾರ ಚತುಷ್ಟೆಯದ ವಿಷಯ ಬರುತ್ತದೆ.[೭೮] ಭೂ ಹಿಡುವಳಿಗೆ ವಾಮನ ಮುದ್ರೆ ಅಥವಾ ಲಿಂಗ ಮುದ್ರೆ, ಕಲ್ಲುಗಳನ್ನು ನೆಡುವ ಪ್ರಾಚೀನ ಪದ್ಧತಿಯಿದ್ದದ್ದು ೧೭೪೯ನೇ ಇಸವಿಯ ದೇವರಾಜಯ್ಯನ ಶಾಸನದಿಂದ ಗೊತ್ತಾಗುತ್ತದೆ.[೭೯] ದಳವಾಯಿಗಳು ನೀಡಿದ ದಾನಶಾಸನಗಳಿಂದ ದಾನ ನೀಡಿದ ಭೂಮಿಯನ್ನು ಸ್ಪಷ್ಟವಾಗಿ ಗುರುತಿಸುವಾಗ ಗ್ರಾಮಗಳಲ್ಲಿದ್ದ ವ್ಯಕ್ತಿಗಳು, ಒಡೆತನದ ಭೂ ಹಿಡುವಳಿಗಳನ್ನು ಪ್ರಸ್ತಾಪ ಮಾಡಲಾಗಿದೆ. ಒಂದು ಶಾಸನದಲ್ಲಿ ವ್ಯಕ್ತಿಗತ ಭೂಹಿಡುವಳಿಗಳೂ ಸಹ ಇದೆ. ಕೃಷಿ ಭೂಮಿಯನ್ನು ಅಳತೆ ಮಾಡಲು ಅಳತೆಗೋಲುಗಳನ್ನು ಬಳಸುತ್ತಿದ್ದ ವಿಷಯ ದಳವಾಯಿಗಳ ಕಾಲದ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಉದಾ. ೧. ಶಾಂತವೀರ ವಡೇರು ಮಾಡಿದ್ದ ಭೂಮಿ ಈ ಅಡುವಿಗೆ ತೆಂಕಲು ಆಡು ೧ಕ್ಕೆ ಸೆಲೆ ನಿಜಗೊಲು ೨೦೦. ೨. ಮಾದಬೋಯನ ಅಡಿ ೧ಕ್ಕೆ ೩೨ ಹೆಜ್ಜೆ ಕೂಲಿನಲ್ಲಿ ಸೆಲೆ ನಿಜಗೂಲು ೭೯೪ ಉಭ್ಯೈಕ ನಿಜಗೋಲು ೯೯೪.[೮೦]

ಇದರಿಂದ ೩೨ ಹೆಜ್ಜೆಯ ಕೊಲನ್ನು ಭೂಮಿ ಅಳೆಯಲು ಬಳಸುತ್ತಿದ್ದರು ಎಂಬುದು ಗೊತ್ತಾಗುತ್ತದೆ. ಹಾಗೆ ಅಳೆದು ಭೂಮಿಯ ಕಂದಾಯವನ್ನು ನಿಗಧಿಪಡಿಸಿ ಈ ಕೆಳಗಿನ ರೀತಿ ದಾಖಲೆಗಳಲ್ಲಿ ಬರೆಯುತ್ತಿದ್ದರು.

೧. ವಳಗೆರೆ ಅಡು ೧ಕ್ಕೆ ಕಂದಾಯ ಕಂಗು(ಕಂಠೀರಾಯ ಗುಳಿಗೆ ಚಿನ್ನದ ನಾಣ್ಯ)

೨. ವೀರಣ್ಣ ಆಡು ೧ಕ್ಕೆ ಕಂದಾಯ ಕಂಗು ೨೪

೩. ಇನ್ನದ ಆಡು ೧ಕ್ಕೆ ಕಂದಾಯ ಕಂಗು ೩೧[೮೧]

ಪ್ರತಿಯೊಬ್ಬ ರೈತನ ಭೂಮಿಯನ್ನು ಅಳೆದು ಕಂದಾಯ ಲೆಕ್ಕಚಾರ ಹಾಕಿ ಹಣದ ರೂಪದಲ್ಲಿ ಅದು ಎಷ್ಟೆಂದು ಸೂಚಿಸುತ್ತಿದ್ದರು. ಅಲ್ಲಿ ಆಡು ಎಂದರೆ ಹಿಡುವಳಿ ಎಂದು ಹೇಳಬಹುದು.

ಹಣದ ಅವಶ್ಯಕತೆ ಉಂಟಾದಾಗ ಸರ್ಕಾರವು ಹತೋಟಿಯಲ್ಲಿದ್ದ ಗ್ರಾಮಗಳನ್ನು ಪ್ರಜೆಗಳಿಗೆ ಮಾರುತ್ತಿತ್ತು. ಹದಿನೆಂಟನೆ ಶತಮಾನದಲ್ಲಿ ಮೈಸೂರು ಸರ್ಕಾರಕ್ಕೆ ರಾಜಕೀಯ ಮತ್ತು ಮಿಲಿಟರಿ ಕಾರಣಗಳಿಂದ ಹಣದ ಕೊರತೆ ಉಂಟಾಗಿತ್ತು. ಇಂತಹ ಸಮಯದಲ್ಲಿ ಗ್ರಾಮಗಳನ್ನು ಮಾರಾಟ ಮಾಡುವುದು ಒಂದು ಸಾಧನವಾಗಿತ್ತೆಂದೂ ತೋರುತ್ತದೆ. ಹಾಗೇ ಮಾರಾಟ ಮಾಡಿದಾಗ ಬೆಲೆಯನ್ನು

ನಿರ್ಧರಿಸುವಲು ಸಾಮಾನ್ಯವಾಗಿ ಮಾರಾಟವಾದ ಗ್ರಾಮದ ಒಟ್ಟು ತೆರಿಗೆಯ ಮೂಲದಿಂದ ಸರಕಾರಕ್ಕೆ ಬರಬಹುದಾದ ಹಣದ ಹತ್ತು ಪಟ್ಟು ಹಣವನ್ನು ನಿಗಧಿಪಡಿಸುತ್ತಿದ್ದರು. ರಾಜನ ಹೆಸರಿನಲ್ಲಿ ಇಂತಹ ಕಂದಾಯದ ಗ್ರಾಮಗಳ ಮಾರಾಟ ನಡೆಯುತ್ತಿತ್ತು. ದಳವಾಯಿ ನಂಜರಾಜಯ್ಯನ ಕಾಲದಲ್ಲಿ ಇಂತಹ ಮಾರಾಟದ ವಿವರಗಳನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ,

೧. ಕೊಂಡ ವಣ್ತಿ : ವೆಂಕಟರಾಮಯ್ಯ

ಗ್ರಾಮ : ಮೈಲನಾಯಕ ಹಳ್ಳಿ

ಉಪಗ್ರಾಮ : ಹೆರಯೂರ ಗ್ರಾಮ ೧

ಹೊಸಹಳ್ಳಿ ಗ್ರಾಮ ೧

ಒಲ್ಲುಪಟ್ಟಣದ ದೊಡ್ಡಿ ೧

ಕಟ್ಟೆ ೧

ಕಾಲುವೆ ೧

ಈ ಎಲ್ಲಾ ಗ್ರಾಮಗಳ ಒಟ್ಟು ತೆರಿಗೆಗಳಿಂದ ಬರುವ ಆದಾಯ ೫೩೦ ವರಾಹ ಹಣದಷ್ಟು. ಈ ಎಲ್ಲಾ ಗ್ರಾಮಗಳ ಕ್ರಯ ೫೩೦೦ ವರಾಹ ೫ ಹಣ. ಸರ್ಕಾರದ ಬೊಕ್ಕಸಕ್ಕೆ ಹಣ ಪಾವತಿಯಾದದ್ದು ವರ್ತಕ ವೀರ ಶೆಟ್ಟಿ ಎಂಬುವನ ಮುಖಾಂತರ.[೮]

ದಳವಾಯಿಗಳ ಕಾಲದ ತೆರಿಗೆ ಆಡಳಿತಕ್ಕೆ ಸಂಬಂಧಪಟ್ಟಂತೆ ಒಂದು ವಿಶಿಷ್ಟವಾದ ಬೆಳವಣಿಗೆಯನ್ನು ಇಲ್ಲಿ ಪ್ರಸ್ತಾಪಿಸಬಹುದು. ರಾಜಕೀಯ ಮತ್ತು ಹಣಕಾಸಿನ ಪರಿಸ್ಥಿತಿ ಹದಗೆಟ್ಟಿದ್ದಾಗ ಅದರಲ್ಲೂ ಪ್ರಮುಖವಾದ ೧೮ನೇ ಶತಮಾನದ ಪೂರ್ವಾರ್ಧದಲ್ಲಿ ನಜರಾನ ಎಂಬ ವಿಶಿಷ್ಟ ರೀತಿಯ ತೆರಿಗೆಯನ್ನು ಪ್ರಜಾವರ್ಗದ ಮೇಲೆ ಹಾಕಲಾಯಿತು. ಉದಾಹರಣೆಗೆ ೧೭೫೯ರ ಆರಂಭಕಾಲದಲ್ಲಿ ಮರಾಠರ ಆಕ್ರಮಣದಿಂದ ಅವರಿಗೆ ದೊಡ್ಡ ಮೊತ್ತದ ಹಣವನ್ನು ಕೊಡಲು ಬೊಕ್ಕಸದಲ್ಲಿ ಸಾಕಷ್ಟು ಹಣ ಇಲ್ಲದೆ ಇದುದರಿಂಧ ರಾಜ್ಯದ ಕೆಲವು ಜಿಲ್ಲೆಗಳನ್ನು ಮರಾಠರಿಗೆ ಬಿಟ್ಟುಕೊಡಲಾಗಿತ್ತು. ದಳವಾಯಿಗಳ ಆದೇಶದ ಮೇರೆಗೆ ಹೈದರಾಲಿಯು ಹಾಗೆ ಬಿಟ್ಟುಕೊಟ್ಟ ಜಿಲ್ಲೆಯ ಬದಲಿಗೆ ೩೨ ಲಕ್ಷ ರೂಪಾಯಿ ಮೊತ್ತದಷ್ಟು ಹಣವನ್ನು ಸಂಗ್ರಹಣ ಮಾಡಿದ್ದು ನಜರಾನ ಎಂದು ತೆರಿಗೆಯ ಮೂಲಕ. ನಜರಾನವನ್ನು ನೀಡಿದವರಲ್ಲಿ ರಾಜ್ಯದ ಎಲ್ಲಾ ಮುಖ್ಯ ಅಧಿಕಾರಿಗಳು ಇದ್ದರು. ಅಂದರೆ ಪ್ರತಿಯೊಬ್ಬ ಮುಖ್ಯ ಅಧಿಕಾರಿಯು ತನ್ನ ಅಂತಸ್ತು ಸಂಬಳಕ್ಕೆ ಅನುಗುಣವಾಗಿ ನಜರಾನದ ಲೆಕ್ಕಕ್ಕೆ ಹಣ ಪಾವತಿ ಮಾಡಬೇಕಾಯಿತು. ಜೊತೆಗೆ ದಳವಾಯಿ ಸರ್ಕಾರವು ಐಶ್ವರ್ಯವಂತ ಖಾಸಗಿ ಪ್ರಜೆಗಳಿಂದ ನಜರಾನವನ್ನು ವಸೂಲಿ ಮಾಡುತ್ತಿತ್ತು.

ಹೀಗೆ ಸಂಗ್ರಹವಾದ ಮೊತ್ತ ೧೬ ಲಕ್ಷ ರೂಪಾಯಿಗಳಾಗಿದ್ದವು. ಉಳಿದ ೧೬ ಲಕ್ಷ ರೂಪಾಯಿಗಳಿಗೆ ಹೈದರಾಲಿಯು ತಾನೆ ಜಾಮೀನು ನಿಂತನು. ಇದರಿಂದ ಮರಾಠರಿಗೆ ಒತ್ತೆಯಾಗಿ ನೀಡಿದ್ದ ಜಿಲ್ಲೆಗಳು ಹೈದರನ ಹತೋಟಿಗೆ ಬಂದವು. ತೆರಿಗೆ ನಜರಾನಗಳಲ್ಲದೆ ರಾಜ್ಯದ ಹಣಕಾಸಿನ ಮೂಲಗಳ ಪೈಕಿ ಅಕ್ಕಪಕ್ಕದ ಪಾಳೆಗಾರರ ಮೇಲೆ ಆಕ್ರಮಣ ಮಾಡಿ ಲೂಟಿ ಮಾಡುತ್ತಿದ್ದರು.

ಸರ್ಕಾರದ ಯಂತ್ರವನ್ನು ನಡೆಸಲು ವಿವಿಧ ವರ್ಗದ ಅಧಿಕಾರಿಗಳು ಇದ್ದರು. ದಳವಾಯಿಗಳು ಸರ್ಕಾರಕ್ಕೆ ಸಲ್ಲುವ ಆದಾಯವನ್ನು ತಮ್ಮ ಕೈಕೆಳಗಿನ ಅಧಿಕಾರಿಗಳಿಗೆ ಜಹಗೀರಿಯ ರೂಪದಲ್ಲಿ ಹಂಚುತ್ತಿದ್ದರು. ಉನ್ನತ ಅಧಿಕಾರಿಗಳಿಗೆ ಹಣದ ರೂಪದಲ್ಲಿ ಸಂಬಳವನ್ನು ನೀಡುವುದರ ಬದಲು ಒಂದು ನಿರ್ದಿಷ್ಟ ಪ್ರದೇಶದ ನಿಶ್ಚಿತ ಪ್ರಮಾಣದ ಉತ್ಪನ್ನವನ್ನು ಅವರವರ ದರ್ಜೆ ಮತ್ತು ಪ್ರತಿಷ್ಟೆಗೆ ತಕ್ಕಂತೆ ವಸೂಲಿ ಮಾಡಿಕೊಳ್ಳುವ ಹಕ್ಕನ್ನು ನೀಡುತ್ತಿದ್ದರು. ಇದನ್ನು ಸಮರ್ಥಿಸಲು ಕೆಲವು ಶಾಸನಗಳಲ್ಲಿ ಉಲ್ಲೇಖವಿದೆ.

ದಳವಾಯಿ ನಂಜರಾಜಯ್ಯನು ಹೈದರನಿಗೆ ಕೊಯಮತ್ತೂರಿನ ಕಂದಾಯದ ಉತ್ಪನ್ನವನ್ನು ಜಹಗೀರಿಯ ರೂಪದಲ್ಲಿ ಕೊಟ್ಟಿದ್ದನು. ಆತನ ಜಹಗೀರಿಯ ವ್ಯವಸ್ಥೆ ಈ ರೀತಿ ಇದ್ದಿತು.

೧೫೦೦ ಅಶ್ವಗಳು

೩೦೦೦ ಕಾಲುದಳ

೨೦೦೦ ಸೇವಕರು

೪ ಫಿರಂಗಿಗಳು

ಜೊತೆಗೆ ಆನೆಗಳ ಪೌಜುದಾರ ಎಂಬ ಅಧಿಕಾರ ಲಾಂಛನವನ್ನು ನೀಡಲಾಯಿತು. ಪೌಜುದಾರನಾಗಿ ಆತನಿಗೆ ನೀಡಿದ ಕ್ಷೇತ್ರದಲ್ಲಿ ಸಾಕಷ್ಟು ಹಣವನ್ನು ಸಂಗ್ರಹಿಸಿ ಪ್ರಭಲನಾದನು. ಹಣಕಾಸಿನ ವ್ಯವಹಾರಗಳಲ್ಲಿ ತನ್ನ ಸಮಕಾಲೀನ ಬುದ್ಧಿವಂತ ರೆವಿನ್ಯೂ ಅಮಿಲ್ದಾರ್‌ಗಳನ್ನು ಮೀರಿಸಿದ್ದನು.[೯೩]

ನಂಜರಾಜಯ್ಯನು ಪಡೆದುಕೊಂಡಿದ್ದ ಜಹಗೀರಿಯ ಉತ್ಪನ್ನ ಮೂರು ಲಕ್ಷ ರೂಪಾಯಿಗಳು ಆಗಿದ್ದಿತು. ಇದಲ್ಲದೆ ೧೦೦೦ ಕುದುರೆಗಳು ಮತ್ತು ೩೦೦ ಕಾಲುದಳಗಳನ್ನು ಇಟ್ಟುಕೊಂಡಿದ್ದನು. ಈ ಬಲವನ್ನು ರಾಜ್ಯದ ಸೇವೆಗೆ ಮಾತ್ರ ಬಳಸಬೇಕೆಂಬ ಷರತ್ತು ಹಾಕಲಾಯಿತು. ಹೀಗೆ ನಂಜರಾಜಯ್ಯನು ಜೂನ್ ೧೭೫೭ರಲ್ಲಿ ೨೦ ವರ್ಷಗಳ ಕಾಲ (೧೭೩೭-೧೭೫೭) ವೈಭವದ ಹಾಗೂ ದರ್ಪದ ಆಳ್ವಿಕೆಯ ನಂತರ ಶ್ರೀರಂಗಪಟ್ಟಣದಿಂದ ಮೈಸೂರಿನ ಮೂಲಕ ತೀರ್ಥಯಾತ್ರೆಯ ನೆಪ ಒಡ್ಡಿ ತನ್ನ ಸೈನ್ಯ ಸಮೇತ ಹೊರಡಲು ಪ್ರಯತ್ನಿಸಿದನು. ಆದರೆ ಈ ವೇಳೆಗಾಗಲೇ ಸಮಗ್ರ ಕಾನೂನನ್ನು ತನ್ನ ಕೈಗೆ ತೆಗೆದುಕೊಂಡಿದ್ದ ಹೈದರಾಲಿಯು ಮಿಲಿಟರಿ ಕಾರ್ಯಚರಣೆಯ ಮೂಲಕ ಅವನನ್ನು ಅಲ್ಲಿಂದ ಉಚ್ಛಾಟನೆಗೊಳಿಸಿದನು. ಅಲ್ಲದೆ ನಂಜರಾಜಯ್ಯನಿಗೆ ಕೊಟ್ಟಿದ್ದ ಜಹಗೀರಿಯನ್ನು ೩ ಲಕ್ಷದಿಂದ ೧ ಲಕ್ಷಕ್ಕೆ ಇಳಿಸಿ ರಾಜ್ಯದ

ಪಶ್ಚಿಮ ಭಾಗದಲ್ಲಿ ಇದ್ದ ಕೋಣನೂರು ಜಹಗೀರಿಯಲ್ಲಿ ಮುಂದುವರೆಯಬೇಕೆಂದು ಆದೇಶವನ್ನು ನೀಡಿದನು.[೮೪]

ಆಡಳಿತ ವ್ಯಾಪ್ತಿಗೆ ಸಂಬಂಧಪಟ್ಟಂತೆ ಇನ್ನೂ ಎರಡು ವಿಚಾರಗಳನ್ನು ಇಲ್ಲಿ ಪರಿಶೀಲಿಸಬಹುದಾಗಿದೆ.

೧. ಅಧಿಕಾರಿಗಳ ನೇಮಕಾತಿಯಲ್ಲಿ ಪಕ್ಷಪಾತ

೨. ಅಂದಿನ ಆಡಳಿತ ವ್ಯವಸ್ಥೆಯಲ್ಲಿ ಇದ್ದಿರಬಹುದಾದ ಅನೀತಿಯುಕ್ತವಾದ ಮಾರ್ಗದಲ್ಲಿ ಸಂಗ್ರಹಿಸುತ್ತಿದ್ದ ಹಣ.

ಮೊದಲನೆಯದಾಗಿ ದಳವಾಯಿ ನಂಜರಾಜಯ್ಯನು ಅಮೀಲರು ಎಂಬ ಕಂದಾಯ ಅಧಿಕಾರಿಗಳನ್ನು ನೇಮಕ ಮಾಡಲಾಗಿ ತನ್ನ ಕೈಕೆಳಗಿನ ಚಿಕ್ಕಪುಟ್ಟ ಅಧಿಕಾರಿಗಳಿಗೆ ಆಮೀಲ್ ಪದವಿಯನ್ನು ಹಂಚಿದನು. ಇದಲ್ಲದೆ ಅವರುಗಳು ತಮ್ಮ ಕೈಕೆಳಗಿನ ಅಧಿಕಾರಿಗಳನ್ನು ತಮಗೆ ಇಷ್ಟ ಬಂದಂತೆ ನೇಮಕ ಮಾಡಿಕೊಳ್ಳುವ ಅಧಿಕಾರವನ್ನು ಕೊಟ್ಟನು. ಕಂದಾಯ ಇಲಾಖೆಯ ಆಡಳಿತದಲ್ಲಿ ಅತ್ಯಂತ ಮುಖ್ಯವಾದ ವ್ಯವಸ್ಥೆ ಎಂದರೆ ಸ್ಕಾಯಿಲ್ ಸಿಸ್ಟಂ ಅಥವಾ ಸೂರೆ ಮತ್ತು ವ್ಯಕ್ತಿ ನಿಷ್ಟವಾದ ಊಳಿಗಮಾನ್ಯ ಅಂಶ ಗೋಚರಿಸಿದ್ದು ಮುಖ್ಯವಾದ ಸಂಗತಿಯಾಗಿತ್ತು.

ಎರಡನೆಯದಾಗಿ ಚಿಕ್ಕಕೃಷ್ಣರಾಜ ಒಡೆಯರ ಕಾಲದಲ್ಲಿ ದಳವಾಯಿ ಆಗಿದ್ದ ನಂಜರಾಜನು ಆರು ವರ್ಷಗಳ ಕಾಲ ಸರ್ವಾಧಿಕಾರಿಯಾಗಿ ಅಪಾರವಾದ ಹಣವನ್ನು ತನ್ನ ಸೇವೆಗೆ ಮೀರಿ ಸಂಗ್ರಹಿಸಿದ್ದನು. ಕೊನೆಯಲ್ಲಿ ಈತನಿಗೆ ಧರ್ಮಸಂಕಟ ಉಂಟಾಯಿತು. ತನ್ನ ಸಂಪಾದನೆಯು ಧರ್ಮ ಸಮ್ಮತವಲ್ಲವೆಂದು ತಿಳಿದು ತಾನು ಸಂಗ್ರಹಿಸಿದ್ದ ೧೨ ಲಕ್ಷ ರೂಪಾಯಗಳನ್ನು ಸರ್ಕಾರಕ್ಕೆ ಒಪ್ಪಿಸಿದನು.

ಶ್ರೇಣೀಕೃತವಾಗಿ ವ್ಯವಸ್ಥೆ ಮಾಡಲ್ಪಟ್ಟ ಆಡಳಿತ ಯಂತ್ರದಲ್ಲಿ' ಒಡೆಯನಾದ ನಂತರ ಸರ್ವಾಧಿಕಾರಿ, ದಳವಾಯಿ, ಪ್ರಧಾನ, ಪೌಜುದಾರ, ಅಮೀನ, ಗೌಡ ಮತ್ತು ಶ್ಯಾನುಭೋಗರು ಗ್ರಾಮದ ಹಂತದರೆಗೆ ಕಾಣಿಸಿಕೊಳ್ಳುತ್ತಿದ್ದರು. ಪ್ರಾಯಶಃ ಸರ್ವಾಧಿಕಾರಿ ಎಂಬ ಪ್ರತಿಷ್ಠೆಯ ಅಧಿಕಾರಿ ಸೃಷ್ಟಿಸಿಕೊಂಡಿದ್ದು ಕಳಲೆ ದೇವರಾಜಯ್ಯನ ಕಾಲದಲ್ಲಿ ಅಲ್ಲಿಯವರೆಗೂ 'ದಳವಾಯಿ' ಸಮಸ್ತ ಆಡಳಿತದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದನು. ಆದರೆ ದಳವಾಯಿಗಳ ಆಡಳಿತ ಬಹುಕಾಲ ಉಳಿದರೆ ತಮಗೆ ತೊಂದರೆ ಎಂಬುದನ್ನು ಅರಿತ ಒಡೆಯರುಗಳು ಹುದ್ದೆಯನ್ನು ಎರಡು ವರ್ಷಕ್ಕೊಮ್ಮೆ ಬದಲಾವಣೆಯನ್ನು ಮಾಡಲು ಆರಂಭಿಸಿದರು. ಆದರೆ ಕಳಲೆಯ ಮನೆತನದವರು ಒಡೆಯನ ಕುಟುಂಬದೊಂದಿಗೆ ವಿವಾಹ ಸಂಬಂಧವನ್ನು ಏರ್ಪಡಿಸಿಕೊಳ್ಳೂವ ಮೂಲಕ ದಳವಾಯಿ ಹುದ್ದೆಯನ್ನು ತಮ್ಮ ವಂಶಕ್ಕೆ ಲಭಿಸುವಂತೆ ಮಾಡಿಕೊಂಡರು. ಒಡೆಯನು ರಾಜ್ಯದ ಕರ್ತರನಾದರೆ ದಳವಾಯಿ ಆಡಳಿತದ ಮುಖ್ಯಸ್ಥನಾಗಿದ್ದನು.

ಸರ್ವಾಧಿಕಾರಿ ಮತ್ತು ದಳವಾಯಿಗಳ ನಂತರ ಆಡಳಿತದಲ್ಲಿ ಪ್ರಧಾನ ಅಥವಾ ಅಮಾತ್ಯ ಮುಖ್ಯನಾಗಿದ್ದನು. ಈತನನ್ನು ದಳವಾಯಿಗಳು ನೇಮಿಸುತ್ತಿದ್ದರು. ಎಂಬ ವಿಷಯ ಕೆಲವು ಆಧಾರಗಳಿಂದ ತಿಳಿಯುತ್ತದೆ. ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲೂಕು ಮಾಚನಹಳ್ಳಿಯ ಶಾಸನವು ಪ್ರಧಾನ ಅಥವಾ ಅಮಾತ್ಯನಾದ ವೆಂಕಟಪತಿಯನ್ನು ಕಳಲೆ ನಂಜರಾಜಯ್ಯನು ನೇಮಿಸಿದನೆಂಬ ಮತ್ತು ಅವನು ನಂಜರಾಜಯ್ಯನಿಗೆ ಅತ್ಯಂತ ವಿಶ್ವಾಸವುಳ್ಳವನಾಗಿದ್ದನೆಂದು ತಿಳಿಸುತ್ತದೆ.

ನೂರೊಂದ ಎಂಬುವನು ಕ್ರಿ.ಶ.ಸುಮಾರು ೧೭೪೦ರಲ್ಲಿ ಬದುಕಿದ್ದ ಕನ್ನಡ ಕವಿ. ಈತನು ಕಳಲೆ ದೇವರಾಜಯ್ಯ ಮತ್ತು ನಂಜರಾಜಯ್ಯ ಹಾಗೂ ಒಡೆಯ ಎರಡನೆ ಕೃಷ್ಣರಾಜ ಒಡೆಯರ ಸಮಕಾಲೀನ. ಅವರ ವೈಭವವನ್ನೆಲ್ಲಾ ತನ್ನ ಕಾವ್ಯದಲ್ಲಿ ವಿಶೇಷವಾಗಿ ವರ್ಣಿಸಿದ್ದಾನೆ. ಮೊದ-ಮೊದಲು ಆ ಸ್ಥಾನಕ್ಕೆ ಬಂದಿದ್ದ ಹಲವು ಪ್ರಭಾವಿವ್ಯಕ್ತಿಗಳ ಪಟ್ಟಿಯನ್ನು ನೀಡಿದ್ದಾನೆ. ಅವನು ಉಲ್ಲೇಖಿಸಿರುವುದನ್ನು ಗಮನಿಸಿದರೆ 'ಪತಿ', 'ವಜರ', ಅರಸು, 'ದೊರೆ', ಮತ್ತು 'ಗುರಿಕಾರ'(೮೫) ಎಂಬ ಅಧಿಕಾರ ಪ್ರತಿಷ್ಠೆಯನ್ನು ನಿರ್ದೇಸಿಸುವ ಪದಗಳು ಕಂಡುಬರುತ್ತದೆ. ಇವುಗಳಲ್ಲಿ ಅರಸು, ದೊರೆ, ಮತ್ತು ಪತಿ ಆಡಳಿತದಲ್ಲಿ ಅವರುಗಳು ಹೊಂದಿದ್ದ ಕೆಳಹಂತದ ಅಧಿಕಾರದ ಸ್ಥಾನವನ್ನು ತಿಳಿಸುತ್ತದೆ., ಇವರೆಲ್ಲಾ ಅಯಾಯ ಪ್ರದೇಶಗಳ ಆಡಳಿತವನ್ನು ನೋಡಿಕೊಂಡು ಕೇಂದ್ರ ಸರ್ಕಾರಕ್ಕೆ ಕಂದಾಯದ ಪಾಲನ್ನು ಕಳುಹಿಸಿಕೊಡುತ್ತಿದ್ದರೆಂದು ಕಾಣುತ್ತದೆ. ಇದರಲ್ಲಿ ಕೆಲವರು ಸಾಮಂತ ಅಂತಸ್ತನ್ನು ಹೊಂದಿದ್ದು ಕಪ್ಪಕಾಣಿಕೆಯನ್ನು ಸಲ್ಲಿಸುತ್ತಿದ್ದಿರಬಹುದು. ವಿಜಯ ನಗರ ಕಾಲದ ಸಂಪ್ರದಾಯದಂತೆ ದಸರೆಯ ಕಾಲದಲ್ಲಿನ ರಾಜನ ಆಸ್ಥಾನವನ್ನು ಅಲಂಕರಿಸಲು ಬಂದಿದ್ದು ಅದನ್ನು ನೋಡಲು ಬಂದಿದ್ದ ಕವಿ ಈ ಮೇಲಿನ ರೀತಿ ಉಲ್ಲೇಖಿಸಿರಬಹುದು. ಕವಿ ತನ್ನ ಸೌಂದರ್ಯ ಕಾವ್ಯದಲ್ಲಿ ರಾಜ ನೀತಿಗೆ ಸಂಬಂಧಪಟ್ಟಂತೆ ಕೆಲವು ಅಂಶಗಳನ್ನು ಸಹ ಉಲ್ಲೇಖಿಸಲಾಗಿದೆ.

ಕರಣಿಕರು ಮತ್ತು ರಾಯಸದವರು ಆಡಳಿತದಲ್ಲಿ ಪ್ರಮುಖ ಸ್ಥಾನವನ್ನು ಆಲಂಕರಿಸಿದ್ದರು. ರಾಜನ ಸಭೆಯ ಸದಸ್ಯರಾಗಿದ್ದಂತೆ, ಕಳಲೆ ವೀರ ರಾಜನೆಂದು ಘೋಷಿಸಲ್ಪಟ್ಟ ಚಿನ್ನಾಯ್ಯನೆಂಬ ಕವಿ ತನ್ನ 'ಪದ್ಮಿನಿ ಪರಿಣಯ' ಎಂಬ ಕನ್ನಡ ಕಾವ್ಯದಿಂದ ತಿಳಿದುಬರುತ್ತದೆ.

ದಳವಾಯಿ ನಂತರದ ಸ್ಥಾನ ಪೌಜುದಾರನದೆಂದು ಕಾಣುತ್ತದೆ. ಹೈದಾರಲಿಯು ಪೌಜುದಾರನಾಗಿ ಪ್ರಸಿದ್ಧಿಗೆ ಬಂದನು. ಆತನು ತನ್ನದೇ ಆದ ಜಹಗೀರನ್ನು ಮತ್ತು ಸೈನ್ಯವನ್ನು ಇರಿಸಿಕೊಂಡಿದ್ದನು. ರಾಜ್ಯ ರಕ್ಷಣೆ ಹಾಗೂ ಸೈನ್ಯದಲ್ಲಿ ಶಿಸ್ತನ್ನು ಕಾಪಾಡಿಕೊಂಡು ಬರುವುದು ಅವನ ಕರ್ತವ್ಯವಾಗಿತ್ತು. ಸೈನ್ಯದಲ್ಲಿ ಯಾವುದೇ ಕಾರಣಕ್ಕೂ ಅಸಮಾಧಾನ ಉಂಟಾಗದಂತೆ ಪೌಜುದಾರ ಕಾರ್ಯ ನಿರ್ವಹಿಸುತ್ತಿದ್ದನು. ರೆವಿನ್ಯೂ ಆಡಳಿತ ಮತ್ತು ಶಾಂತಿ ಪಾಲನೆಗಳು ಅವನ ಅಧಿಕಾರದ ಭಾಗಗಳಾಗಿದ್ದವು. ಕೇಂದ್ರ ಸರ್ಕಾರವು ನಿಗಧಿ ಮಾಡಿದ್ದ ಹಣವನ್ನು ಗೊತ್ತಾದ ಕಾಲದಲ್ಲಿ ಅವನು ಸಲ್ಲಿಸಬೇಕಾಗಿತ್ತು. ಹೈದರಾಲಿಯು ಈ

ಕೆಲಸವನ್ನು ಬಹಳ ಸಮರ್ಥವಾಗಿ ನಿರ್ವಹಿಸಿದನು. ಆದ್ದರಿಂದ ಇವನ ಸೇವೆಯನ್ನು ಗುರ್ತಿಸಿದ ರಾಜನು ಇವರನಿಗೆ "ಪತ್ತೆ ಹೈದರ್ ಎಂಬ ಬಿರುದನ್ನು ವಿಶಿಷ್ಟವಾದ ದರ್ಬಾರಿನಲ್ಲಿ ನೀಡಿದನು[೮೬]

ತಾಲೂಕು ಹಂತದಲ್ಲಿ ಅಮೀನರೂ, ಗ್ರಾಮದ ಹಂತದಲ್ಲಿ ಗೌಡ ಮತ್ತು ಶ್ಯಾನುಭೋಗರೂ ಕಂದಾಯದ ಆಡಳಿತದ ಹೊಣೆಗಾರಿಕೆಯನ್ನು ಹೊತ್ತಿದ್ದರು. ಗ್ರಾಮದ ಹುಟ್ಟುವಳಿಯ ಲೆಕ್ಕವೆಲ್ಲಾ ಶ್ಯಾನುಭೋಗನು ಕ್ರಮಬದ್ಧವಾಗಿ ಇಡುತ್ತಿದ್ದನು. ಎಲ್ಲಾ ಸಂದರ್ಭಗಳಲ್ಲೂ ಸರ್ಕಾರವು ಅವನ ಲೆಕ್ಕ ಪ್ರಕಾರವೆ ವ್ಯವಹಾರವನ್ನು ನಿರ್ವಹಿಸುತ್ತಿತ್ತು ಎಂಬುದಕ್ಕೆ ಶಾಸನಗಳಲ್ಲಿ ಬರುವ ಶ್ಯಾನುಭೋಗ ವೆಂಕಟರಮಣಯ್ಯ ಬರೆದುಕೊಂಡ ಲೆಕ್ಕ "ಹುಟ್ಟುವಳಿ ಲೆಕ್ಕ" ಶಾನುಭೋಗ ಪರಮೇಶ್ವರಯ್ಯನಬ ಲೆಕ್ಕ ಪ್ರಕಾರ. ಮತ್ತು ಹುಟ್ಟುವಳಿ ಶಾನುಭೋಗ ಹರಿದಾಸ ಬರೆದುಕೊಂಡು ಬಂದ ಲೆಕ್ಕ ಪ್ರಕಾರ ಎಂಬ ವಾಕ್ಯಗಳನ್ನು ಗಮನಿಸಬಹುದು.

ದಳವಾಯಿಗಳು ಆಡಳಿತ ಪೋಷಕ ಶಕ್ತಿ ಎಂಬುದು ಅವರ ದಾನ ಶಾಸನಗಳಿಂದ ವ್ಯಕ್ತವಾಗುತ್ತಿದೆ ಇಂತಹ ಪೋಷಕ ಶಕ್ತಿಯಿಂದ ದಳವಾಯಿಗಳು ತಮ್ಮ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳಲು ಉಪಯೋಗಿಸಿಕೊಂಡರು. ಈ ದಳವಾಯಿಗಳು ಕೃಷಿ ಸಂಪನ್ಮೂಲಗಳನ್ನು ಬ್ರಾಹ್ಮಣರಿಗೆ ಕೊಡುತ್ತಿದ್ದರು. ಪುರೋಹಿತರಿಗೆ, ವೈದಿಕ ಧರ್ಮ ಆಚರಣೆಯಲ್ಲಿ ತೊಡಗಿರುವವರಿಗೆ ಅಗ್ರಹಾರಗಳನ್ನು ಸ್ಥಾಪಿಸಿ ಭೂದಾನವನ್ನು ವೃತ್ತಿಗಳಾಗಿ ವಿಂಗಡಿಸುವುದರ ಮೂಲಕ ಆ ಪ್ರಭಾವ ಪೂರ್ಣ ವರ್ಗದ ನಿಷ್ಠೆಯನ್ನು ತಮ್ಮ ಆಡಳಿತಕ್ಕೆ ಸಲ್ಲುವಂತೆ ಮಾಡಿಕೊಂಡಿದ್ದರು. ಅಗ್ರಹಾರದ ಬ್ರಾಹ್ಮಣ ವರ್ಗಕ್ಕೆ ಸರ್ವಮಾನ್ಯ ಹಕ್ಕನ್ನು ನೀಡಿದರು. ಅಂದರೆ ಅವರು ಎಲ್ಲಾ ತೆರಿಗೆಗಳಿಂದ ಮುಕ್ತರಾಗಿದ್ದರು. ಶಾಸನಗಳಲ್ಲಿ ಸೂಚಿಸಿರುವಂತೆ ಸರ್ಕಾರವು ತನಗೆ ಸಂದಾಯವಾಗದ ಎಲ್ಲಾ ತೆರಿಗೆ ಹುಟ್ಟುವಳಿಗಳನ್ನು ನಿರ್ದೇಶಿಸಿದ ಹಳ್ಳಿಗಳಲ್ಲಿ ವಸೂಲಿ ಮಾಡಿಕೊಂಡು ಅಲ್ಲಿಯ ಆಡಳಿತವನ್ನು ನಿಯಂತ್ರಿಸುವ ಅಧಿಕಾರವನ್ನು ಕೊಟ್ಟಿದ್ದರು. ಇಂತಹ ಅಗ್ರಹಾರಗಳು ಉತ್ಕೃಷ್ಟ ನೀರಾವರಿ ಭೂಮಿಯ ಒಡೆತನವನ್ನು ಹೊಂದಿದ್ದವು.

ಮೈಸೂರು ಜಿಲ್ಲೆ ತಿರುಮಕೂಡಲು ನರಸೀಪುರದ ಶಾಸನ(೧೭೪೯) ಕರ್ನಾಟಕದಲ್ಲಿ ದೊರಕಿರುವ ಶಾಸನಗಳ ಪೈಕಿ ಬಹು ಅಪರೂಪವಾದ ದೀರ್ಘವಾದ ಶಾಸನ. ಇದು ದವಾಯಿಗಳು ಅಗ್ರಹಾರ ದಾನ ಶಾಸನವೆಂದೆ ಖ್ಯಾತಿ ಪಡೆದಿದೆ.[೮೭] ೧೬ ತಾಮ್ರದ ಹಲಗೆಗಳ ಮೇಲೆ ಕೆತ್ತಿರುವ ಈ ಶಾಸನದಲ್ಲಿ ೧೩೮೭ ಸಾಲುಗಳಿವೆ. ಕಳಲೆ ದೇವರಾಜಯ್ಯನು ೧೨೦ ವೃತ್ತಿಗಳಾಗಿ ವಿಂಗಡಿಸಿ ೧೪ ಗ್ರಾಮಗಳನ್ನು ರಾಮಚಂದ್ರಪುರದ ಅಗ್ರಹಾರವೆಂದು ಪರಿವರ್ತಿಸಿ ರಾಜನ ಅನುಮತಿಯನ್ನು ಪಡೆದುಕೊಂಡು ಬ್ರಾಹ್ಮಣರಿಗೆ ಮನೆ ಮತ್ತು ಸಕಲ ವಸ್ತುಗಳ ಸಹಿತ ದಾನ ಮಾಡಿದ ವಿಷಯ ಈ ಶಾಸನದಿಂದ ತಿಳಿಯಬಹುದಾಗಿದೆ.

ಈ ರೀತಿಯ ಸಂಪನ್ಮೂಲಗಳ ಹಂಚಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತಿತ್ತು. ನಷ್ಟ ತುಂಬಿಕೊಳ್ಳಲು ದಳವಾಯಿಗಳಿಗೆ ಇದ್ದ ಎರಡು ಮಾರ್ಗಗಳೆಂದರೆ.

೧. ರೆವಿನ್ಯೂ ಅಥವಾ ಕಂದಾಯ ಗ್ರಾಮಗಳ ಮೇಲೆ ತೆರಿಗೆ ಹೆಚ್ಚಿಸುವುದು.

೨. ಅಕ್ಕಪಕ್ಕದ ಪಾಳೆಗಾರರ ಮೇಲೆ ದಾಳಿಯಿಂದ ಹಣವನ್ನು ಸೂರೆ ಮಾಡುವುದರ ಮೂಲಕ ಕೊರತೆಯನ್ನು ತುಂಬಿಕೊಳ್ಳುವುದು.

ಅಗ್ರಹಾರಗಳಲ್ಲದೆ ದೇವಾಲಯಗಳಿಗೂ ದಳವಾಯಿಗಳು ವಿವಿಧ ರೀತಿಯ ದಾನಗಳನ್ನು ನೀಡಿದ ಉದಾಹರಣೆಗಳು ಶಾಸನಗಳಲ್ಲಿ ದೊರೆಯುತ್ತವೆ. ವಿದ್ಯಾಪಕ್ಷಪಾತಿಗಳಾಗಿದ್ದ ಕಳಲೆ ದಳವಾಯಿಗಳು ಸಾಹಿತ್ಯವನ್ನು ಪೋಷಿಸಿದ ವಿವರಗಳು ದೊರೆಯುತ್ತವೆ. ಇವು ಅವರ ಆಡಳಿತದ ಬಹುಮುಖಗಳನ್ನು ತೆರೆದು ತೋರಿಸುತ್ತದೆ. ಕೃಷಿ ಅಭಿವೃದ್ಧಿಗೆ ಅವರು ಕಳಲೆ ಮತ್ತು ಇತರೆ ಕಡೆಗಳಲ್ಲೂ ಕೆರೆಗಳನ್ನು ಕಟ್ಟಿಸಿದ್ದರು. ಕಳಲೆ ಗ್ರಾಮದ ದಕ್ಷಿಣಕ್ಕಿರುವ ಚೆಲುವಾಂಬ ಕೆರೆಯು ಸುಮಾರು ೮೦೦ ಎಕರೆ ವಿಸ್ತೀರ್ಣವನ್ನು ಹೊಂದಿದೆ. ಈ ಕೆರೆಯನ್ನು ನಂಜರಾಜಯ್ಯನ ಮನೆವಾರ್ತೆಯಾಗಿದ್ದ ವೀರಯ್ಯ ಎಂಬ ಅಧಿಕಾರಿಯು ಕಟ್ಟಿಸಿದ ಎಂದು ಶಾಸನವೊಂದು ಪ್ರಾಸ್ತಾಪಿಸುತ್ತದೆ.[೮೮]

ಮೇಲಿನ ವಿವರಣೆಗಳಿಂದ ಕೆಲವು ತೀರ್ಮಾನಗಳನ್ನು ಮಾಡಬಹುದು. ಒಂದನೆಯದಾಗಿ ದ್ವಂದ್ವ ನಿಯಂತ್ರಣ, ಉಳಿಗಮಾನ್ಯ ರೀತಿಯ ಮತ್ತು ಜಹಗೀರು ವ್ಯವಸ್ಥೆಯ ಆಡಳಿತ ಪ್ರಮುಖ ಸ್ವರೂಪವಾಗಿತ್ತು. ಎರಡನೆಯದಾಗಿ ಯೋಗ್ಯತೆ ಪುರಸ್ಕಾರ ಜ್ಯಾತ್ಯಾತೀತ ಮನೋಭಾವ ಮತ್ತು ಅನುಧಾನ ಶಕ್ತಿಯ ಅನುಷ್ಠಾನದ ಮೂಲಕ ಪ್ರಬಲ ವರ್ಗಗಳ ನಿಷ್ಠೆ ಸಂಪಾದನೆ ಆಡಳಿತದ ಸೂತ್ರಗಳಾಗಿದ್ದವು. ಮೂರನೆಯದಾಗಿ ಹಲವು ರೀತಿಯ ತೆರಿಗೆಗಳು, ಸೂರೆಹಣ ನಜರಾನ ಮತ್ತು ಭೂಮಿಯ ಮಾರಾಟ, ಆಡಳಿತ ನಡೆಸಲು ಹಣವನ್ನು ಒದಗಿಸುತ್ತಿದ್ದ ಮೂಲಗಳಾಗಿದ್ದವು. ನಾಲ್ಕನೆಯದಾಗಿ ಒಡೆಯ, ಸರ್ವಾಧಿಕಾರಿ, ದಳವಾಯಿ, ಪ್ರಧಾನ ಅಥವಾ ಅಮಾತ್ಯ, ಫೌಜುದಾರ, ಅಮೀಲ, ಗೌಡ, ಶ್ಯಾನುಭೋಗರ, ಕರಣಿಕರು ರಾಯಸದವರು ಆಡಳಿತ ಯಂತ್ರದ ಭಾಗಗಳಾಗಿದ್ದರು. ಕೊನೆಯದಾಗಿ ದಳವಾಯಿ ಆಡಳಿತ ಸಂಪನ್ಮೂಲಗಳನ್ನು ನಾನಾ ರೀತಿಯಲ್ಲಿ ಸಮಾಜದ ಸುಭದ್ರತೆಗೆ ಉಪಯೋಗಿಸುತ್ತಿದ್ದರು.

೩.೩. ಸಾಮಾಜಿಕ, ಆರ್ಥಿಕ, ಧಾರ್ಮಿಕ ಸ್ಥಿತಿಗತಿ

ಕಳಲೆದಳವಾಯಿಗಳ ಕಾಲದಲ್ಲಿ ಮೈಸೂರು ಸಂಸ್ಥಾನದಲ್ಲಿ ಆರ್ಥಿಕ ವ್ಯವಸ್ಥೆಯ ಮುಂಚಿನ ಯುಗಗಳಲ್ಲಿದ್ದಂತೆ ಕೃಷಿ ಪ್ರಧಾನವಾಗಿತ್ತು. ಶೇಕಡಾ ೭೫ಕ್ಕಿಂತಲೂ ಹೆಚ್ಚು ಜನರು ಗ್ರಾಮವಾಸಿಗಳಾಗಿದರು. ಆದ್ದರಿಂದ ಅವರು ಪ್ರತ್ಯಕ್ಷವಾಗಿ ಇಲ್ಲವೆ ಪರೋಕ್ಷವಾಗಿ ಭೂಮಿ ಅಥವಾ ವ್ಯವಸಾಯದೊಡನೆ ಸಂಬಂಧ ಪಡೆದಿದ್ದರು. ಆಗ ಸಾಕಷ್ಟು ಪ್ರಮಾಣದಲ್ಲಿ ಸಾಗುವಳಿಗೆ ಯೋಗ್ಯವಾದ ಭೂಮಿ ಇತ್ತು. ಸಾಗುವಳಿ ಮಾಡುತ್ತಿರುವ ಜಮೀನನ್ನು ವಿಸ್ತಾರಿಸಿಕೊಳ್ಳುವಂತೆ ಎಷ್ಟೋ ಸಂದರ್ಭಗಳಲ್ಲಿ ರೈತರ ಮನಹೋಲಿಸಲಾಗುತ್ತಿತ್ತು. ಇಡೀ ಸಂಸ್ಥಾನವು ಜನರು ಮತ್ತು ಉತ್ಪನ್ನಗಳಿಂದ ತುಂಬಿತ್ತು. ಸಂಸ್ಥಾನವು

ಹಲವು ಗ್ರಾಮಗಳಿಂದ ಕೂಡಿತ್ತು. ಗ್ರಾಮಗಳ ಸುತ್ತಲೂ ಸಾಗುವಳಿಗೆ ಯೋಗ್ಯ ಜಮೀನುಗಳಿದ್ದವು. ಹುಲ್ಲುಗಾವಲು ಮತ್ತು ಅರಣ್ಯಗಳನ್ನು ಬೆಳೆಸಲು ಹಾಗೂ ಉರುವಲು ಮತ್ತು ಇತರ ಉದ್ದೇಶಗಳಿಗಾಗಿ ಉಪಯೋಗಿಸಿಕೊಳ್ಳಲು ಸಾಕಷ್ಟು ಭೂಮಿ ಇತ್ತು. ಒಂದು ಗ್ರಾಮದ ವ್ಯಾಪ್ತಿಯಲ್ಲಿದ್ದ ಪ್ರದೇಶಕ್ಕೂ ಇನ್ನೊಂದು ಗ್ರಾಮದ ವ್ಯಾಪ್ತಿಯಲ್ಲಿದ್ದ ಪ್ರದೇಶಕ್ಕೂ ತುಂಬಾ ವ್ಯತ್ಯಾಸಗಳಿರುತ್ತಿದ್ದವು. ಈ ಪ್ರದೇಶಗಳನ್ನು ಜಮೀನುಗಳಾಗಿ ಅಥವಾ ಖಾಲಿ ನಿವೇಷನಗಳಾಗಿ ವಿಭಜಿಸಲಾಗಿತ್ತು. ಜಮೀನುಗಳ ಹಂಚುಗಳಲ್ಲಿ ಎತ್ತರಿಸಿದ ಒಡ್ಡುಗಳನ್ನು ನಿರ್ಮಿಸಿ ಅವುಗಳನ್ನು ವಿಭಜಿಸಲಾಗಿತ್ತು. ವ್ಯವಸಾಯ ಮತ್ತು ನೀರಾವರಿಗಾಗಿ ಪರಂಪರಾಗತ ವಿಧಾನಗಳನ್ನು ಅನುಸರಿಸುತ್ತಿದ್ದರು. ಆ ಕಾಲದಲ್ಲಿ ವ್ಯವಸಾಯಕ್ಕಾಗಿ, ಕಾಲುವೆಗಳು ಸಹ ಇದ್ದವು. ನದಿ, ಕೆರೆ, ಕಟ್ಟೆ, ಬಾವಿ ನೀರಿನಿಂದಲೂ ವ್ಯವಸಾಯ ನಡೆಸಲಾಗುತ್ತಿತ್ತು.

ಕೃಷಿ ಉತ್ಪನ್ನಗಳು

ಕಳಲೆ ದಳವಾಯಿಗಳ ಕಾಲದಲ್ಲಿ ಮೈಸೂರು ರಾಜ್ಯದಲ್ಲಿನ ಪ್ರಧಾನ ಆರ್ಥಿಕ ಚಟುವಟಿಕೆಗಳಲ್ಲಿ ಕೃಷಿಯೂ ಒಂದು. ಆ ಕಾಲದಲ್ಲಿ ಕಲ್ಲಿನ ಮತ್ತು ತಾಮ್ರದ ಭೂದಾನ ಶಾಸನಗಳು ಮತ್ತು ಕ್ರಯ ವಿಕ್ರಯ ಶಾಸನಗಳು ಕೃಷಿ ವ್ಯವಸ್ಥೆಯ ಮೇಲೆ ಬೆಳಕನ್ನು ಚೆಲ್ಲುತ್ತವೆ. ಭೂಮಿಯನ್ನು ವ್ಯವಸಾಯ ಯೋಗ್ಯವಾದ ಭೂಮಿ. ಮತ್ತು ವ್ಯವಸಾಯಕ್ಕೆ ಯೋಗ್ಯವಲ್ಲದ ಭೂಮಿ ಎಂದು ವಿಭಾಗಿಸಲಾಗಿತ್ತು. ಕೃಷಿಗೆ ಯೋಗ್ಯವಾದ ಭೂಮಿಯನ್ನು ಮಣ್ಣಿನ ಫಲವತ್ತತೆಯ ಆಧಾರದ ಮೇಲೆ ಉತ್ತಮ, ಮಧ್ಯಮ ಮತ್ತು ಕನಿಷ್ಠ ಎಂದು ವರ್ಗೀಕರಿಸಲಾಗಿತ್ತು. ಇದಲ್ಲದೆ ಗದ್ದೆ, ಬೆದ್ದಲು, ಅಥವಾ ಹೊಲ ಮತ್ತು ತೋಟ ಎಂಬ ವರ್ಗೀಕರಣವೂ ಬಳಕೆಯಲ್ಲಿತ್ತು. ಕೃಷಿ ಭೂಮಿ ಮತ್ತು ಹಳ್ಳಿಯ ಚತುಸ್ಸೀಮೆಯನ್ನು ಗುರುತಿಸುವ ಪದ್ಧತಿ ಇತ್ತು. ಇದಕ್ಕಾಗಿ ಪ್ರಕೃತಿಯಲ್ಲಿನ ಮರ, ಹಳ್ಳ, ದಿಣ್ಣೆ, ಕೊರಕಲು, ನದಿ, ತೊರೆ, ಬೆಟ್ಟ ಗುಡ್ಡಗಳನ್ನು ಎಲ್ಲೆಯ ಗುರುತುಗಳನ್ನಾಗಿ ಮಾಡುವುದರೊಂದಿಗೆ ಹಿಂದಿನಿಂದ ಬಳಕೆಯಲ್ಲಿದ್ದ ಶಂಖಚಕ್ರ ಗುರುತಿನ ಕಲ್ಲು, ಲಿಂಗಮುದ್ರೆಕಲ್ಲು.[೬೯] ಮತ್ತು ವಾಮನ ಮುದ್ರೆಕಲ್ಲುಗಳನ್ನು ನೆಡಲಾಗುತ್ತಿತ್ತು. ಕಠಾರಿ ಮುದ್ರೆಯ ಕಲ್ಲು ಬಳಕೆಯಲ್ಲಿತ್ತು.[೭೦] ಭೂಮಾಪನದ ಹೆಜ್ಜೆ.(ಪಾದ) ಮತ್ತು ಅಳತೆಯ ಕೂಲು ಭೂಮಿಯ ಸೆಲೆ ನಿರ್ಧರಿಸಲು ಉಪಯೋಗದಲ್ಲಿದ್ದವು.[೭೧] ಮಣ್ಣಿನ ಗುಣ ಮತ್ತು ಬಣ ಭೂಮಿಯ ಅಳತೆ, ಬೆಳೆಯುವ ಬೆಳೆ, ನೀರಾವರಿ ಸೌಲಭ್ಯ, ಬಿತ್ತನೆ ಸಾಮರ್ಥ್ಯಗಳನ್ನು ಆಧಾರವಾಗಿಟ್ಟುಕೊಂಡು ಭೂಮಿಯ ವರ್ಗೀಕರಣ ಮಾಡಲಾಗುತ್ತಿತ್ತು. ಕರಿಹೊಲ, ಕಟ್ಟೆ, ಗದ್ದೆ, ಕೆರೆಕೆಳಗಣ ಗದ್ದೆ, ಬೀಜವರಿ ೨೧೦೦ ಭೂಮಿ, ಭೂಮಿಯ ಸಲೆಕೂಲಿನಲ್ಲಿ ಸಲೆ ನೀಜಗೋಲು ೭೯ಳ, ಯಲೆತೋಟ, ಸೊಪ್ಪಿನ ತೋಟ, ಮುಂತಾದವು ಭೂಮಿಯ ವಿವಿಧ ವರ್ಗಗಳನ್ನು ಸೂಚಿಸುತ್ತವೆ.[೭೨] ಗ್ರಾಮ ಮತ್ತು ಅಗ್ರಹಾರಗಳಲ್ಲಿ ಕೃಷಿ ಭೂಮಿಯೊಂದಿಗೆ ಗೋಮಾಳ ಹಿತ್ತಲು, ವಾಸದ ಮನೆಗಳು, ಬ್ರಾಹ್ಮಣ ಮತ್ತು ಶೂದ್ರರರ ನಿವೇಶನಗಳು, ಕೆರೆಕಟ್ಟೆಗಳು ಇದ್ದವು.

ಕೃಷಿಯಲ್ಲಿ ಎರಡು ವಿಧಾನಗಳು ರೂಢಿಯಲ್ಲಿದ್ದವು. ಅವು ಕಾಡರಂಬ ಮತ್ತು ನೀರಾರಂಬ. ಕಾಡರಾಂಬ ಮಳೆಯ ನೀರಿನ ಮೇಲೆ ಅವಲಂಬಿಸಿದ್ದು ಬೆದ್ದಲು ಹೊಲದಲ್ಲಿ ನಡೆಯುತ್ತಿತ್ತು. ನಿರಾರಂಬ ನೀರಾವರಿ ಭೂಮಿ, ಗದ್ದೆ ಮತ್ತು ತೋಟಗಳಲ್ಲಿ ನಡೆಯುತ್ತಿತ್ತು. ನೀರಾವರಿ ಕೃಷಿಯು ಆರ್ಥಿಕತೆಯ ಬಹುಮುಖ್ಯ ಅಂಗವಾಗಿತ್ತು. ಅಣೆ, ಕೆರೆ, ಕಟ್ಟೆ, ಮತ್ತು ಕಾಲುವೆಗಳ ನೀರಾವರಿ ಕೃಷಿಯ ಬಹುಮುಖ್ಯ ಅಂಗವಾಗಿದ್ದವು. ಒಡೆಯರುಗಳಂತೆ ಕಳಲೆ ದಳವಾಯಿಗಳು ಮತ್ತು ಅದರ ಅಧಿಕಾರಿಗಳು ನೀರಾವರಿ ಕಾರ್ಯಗಳನ್ನು ಕೈಗೊಳ್ಳುತ್ತಿದ್ದರು. ಕಳಲೆ ನಂಜರಾಜಯ್ಯನ ಮನೆ ವಾರ್ತೆಯ ಅಧಿಕಾರಿ ವೀರಯ್ಯನು ಕ್ರಿ.ಶ.೧೭೫೮ರಲ್ಲಿ ಚಾಮರಾಜನಗರ ತಾಲೋಕಿನ ಮಳಲವಾಡಿ ಹಳ್ಳಿಯಲ್ಲಿರುವ ಸಂಡಾನಗೌಡನ ಕೆರೆಯನ್ನು ಕಟ್ಟಿಸಿದನು.[೯೩] ಕೆರೆಗಳಿಂದ ಕಾಲುವೆಗಳ ಮೂಲಕ ನೀರನ್ನು ಭೂಮಿಗೆ ಹಾಯಿಸಿ ಕೃಷಿಯನ್ನು ಮಾಡುತ್ತಿದ್ದರು. ದಳವಾಯಿ ದೇವರಾಜಯ್ಯ ಕಪಿಲಾ ಮತ್ತು ಕಾವೇರಿ ನದಿಗಳಿಗೆ ಸಂಪರ್ಕ ಸೇತುವೆಯನ್ನು ಕಟ್ಟಿಸಿದನು.[೯೪] ನೀರಾವರಿ ಸೌಲಭ್ಯಗಳಿಂದಾಗಿ ಕೃಷಿಯ ಹುಟ್ಟುವಳಿ ಹೆಚ್ಚಿತು.

ವರ್ಷದಲ್ಲಿ ಎರಡು ಬೆಳೆಗಳನ್ನು ತೆಗೆಯಲಾಗುತ್ತಿತ್ತು. ಅವುಗಳನ್ನು ಕಾರ್ತಿಕ ಅಥವಾ ಹೈನುಬೆಳೆ ಮತ್ತು ವೈಶಾಖ ಅಥವಾ ಕಾನುಬೆಳೆ ಎಂದು ಕರೆಯಲಾಗುತ್ತಿತ್ತು.[೯೫] ಹೈನು ಬೆಳೆಯು ಮುಂಗಾರು ಮಳೆಯನ್ನು ಅವಲಂಭಿಸಿತ್ತು. ಹೀಗಾರು ಬೆಳೆಯು ಕಾನು ಬೆಳೆಗೆ ಆಧಾರವಾಗಿತ್ತು. ಆಹಾರ ಬೆಳೆಗಳು, ತೋಟದ ಬೆಳೆಗಳು, ಎಣ್ಣೆ ಕಾಳುಗಳು, ಹಣ್ಣೂ ತರಕಾರಿ, ವೀಳೆದೆಲೆ, ಹತ್ತಿ, ಹೊಗೆಸೊಪ್ಪು, ಇವು ವಾಣಿಜ್ಯ ಬೆಳೆಗಳಾಗಿದ್ದವು. ಆಹಾರ ಬೆಳಗಳೆಂದರೆ ಭತ್ತ ಮತ್ತು ರಾಗಿ. ಮುಂತಾದ ಬೆಳೆಗಳನ್ನು ಅಂದಿನ ಕಾಲದಲ್ಲಿ ಬೆಳೆಯಲಾಗುತ್ತಿತ್ತು. ಭತ್ತದ ಬೆಳೆತೆಗೆಯುವಾಗ ಮೂರು ವಿಧಾನಗಳನ್ನು ಅನುಸಾರಿಸಲಾಗುತ್ತಿತ್ತು. ಮೊಳೆಭತ್ತ, ಮೊಳಕೆ ಬೀಜದ ಬಿತ್ತನೆ ಮತ್ತು ನಾಟಿಭತ್ತ.[೯೬]

ಕಳಲೆ ದಳವಾಯಿಗಳ ಕಾಲದಲ್ಲಿ ವಿವಿಧ ರೀತಿಯ ಭೂ ಹಿಡುವಳಿಗಳು ಇದ್ದವೆಂದು ತಿಳಿದು ಬರುತ್ತದೆ. ಬ್ರಹ್ಮದಾಯ ದೇವಾಲಯ ಮತ್ತು ಮಠಪುರ, ಮೈಸೂರಿನ ರಾಜ್ಯದಲ್ಲಿ ರೈತರಿಗೆ ಒಡೆತನವಿರಲಿಲ್ಲವೆಂದು ಬುಕಾನಾನ್ ಹೇಳಿದ್ದಾನೆ.[೯೭] ತಾರ್ಕಿಕವಾಗಿ ರಾಜನೆ ಭೂಮಿಯ ಒಡೆಯನೆಂದು ಪರಿಗಣಿಸಿದ್ದರು. ಖಾಸಗಿ ಭೂ ಸ್ವಾಮಿತ್ವವಿದ್ದಿತ್ತೆಂದು ಕೆಲವು ಶಾಸನಗಳಿಂದ ತಿಳಿದುಬರುತ್ತದೆ. ಭೂದಾನ ಶಾಸನಗಳು ಭೂಮಿಯ ದಾನದೊಂದಿಗೆ ಅಷ್ಟೇ ಭೋಗತೇಜ ಸ್ವಾಮ್ಯದ ಹಕ್ಕನ್ನು ಕೊಡುವುದರೊಂದಿಗೆ ವ್ಯವಹಾರ ಚತುಷ್ಟೆಯಕ್ಕೂ(ದಾನ, ಕ್ರಯ, ವಿನಿಮಯ, ಬೋಗ್ಯಗಳಿಗೆ) ಅವಕಾಶ ಮಾಡಿಕೊಡಲಾಗುತ್ತಿತ್ತು. ಸ್ವತಃ ರಾಜನೂ ಅಥವಾ ಅಧಿಕಾರಿಯಾದರೂ ಭೂಮಿಯನ್ನು ಇತರರಿಂದಕೊಂಡು ಅಥವಾ ಪರಿವರ್ತಿಸಿ ದಾನವಾಗಿ ನೀಡುತ್ತಿದ್ದರು.[೯೮]

ಸಿದ್ದದಾಯ(ಭೂಕಂದಾಯ) ಆದಾಯದ ಪ್ರಮುಖ ಬಾಬ್ತು ಆಗಿತ್ತು. ವಿಜಯನಗರ ಅರಸರ ಕಾಲದಲ್ಲಿ ಬೀಜವರಿ ಮತ್ತು ರಾಯರೇಖಾ ಕಂದಾಯ ಪದ್ಧತಿಗಳು ಮೈಸೂರು ರಾಜ್ಯದಲ್ಲೂ ಒಡೆಯರ ಕಾಲದಲ್ಲಿ ಮುಂದುವರೆದವು. ಸಿದ್ದಧಾಯವನ್ನು ಧಾನ್ಯ ರೂಪದಲ್ಲಿ, ಹಣದ ರೂಪದಲ್ಲಾಗಲೀ ಸಲ್ಲಿಸಬಹುದಾಗಿತ್ತು. ಕೆಲವು ಸಂದರ್ಭಗಳಲ್ಲಿ ಎರಡೂ ರೂಪಗಳಲ್ಲೂ ಕೊಡಬಹುದಾಗಿತ್ತು. ವಿಜಯನಗರ ಸಾಮ್ರಾಜ್ಯದಲ್ಲಿ ಕಂದಾಯ ಇಲಾಖೆ 'ಅಠವಣ' ಎಂದು ಕರೆಯಲ್ಪಟ್ಟಿದ್ದು. ಅದು ಚಿಕ್ಕ ದೇವರಾಜ ಒಡೆಯರ ಕಾಲದಲ್ಲಿ 'ವಿಚಾರ ಚಾವಡಿ' ಎಂದು ನಾಮಕರಣಗೊಂಡಿತು. ವಿಚಾರ ಚಾವಡಿಯ ಆಡಳಿತದ ಮುಖ್ಯಸ್ಥನು ಪ್ರಧಾನಿ ಅಥವಾ ಸರ್ವಾಧಿಕಾರಿಯಾಗಿದ್ದನು. ಅವನು ಕರಣಿಕರ ಸಹಾಯದಿಂದ ರಾಜ್ಯದ ಆಯವ್ಯಯವನ್ನು ನೋಡಿಕೊಳ್ಳುತ್ತಿದ್ದನು. ಕಳಲೆ ದಳವಾಯಿಗಳು ಈ ಹುದ್ದೆಯನ್ನು ಸಮರ್ಪಕವಾಗಿ ನಿರ್ವಹಿಸಿದರು. ಅಂದಿನ ಹದಿನೆಂಟು ಚಾವಡಿಗಳಲ್ಲಿ (ಅಠಾರ ಕಛೇರಿ) ಮೈಸೂರು ಹೋಬಳಿ ವಿಚಾರ ಚಾವಡಿ ಪಟ್ಟಣ ಹೋಬಳಿ ವಿಚಾರ ಚಾವಡಿ, ಪಟ್ಟಣ ಹೋಬಳಿ ಅಡ್ಡಿ ಗ್ರಾಮದ ಚಾವಡಿ ಮತ್ತು ಮೈಸೂರು ಹೋಬಳಿ ಅಷ್ಟಗ್ರಾಮದ ಚಾವಡಿಗಳು ಭೂಕಂದಾಯ ಇಲಾಖೆಯ ನೆರ ನಿರ್ವಹಣೆಗೆ ಒಳಪಟ್ಟಿದ್ದವು. ಭೂಕಂದಾಯ ವಿಧಿಸುವಾಗ, ಭೂಗುಣ, ಭೂಮಿಯ ನೀರಾವರಿ ಸೌಲಭ್ಯ ಮತ್ತು ಬೆಳೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಉತ್ಪತ್ತಿಯ ೧/೨ ಭಾಗವನ್ನು ಸಿದ್ಧದಾಯವಾಗಿ ವಸೂಲಿ ಮಾಡಲಾಗುತ್ತಿತ್ತು. ಸರ್ವಾಧಿಕಾರಿ ಮತ್ತು ಕರಣಿಕರಲ್ಲದೆ ದಳವಾಯಿ, ಅಮಾತ್ಯ, ಅಮೀನ, ಶಿರಸ್ತೇದಾರ, ಗೌಡ ಮುಂತಾದವರು ಕಂದಾಯ ವಸೂಲಿಯ ಅಧಿಕಾರಿಗಳಾಗಿದ್ದರು. ರೈತರು ಭೂಕಂದಾಯವನ್ನು ಈ ಅಧಿಕಾರಗಳ ಮೂಲಕ ಭೊಕ್ಕಸಕ್ಕೆ ಸಂದಾಯ ಮಾಡಬಹುದಾಗಿತ್ತು. ಕಂದಾಯ ಹೊರೆಯನ್ನು ಕಡಿಮೆ ಮಾಡಲು ರೈತರಿಗೆ ಕಂದಾಯದಲ್ಲಿ ರಿಯಾಯಿತಿಗಳನ್ನು ಕೊಡುವ ಸಂಪ್ರಾದಾಯ ಮುಂದುವರೆದಿತ್ತು.

ಕಳಲೆ ದಳವಾಯಿಗಳ ಕಾಲದಲ್ಲಿ ಸಿದ್ಧದಾಯದ ಜೊತೆಗೆ ೨೮ ಇತರೆ ತೆರಿಗೆಗಳನ್ನು ವಸೂಲಿ ಮಾಡಲಾಗುತ್ತಿತ್ತು.[೯೯] ಮೈಸೂರು ರಾಜ್ಯದ ಅಂದಿನ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿ ಇದಕ್ಕೆ ಕಾರಣವಾಗಿರಬಹುದು. ಹೈದರಾಬಾದ್ ನಿಜಾಮ, ಮೊಘಲ್ ಮತ್ತು ಮರಾಠರ ದಾಳಿಗಳು, ಫ್ರೆಂಚ್ ಮತ್ತು ಬ್ರಿಟಿಷರ ನಡುವಿನ ಹೋರಾಟ ಇಕ್ಕೇರಿ ಆರ್ಕಾಟ್, ಸಿರಾ ತಂಜಾವೂರು ಮತ್ತು ಮಧುರೇ ನಾಯಕರೊಡನೆ ನಡೆಸಿದ ಯುದ್ಧಗಳಿಂದಾಗಿ ಅಪಾರ ಹಣ ವ್ಯಯವಾಗಿ ಬೊಕ್ಕಸ ಬರಿದಾಗಿತ್ತು ಆರ್ಥಿಕ ಮುಗ್ಗಟ್ಟು ತಲೆದೋರಿದುದರಿಂದ ಕಳಲೆ ದಳವಾಯಿ ಸಹೋದರರು ನಾನಾ ಮೂಲಗಳಿಂದ ಸಂಪತ್ತು ಸಂಗ್ರಹಣೆಯಲ್ಲಿ ತೊಡಗಿದರು. ಅವರು ಕ್ರೌರ್ಯದಿಂದ ವರ್ತಿಸಿದರೆಂದೂ ಮತ್ತು ಶ್ರೀಮಂತರಿಂದ ವ್ಯಾಪಾರಿಗಳಿಂದ ಹಣ ಸುಲಿಗೆ, ದೇವಾಲಯ ಹಾಗೂ ದೇವರುಗಳ ಆಭರಣಗಳ ಲೂಟಿ ನಡೆಸಿದುದಲ್ಲದೆ ಅರಮನೆ ರಾಣಿವಾಸದವರ ಆಭರಣಗಳನ್ನು ಕಿತ್ತುಕೊಂಡರೆಂದು ಹೇಳಲಾಗಿದೆ. ಪರಿಸ್ಥಿತಿಯ ಒತ್ತಡದಿಂದ

ಹಾಗೂ ತಮ್ಮ ವೈಯಕ್ತಿಕ ಉಳಿವಿಗಾಗಿ ದಳವಾಯಿಗಳು ಮತ್ತು ಇತರ ಸೇವಾ ನಾಯಕರುಗಳು ಇದೇ ರೀತಿಯಲ್ಲಿ ಸಂಪತ್ತಿನ ಸಂಗ್ರಹಣೆಯಲ್ಲಿ ತೊಡಗಿದ್ದರು. ಹೈದರಾಲಿ, ಬಂಡೆರಾವ್ ಮುಂತಾದವರು ಇದೇ ಕಾರ್ಯವನ್ನು ಮುಂದುವರೆಸಿದ್ದರು.

ಸೈನ್ಯವನ್ನು ತೃಪ್ತಿಪಡಿಸಿ ತಮ್ಮ ಹತೋಟಿಯಲ್ಲಿಟ್ಟು ಕೊಂಡಗಾಲೆ ಅಧಿಕಾರದಲ್ಲಿ ಮುಂದುವರೆಯಲು ಸಾಧ್ಯವೆಂದು ಬಾವಿಸಿದ್ದ ದಳವಾಯಿ ದೇವರಾಜಯ್ಯ ಮತ್ತು ಸರ್ವಾಧಿಕಾರಿ ನಂಜರಾಜಯ್ಯ ಒತ್ತಾಯದ ಸಂಪತ್ತು ಸಂಗ್ರಹಣೆಯಲ್ಲಿ ತೊಡಗಬೇಕಾಯಿತು. ಅಂತೆಯೇ ಅವರು ದಾನ ಧರ್ಮ ಹಾಗೂ ಪ್ರಜಾ ಹಿತಕಾರ್ಯಗಳಲ್ಲಿ ಅಪಾರ ಸಂಪತ್ತನ್ನು ವಿನಿಯೋಗಿಸಿದರು. ಕಳಲೆ ದಳವಾಯಿ ಸಹೋದರರು ಅಗ್ರಹಾರಗಳನ್ನು ನಿರ್ಮಿಸಿ ಬ್ರಾಹ್ಮಣರಿಗೆ ದಾನ ಮಾಡಿದ ಮತ್ತು ದೇವಸ್ಥಾನ ಮತ್ತು ಮಠಗಳಿಗೆ ದಾನದತ್ತಿಗಳನ್ನು ನೀಡಿದ ವಿವರಗಳನ್ನು ಶಾಸನಗಳು ಉಲ್ಲೇಖಿಸುತ್ತವೆ. ದಳವಾಯಿ ದೇವರಾಜಯ್ಯನು ೧೪ ಹಳ್ಳಿಗಳನ್ನೊಳಗೊಂಡ ರಾಮಚಂದ್ರಪುರ ಎಂಬ ಅಗ್ರಹಾರವನ್ನು ರಚಿಸಿ ಅದನ್ನು ೧೨೦ ಬ್ರಾಹ್ಮಣರಿಗೆ ವೃತ್ತಿಗಳಿಗೆ ವಿಂಗಡಿಸಿ ದಾನವಾಗಿತ್ತನು. ಅವನ ಸಹೋದರ ಕರಾಚೂರಿ ನಂಜರಾಜಯ್ಯನು ದಾನಧರ್ಮ ಕಾರ್ಯಗಳಲ್ಲಿ ಅಪಾರ ಸಂಪತ್ತನು ವಿನಿಯೋಗಿಸಿದ್ದನು.[೧೦೦]

ಕೈಗಾರಿಕೆ

ಕಳಲೆ ದಳವಾಯಿಗಳ ಕಾಲದಲ್ಲಿ ಕೈಗಾರಿಕೆಯೂ ಕೃಷಿಯಂತೆಯ ಜನರ ಪ್ರಮುಖ ಆರ್ಥಿಕ ಚಟುವಟಿಕೆಯಾಗಿತ್ತು. ಜವಳಿ ಕೈಗಾರಿಕೆ ಮೈಸೂರು ರಾಜ್ಯದ ಪ್ರಧಾನ ಕೈಗಾರಿಕೆಯಾಗಿತ್ತು. ಪ್ರತಿ ಮನೆಯೂ ಜವಳಿ ತಯಾರಿಕೆಯಲ್ಲಿ ತೊಡಗಿದ್ದು ಮಹಿಳೆಯು ನೂಲುವುದು ನೇಯುವುದು ಮುಂತಾದ ಚಟುವಟಿಕೆಗಳಲ್ಲಿ ಸದಾ ನಿರತರಾಗಿದ್ದರೆಂದು ಬುಕಾನನ್ನನ ವರದಿ ಉಲ್ಲೇಖಿಸುತ್ತದೆ.[೧೦೧] ಹತ್ತಿ ಬಟ್ಟೆ ತಯಾರಿಕೆ ಆರ್ಥಿಕ ಸ್ವಾವಲಂಬನೆಗೆ ನೆರವಾಗಿತ್ತು ಉಪ್ಪಿನ ತಯಾರಿಕೆ. ಎಣ್ಣೆ ತೆಗೆಯುವುದು, ಕಲ್ಲುಗಣಿ, ಚಿನ್ನದ ಗಣಿಗಾರಿಕೆ, ಕಬ್ಬಿಣದ ಅದಿರಿನಿಂದ ಕಬ್ಬಿಣ ತಯಾರಿಕೆ ಮುಂತಾದವು. ಇತರ ಕೈಗಾರಿಕೆಗಳಾಗಿದ್ದವು. ಅನೇಕ ಕೃಷಿ ಆಧಾರಿತ ಕೈಗಾರಿಕೆಗಳು ರಾಜ್ಯದ ಆರ್ಥಿಕ ಸಂಪತ್ತಿನ ಹೆಚ್ಚಳಕ್ಕೆ ಹಾಗೂ ಸ್ವಾವಲಂಬನೆಗೆ ಸಹಾಯಕವಾಗಿದ್ದವು. ನಾನಾ ಕೈಗಾರಿಕೆಗಳ ಮತ್ತ ಕೈಗಾರಿಕೋತ್ಪನ್ನಗಳ ಮೇಲಿನ ಸುಂಕ ಮತ್ತು ತೆರಿಗೆಗಳಿಂದ ಬೊಕ್ಕಸದ ಆದಾಯ ಹೆಚ್ಚಾಗಿತ್ತು.

ವಾಣಿಜ್ಯ ವ್ಯವಸ್ಥೆ

ದಳವಾಯಿಗಳ ಕಾಲದಲ್ಲಿ ರಾಜಕೀಯ ವ್ಯವಸ್ಥೆಯ ಗೊಂದಲಗಳ ನಡುವೆಯೂ ವಾಣಿಜ್ಯವೂ ವಿವಿಧ ರಾಜಕೀಯ ವಿಭಾಗಗಳ ನಡುವಣ ಸಂಪರ್ಕ ಸೇತುವೆಯಾಗಿತ್ತು. ವಾಣಿಜ್ಯವು ರಾಜ್ಯದ ಆರ್ಥಿಕ ಅಭಿವೃದ್ಧಿಯಲ್ಲಿ ಒಂದು ಪ್ರಮುಖವಾದ ಆದಾಯದ ಮೂಲವಾಗಿತ್ತು. ಆಂತರಿಕ ಮತ್ತು ವಿದೇಶ

ವ್ಯಾಪಾರ ಹೆಚ್ಚಾಗಿ ಕೃಷಿಯ ಉತ್ಪನ್ನಗಳನ್ನು ಅಲಂಬಿಸಿತ್ತು. ಕೈಗಾರಿಕೋತ್ಪನ್ನಗಳು ವ್ಯಾಪಾರದ ಉತ್ಪನ್ನಗಳಾಗಿದ್ದವು.

ಆಂತರಿಕ ವ್ಯಾಪಾರದಲ್ಲಿ ಸಂತೆಗಳು ಪ್ರಮುಖವಾದ ಪಾತ್ರವಹಿಸಿದ್ದವು. ಹಳ್ಳಿಗಳಲ್ಲಿ ಸಂತೆ ಮತ್ತು ಪಟ್ಟಣಗಳಲ್ಲಿ ಪೇಟೆ ಅಥವಾ ಸಂತೆಪೇಟೆಗಳು ವ್ಯಾಪಾರ ಕೇಂದ್ರಗಳಾಗಿದ್ದವು. ಸಂತೆಗಳಲ್ಲಿ ರೈತರು ಮತ್ತು ವ್ಯಾಪಾರಿಗಳು ಭಾಗವಹಿಸಿ ಕೊಂಡುಕೊಳ್ಳುವ ವ್ಯವಹಾರದಲ್ಲಿ ತೊಡಗುತ್ತಿದ್ದರು. ಹೊಸ ಸಂತೆಗಳ ಸ್ಥಾಪನೆಯಲ್ಲಿ ಅರಸರುಗಳು, ಅಧಿಕಾರಿಗಳು, ಹಳ್ಳಿಯ ಮುಖ್ಯಸ್ಥರು ಆಸಕ್ತರಾಗಿದ್ದರು. ಅದಕ್ಕಾಗಿ ಭೂದಾನ ಮತ್ತು ಸಂಪತ್ತು ದಾನಗಳನ್ನು ನೀಡುತ್ತಿದ್ದರು. ತೆಲಗು ಶೆಟ್ಟಿಗಳು ಬಣಜಿಗರು ಮತ್ತು ದೇವಾಂಗ ಶೆಟ್ಟರು ಆಂತರಿಕ ವ್ಯಾಪಾರದಲ್ಲಿ ತೊಡಗಿದ್ದರು.

ಭತ್ತ, ರಾಗಿ, ಜೋಳ, ಹೊಗೆಸೊಪ್ಪು, ಜವಳಿ(ಹತ್ತಿಬಟ್ಟೆ) ನೂಲು, ಬೆಲ್ಲ, ಸಕ್ಕರೆ, ವೀಳ್ಯದೆಲೆ, ಉಪ್ಪು, ಉದ್ದು, ಮೆಣಸು, ಲವಾಂಗ, ಚೆಕ್ಕೆ ಅರಗು ಮುಂತಾದವುಗಳು ವ್ಯಾಪಾರದ ಸಾಮಾಗ್ರಿಗಳಾಗಿದ್ದವು. ವ್ಯಾಪಾರ ಕೇಂದ್ರಗಳೆಂದರೆ ಕಳಲೆ, ಚನ್ನಪಟ್ಟಣ, ಸಾಗರ ಇವು ಪ್ರಮುಖವಾದವು. ಇವು ಆಂತರಿಕ ವ್ಯಾಪಾರ ಕೇಂದ್ರಗಳಾಗಿದ್ದವು. ಕಳಲೆಯ ಪೇಟೆಯೊಂದಿಗೆ ಪಾಲುಕಾಡ ಪೇಟೆ, ಕೊಡುವಾಯಿ ಪೇಟೆ, ಕೊಲ್ಲಂಗೂಡು ಪೇಟೆ, ನೆರ್ಜಿ ಪೇಟೆಗಳು ಮುಂತಾದವು ಸಂಪರ್ಕ ಹೊಂದಿದ್ದು ಉಭಯ ಮಾರ್ಗದಲ್ಲಿ ವ್ಯಾಪಾರ ನಡೆಯುತ್ತಿತ್ತು.[೧೦೨] ಕಳಲೆಯು ಅಂತರ್ ರಾಜ್ಯ ವ್ಯಾಪಾರ ಕೇಂದ್ರವಾಗಿದ್ದು ತಮಿಳುನಾಡು, ವೈನಾಡುಗಳೊಂದಿಗೆ ಸಂಪರ್ಕ ಹೊಂದಿತ್ತು. ತೆಂಗಿನ ಕಾಯಿ ತಿರುಳನ್ನು ದೂರದ ಮದ್ರಾಸಿಗೆ ಕಳುಹಿಸಲಾಗುತ್ತಿತ್ತು.[೧೦೩] ಚನ್ನಪಟ್ಟಣ ಕೃಷಿ ಉತ್ಪನ್ನ ಮಾರುಕಟ್ಟೆಯಾಗಿದ್ದು, ಶ್ರೀರಂಗಪಟ್ಟಣ ಬೆಂಗಳೂರು, ಕೋಲಾರ, ಬಳ್ಳಾಪುರ, ಹೊಸಕೋಟೆ, ದೇವನಹಳ್ಳಿಗಳಿಂದ ವ್ಯಾಪಾರಿಗಳು ಇಲ್ಲಿಗೆ ಬರುತ್ತಿದ್ದರು. ಸಾಗರದ ಪೇಟೆಯೊಂದಿಗೆ ಹದಿನೈದು ಪಟ್ಟಣಗಳು ವ್ಯಾಪಾರ ಸಂಪರ್ಕ ಹೊಂದಿದ್ದವು. ಅವುಗಳಲ್ಲಿ ದೂರದ ವಾಲಾಜಪೇಟೆ, ತಡಪತ್ರಿ ಕಡಪಾ ರಾಯದುರ್ಗ, ಬಳ್ಳಾರಿ ಸೇರಿದ್ದವು.

ಸಂತೆ ಮತ್ತು ಪೇಟೆಗೆ ಮಾರಾಟದ ವಸ್ತುಗಳನ್ನು ತಲೆಹೊರೆ ಕಾವಡಿ ಆನೆ, ಕುದುರೆ ಮತ್ತು ಎಮ್ಮೆಗಳು ಮೇಲೆ ಹಾಗೂ ಗಾಡಿಗಳಲ್ಲಿ ತಂದು ಮಾರಾಟ ಮಾಡುತ್ತಿದ್ದರು. ಮಾರಾಟದ ವಸ್ತುಗಳ ಮೇಲೆ ಉಭಯ ಮಾರ್ಗ ಸುಂಕ ವಿಧಿಸುತ್ತಿದ್ದರು. ಕಾರ್ಯಕರ್ತ ಎಂಬ ಅಧಿಕಾರಿ ಸುಂಕ ವಸೂಲಿ ಹಾಗೂ ಪೇಟೆ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದನು. ಜವಳಿ ನೂಲು, ಹೊಗೆಸೊಪ್ಪು, ಗಂಧದ ಕೊರಡು, ಅರಗು, ಜೀರಿಗೆ, ತುಪ್ಪ, ಕುಸುಬೆ, ಅರಿಸಿನ, ಮೆಣಸು, ಶುಂಠಿ ಮುಂತಾದವುಗಳ ಮೇಲೆ ಸುಂಕ ವಿಧಿಸಲಾಗುತ್ತಿತ್ತು. ವೀಳ್ಯದೆಲೆ, ಬೆಲ್ಲ, ಉಪ್ಪು, ಉದ್ದು, ಉದ್ದುಹೇರು ಒಂದಕ್ಕೆ ವಸೂಲಿ ಮಾಡುತ್ತಿದ್ದ ಕಂಠಿರಾಯಣ.[೧೦೪] ಉಭಯಮಾರ್ಗದಾಯ, ಹೂರಾದಾಯ, ಜರಾದಾಯ ಮುಂತಾದ ವ್ಯಾಪಾರದ ಸುಂಕದಿಂದ ರಾಜ್ಯದ ಆದಾಯವು ಹೆಚ್ಚಿತ್ತು.

ಕಳಲೆ ದಳವಾಯಿಗಳ ಕಾಲದಲ್ಲಿ ವಿದೇಶಿ ವ್ಯಾಪಾರವು ಬಿರುಸಾಗಿ ನಡೆಯುತ್ತಿತ್ತು. ಕರ್ನಾಟಕದ ಕೃಷಿ ಉತ್ಪನ್ನಗಳು ಮತ್ತು ಕೈಗಾರಿಕೋತ್ಪನಗಳು, ಪಶ್ಚಿಮ ತೀರದ ಬಂದರುಗಳಿಂದ ಭಟ್ಕಳ, ಮಂಗಳೂರು, ಹೊನ್ನವರಗಳ ಮೂಲಕ ಒಳನಾಡಿನ ಪಟ್ಟಣಗಳಿಂದ ಅರೇಬಿಯ, ಪರ್ಷಿಯ, ದಕ್ಷಿಣ ಆಫ್ರಿಕಾ ಮತ್ತು ಪೂರ್ಚುಗಲ್ಲಿಗೆ ಹಾಗೂ ಪೂರ್ವದ ಮಲಾಯ ಬರ್ಮ ಮತ್ತು ಚೀನಾಗಳಿಗೂ ರಫ್ತಾಗುತ್ತಿದ್ದವು. ಹದಿನೆಂಟನೆ ಶತಮಾನದಲ್ಲಿ ಪ್ರೆಂಚ್, ಇಂಗ್ಲೀಷ್ ಮತ್ತು ಡಚ್ ವ್ಯಾಪಾರಿಗಳು ಕರ್ನಾಟಕದ ಬಂದರುಗಳಿಂದ ಮೆಣಸು, ಅಕ್ಕಿ, ತೆಂಗು ಮುಂತಾದ ಸರಕುಗಳನ್ನು ಸಂಗ್ರಹಿಸಿ ಹಡಗುಗಳ ಮೂಲಕ ತಮ್ಮ ದೇಶಗಳಿಗೆ ಸಾಗಿಸಿ ವ್ಯಾಪಾರ ಮಾಡುತ್ತಿದ್ದರು. ವಿದೇಶಿ ವಾಣಿಜ್ಯದಿಂದ ಬೊಕ್ಕಸಕ್ಕೆ ಸಂಪತ್ತಿನ ಹೊಳೆ ಹರಿದು ಬರುತ್ತಿತ್ತು. ಈ ರೀತಿಯಲ್ಲಿ ಕಳಲೆಯ ದಳವಾಯಿಗಳ ಆದಿಪತ್ಯದಲ್ಲಿ ಮೈಸೂರಿನ ರಾಜಕೀಯದಲ್ಲಿನ ಏಳುಬೀಳುಗಳಿಂದಾಗಿ ಅವ್ಯವಸ್ಥೆ ಮತ್ತು ಗೊಂದಲಗಳ ಪರಿಸ್ಥಿತಿ ಏರ್ಪಟ್ಟಿದ್ದರೂ ಆರ್ಥಿಕ ಚಟುವಟಿಕೆಗಳು ನಿರ್ಬಾದಿತವಾಗಿ ನಡೆಯುತ್ತಿದ್ದವು. ಕೃಷಿ, ಕೈಗಾರಿಕೆ ಮತ್ತು ವಾಣಿಜ್ಯ ವ್ಯವಸ್ಥೆ ಆರ್ಥಿಕ ಪ್ರಗತಿ ಮತ್ತು ಸ್ವಾವಲಂಬನೆಗಳಿಗೆ ನೆರವಾಗಿತ್ತು.

ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳು

ಭೌತಿಕ ಮತ್ತು ಭಾವನಾತ್ಮಕ ಅವಶ್ಯಕತೆಗಳಿಗನುಗುಣವಾಗಿ ರೂಪುಗೊಳ್ಳುವ ಸಮಾಜವು ಮನುಕುಲದ ಸಾಂಸ್ಕೃತಿಕ ವಿಕಾಸಕ್ಕೆ ಅಗತ್ಯವಾದ ಬುನಾದಿಯನ್ನು ಕಲ್ಪಿಸುತ್ತದೆ. ಅಲೆಮಾರಿ ಮಾನವ ಒಂದೆಡೆ ನೆಲೆನಿಂತುದೇ 'ಸಮಾಜ' ಅಸ್ತಿತ್ವ ಪಡೆದುಕೊಂಡಿತ್ತೆಂದು ಹೇಳಬಹುದು. ಸಾಮಾಜಿಕ ವಿಧಿ ವಿಧಾನಗಳು ಮೇಲ್ನೋಟಕ್ಕೆ ಸರಳ ಮತ್ತು ಅತ್ಯಂತ ಸಹಜ ಅನಿಸಿದರೂ ಇದರೊಳಗಿನ ಅಧ್ಯಯನಕ್ಕೆ ಆಳವಾಗಿ ಇಳಿದಂತೆಲ್ಲಾ ಒಂದೊಂದೇ ಪದರಗಳು ತೆರೆದುಕೊಳ್ಳುತ್ತ ತನ್ನ ಜಟಿಲವಾದ ಸಂಕೀರ್ಣ ವ್ಯವಸ್ಥೆಯನ್ನು ಬಿಟ್ಟುಕೊಡುತ್ತಿವೆ.

ಸಾಮಾಜಿಕ ವ್ಯವಸ್ಥೆಯು ಗತಿಶೀಲವಾದುದು. ಅದು ಸಾಮಾಜಿಕ ಸಂಸ್ಥೆಗಳೆಂಬ ಚಕ್ರಗಳ ಮೇಲೆ ಮುಂಬರಿಯುತ್ತಿರುವ ಒಂದು ಮಹಾರಥ, ಆತ್ಮೀಯವಾದ ಒಡನಾಟವೆಂಬುದೇ ಆ ಚಕ್ರಗಳ ತಿರುಗಣೆ, ಸಾಮಾಜಿಕ ಸಂಬಂಧಗಳೇ ಅವುಗಳ ಅರೆಗಳು. ಈ ಮಹಾರಥ ಸರಾಗವಾಗಿ ಸುಲಲಿತವಾಗಿ ಮುಂದುವರೆದು ಯಶಸ್ವಿಯಾಗಿ ಗಮ್ಯಸ್ಥಾನವನ್ನು ತಲುಪಬೇಕಾದರೆ, ಅದನ್ನು ಆಧ್ಯಾತ್ಮಿಕತೆ ಎಂಬ ಹೆದ್ದಾರಿಯಲ್ಲಿ ಮುನ್ನಡೆಯಿಸಬೇಕು. ಅದರ ಚಕ್ರಗಳಿಗೆ ಸರ್ವಕಾಲಿಕವೂ, ಜೀವನಾಧಾರಕವೂ ಹಾಗೂ ಜೀವನೋತ್ಕರ್ಷಕವೂ ಆದ ಪರಮಮೌಲ್ಯಗಳೆಂಬ ಎಣ್ಣೆಯನ್ನು ಹಾಕುತ್ತಿರಬೇಕು. ಅದರಲ್ಲಿರುವ ಅಮೂಲ್ಯ ನಿಧಿಯಾಗಿರುವ ಸಂಸ್ಕೃತಿಯನ್ನು ಸಂರಕ್ಷಿಸಿ, ಪೋಷಿಸಿ ಶ್ರೀಮಂತಗೊಳಿಸುತ್ತಿರಬೇಕು. ಕರ್ನಾಟಕ ನಾಡನ್ನು ಈ ಬಗೆಯ ಸುಸಂಗತ ಸಾಮಾಜಿಕ ಸುವ್ಯವಸ್ಥೆ ಮತ್ತು ಸಂಪತ್ಸಮೃದ್ಧೆ ಸಂಸ್ಕೃತಿಯ ತವರೂರನ್ನಾಗಿಸಿದ ಕೀರ್ತಿ ಇಲ್ಲಿ

ಆಳಿದ ಅರಸು ಮನೆತನಗಳಿಗೆ ಸಲ್ಲಬೇಕು. ಅವುಗಳಲ್ಲಿ ಕಳಲೆಯ ಅರಸು ಮನೆತನವೂ ಒಂದಾಗಿದೆ. ಈ ದಿಸೆಯಲ್ಲಿ ಈ ಮನೆತನದ ದಳವಾಯಿಗಳ ಸಾಧನೆ ಗಮನಾರ್ಹವಾದುದು.

ಸಾಮಾಜಿಕ ಮೌಲ್ಯಗಳು

ಮೈಸೂರು ಸಂಸ್ಥಾನಕ್ಕೆ ಶಕ್ತಿ ಸಂಪನ್ನರೂ, ರಣಧೀರರೂ, ಸಮರ್ಥರೂ, ರಾಜನೀತಿಜ್ಞರೂ ಪ್ರತಿಭಾನ್ವಿತರೂ ಹಾಗೂ ಹೃದಯ ಶ್ರೀಮಂತಿಕೆಯಿಂದ ಕೂಡಿದ್ದವರೂ ಆಗಿದ್ದ ದಳವಾಯಿಗಳನ್ನು ನೀಡಿದ ಈ ಕಳಲೆ ಅರಸು ಮನೆತನ ಹಿಂದಿನಿಂದ ಬಂದ ಸಾಮಾಜಿಕ ವ್ಯವಸ್ಥೆಯನ್ನೇ ಮುಂದುವರೆಸಿಕೊಂಡು ಬರಲು ಯತ್ನಿಸಿತು. ಆ ಅರಸರು ಸಾಮಾಜಿಕ ಸಾಮರಸ್ಯವನ್ನು ಹಾಳು ಮಾಡಲು, ಒಗ್ಗಟ್ಟನ್ನು ಭಂಗಪಡಿಸಲು ಯತ್ನಿಸಿದವರಲ್ಲ. ಈ ವ್ಯವಸ್ಥೆಯಲ್ಲಿ ಪರಂಪರೆಯಾಗಿ ಸಾಗಿ ಬಂದಿದ್ದ ಸಾಮಾಜಿಕ ಹಾಗೂ ಧಾರ್ಮಿಕ ಸತ್ವವನ್ನು ಸದುಪಯೋಗಪಡಿಸಿಕೊಂಡು ಪ್ರಜಾಸಮುದಾಯದ ಒಳಿತನ್ನು ಸಾಧಿಸಲು ಶ್ರಮಿಸಿದರು. ಧೀರತ್ವ, ದಾತೃತ್ವ, ಪಾಂಡಿತ್ಯ ದೇಶಾಭಿಮಾನ, ಧಾರ್ಮಿಕತೆ, ಪ್ರಜಾವಾತ್ಸಲ್ಯ, ರಾಜಕುಶಲತೆ ಮುಂತಾದ ಸಾಮಾಜಿಕ ಮೌಲ್ಯಗಳನ್ನು ಈ ದಳವಾಯಿಗಳು ಮೈಗೂಡಿಸಿಕೊಂಡಿದ್ದರು.

ಶಾಂತಿಪ್ರಿಯತೆ ಇವರುಗಳು ಬೆಳೆಸಿಕೊಂಡು ಬಂದಿದ್ದ ಇನ್ನೊಂದು ಸಾಮಾಜಿಕ ಮೌಲ್ಯ. ರಕ್ತಪಾತಕ್ಕೆ ಎಡೆಯಾಗುವ ಮತ್ತು ಆತ್ಮೀಯವಾದ ಸಾಮಾಜಿಕ ಸಂಬಂಧಗಳ ಬಿಗಿಯನ್ನು ಸಡಿಲಿಸುವ ಸಂಘರ್ಷಗಳನ್ನು ಹತ್ತಿಕ್ಕಿ ಶಾಂತಿ-ಸೌಹಾರ್ದಯುತ ಸಂಬಂಧಗಳನ್ನು ಬೆಳೆಸಿ, ಬಲಪಡಿಸಿ ಮುಂದುವರೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಅಲ್ಲದೆ ಇವರು ಮೈಸೂರು, ಹುರ, ಮೂಗೂರು, ತಗಡೂರು, ಯಳಂದೂರು, ಮುಂತಾದ ನೆರೆಹೊರೆಯ ರಾಜ್ಯಗಳ ಅರಸು ಮನೆತನಗಳೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸಿಕೊಂಡಿದ್ದರು.

ರಾಜ ಪ್ರಭುತ್ವವಿದ್ದರೂ ಈ ಸಾಮಾಜಿಕ ರಚನೆಯು ಪ್ರಜೆಗಳು ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಅವಕಾಶ ನೀಡಿದ ಒಂದು ರೀತಿಯ ಮುಕ್ತ ವ್ಯವಸ್ಥೆಯಾಗಿದ್ದಿತು. ಕಳಲೆಯ ನಿವಾಸಿಗಳು ವಿಜಯನಗರದಿಂದ ಬಂದಿದ್ದ ಕಾಂತಯ್ಯ ಒಡೆಯರಿಗೆ ಪಟ್ಟವನ್ನು ಕಟ್ಟಬೇಕೆಂದು ನಿರ್ಧರಿಸಿ ಉಮ್ಮತ್ತೂರಿನ ನಾಯಕನ ಬಳಿಗೆ ಹೋಗಿ ಈ ಕಾರ್ಯವನ್ನು ನಡೆಸಿಕೊಂಡು ಬೇಕೆಂದು ಕೇಳಿಕೊಂಡರು ಅದರಂತೆ ಪಟ್ಟಾಭಿಷೇಕ ನಡೆಸಿದರು. ಕಳಲೆಯರಸ ತಿಮ್ಮರಾಜ ಒಡೆಯ ಕಾಲಾವಾದಗ. ಅವರ ಹಿರಿಯ ಮಗ ಲಕ್ಷ್ಮೀಕಾಂತ ಒಡೆಯರಿಗೆ ಪಟ್ಟವನ್ನು ಕಟ್ಟಲಾಯಿತು.[೧೦೪] ಇದರಿಂದ ಪ್ರಜೆಗಳೂ ಸಹ ಹಿಂದಿನಿಂದ ಅನೂಚಾನವಾಗಿ ಬಂದಿದ್ದ ಅನುವಂಶಿಕ ಸಾಮಾಜಿಕ ನಿಯಮಗಳನ್ನು ಅನುಸರಿಸಲು ಪ್ರಯತ್ನಿಸುತ್ತಿದ್ದರು. ಅವುಗಳು ಉಲ್ಲಂಘನೆಯಾದಾಗ ಸುಮ್ಮನಿರದೆ ತಮ್ಮದೇ ಆಗಿದ್ದ ರೀತಿಯಲ್ಲಿ ಪ್ರತಿಭಟಿಸಿ ಸರಿಪಡಿಸಲು ಪ್ರಯತ್ನಿಸುತ್ತಿದ್ದರು ಎಂಬುದು ತಿಳಿದುಬರುತ್ತದೆ. ಮೈಸೂರಿನ ದಳವಾಯಿತನವೂ ಸಹ ಸಾಮಾಜಿಕರಲ್ಲಿ ...

ಯೋಜಿಸಿ ಕೈಗೊಂಡ ತೀರ್ಮಾನ. ಇದರಿಂದ ದಳವಾಯಿಗಳೂ ಪ್ರಜಾಭಿಪ್ರಾಯಕ್ಕೆ ಎಷ್ಟು ಮನ್ನಣೆ ಕೊಡುತ್ತಿದ್ದರು ಮತ್ತು ಜನರಿಗೆ ಎಂಥಹ ರಾಜಭಕ್ತಿ ಇದ್ದಿತೆಂಬುದು ಸ್ಪಷ್ಟವಾಗುತ್ತದೆ.

ಎಲ್ಲಾ ಅರಸು ಮನೆತನಗಳಲ್ಲಿ ಪಿತೂರಿ ಹಾಗೂ ದಾಯಾದಿ ಕಲಹಗಳು ಸಾಮಾನ್ಯವಾದ ವಿಷಯ. ಕಳಲೆ ಅರಸು ಮನೆತನವೂ ಇದರಿಂದ ಹೊರತಾಗಿರಲಿಲ್ಲ. ಉಮ್ಮತ್ತೂರಿನ ದೊರೆ ಕಳಲೆಗೆ ಬಂದು ಇಲ್ಲಿಯ ಪ್ರಭು ಹಾಗೂ ರಾಜ ಪರಿವಾರದವರನ್ನು ಕೊಂದು ಹಾಕಿದ್ದನು. ಇದಾದ ಮೇಲೆ ಬದುಕಿ ಉಳಿದಿದ್ದ ಮಗುವನ್ನು ಹುರದ ದೊರೆಯ ಕೈಗೆ ಒಪ್ಪಿಸಿ ಮನ್ನಣೆ ಪಡೆದು ರಾಜಭಕ್ತಿ ಮೆರೆದವರು ಒಬ್ಬ ಸಾಮಾನ್ಯ ಕುರುಬ ಮತ್ತು ಉಪ್ಪನಹಳ್ಳಿಯ ಒರ್ವ ಅಗಸಗಿತ್ತಿ. ಈ ಸಾಮಾಜಿಕ ವ್ಯವಸ್ಥೆಯಲ್ಲಿ ಸಾಮಾನ್ಯ ವ್ಯಕ್ತಿಗಳಿಗೂ ಸಹ ಸಮಾಜ ವಿರೋಧಿ ಶಕ್ತಿಗಳನ್ನು ಸದೆಬಡಿದು ದುರ್ಬಲರೂ, ನಿರಪರಾಧಿಗಳೂ, ಮುಗ್ಧರು ಆಗಿದ್ದ ಜನರನ್ನು ರಕ್ಷಿಸುವ ಜವಾಬ್ದಾರಿ ಇತ್ತು. ಸಮಾಜವು ಸಾಮಾನ್ಯ ಸ್ತರಗಳಿಗೆ ಸೇರಿದ್ದ ಆ ಅಸಾಮಾನ್ಯ ವೀರರನ್ನು ಅತ್ಯಂತ ಗೌರವದಿಂದ ಮಾತ್ರವಲ್ಲದೆ, ಪೂಜನೀಯ ಭಾವದಿಂದ ಕಂಡು ಆರಾಧಿಸುತ್ತಿದ್ದರು. ಈ ರೀತಿಯಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿ ಹಿಂದಿನಿಂದ ಮುಖ್ಯವಾಗಿದ್ದ ಸಾಮಾಜಿಕ ಮೌಲ್ಯಗಳನ್ನು ದಳವಾಯಿಗಳು ಹಾಗೂ ಅದರ ಪ್ರಜೆಗಳನ್ನು ತಮ್ಮ ವ್ಯಕ್ತಿತ್ವದ ಭಾಗವಾಗಿ ಅಳವಡಿಸಿಕೊಂಡು ಅನುಸರಿಸಿ ಉಳಿಸಿಕೊಂಡು ಬಂದರು ಎಂಬುದು ಮೆಚ್ಚತಕ್ಕ ವಿಷಯ.

ಜಾತಿ ಪದ್ಧತಿ

ಈ ಅರಸು ಮನೆತನದವರು ಸಹ ವೈದಿಕ ವರ್ಣಾಶ್ರಮ ಧರ್ಮಸಂರಕ್ಷಣೆ ತಮ್ಮ ಕರ್ತವ್ಯಗಳಲ್ಲಿ ಒಂದೆಂಬುದಾಗಿ ಭಾವಿಸಿದ್ದರು. ಇವರು ತಮ್ಮನ್ನು "ಅಂಗೀರಸ ಬಾರ್ಹ ಸ್ಪತ್ಯಯನ ಭಾರದ್ವಾಜ ಗೋತ್ರ ಆಶ್ವಲಾಯನ ಸೂತ್ರ ಋಕ್ ಶಾಖಾಧ್ಯಾಯಿಗಳು"[೧೦೬] ಎಂಬುದಾಗಿ ಕರೆದುಕೊಳ್ಳುತ್ತಿದ್ದರಿಂದ ವೈದಿಕ ಧರ್ಮದ ಗೋತ್ರ ಪ್ರವರ ಪರಂಪರೆಯನ್ನು ಮುಂದುವರೆಸಿಕೊಂಡು ಬಂದರೆಂಬುದಾಗಿ ಹೇಳಬಹುದು. ಹಿಂದೆ ಇದ್ದ ಸಾಮಾಜಿಕ ಸ್ತರ ವಿನ್ಯಾಸವೂ ಈ ವ್ಯವಸ್ಥೆಯಲ್ಲೂ ಮುಂದುವರೆದುಕೊಂಡು ಬಂದಿದ್ದಿತು. ಈ ಸ್ತರ ರಚನೆಯ ಅಗ್ರಭಾಗದಲ್ಲಿ ಬ್ರಾಹ್ಮಣರಿದ್ದರು. ಅವರಿಗೆ ಸಮಾಜದಲ್ಲಿ ಪೂಜನೀಯ ಸ್ಥಾನ ಇದ್ದಿತು. ಕಾರಣ ಅವರು ಷಟ್ಕರ್ಮ ನಿರತರಾಗಿದ್ದರು. ಅಂದರೆ ಅಧ್ಯಯನ, ಅಧ್ಯಾಪನೆ, ಯಾಗ ಮಾಡುವುದು, ದಾನ ಮತ್ತು ಪರಿಹಾರ, ವೇದವೇದಾಂಗ ಸಂಪನ್ನರೂ, ಸರ್ವಶಾಸ್ತ್ರ ವಿಶಾರದರೂ ಸತ್ಕರ್ಮ ನಿಷ್ಠರೂ, ಸಾಧುಗಳು ಉತ್ತಮ ಕುಟುಂಬಿಗಳೂ ಮತ್ತು ಶಾಂತಿ ಪ್ರಿಯರಾಗಿದ್ದರೂ ಎಂಬುದಾಗಿ ಒಂದು ತಾಮ್ರ ಶಾಸನ ತಿಳಿಸುತ್ತದೆ.

ಧಾರ್ಮಿಕ ಕ್ಷೇತ್ರದಲ್ಲಿ ಅವರದು ಪ್ರಧಾನ ಪಾತ್ರ. ರಾಜಕೀಯ ರಂಗದಲ್ಲೂ ಅಮಾತ್ಯರೂ, ಮತ್ತಿತರ ಅಧಿಕಾರಿಗಳಾಗಿ ಸಾಕಷ್ಟು ಪ್ರಭಾವಶಾಲಿಗಳಾಗಿದ್ದರು. ಅವರು ಸಮಾಜದ ಶೈಕ್ಷಣಿಕ ಹಾಗೂ

ಆಧ್ಯಾತ್ಮಿಕ ಸಂಪತ್ತಿನ ಸಂರಕ್ಷಕರೂ ಅದನ್ನು ಮುಂದಿನ ಪೀಳಿಗೆಗೆ ರವಾನಿಸುವ ಪವಿತ್ರ ಹೊಣೆಗಾರಿಕೆಯನ್ನು ಮೈಗೂಡಿಸಿಕೊಂಡಿದ್ದರು.

ಈ ವ್ಯವಸ್ಥೆಯಲ್ಲಿ ಮೇಲಿನ ಸ್ತರಕ್ಕೆ ಸೇರಿ ಉತ್ತಮ ಸ್ಥಾನಮಾನಗಳನ್ನು ಹೊಂದಿದ್ದ ಇನ್ನೊಂದು ವರ್ಗ ಅರಸರದು. ಇವರು ಪರಾಕ್ರಮಿಗಳೂ, ಪ್ರಜಾನುರಾಗಿಗಳೂ ಮಾತ್ರವಲ್ಲದೆ ವೈಷ್ಣವ, ಶೈವ ಹಾಗೂ ವೀರಶೈವಧರ್ಮಗಳ ತ್ರಿವೇಣಿ ಸಂಗಮದಂತಿದ್ದರು. ಇದಕ್ಕೆ ಸಾಕ್ಷಿಗಳೆಂದರೆ ಕಳಲೆಯಲ್ಲಿರುವ ಶ್ರೀ ಲಕ್ಷ್ಮೀಕಾಂತ ದೇವಾಲಯ, ಸೋಮೇಶ್ವರ ದೇವಾಲಯ ಮತ್ತು ರೇವಣ ಸಿದ್ದೇಶ್ವರ ದೇವಾಲಯಗಳಾಗಿವೆ. ದಳವಾಯಿ ದೇವರಾಜಯ್ಯ ರಾಮಭಕ್ತ ದಳವಾಯಿ ನಂಜರಾಜಯ್ಯ ಶಿವಭಕ್ತ ಎಂಬ ಅಂಶಗಳು ತಿಳಿದು ಬರುತ್ತಿದೆ. ಕಳಲೆಯ ಪ್ರಭುಗಳು ತಮ್ಮಗುರು ಹಾಗೂ ಇನ್ನೂ ಕೆಲವೂ ಶಿವಯೋಗನಿಷ್ಠಾ ಗರಿಷ್ಠ ಆರಾಧ್ಯ ದ್ವಿಜಮಾಹೇಶ್ವರುಗಳಿಗೆ ಅಗ್ರಹಾರವನ್ನು ಕಟ್ಟಿಸಿಕೊಟ್ಟಿದ್ದರು. ಇವರ ಅಧ್ಯಕ್ಷತೆಯಲ್ಲಿ ಆಗಾಗ್ಗೆ ಸೋಮವಾರ, ಶುಕ್ರವಾರಗಳು, ಮತ್ತಿತರ ವಿಶೇಶ ದಿನಗಳಲ್ಲಿ ಆಧ್ಯಾತ್ಮ ವಿಚಾರಗಳ ಬಗ್ಗೆ ಚರ್ಚೆ ನಡೆಸುತ್ತಿದ್ದರು. ಈ ಸ್ಥಳಕ್ಕೆ ಗುರುಕೇರಿ ಕಲ್ಲುಕಟ್ಟೆ ಎಂದು ಹೇಳಲಾಗಿದೆ. ಈ ವರ್ಗದವರು ಸಮಾಜದ ಸರ್ವಾಂಗೀಣ ಬೆಳವಣಿಗೆಗಾಗಿ ಮಾಡಿದ ಶ್ರಮ, ಕೈಗೊಂಡ ಕಾರ್ಯಕ್ರಮ, ಗಳಿಸಿದ ಸಾಧನೆ ಪ್ರಶಂಸಾರ್ಹವಾದುದು.

ಇರುಗಳಲ್ಲದೆ ತೆಲಗು ಪ್ರಾಂತದಿಂದ ಬಂದ ಶೆಟ್ಟಿ, ಶಿಲ್ಪಿ, ಕಮ್ಮಾರ, ಬಡಗಿ, ನಾವಿದ, ಅಗಸ, ನಾಯಕ್, ಕುರುಬ, ಒಕ್ಕಲಿಗ, ಜೋನಿಗ, ನೇಕಾರ, ಚಿಪ್ಪಿಗ, ತೈಲಿಗ, ತಾಳಧಾರಿ, ದಿವಟಿಗೆ, ರಾವುತ, ಮಾವುತ, ಇವರುಗಳೆಲ್ಲರೂ ಈ ಸಮಾಜ ವ್ಯವಸ್ಥೆಯಲ್ಲಿ ಮುಖ್ಯವಾದ ಸ್ತಂಭಗಳಾಗಿದ್ದರು. ಇವರ ದಿನನಿತ್ಯದ ಜೀವನದಲ್ಲಿ ಈ ಜಾತಿ ಪದ್ಧತಿಯು ವಿಭಿನ್ನ ಶ್ರೇಣಿಗಳಲ್ಲಿದ್ದ ಇವರುಗಳ ರೂಢಿಮೂಲವಾಗಿದ್ದ ಸಾಮಾಜಿಕ ಸಂಪ್ರದಾಯ ನಿಯಮ ಹಾಗೂ ಕಟ್ಟುಪಾಡುಗಳನ್ನು ಅನುಸರಿಸುತ್ತಿದ್ದರು.

ಆದರೂ ಸಂಘಜೀವನ ಸಾಮರಸ್ಯದಿಂದ ಕೂಡಿದ್ದಿತು. ಸಮಷ್ಟರ ಹಿತಕ್ಕಾಗಿ ಮತ್ತು ಸಾರ್ವಜನಿಕ-ಧಾರ್ಮಿಕ ಕಾರ್ಯಕಲಾಪಗಳು ಯಶಸ್ಸಿಗಾಗಿ ಜನರು ಪರಸ್ಪರ ಸಹಕಾರ ಮನೋಭಾವದಿಂದ ಕೂಡಿ ಕೆಲಸ ಮಾಡುತ್ತಿದ್ದರು. ಕಳಲೆಯ ಶ್ರೀ ಲಕ್ಷ್ಮಿಕಾಂತ ಸ್ವಾಮಿಯ ವಾರ್ಷಿಕ ರಥೋತ್ಸವವನ್ನು ವಿಜೃಂಭಣೆಯಿಂದ ನಡೆಸುವುದಕ್ಕಾಗಿ ಗ್ರಾಮದ ಎಲ್ಲಾ ವರ್ಗದ ಜನರು ಸೇರಿ ಬಹಳ ಸಂತೋಷದಿಂದ ನಡೆಸುತ್ತಿದ್ದರು ಎಂಬುದನ್ನು ಒಂದು ಶಾಸನದಲ್ಲಿ ವಿವರಿಸಿದೆ.[೧೦೬] ಹೀಗೆ ಸಂಘಟನೆ, ಸಹಕಾರ, ಸ್ವರ ಮೇಳದಂತಹ ಸಾಮಾರಸ್ಯ ಮತ್ತು ಕೂಡುಗೆಲಸ ಸಾಮಾಜಿಕ ಜೀವನದ ಲಕ್ಷಣಗಳಾಗಿದ್ದವು. ಮತ್ತು ಸಾಮಾಜಿಕ-ಧಾರ್ಮಿಕ ಚಟುವಟಿಕೆಗಳಲ್ಲಿ ಪ್ರತಿಬಿಂಬಿತವಾಗಿದೆ. ಈ ಸಾಮಾಜಿಕ ವ್ಯವಸ್ಥೆಯಲ್ಲಿ ಒಗ್ಗಟ್ಟು ಸುಭದ್ರತೆ ಇದ್ದಿತು. ಸಂಘರ್ಷಣೆಗಳು ಆಗಾಗ್ಗೆ ತಲೆದೂರಿದರು. ಸಂಘಟನೆ ಪ್ರಧಾನವಾಗಿದ್ದಿತು. ಮತ್ತು

ಜನರು ಜಾತಿ ಪದ್ಧತಿಯ ಕಟ್ಟುಪಾಡುಗಳಿಗೆ ಬದ್ಧರಾಗಿದ್ದರು. ಇದರಿಂದ ಅವರಲ್ಲಿ ಸಾಮಾಜಿಕ ಹೊಣೆಗಾರಿಕೆಯ ಪ್ರಜ್ಞೆ ಹಾಗೂ ಧಾರ್ಮಿಕ ಮನೋಭಾವ ಬಲವಾಗಿದ್ದಿತು ಎಂಬುದನ್ನು ಸ್ಪಷ್ಟಪಡಿಸುತ್ತವೆ.

ಉಡಿಗೆ ತೊಡಿಗೆಗಳು

ಈ ಸಾಮಾಜಿಕ ವ್ಯವಸ್ಥೆಯಲ್ಲಿ ಚಾಲ್ತಿಯಲ್ಲಿದ್ದ ಉಡಿಗೆ ತೊಡಿಗೆಗಳು ಕಟ್ಟುಪಾಡುಗಳಿಂದ ಕೂಡಿದ್ದ ಸಾಮಾಜಿಕ ಸ್ತರವಿನ್ಯಾಸವನ್ನು ಪ್ರತಿಬಿಂಬಿಸುವಂತಹುದಾಗಿದ್ದುವು. ಪಟ್ಟಾಂಬರ, ಚೀನಾಂಬರ, ಮುಂತಾದ ಬೆಲೆ ಬಾಳುವ ರೇಷ್ಮೆಯ ಸಿದ್ಧ ಉಡುಪುಗಳಿದ್ದವು. ಇವಲ್ಲದೆ ದುಕೂಲಿ, ತಲೆಗೆ ಅತ್ಯಮೂಲ್ಯ ರತ್ನ, ಮುತ್ತು ವಜ್ರಗಳಿಂದ ಕೂಡಿದ್ದ ರುಮಾಲು ಅಥವಾ ಕಿರೀಟ, ನಾನಾ ಬಗೆಯ ಮುತ್ತು ಪಚ್ಚೆ ರತ್ನಗಳಿಂದ ಕೂಡಿದ ಹೇಮಮಯ ಕರ್ಣಕುಂಡಲಗಳು, ಕಂಠಮಾಲೆ, ಕಂಠಾಭರಣ, ತೋಳುಬಂದಿ, ಕಂಕಣ, ಕಟಿಸೂತ್ರ, ಬೆಲೆಕಟ್ಟಲು ಅಸಾಧ್ಯವಾದ ವಜ್ರ, ರತ್ನಖಚಿತ ಹೊನ್ನ ಪಾದರಕ್ಷೆ, ಕಠಾರಿ ಖಡ್ಗ ಇತ್ಯಾದಿಗಳು ಅರಸರ ಉಡುಗೆಗಳಾಗಿದ್ದವು. ಹಾಗೆಯೇ ದಳವಾಯಿಗಳು, ಶ್ರೀಮಂತರು ಮತ್ತಿತರ ಮೇಲ್ವರ್ಗದವರು ಹಾಗೂ ಉನ್ನತಾಧಿಕರಿಗಳು ಸೂಕ್ಷ್ಮವಾದ ಪಟ್ಟೆ, ಚೀನಾಂಬರ, ನೀಲವಾಂಗಿ, ಜರತಾರಿ, ಮುಂಡಾಸು, ನಡುಪಟ್ಟಿ, ಮುತ್ತಿನ ಸರಗಳು, ಕರ್ಣಭೂಷಣ, ಕಂಕಣ, ಉಂಗುರ ಇತ್ಯಾದಿ ತಮ್ಮ ತಮ್ಮ ಅಧಿಕಾರ ಸೂಚಕ ಚಿಹ್ನೆಗಳನ್ನು ಆಯುಧಗಳನ್ನು ಧರಿಸುತ್ತಿದ್ದರು. ಒಂದು ಹಸ್ತಪ್ರತಿಯಲ್ಲಿ ಶಾಯಿಯಲ್ಲಿ ಬರೆದಿರುವ ಉದ್ದನೆಯ ನಿಲುವಂಗಿ ಕಂಠಹಾರ ಮತ್ತು ಕಟಿಯಲ್ಲಿ ನಡುಪಟ್ಟಿಯಿಂದ ಕಟ್ಟಿಕೊಂಡಿರುವ ಕತ್ತಿಯಿಂದ ಕೂಡಿರುವ ಒರೆಯನ್ನು ಧರಿಸಿರುವ ದಳವಾಯಿ ಸೋದರರ ಚಿತ್ರವನ್ನು ಕಾಣಬಹುದು.[೧೦೭] ಅಂಗರಕ್ಷಕರು ಉದ್ದನೆಯ ದಗಲೆ, ಪಟ್ಟಿಯ ದಟ್ಟಿ, ಉತ್ತರೀಯ, ರುಮಾಲು ಹಾಗೂ ಆಯುಧಗಳನ್ನು ಧರಿಸುತ್ತಿದ್ದರು. ರಾಣಿಯರು, ಮೇಲ್ವರ್ಗದ ಮಹಿಳೆಯರು ಮತ್ತು ಗಣಿಕಾಸ್ತ್ರೀಯರೂ ಸಹ ಅತ್ಯಂತ ಬೆಲೆ ಬಾಳುವ ಚಿನ್ನ, ಬೆಳ್ಳಿ, ರತ್ನ ಕಸೂತಿ ಕೆಲಸಗಳಿಂದ ಕೂಡಿದ್ದ ಜರತಾರಿ ಸೀರೆ, ನಾನಾ ಬಗೆಯ ವಜ್ರ ವೈಡೂರ್ಯಗಳನ್ನು ಧರಿಸುತ್ತಿದ್ದರು.[೧೦೮] ಅಲ್ಲದೆ ಮೂಗುತಿ, ದೋತಿ, ಕೇಶಾಭರಣಗಳು, ಬಳೆಗಳು, ಕಡಗ, ಉಂಗುರಗಳು ತೋಳಬಂದಿ, ಶಿಟಿವಸ್ತ್ರ, ಒಡ್ಯಾಣ, ಕಾಲಂದಿಗೆ, ಕಾಲುಗೆಜ್ಜೆ, ಪುಷ್ಯರಾಗ, ಪಚ್ಚೆ ಇತ್ಯಾದಿಗಳಿಂದ ತಮ್ಮನ್ನು ಅಲಂಕರಿಸಿ ಕೊಳ್ಳುತ್ತಿದ್ದರು.

ಹೀಗೆ ಅರಸರ ಹಾಗೂ ಸಮಾಜದ ಮೇಲ್ವರ್ಗಗಳ ಸ್ತ್ರೀ ಪುರುಷರ ಉಡಿಗೆ-ತೊಡಿಗೆಗಳು ಆಡಂಬರ ಪೂರ್ಣವೂ, ವೈಭವೋಪೇತವೂ ಸಂಪತ್ಸೂಚಕವೂ ಆಗಿದ್ದರೆ, ಬ್ರಾಹ್ಮಣರ ಹಾಗೂ ಸಾಮಾನ್ಯ ಸ್ತ್ರೀ-ಪುರುಷರ ಉಡಿಗೆ-ತೊಡಿಗೆಗಳು ಸರಳವಾಗಿದ್ದವು. ವೈದಿಕ ಬ್ರಾಹ್ಮಣರು ಧೋತರ ಹಾಗು ಉತ್ತರೀಯವನ್ನು ಮತ್ತು ಅರಮನೆಗೆ ಸಂಬಂಧಪಟ್ಟಿದ್ದ ಬ್ರಾಹ್ಮಣರು ಪಟ್ಟಿಯ ಅಂಚುಗಳಿದ್ದ ಬೆಲೆಬಾಳುವ ಧೋತರ, ಮೇಲುಹೊದಿಕೆ, ಮತ್ತು ಪಟ್ಟೆಯ ರುಮಾಲನ್ನು ಧರಿಸುತ್ತಿದ್ದರು. ಸಾಮಾನ್ಯ

ಜನರು ಹತ್ತಿಬಟ್ಟೆಯ ಉಡುಪುಗಳನ್ನು ಉಪಯೋಗಿಸುತ್ತಿದ್ದರು. ಸಾಮಾನ್ಯ ಸ್ತ್ರೀಯರು ಸಾದಾ ಸೀರೆ ಸಾಧಾರಣ ಓಲೆ, ಮೂಗುತಿ, ಸರ, ಬಳೆ ಕಡಗ, ಕಾಲಂದಿಗೆ ಇತ್ಯಾದಿಗಳನ್ನು ಬಳಸುತ್ತಿದ್ದರು. ವಿವಿಧ ಧರ್ಮಗಳ ಮುಖ್ಯಸ್ಥರು ಹಾಗೂ ಅನುಯಾಯಿಗಳು ಆಯಾಯ ಧರ್ಮ ಸೂಚಕ ಸಂಕೇತಗಳನ್ನು ಧರಿಸುತ್ತಿದ್ದರು. ಹೀಗೆ ಉಡಿಗೆ ತೊಡಿಗೆಗಳು ಸಮಾಜದ ವಿಭಿನ್ನ ಸ್ತರಗಳನ್ನು ಪ್ರತ್ಯೇಕತೆಯನ್ನು ಹಾಗೂ ವಿವಿಧ ಪಂಥಗಳ ಅಸ್ತಿತ್ವವನ್ನು ಎತ್ತಿ ತೋರುವಂತಿದ್ದುವು.

ಹಬ್ಬ ಹರಿದಿನಗಳು ಹಾಗೂ ಜಾತ್ರೆ ಉತ್ಸವಗಳು

ಹಬ್ಬಹರಿದಿನ ಮನರಂಜನಾ ಕಾರ್ಯಕ್ರಮಗಳು ಹಾಗೂ ಜನೋಪಯೋಗಿ ಸಾರ್ವಜನಿಕ ಚಟುವಟಿಕೆಗಳು ಸಾಮರಸ್ಯದಿಂದ ಕೂಡಿದ್ದ ಸಾಂಘಿಕ ಜೀವನದ ದರ್ಪಣದಂತಿದ್ದುವು. ಸಂಕ್ರಾಂತಿ, ಮಹಾಶಿವರಾತ್ರಿ, ಉಗಾದಿ, ಕಾಮನಹಬ್ಬ, ರಾಮನವಮಿ, ವರಮಹಾಲಕ್ಷ್ಮಿ ಪೂಜೆ, ಕೃಷ್ಣ ಜನ್ಮಾಷ್ಟಮಿ, ಗೌರಿ ಗಣೇಶವ್ರತ, ನವರಾತ್ರಿ, ದುರ್ಗಾಷ್ಟಮಿ, ಮಹಾನವಮಿ, ವಿಜಯದಶಮಿ, ದೀಪಾವಳಿ ಮುಂತಾದವು ಎಲ್ಲರಿಗೂ ಸಾಮಾನ್ಯವಾಗಿದ್ದ ಹಬ್ಬಹರಿದಿನಗಳಾಗಿದ್ದವು. ಇವುಗಳಲ್ಲದೆ ಶ್ರೀ ಲಕ್ಷ್ಮೀಕಾಂತಸ್ವಾಮಿ ದೇವಾಲಯದಲ್ಲಿ ರಥೋತ್ಸವ, ದೋಲೋತ್ಸವ, ಕುದುರೆ, ಗರುಡ, ಹನುಮಂತ, ಸಿಂಹ ಮುಂತಾದ ವಾಹನೋತ್ಸವ, ವಸಂತೋತ್ಸವ ಮತ್ತಿತರ ಉತ್ಸವ ಸಮಾರಂಭಗಳು ನಡೆಯುತ್ತಿದ್ದವು. ಗ್ರಾಮದೇವತೆಯಾದ ಕೈವಲ್ಯದೇವಿಯ ಮಡೆ ಉತ್ಸವ ಮತ್ತು ಕೈವಲ್ಯದೇವಿ ಅಕ್ಕ ಎಂದು ಪರಿಗಣಿಸಿರುವ ಹಾಗೂ ೩೩ ಹಳ್ಳಿಗಳಿಂದ ಬಂದು ಸೇರುತ್ತಿದ್ದ ಹಲವಾರು ನೆಂಟರಿಷ್ಟರೊಡಗೂಡಿ ನಡೆಸಲಾಗುತ್ತಿದ್ದ ಆಲದಮ್ಮ ಗ್ರಾಮದೇವತೆಯ ಉತ್ಸವ ಇತ್ಯಾದಿಗಳಲ್ಲಿ ಜನರೆಲ್ಲರು ಒಟ್ಟಾಗಿ ಭಾಗವಹಿಸುತ್ತಿದ್ದರು. ಈ ಸಂದರ್ಭದಲ್ಲಿ ನಡೆಯುತ್ತಿದ್ದ ಸಂತೆಗಳು ಜನರಿಗೆ ಪರಸ್ಪರ ಕಲೆತು ಮಾತನಾಡಿ ಸರಕುಗಳನ್ನಲ್ಲದೆ ಯೋಗಕ್ಷೇಮ ಮತ್ತಿತರ ಕೌಟುಂಬಿಕ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಲು, ಆತ್ಮೀಯವಾದ ಸಂಬಂಧಗಳನ್ನು ಬೆಳೆಸಿಕೊಳ್ಳಲು ಅವಕಾಶವನ್ನು ಒದಗಿಸಿಕೊಡುತ್ತಿದ್ದ ಸಾರ್ವಜನಿಕ ಕಾರ್ಯಕ್ರಮಗಳಾಗಿದ್ದವು. ಈ ಉತ್ಸವ ಸಮಾರಂಭಗಳು ಜನರಿಗೆ ಕೇವಲ ಧಾರ್ಮಿಕ ಚಟುವಟಿಕೆಗಳಿಗೆ ಮುಕ್ತವಾಗಿರದೆ, ಒಟ್ಟಾಗಿ ಸೇರಿ ನಡೆಸಲಾಗುತ್ತಿದ್ದ ಪವಿತ್ರ ಹಾಗೂ ಮನರಂಜಕ ಕಾರ್ಯಕ್ರಮಗಳೂ ಆಗಿದ್ದುವು. ಇವುಗಳಲ್ಲದೆ ಜಟ್ಟಿ ಕಾಳಗ, ಮಲಯುದ್ಧ, ಚದುರಂಗದಾಟ, ಪಗಡೆಯಾಟ, ಹುಂಜ, ಗೂಳಿ ಮತ್ತಿತರ ಪ್ರಾಣಿ ಕಾಳಗ, ಬೊಂಬೆಯಾಟ, ಅರಸರ ಹಾಗೂ ದೇವರ ವೈಭವಯುಕ್ತ ಮೆರವಣಿಗೆ, ಮೇಲ್ ವರ್ಗದವರಿಗೆ ಬೇಟೆ[೧೧೯], ರಾಜಸ್ಥಾನಗಳಲ್ಲಿ ಮತ್ತು ಗುರು ಮಠಗಳಲ್ಲಿ ನಡೆಯುತ್ತಿದ್ದ ವಿದ್ವದ್ಗೋಷ್ಠಿಗಳು, ಇತ್ಯಾದಿ ಮನರಂಜಕ ಕಾರ್ಯಕ್ರಮಗಳು ಪುರಾಣ ಹಾಗೂ ಆಧ್ಯಾತ್ಮಿಕ ವಿಚಾರಗಳ ಶ್ರವಣ ಹರಿಕಥೆ ಮುಂತಾದವು ಜನರಿಗೆ ಮನರಂಜನೆಯನ್ನು ಒದಗಿಸುತ್ತಿದ್ದವಲ್ಲದೆ, ಹೃದಯಕ್ಕೆ ತಂಪನ್ನು ಆತ್ಮತೃಪ್ತಿಯನ್ನು ನೀಡುತ್ತಿದ್ದವು.

ಜೀವನ ಕ್ಷಣಿಕವಾದುದು ಆದ್ದರಿಂದ ಧರ್ಮವನ್ನು ಅವಲಂಬಿಸಿ ಪುಣ್ಯಗೊಳಿಸಿ ಸದ್ಗತಿಯನ್ನು ಸಂಪಾದಿಸಿಕೊಳ್ಳಬೇಕು ಎಂಬ ಹಿಂದಿನಿಂದ ಬೆಳೆದು ಬಂದಿದ್ದ ನಂಬಿಕೆ, ಭಾವನೆಗಳು ಈ ಸಾಮಾಜಿಕ ವ್ಯವಸ್ಥೆಯಲ್ಲಿ ಬೇರೂರಿದ್ದವು. ಧರ್ಮವೆಂದರೆ ಎಲ್ಲಾ ಧರ್ಮಗಳು ಒತ್ತಿ ಹೇಳಿರುವ, ಎತ್ತಿ ಹಿಡಿದಿರುನ ದೇಗುಲ ನಿರ್ಮಾಣ, ದಾನ, ಕೆರೆ ಕಟ್ಟಿಸುವುದೇ ಮುಂತಾದ ಲೋಕೋಪಯೋಗಿ ಪುಣ್ಯಕಾರ್ಯಗಳು. ಕಳಲೆಯ ಅರಸರು ಹಾಗೂ ದಳವಾಯಿಗಳು ಇಲ್ಲಿನ ಲಕ್ಷ್ಮೀಕಾಂತ ಸ್ವಾಮಿ ದೇವಾಲಯವನ್ನು ರಿಪೇರಿ ಮಾಡಿಸಿ ವಿಸ್ತರಿಸಿದರು. ಹಳೆಯ ನವರಂಗ ಬಿದ್ದು ಹೋಗಿದ್ದರಿಂದ ೯ ಅಂಕಣಗಳ ಹೊಸ ನವರಂಗವನ್ನು ಬಹುಶಃ ಕಾಂತಯ್ಯ ಕಟ್ಟಿಸಿದನು. ದಳವಾಯಿ ಚೆಲುವೇ ಅರಸ್ ಮಹಾದ್ವಾರದ ಮೇಲಿನ ಗೋಪುರ, ಮುಖಮಂಟಪ, ವರಾಂಡ, ದೇವರಗೂಡುಗಳಿಂದ ಕೂಡಿದ್ದ ಪ್ರಾಕಾರ ಮತ್ತು ಒಂದು ಅಂಕಣದ ದೇಶಿಕರ ಗುಡಿಯನ್ನು ನಿರ್ಮಿಸಿದರು. ತೆಂಗಿನಮರದ ನರಸಿಂಹಾಚಾರ್ ಎಂಬುವವರು ಆ ಗುಡಿಯನ್ನು ಇನ್ನು ಒಂದು ಅಂಕಣ ಹೆಚ್ಚಾಗಿ ವಿಸ್ತರಿಸಿದರು ಮತ್ತು ಸರ್ದಾರ್ ಕಾಂತರಾಜ್ ಅರಸ್ ಲೋಹದ ಗರುಡವಾಹನವನ್ನು ಸರಿಪಡಿಸಿದರು. ದಳವಾಯಿಗಳು ಈ ದೇವಾಲಯದ ವಿಚಾರದಲ್ಲಿ ಅತ್ಯಂತ ಅಕ್ಕರೆಯನ್ನು ಬೆಳೆಸಿಕೊಂಡಿದ್ದರು. ಅದಕ್ಕಾಗಿ ಸಾಕಷ್ಟು ದತ್ತಿಗಳನ್ನು ಕಾಣಿಕೆಗಳನ್ನು ಕೊಟ್ಟಿದ್ದರು. ದಳವಾಯಿ ದೊಡ್ಡಯ್ಯನ ಮನವಿಗೆ ಮಣಿದು ಮೈಸೂರಿನ ಅರಸ ಇಮ್ಮಡಿ ಕೃಷ್ಣರಾಜ ಒಡೆಯರು ಈ ದೇವಸ್ಥಾನಕ್ಕೆ ೧೦೦ ವರಹಗಳ ಆದಾಯವಿದ್ದ ಒಂದು ಹಳ್ಳಿಯನ್ನು ನೀಡಿದ್ದರು. ನಂತರ ನಂಜರಾಜನ ಕಾಲದಲ್ಲೂ ಸಹ ಒಂದು ಗ್ರಾಮವನ್ನು ಕಾಣಿಕೆಯಾಗಿ ನೀಡಿದ್ದರು.[೧೧೦]

ದಳವಾಯಿ ನಂಜರಾಜ ಈ ದೇವರಿಗೆ ೨ ಬೆಳ್ಳಿ, ಚಾಮರಗಳು ೨ ಯಾಳಿಗಳು, ಒಂದು ಚಿತ್ರ[೧೧೧], ಶಂಖ[೧೧೨], ಬೆಳ್ಳಿ ಬಟ್ಟಲುಗಳನ್ನು, ಚಲುವೇ ಅರಸ್ ಒಂದು ಕಂಚಿನ ಘಂಟೆಯನ್ನು ಮತ್ತು ಟಿಪ್ಪು ಸುಲ್ತಾನ್ ೪ ಬೆಳ್ಳಿ ಬಟ್ಟಲುಗಳು ಹಾಗೂ ಒಂದು ಬೆಳ್ಳಿ ತಟ್ಟೆಯನ್ನು ಕಾಣಿಕೆಯಾಗಿ ನೀಡಿದನು.[೧೧೩] ಈ ದೇವಾಲಯದಲ್ಲಿ ನಡೆಯುತ್ತಿದ್ದ ವಾರ್ಷಿಕ ರಥೋತ್ಸವವನ್ನು ದಳವಾಯಿ ನಂಜರಾಜ ತಿರುನಾಳ್ ಎಂಬುದಾಗಿ ಕರೆಯಲಾಗಿದ್ದಿತು[೧೧೪] ಎಂಬುದು ಗಮನಾರ್ಹ ವಿಷಯ. ಲಕ್ಷ್ಮೀಕಾಂತಸ್ವಾಮಿಯ ರಥೋತ್ಸವವು ಪ್ರತಿ ವರ್ಷ ಮಾರ್ಚ್ ತಿಂಗಳಿನಲ್ಲಿ ಬಹಳ ವಿಜೃಂಭಣೆಯಿಂದ ಜರಗುತ್ತದೆ. ರಾತ್ರಿ ನಡೆವ ಪುಷ್ಪಾಲಂಕೃತ ತೇರಡಿ ಉತ್ಸವ ವೈರಮುಡಿ ಎಂದೇ ಪ್ರಸಿದ್ಧವಾಗಿದೆ.

ದಳವಾಯಿಗಳು ಮೈಸೂರು ಸಂಸ್ಥಾನದಲ್ಲಿದ್ದ ಇತರ ದೇವಸ್ಥಾನಗಳಿಗೂ ಸಾಕಷ್ಟು ದತ್ತಿಗಳನ್ನು, ಕಾಣಿಕೆಗಳನ್ನು ನೀಡಿದ್ದಾರೆ. ದೇಗುಲಗಳನ್ನು ನಿರ್ಮಿಸಿದ್ದಾರೆ. ದಳವಾಯಿ ದೊಡಯ್ಯ ಶ್ರೀರಂಗಪಟ್ಟಣದಲ್ಲಿ ದಳವಾಯಿ ದೇಗುಲ ಎಂಬುದಾಗಿ ಹೆಸರಿಸಲಾಗಿದ್ದ ಜೋತಿರ್ಮಹೇಶ್ವರ ಕಟ್ಟಿಸಿದ ಎಂಬುದಾಗಿ ಹೇಳಲಾಗಿದೆ. ಅವರು ಮೇಲುಕೋಟೆಯ ದೇವಸ್ಥಾನಕ್ಕೆ ಬೆಳ್ಳಿ ಕರ್ಪೂರದಾರತಿಯನ್ನು[೧೧೫] ಮತ್ತು ಕಳಲೆ

ಕಾಂತಯ್ಯ ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವರಿಗೆ ಮೂರು ಬೆಳ್ಳಿ ಬಟ್ಟಲುಗಳನ್ನು ಹಾಗೂ ಒಂದು ಬೆಳ್ಳಿ ಕರ್ಪೂರ ದಾರತಿಯನ್ನು ಕಾಣಿಕೆಗಳಾಗಿ ಅರ್ಪಿಸಿದೆಂಬುದಾಗಿ ಶಾಸನಗಳಿಂದ ತಿಳಿದುಬರುತ್ತದೆ.

ಈ ವಿಭಿನ್ನ ಸಾಮಾಜಿಕ ಚಟುವಟಿಕೆಗಳನ್ನು ಪರ್ಯಾಲೋಚಿಸಿದಾಗ ಈ ಸಾಮಾಜಿಕ ವ್ಯವಸ್ಥೆಯಲ್ಲಿ ಪರಮತ ಸಹಿಷ್ಣತೆ ಮಾತ್ರವಲ್ಲದೆ, ಅವುಗಳ ಬಗ್ಗೆ ಗೌರವಾದರಗಳನ್ನು ಕೋರುವುದು ಜನ ಜೀವನದ ಪ್ರಮುಖ ಅಂಶವಾಗಿದ್ದಿತು ಎಂಬುದಾಗಿ ಹೇಳಬಹುದು.

ಶಿಕ್ಷಣ ವ್ಯವಸ್ಥೆ

ದಳವಾಯಿಗಳು ಶಿಕ್ಷಣಕ್ಷೇತ್ರಕ್ಕೂ ಸಾಕಷ್ಟು ಗಮನವನ್ನು ಕೊಟ್ಟರೆಂಬುದು ಇರುವ ಆಧಾರಗಳಿಂದ ತಿಳಿಯಬಹುದಾಗಿದೆ. ಪುಷ್ಪಕ್ಕೆ ಪರಿಮಳದಂತೆ ಶಿಕ್ಷಣಕ್ಕೆ ಸಂಸ್ಕೃತಿ, ಕೋಶಾಗಾರಕ್ಕೆ ಕೀಲಿಯಂತೆ ಸಂಸ್ಕೃತಿಗೆ ಶಿಕ್ಷಣ ಎಂಬ ಸತ್ಯದ ಅರಿವು ಅವರಿಗಿದ್ದಿತು. ದಳವಾಯಿ ದೇವರಾಜಯ್ಯ ಕಾವೇರಿ ಕಪಿಲಾ ನದಿಗಳ ಸಂಗಮ ಸ್ಥಳದಲ್ಲಿ ೧೪ ಗ್ರಾಮಗಳನ್ನು ಒಟ್ಟುಗೂಡಿಸಿ ರಾಮಚಂದ್ರಪುರ ಎಂಬ ಅಗ್ರಹಾರವನ್ನು ನಿರ್ಮಿಸಿ ಅಲ್ಲಿ ೧೨೦ ವೃತ್ತಿಗಳಾಗಿ ವಿಭಾಗಿಸಿದ್ದನು. ಅಲ್ಲಿ ಪ್ರತಿಯೊಬ್ಬರಿಗಾಗಿ ಹಾಸಿಗೆ ತಲೆದಿಂಬು, ಸುಂದರ ನೆಲಂಗಂಬಿನ, ಆಸನ ಆರಾಧಾನಾ ಪಾತ್ರೆಗಳು, ಗೋವು, ಅಡಿಗೆಗಾಗಿ ಪಾತ್ರೆ-ಪಡಿಗಳು ಎಲ್ಲಾ ಬಗೆಯ ಧಾನ್ಯಗಳು, ತುಪ್ಪ, ತೈಲ ಹಾಗೂ ಎಲ್ಲಾ ತರಹದ ಆಹಾರ ಪದಾರ್ಥಗಳಿಂದ ತುಂಬಿದ್ದ ಮನೆಗಳನ್ನು ಕಟ್ಟಿಸಿದ್ದನು.[೧೯೬] ಎಲ್ಲಾ ಬ್ರಾಹ್ಮಣರಿಗೂ ಹಾಗೂ ಅವರ ಪತ್ನಿ ಮಕ್ಕಳೆಲ್ಲಾರಿಗೂ ಅತ್ಯುತ್ತಮ ಉಡುಪು, ಕರ್ಣಾಭರಣ, ಕಂಠಾಭರಣ, ಉಂಗುರು ಇತ್ಯಾದಿಗಳನ್ನು ಕಾಣಿಕೆಯಾಗಿ ಕೊಟ್ಟನು.

ದಳವಾಯಿ ನಂಜರಾಜಯ್ಯನು ಕನ್ನಂಬಾಡಿಯಲ್ಲಿ ಒಂದು ಆ ಅಗ್ರಹಾರವನ್ನು ನಿರ್ಮಿಸಿ ಅದನ್ನು ನಂಜರಾಜ ಸಮುದ್ರ ಎಂಬ ಹೆಸರಿನಿಂದ ಕರೆದು ಹೇರಳವಾದ ದಾನವನ್ನು ನೀಡಿದ್ದನು. ಕಳಲೆಯಲ್ಲಿ ಮೈಸೂರಿನ ಪ್ರಭು ಕೃಷ್ಣರಾಜ ಒಡೆಯರು ೬ ಗ್ರಾಮಗಳನ್ನು ಕೂಡಿಸಿ ಅಪ್ರತಿಮ ಕೃಷ್ಣರಾಗ ಸಮುದ್ರ ಎಂಬ ಹೆಸರಿನಿಂದ ಅಗ್ರಹಾರವೊಂದನ್ನು ಸ್ಥಾಪಿಸಿ ೪೩ ವೃತ್ತಿಗಳಾಗಿ ವಿಭಾಗಿಸಿ ದ್ವಿಜೋತ್ತಮರಿಗೆ ದಾನವಾಗಿ ನೀಡಿದನು.[೧೯೭] ಅಗ್ರಹಾರಗಳನ್ನು ದಾನವಾಗಿ ಪಡೆದಿದ್ದ ಬ್ರಾಹ್ಮಣರೇ ಮಹಾಜನರು ಹಾಗೂ ಅವರೆ ಪ್ರಭುಗಳಾಗಿದ್ದರು. ಹಿಂದಿದ್ದಂತೆ ಈ ಅಗ್ರಹಾರಗಳು ಪ್ರಧಾನ ವಿದ್ಯಾಕೇಂದ್ರಗಳಾಗಿದ್ದವು. ಇಲ್ಲಿ ಬಹುಶಃ ಹೆಚ್ಚಾಗಿ ಸಂಸ್ಕೃತ ಶಿಕ್ಷಣಕ್ಕೆ ಗಮನವನ್ನು ಕೂಡಲಾಗಿದ್ದಿತು. ಪಟ್ಟಣ ಊರುಗಳಲ್ಲಿ ಬ್ರಾಹ್ಮಣ ಪಂಡಿತರು ವಾಸಿಸುತ್ತಿದ್ದ ಸ್ಥಳಗಳೇ ಬ್ರಹ್ಮಪುರಿಗಳು. ಈ ಕಾಲದಲ್ಲಿ ಉಚ್ಚ ಶಿಕ್ಷಣ ಕೇಂದ್ರಗಳಾಗಿದ್ದ ಘಟಕಾ ಸ್ಥಾನಗಳೂ ಇದ್ದಿರಬೇಕು. ಕಾರಣ ಕಳಲೆಯ ಕೈವಲ್ಯದೇವಿ ದೇಗುಲದ ಉತ್ತರದಲ್ಲಿ ಜಗತೀ ಬಳಿ ನೆಟ್ಟಕಲ್ಲಿನ ಮೇಲಿರುವ ಶಾಸನವೊಂದು "ಮುವತ್ತನಾಲ್ಕು ಘಟಿಕ ಸ್ಥಾನಮುಂ"[೧೯೮] ಎಂದು ಹೇಳುತ್ತದೆ.

ಕನ್ನಡ ಸಾಹಿತ್ಯಕ್ಕೆ ಕಳಲೆ ದಳವಾಯಿಗಳ ಕೊಡುಗೆಯನ್ನು ಗಮನಿಸಿದರೆ ವಿದ್ಯಾಭ್ಯಾಸದ ಬಗ್ಗೆಯೂ ಸಾಕಷ್ಟು ಕಾಳಜಿಯನ್ನು ವಹಿಸಲಾಗಿದ್ದಿತು ಎಂಬುದಾಗಿ ಹೇಳಬಹುದು. ಜನಸಾಮಾನ್ಯರ ಶಿಕ್ಷಣದ ಬಗ್ಗೆ ಶಾಸನಗಳಲ್ಲಿ ಯಾವುದೇ ಮಾಹಿತಿ ದೊರೆಯುವುದಿಲ್ಲ. ಆದರೂ ಸಹ ಅವರನ್ನು ಪಂಡಿತರನ್ನಾಗಿ ಮಾಡುವ ಗುರಿ ಇಲ್ಲದಿದ್ದರೂ ಸಹ ಅವರಿಗೆ ಅಕ್ಷರ ಜ್ಞಾನವನ್ನು ನೀಡಿ ದಿನನಿತ್ಯದ ಬದುಕಿಗೆ ಹಾಗೂ ವ್ಯವಹಾರ ನಿರ್ವಹಣೆ ಮಾಡಿಕೊಂಡು ಹೋಗಲು ಸಹಾಯಕವಾದ ರೀತಿಯಲ್ಲಿ ಅವರಿಗೆ ಓದು, ಬರಹ, ವ್ಯವಹಾರಿಕ ಗಣಿತ, ಪ್ರಾದೇಶಿಕ ಜ್ಞಾನ ಇತ್ಯಾದಿಗಳನ್ನು ಜನಸಾಮಾನ್ಯರಿಗೆ ಒದಗಿಸಿಕೊಡುವ ವ್ಯವಸ್ಥೆ ಇದ್ದಿರಬಹುದು. ಎಂಬುದನ್ನು ಹರಕೆ ಪದ್ಯಗಳ ಸಹಾಯದಿಂದ ಗುರುತಿಸಬಹುದಾಗಿದೆ.

ಅಂದಿನ ಕಾಲದಲ್ಲಿ ಶೈಕ್ಷಣಿಕ ಸಂಸ್ಥೆಗಳಾಗಿ ಕೆಲವು ವೀರಶೈವ ಮಠಗಳು ಸಹ ಆಸಕ್ತಿಯನ್ನು ಹೊಂದಿದ್ದವು ಎಂಬ ಅಂಶವನ್ನು ಕೆಲವು ಆಧಾರಗಳಿಂದ ತಿಳಿಯಬಹುದಾಗಿದೆ. ಅವುಗಳು ಧಾರ್ಮಿಕ, ಶೈಕ್ಷಣಿಕ ಹಾಗೂ ಆಧ್ಯಾತ್ಮಿಕ ಸಂಸ್ಥೆಗಳಾಗಿದ್ದಿರಬೇಕು. ದಳವಾಯಿ ದೇವರಾಜರಾಯನ ಮುಖ್ಯ ಅಂಗರಕ್ಷಕನಾಗಿದ್ದ ಶಂಕರಯ್ಯ ಎಂಬುವನ ಕೌಂಡಿನ್ಯ ನದಿಯ ದಡದಲ್ಲಿ ಮಠವೊಂದನ್ನು ಕಟ್ಟಿಸಿದನು. ಅಲ್ಲಿ ದಿನ ನಿತ್ಯ ಎಲ್ಲರ ಊಟೋಪಾಚಾರಕ್ಕಾಗಿ ವ್ಯಾಪಾರಿಗಳು ವಿವಿಧ ಸರಕುಗಳ ಮೇಲೆ ವಿಧಿಸಲಾಗುತ್ತಿದ್ದ ಸುಂಕಾದಾಯವನ್ನು ಕಾಣಿಕೆಯಾಗಿ ನೀಡಿದ್ದನು. ಕಳಲೆಯ ಮಲ್ಲಿನಾಥ ಒಡೆಯನು ಕಳಲೆಗೆ ಸೇರಿದ್ದ ಪುರ ಎಂಬ ಗ್ರಾಮವನ್ನು ಸಿದ್ಧರಾಮೇಶ್ವರ ಎಂಬ ಗುರುವಿನ ಶಿಷ್ಯನೊಂದಿಗೆ ಶಿಕ್ಷಣವನ್ನು ಪಡೆದಿದ್ದನು. ದಳವಾಯಿ ನಂಜರಾಜಯ್ಯನು ಮರುಳದೇವರ ಮಠಕ್ಕೆ ದತ್ತಿಯೊಂದನ್ನು ಕೊಟ್ಟನು. ಚಿಕ್ಕಯ್ಯನೆಂಬ ಸಾಮಾನ್ಯನೊಬ್ಬ ಸ್ವಂತ ಖರ್ಚಿನಲ್ಲಿ ಒಂದು ಜಂಗಮ ಮಠವನ್ನು ಕಟ್ಟಿಸಿದ್ದನು. ಮಲ್ಲಿಕಾರ್ಜುನಸ್ವಾಮಿ ಎಂಬ ಗುರುವಿನ ಆದೇಶದ ಮೇರೆಗೆ ಕಳಲೆಯ ಅರಸು ಕಳಲೆಯ ಪ್ರಜೆಗಳಿಗೆ ಹಲವಾರು ತೆರಿಗೆಗಳನ್ನು ಮನ್ನಾ ಮಾಡುವುದಾಗಿ ಭರವಸೆಯಿತ್ತನು ಎಂಬುದಾಗಿ ಶಾಸನವೊಂದು ವಿವರಿಸುತ್ತದೆ.[೧೧೯]

ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಅಷ್ಟೇನು ಮಾಹಿತಿಗಳಿಲ್ಲ. ಆದರೂ ರಾಜಮನೆತನದ ಹಾಗೂ ಮೇಲ್ವರ್ಗಗಳ ಮಹಿಳೆಯರು ಮತ್ತು ಅರಮನೆಗಳಲ್ಲಿ ಕೆಲಸ ಮಾಡುತ್ತಿದ್ದ ಹಲವು ಸ್ತ್ರೀಯು ತಕ್ಕಮಟ್ಟಿಗೆ ವಿದ್ಯಾವತಿಯರಾಗಿದ್ದರು. ಕಳಲೆಯ ರಾಜಕುಮಾರಿ ಚೆಲುವಾಂಬೆ ಕನ್ನಡ ಹಾಗೂ ಸಂಸ್ಕೃತ ಭಾಷೆಗಳನ್ನು ಚೆನ್ನಾಗಿ ಕಲಿತವಳಾಗಿದ್ದಳು. ಹಾಗೆಯೇ ಕಲ್ಯಾಣ, ಆದಿಶೇಷ-ವಾಯುಗಳ ಸಂವಾದ, ವೆಂಕಟಾಚಲ ಮಹಾತ್ಮೆ, ಲಾಲಿಪದ, ಅಲಮೇಲುಮಂಗೆ ಲಾಲಿ ಪದ ಇತ್ಯಾದಿಗಳನ್ನು ರಚಿಸಿ ಖ್ಯಾತಿ ಪಡೆದಿದ್ದಳು. ಸ್ತ್ರೀಯರಿಗೆ ಸಂಗೀತ ಹಾಗೂ ನರ್ತನ ಕಲೆಗಳಲ್ಲಿ ವಿಶೇಷ ತರಬೇತಿಯನ್ನು ಕೊಡಲಾಗುತ್ತಿದ್ದಿತು. ಸಾಮಾನ್ಯ ವರ್ಗದ ಸ್ತ್ರೀಯರ ಶಿಕ್ಷಣದ ಬಗ್ಗೆ ಹೆಚ್ಚಿನ ವಿವರಗಳೂ ದೊರೆತಿಲ್ಲ. ಮಹಿಳೆಯರು

ಮಠಗಳನ್ನು ನಿರ್ಮಿಸಲು ಆಸಕ್ತಿಯನ್ನೆ ಹೊಂದಿದ್ದರು ಎಂಬ ವಿಷಯ ಶಾಸನಗಳಿಂದ ತಿಳಿದು ಬರುತ್ತದೆ. ಮೈಸೂರಿನ ಒಡೆಯರ ವಂಶದ ದೇವಾಜಮ್ಮ ಎಂಬುವರು ಕಳಲೆಯಲ್ಲಿ ಒಂದು ಮಠವನ್ನು ಕಟ್ಟಿಸಿ ಆ ಮಠಕ್ಕೆ ಶಿವಾರ್ಪಿತವಾಗಿ ಕುರಹಟ್ಟಿ, ಸಂಬುಪುರ ಹಾಗು ಉಪ್ಪನಹಳ್ಳಿ ಗ್ರಾಮಗಳನ್ನು ದಾನವಾಗಿ ನೀಡಿದಳು.[೨೦] ಕಳಲೆಯ ರಾಜಕುಮಾರಿ ಮಲ್ಲಾಜಮ್ಮನು ಶಿಲಾ ಮಠವೊಂದನ್ನು ಕಟ್ಟಿಸಿದಳು. ಹೀಗೆ ಸ್ತ್ರೀಯರು ಸಹ ಶೈಕ್ಷಣಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ತಮ್ಮದೇ ಆದ ಕೊಡುಗೆಗಳನ್ನು ಸಲ್ಲಿಸುವುದರ ಜೊತೆಗೆ ಮಠಗಳನ್ನು ನಿರ್ಮಾಣ ಮಾಡುವ ಮೂಲಕ ಅವುಗಳನ್ನು ವಿದ್ಯಾಕೇಂದ್ರಗಳಾಗಿ ಮಾರ್ಪಡಿಸಿದರು ಎಂಬುದು ಒಂದು ಮುಖ್ಯವಾದ ವಿಷಯವಾಗಿದೆ.

ದಳವಾಯಿಗಳು ಬಹುಪತ್ನಿತ್ವ ವಿವಾಹ ಪದ್ಧತಿಯನ್ನು ಅನುಸರಿಸಿದ್ದರೂ ಏಕಪತ್ನಿ ವಿವಾಹದ ಬಗ್ಗೆ ಬಹುಶಃ ಸಾಮಾನ್ಯ ಜನರಲ್ಲಿ ರೂಢಿಯಲ್ಲಿದ್ದಿತು. ಉತ್ತಮ ದಾಂಪತ್ಯ ಸಮಾಜದ ಆದರ್ಶವಾಗಿದ್ದಿತು. ಸಮಾಜವು ಪತಿವ್ರತಾಸ್ತ್ರೀಯನ್ನು ಆರಾಧಿಸುತ್ತಿದ್ದಿತು ಎಂಬುದಕ್ಕೆ ಕಳಲೆಯಲ್ಲಿರುವ ಇಟ್ಟಿಗೆ ಮಾಳಿಗಮ್ಮನ ಗುಡಿ ಸಾಕ್ಷಿಯಾಗಿ ನಿಂತಿದೆ. ಲಕ್ಷ್ಮೀಕಾಂತ ಒಡೆಯರನ್ನು ಅವರ ಬಲತಾಯಿ ಮೋಸದಿಂದ ಕೊಲ್ಲಿಸಿ ಸಿಂಹಾಸನಧಿಕಾರವನ್ನು ಕಿತ್ತುಕೊಂಡಾಗ ಲಕ್ಷ್ಮೀಕಾಂತ ಒಡೆಯರ ಪತ್ನಿಯಾದ ದೇವಜಮ್ಮಣ್ಣಿಯವರು ಪತಿಯ ಸಂಗಡ ಸಹಗಮನ ಮಾಡಿದಳು. ಜನರು ಆಕೆಯ ಪತಿವ್ರತ ಧರ್ಮವನ್ನು ಕೊಂಡಾಡಿ ಆ ಸ್ಥಳದಲ್ಲಿ ವೇದಿಕೆಯನ್ನು ಮಾಡಲಾಗಿದೆ. ಅಲ್ಲಿ ಈಗಲೂ ಸಹ ನಿತ್ಯ ಪೂಜೆಯನ್ನು ಮಾಡಲಾಗುತ್ತಿದೆ. ಒಟ್ಟಿನಲ್ಲಿ ಈ ಕಾಲದ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಗೆ ಸಾಕಷ್ಟು ಸ್ವಾತಂತ್ರ್ಯವಿದ್ದಿತು. ಸ್ವಲ್ಪ ಮಟ್ಟಿಗೆ ಗಣನೀಯವಾದ ಸ್ಥಾನವಿತ್ತು ಎಂದು ಹೇಳಬಹುದು.

ಹೀಗೆ ಕಳಲೆ ದಳವಾಯಿಗಳ ಕಾಲದಲ್ಲಿ ಸಾಮಾಜಿಕ ವ್ಯವಸ್ಥೆಯ ಯಾವುದೇ ರೀತಿಯಲ್ಲೂ ಹಿನ್ನಡೆಯನ್ನು ಅನುಭವಿಸಲಿಲ್ಲ ಹಾಗೂ ಸಮಾಜದಲ್ಲಿ ಗೊಂದಲಗಳು ಸಹ ಸೃಷ್ಟಿಯಾಗಲಿಲ್ಲ ಎಂದು ಹೇಳಬಹುದಾಗಿದೆ. ದಳವಾಯಿಗಳು ಮೈಸೂರು ಸಂಸ್ಥಾನದಲ್ಲಿ ತಮ್ಮದೇ ಆದ ಒಂದು ಸಾಮಾಜಿಕ ವ್ಯವಸ್ಥೆಯನ್ನು ಇವರು ರೂಢಿಸಿಕೊಂಡಿದ್ದರು. ಸಾಮಾಜಿಕ ವ್ಯವಸ್ಥೆ ಸುಸಂಗತವಾಗಿದ್ದಿತು ಮತ್ತು ಸಂಸ್ಕೃತಿಯನ್ನು ಶ್ರೀಮಂತಗೊಳಿಸುವುದಕ್ಕೆ ಸಾಕಷ್ಟು ಪ್ರಯತ್ನಗಳನ್ನು ಮಾಡಿದ ದಳವಾಯಿಗಳ ಸಾಧನೆ ಮೆಚ್ಚತಕ್ಕದ್ದೆ ಆಗಿದೆ.

ಧಾರ್ಮಿಕ ಸ್ಥಿತಿಗತಿ

ಧರ್ಮ ಎಂದ ಕೂಡಲೇ ಅದರ ಪರಿಕಲ್ಪನೆ ಮನದಲ್ಲಿ ಮೂಡುವುದಾದರೂ ಅದನ್ನು ಖಚಿತವಾದ ಶಬ್ದಗಳಲ್ಲಿ ನಿಖರವಾಗಿ ಹಿಡಿದಿಡುವುದು ಸಾಧ್ಯವಾಗುವುದಿಲ್ಲ. ಧರ್ಮ ದೇವರುಗಳ ಬಗೆಗೆ ಪ್ರಥಮ ಕಲ್ಪನೆ ಮೂಡಿಸಿಕೊಂಡ ಆದಿಮಾನವನಲ್ಲಿದ್ದ ನಂಬಿಕೆ ಮತ್ತು ಗೊಂದಲಗಳನ್ನೇ ಇಂದಿನ

ಸಮಾಜದಲ್ಲೂ ಕಾಣಬಹುದಾಗಿದೆ. ಈ ಕಾರಣದಿಂದಲೇ ಧರ್ಮದ ಉಗಮ ಮತ್ತು ವಿಕಾಸಗಳನ್ನು ಕುರಿತಂತೆ ಹಲವು ರೀತಿಯ ತರ್ಕ, ಮೀಮಾಂಸೆ, ವ್ಯಾಖ್ಯಾನಗಳು ಸಿದ್ಧಗೊಳ್ಳುತ್ತಿದ್ದರೂ ಅವು ಯಾವುವು ಧರ್ಮದ ಒಟ್ಟು ಸ್ವರೂಪವನ್ನು ಅನಾವರಣಗೊಳಿಸಲು ಯಶಸ್ವಿಯಾಗಿಲ್ಲ.

ತನಗಿಂತಲೂ ಮಿಗಿಲಾದ ಶಕ್ತಿಯೊಂದು ತನ್ನನ್ನು ನಿಯಂತ್ರಿಸುತ್ತಿದೆ ಎಂಬುದನ್ನು ಅನುಭವಗಳ ಮೂಲಕ ಅರಿತುಕೊಂಡ ಆದಿ ಮಾನವನ ನಂತರವೂ ಅದೇ ಅನುಭವಗಳ ಒತ್ತಾಸೆಯಿಂದ ವಿವಿಧ ರೀತಿಯ ಧಾರ್ಮಿಕ ಪರಿಭಾವನೆಗಳನ್ನು ಬೆಳೆಸಿಕೊಂಡ. ಈ ಪರಿಭಾವನೆಗಳು ಬೆಳೆದು ಬಂದಿರುವ ಸಾಧ್ಯತೆಗಳನ್ನು ಸರ್ವಚೇತನವಾದ ಪ್ರಕೃತಿವಾದ, ಶಕ್ತಿವಾದ, ಬಹುದೇವತಾವಾದ ಮತ್ತು ಏಕದೇವತಾವಾದಗಳಂತಹ ಪರಿಕಲ್ಪನೆಗಳು ವಿವರಿಸಲು ಯತ್ನಿಸಿದೆ. ಒಟ್ಟಿನಲ್ಲಿ ಸರಳ ಮನೋಭಾವದ ಆದಿ ಮಾನವನಲ್ಲಿ ತನ್ನ ಗಮನಕ್ಕೆ ಬಂದ ಕಲ್ಪನೆಗೆ ಎಟುಕದ ವಸ್ತುಗಳೆಲ್ಲವಕ್ಕೆ ದೈವತ್ವವನ್ನು ಆರೋಪಿಸುವ ಉತ್ಸಾಹ ಇದ್ದರೆ ಇದೆ ಮನಸ್ಸು ಬೆಳೆದು ತಾರ್ಕಿಕ ಶಕ್ತಿಯನ್ನು ಗಳಿಸಿಕೊಂಡಾಗ ಸಂಕೀರ್ಣ ಸ್ವರೂಪದ ಏಕದೇವತೆಗೆ ನಿಷ್ಠೆ ತೋರಿಸುವ ಗಟ್ಟಿತನವನ್ನು ಪಡೆದುಕೊಳ್ಳುವುದನ್ನು ಕಾಣಬಹುದು.

ಹೀಗೆ ವಿವಿಧ ರೀತಿಯಲ್ಲಿ ದೇವರುಗಳನ್ನು ಗುರುತಿಸುವ ಪಂಥಗಳ ಮುಂದೆ ವಿವಿಧ ಧರ್ಮಗಳಾಗಿ ರೂಪು ತಳೆದವು.

ಕಳಲೆ ಪ್ರದೇಶವು ಹಲವು ಧರ್ಮೀಯರು ನೆಲೆಸಿರುವ ನಾಡು. ಹಾಗೆಯೇ ದಳವಾಯಿಗಳ ಆಡಳಿತಕ್ಕೆ ಒಳಪಟ್ಟಿದ್ದ ಮೈಸೂರು ಸಂಸ್ಥಾನ ಹಾಗೂ ಕಳಲೆಯ ಪ್ರದೇಶದಲ್ಲಿ ವಿವಿಧ ಧಾರ್ಮೀಯರು ನೆಲೆಸಿದ್ದರು. ಈ ಪ್ರದೇಶದಲ್ಲಿ ವಿವಿಧ ಸಂಸ್ಕೃತಿಗಳ ಸಂಗಮವಾಗಿ ಬೆಳೆದು ಬಂದಿರುವ ಹಿಂದೂ ಧರ್ಮದ ಆಸರೆಯಲ್ಲಿ ರೂಪುಗೊಂಡಿರುವ ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಪಂಥಗಳ ವೈಧಿಕಧರ್ಮ, ಶೈವ, ಲಕುಲೀಶ, ಪಾಶುಪತ ಮುಂತಾದ ಪಂಥಗಳನ್ನು ಖಂಡಿಸಿ ರೂಪುಗೊಂಡ ವೀರಶೈವ ಧರ್ಮ, ಅಹಿಂಸೆಯನ್ನು ಪರಮಧ್ಯೇಯವಾಗಿಟ್ಟುಕೊಂಡ ಜೈನಧರ್ಮ, ಹೊರದೇಶಗಳಿಂದ ಇಲ್ಲಿಗೆ ಪ್ರವೇಶಿಸಿ ಇಲ್ಲಿ ಮಾನ್ಯತೆ ಪಡೆದುಕೊಂಡಿರುವ ಇಸ್ಲಾಂ, ಕ್ರೈಸ್ತ ಧರ್ಮಗಳು ಜನರ ಬದುಕಿನಲ್ಲಿ ಒಂದಾಗಿ ಅದರಿಂದಲೇ ಬೆಳೆದು ಬಂದ ಜನಪದ ಧರ್ಮ ಇವುಗಳನ್ನು ಇಲ್ಲಿ ಕಾಣಬಹುದಾಗಿದೆ. ಈ ಎಲ್ಲಾ ಧರ್ಮಗಳು ದೇವರ ಮೇಲಿನ ನಂಬಿಕೆಯ ಅಡಿಪಾಯದ ಮೇಲೆಯೇ ನಿಂತಿರುವುದು ಗಮನಾರ್ಹ ಅಂಶ.

ಒಂದು ಪ್ರದೇಶವು ಪರಿಪೂರ್ಣವಾದ ಸ್ವಾವಲಂಬನೆ ಪಡೆದು ಸಂಸ್ಕೃತಿಯ ಸಂಹವನ ಮಾಧ್ಯಮವಾಗಿ ಬೆಳೆಯಬೇಕಾದರೆ ಆ ಪ್ರದೇಶದ ಸಮಸ್ತರು ಪರಸ್ಪರ ಸಹಕಾರ ಮತ್ತು ಹೊಂದಾಣಿಕೆಗಳು ಅತ್ಯಂತ ಅಗತ್ಯ ಎನಿಸುತ್ತದೆ. ಮೈಸೂರಿನ ಸಂಸ್ಥಾನವು ಒಂದು ವಿಶಾಲವಾದ ಪ್ರದೇಶವಾಗಿದ್ದು ಕಳಲೆಯು ಅದರ ಒಂದು ಭಾಗವಾಗಿದ್ದರೂ ಸಹ ಮೈಸೂರಿನಷ್ಟೆ ಸೌಲಭ್ಯಗಳನ್ನು ಹೊಂದಿದ್ದ ಪ್ರದೇಶವಾಗಿತ್ತು. ದಳವಾಯಿ ನಂಜರಾಜಯ್ಯನ ಕಾಲದಲ್ಲಿ ಮೈಸೂರು ಸಂಸ್ಥಾನವು ಧಾರ್ಮಿಕ ರೂಢಿ-ಪದ್ಧತಿಗಳು,

ನಂಬಿಕೆಗಳು ಯಾವ ತೊಡಕು ಇಲ್ಲದಂತೆ ಮುಂದುವರೆದವು. ಸ್ವತಃ ವೀರಶೈವ ಮತಾನುಯಾಯಿ ಆಗಿದ್ದ ನಂಜರಾಜಯ್ಯ ಈ ಅವಧಿಯಲ್ಲಿ ಹೊಸ ಕ್ರಾಂತಿಕರಕ ಸುಧಾರಣೆಗಳನ್ನು ತಂದು ಧಾರ್ಮಿಕ ಸಾಮರಸ್ಯವನ್ನು ಹಾಳು ಮಾಡಲು ಒಗ್ಗಟ್ಟನ್ನು ಭಂಗಪಡಿಸುವ ಪ್ರಯತ್ನ ಮಾಡಲಿಲ್ಲ. ಬದಲಾಗಿ ಸರ್ವಧರ್ಮಗಳನ್ನು ಗೌರವಿಸಿದನು. ವೀರತ್ವ, ಪಾಂಡಿತ್ಯ, ದೇಶಾಭಿಮಾನ, ಧಾರ್ಮಿಕತೆ ಪ್ರಜಾವತ್ಸಲ್ಯಯ್ಯನು ಪ್ರಜಾವರ್ಗದ ಪ್ರಗತಿಗಾಗಿ ತನ್ನ ಶಕ್ತಿ ಮೀರಿ ಪ್ರಯತ್ನಿಸಿದನು. ಆಳುವ ವರ್ಗದವರ ವೈಯಕ್ತಿಕ ಮತ ಯಾವುದೇ ಇರಲಿ ಪ್ರಜೆಗಳ ಧಾರ್ಮಿಕ ಆಚರಣೆಗಳಿಗೆ ಯಾವುದೇ ತೊಂದರೆಯನ್ನು ಕೊಡದೆ ಎಲ್ಲ ಧರ್ಮಗಳ ಧಾರ್ಮಿಕ ಆಚರಣೆಯನ್ನು ಪ್ರೋತ್ಸಾಹಿಸುತ್ತಿದ್ದರು.

ಧಾರ್ಮಿಕ ದೃಷ್ಟಿಯಿಂದ ಕಳಲೆ ನಂಜರಾಜ ಅಂದಿನ ಸಮಾಜದಲ್ಲಿ ಒಬ್ಬ ವಿಶಿಷ್ಟ ವ್ಯಕ್ತಿಯಾಗಿ ಕಾಣಿಸಿಕೊಂಡಿದ್ದಾನೆ. ವೈಯಕ್ತಿಕವಾಗಿ ವೀರಶೈವ ಮತಾವಲಂಬಿಯಾಗಿದ್ದರೂ ಸಹ ಹಿಂದೂಧರ್ಮದ ಇತರ ಪಂಥಗಳ ಅನುಯಾಯಿಗಳನ್ನು ಗೌರವದಿಂದ ನಡೆಸಿಕೊಳ್ಳುವ ಉದಾರ ಮನೋಭಾವ ಅವನಲ್ಲಿತ್ತು. ಇದು ಪರಂಪರೆಯಿಂದ ಆಳರಸರಲ್ಲಿ ಬೇರೂರಿದ್ದ ಒಂದು ದೋರಣೆ ಎನ್ನಬಹುದು. ಮೈಸೂರಿನ ಸಂಸ್ಥಾನದ ಧಾರ್ಮಿಕ ಜೀವನದಲ್ಲಿ ಹದಿನೆಂಟನೇ ಶತಮಾನದವರೆಗೂ ಹೆಚ್ಚು ಪ್ರಧಾನ್ಯ ಹೊಂದಿದ್ದ ಶ್ರೀ ವೈಷ್ಣವ ಧರ್ಮ ತನ್ನ ಮೊದಲ ಸ್ಥಾನವನ್ನು ಶೈವ ಮತ್ತು ವೀರಶೈವ ಮತಗಳಿಗೆ ಬಿಟ್ಟುಕೊಟ್ಟಿತು. ಜನಸಾಮಾನ್ಯರು ಹಿಂದೂ ಧರ್ಮದ ಚೌಕಟ್ಟಿನಲ್ಲೆ ಜಾನಪದ ಧರ್ಮವನ್ನು ಅದಕ್ಕೆ ಪೂರಕವಾಗಿ ಆಚಾರಗಳನ್ನೂ ನಡೆಸಿಕೊಂಡು ಬಂದರು. ಅದರ ಜೊತೆಗೆ ಜೈನ, ಇಸ್ಲಾಂ ಧರ್ಮಗಳೂ ರಾಜ್ಯದಲ್ಲಿ ನೆಲೆಸಿದ್ದವು.

ಹೀಗೆ ಮೈಸೂರು ಸಂಸ್ಥಾನವು ಕಳಲೆ ದಳವಾಯಿಗಳ ಕಾಲದಲ್ಲಿ ಸರ್ವಧರ್ಮಗಳ ನೆಲೆಬೀಡಾಗಿ ಎಲ್ಲಾ ಧರ್ಮಗಳು ಈ ಒಂದು ವೇಳೆಯಲ್ಲಿ ತಮ್ಮ ತಮ್ಮ ಧಾರ್ಮಿಕ ಕಾರ್ಯಗಳನ್ನು ಯಾವುದೇ ಅಡ್ಡಿ ಆತಂಕಗಳು ಇಲ್ಲದೆ ನಡೆಸಿಕೊಂಡು ಹೋಗಲು ಈ ದಳವಾಯಿಗಳು ಅನುವು ಮಾಡಿಕೊಟ್ಟಿದ್ದರು ಎಂಬುದು ಒಂದು ಪ್ರಮುಖವಾದ ಅಂಶವಾಗಿದೆ.

ಅಡಿಟಿಪ್ಪಣಿ

೧. ಕನ್ನಡ ವಿಷಯ ವಿಶ್ವಕೋಶ, ೧೯೮೮, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಸಂಪುಟ ೧೨, ಪು.೧೨೦

೨. ಮಂಜುಳ ಎಚ್.ಪಿ., ೨೦೦೦, ನಂಜನಗೂಡು ಒಂದು ಸಾಂಸ್ಕೃತಿಕ ಅಧ್ಯಯನ, ಮೈಸೂರು, ಪು.೫೩.

೩. ಮೈಸೂರು ಜಿಲ್ಲಾ ಗೆಜೆಟಿಯರ್, ಪು.೬೦೧

೪. ಮಂಜುಳ ಎಚ್.ಪಿ., ಪೂರ್ವೋಕ್ತ, ಪು.೫೩

೫. ಅದೇ, ಪು.೫೪

೬. ಅದೇ, ಪು.೫೫

೭. ನಂಜಮ್ಮಣ್ಣಿ ಎಂ., ೧೯೮೬, ಅರಸು ಜನಾಂಗ ಒಂದು ಅಧ್ಯಯನ, ಮೈಸೂರು, ಪು.೩೦೮.

೮. ಅದೇ, ಪು.೩೨೪

೯. Hayavandana Rao C., 1928, **History of Mysore, Vol.1,** Bangalore, Pp.258

೧೦. ಅದೇ, ಪು.೨೭೯

೧೧. ನಂಜುಂಡಾರಾಧ್ಯ ಕೆ.ಸಿ., ೧೯೪೦, ಕಳಲೆ ಅರಸು ವಂಶಾವಳಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ಮೈಸೂರು, ಪು.೧೧೭

೧೨. ಅದೇ, ಪು.೧೧೮

೧೩. ಅದೇ, ಪು.೧೨೭

೧೪. ಅದೇ, ಪು.೧೩೮

೧೫. ಅದೇ, ಪು.೧೪೪

೧೬. ರಾಮಚಂದ್ರರಾವ್ ಎಂ.ಎಸ್., ೧೯೬೮, ಕಪಿಲಾಶ್ರಮ ವೈಭವ, ಮೈಸೂರು, ಪು.೬೭-೭೧

೧೭. ನಂಜುಂಡಾರಾಧ್ಯ ಕೆ.ಸಿ., ಪೂರ್ವೋಕ್ತ, ಪು.೧೨೮

೧೮. ಅದೇ, ಪು.೧೨೯

೧೯. ಅದೇ, ಪು.೧೪೨

೨೦. ಕಳಲೆಯ ಕೈವಲ್ಯದೇವಿ ದೇವಾಲಯದಲ್ಲಿರುವ ಒಂದು ಹಸ್ತಪತ್ರಿ.

೨೧. ಗುರುಸ್ವಾಮಿ, ಕಳಲೆ, ಕನ್ನಡಪ್ರಭ ದಿನಪತ್ರಿಕೆ, ೮-೩-೧೯೮೭

೨೨. ಗದಾವುಣಿಗದ್ದೆ ಎಂದು ಈಗಲೂ ಸಹ ಕರೆಯುತ್ತದೆ. ಕಳಲೆಯ ಊರೊಳಕ್ಕೆ ಹೋಗುವ ಹಾದಿಯಲ್ಲಿ ವಸಂತ ಕೊಳದ ಎದುರಿಗಿದೆ.

೨೩. ವೇಣುಪುರದ ಕ್ಷಾತ್ರಿಯರ ವಂಶಾವಳಿ, ಹಸ್ತಪ್ರತಿ ಕೆ.ಬಿ.೪೨೪.

೨೪. ಅದೇ, ಪು.೨೩

೨೫. ಅದೇ, ಪು.೩೪

೨೬. ನಂಜಮ್ಮಣ್ಣಿ ಎಂ., ಪೂರ್ವೋಕ್ತ, ಪು.೨೦೪

೨೭. ಸಣಯ್ಯ(ಸಂ), ೧೯೮೮, ದೇವಚಂದ್ರ, ರಾಜಾವಳಿ ಕಥಾಸಾರ, ಮೈಸೂರು, ಪು.೧೮೬.

೨೮. ನಂಜುಂಡಾರಾಧ್ಯ ಕೆ.ಸಿ., ಪೂರ್ವೋಕ್ತ, ಪು.೧೨೬

೨೯. ಅದೇ, ಪು.೧೨೮

೩೦. ಅದೇ, ಪು.೧೩೧

೩೧. ಅದೇ, ಪು.೧೩೩

೩೨. ಅದೇ, ಪು.೧೩೩

೩೩. ಅದೇ, ಪು.೧೩೭

೩೪. ಅದೇ, ಪು.೧೩೮

೩೫. ಅದೇ, ಪು.೧೩೯

೩೬. ಅದೇ, ಪು.೧೪೪

೩೭. ಅದೇ, ಪು.೧೪೫

೩೮. Hayavandana Rao C., 1928, **History of Mysore, Vol.1**, Bangalore, Pp.20

೩೯. ಅದೇ, ಪು.೫೪೦

೪೦. ನಂಜುಂಡಾರಾಧ್ಯ ಕೆ.ಸಿ., ಪೂರ್ವೋಕ್ತ, ಪು.೧೭೪

೪೧. Hayavadana Rao C., **Ibid**, Pp.524

೪೨. ರಾಮಕೃಷ್ಣರಾವ್ ಬಿ., ೧೯೬೧, ಶ್ರೀಮನ್ಮಹಾಜರ ವಂಶಾವಳಿ, ಭಾಗ ೧, ಮೈಸೂರು, ಪು.೨೩-೨೪.

೪೩. ಅದೇ, ಪು.೪೩

೪೪. ಅದೇ, ಪು.೫೧

೪೫. ಅದೇ, ಪು.೬೮

೪೭. ನಂಜುಂಡಾರಾಧ್ಯ ಕೆ.ಸಿ., ಪೂರ್ವೋಕ್ತ, ಪು.೪೨೪

೪೮. ಇಮ್ಮಡಿ ಶಿವಬಸವಸ್ವಾಮಿ, ೧೯೪೧, ಸಂಸ್ಕೃತ ಸಾಹಿತ್ಯಕ್ಕೆ ಕರ್ನಾಟಕದ ಕೊಡುಗೆ, ಅಪ್ರಕಟಿತ ಮಹಾ ಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು.೧೧೪.

೪೯. ಕನ್ನಡ ವಿಷಯ ವಿಶ್ವಕೋಶ, ಸಂಪುಟ ೧, ೨೦೦೫, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪು.೪೯೪.

೫೦. ಅದೇ, ಪು.೪೯೪

೫೧. ಅದೇ, ಪು.೪೯೪

೫೨. ಅದೇ, ಪು.೪೯೫

೫೩. Hayavadana Rao C., **Ibid**, P.294

೫೪. ಕನ್ನಡ ವಿಷಯ ವಿಶ್ವಕೋಶ, ಸಂಪುಟ ೧, ಪು.೪೯೫

೫೫. Hayavandana Rao C., 1946, **History of Mysore, Vol.2,** Bangalore, Pp.196

೫೬. ಅದೇ, ಪು.೧೯೮

೫೭. ಕನ್ನಡ ವಿಷಯ ವಿಶ್ವಕೋಶ, ಸಂಪುಟ ೧, ಪು.೪೯೫.

೫೮. Vikram Sampath, 2008, **Spelendours of Royal Mysore,** New Delhi, Pp.147

೫೯. ಅದೇ, ೧೪೮

೬೦. Hayavandana Rao C., 2005, **History of Mysore, Vol.3,** Bangalore, Pp.144

೬೧. ಕನ್ನಡ ವಿಷಯ ವಿಶ್ವಕೋಶ, ಸಂಪುಟ ೧, ಪು.೪೯೫

೬೨. ಅದೇ, ಪು.೪೯೫

೬೩. Hayavadana Rao C., 1951, **History of Mysore, Vo-III,** Bangalore, Pp.144

೬೪. ಮಂಜುಳ ಎಚ್.ಪಿ., ಪೂರ್ವೋಕ್ತ, ಪು.೬೮

೬೫. ಸುಧಾಮಣಿ ಬಿ.ವಿ., ೨೦೦೦, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ವಸು(ಸಂ), ಬೆಂಗಳೂರು ಪು.೪೦೭

೬೬. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ಮೈಸೂರು ವಿ.ವಿ.ಮೈಸೂರು, ಸಂಪುಟ ೧೨, ಪು.೧೨೪೧

೬೭. ಅದೇ, ಪು.೧೨೪೧

೬೮. ಅದೇ, ಪು.೧೧೯೪

೬೯. ಅದೇ, ಪು.೫೬೦

೭೦. ಎ.ಕ.ಸಂ.V., ಕೃಷ್ಣರಾಜನಗರ, ೧೧೭, ಕ್ರಿ.ಶ.೧೭೪೧

೭೧. ಅದೇ

೭೨. ಎ.ಕ.ಸಂ.V., ಪಾಂಡವಪುರ, ೨೧೫, ಕ್ರಿ.ಶ.೧೭೨೪

೭೩. ಅದೇ

೭೪. ಅದೇ

೭೫. ಎ.ಕ.ಸಂ.III, ನಂಜನಗೂಡು, ೧೧೯, ಕ್ರಿ.ಶ.೧೭೬೧

೭೬. ಅದೇ

೭೭. ಎ.ಕ.ಸಂ.III, ನಂಜನಗೂಡು, ೩೧೮, ಕ್ರಿ.ಶ.೧೭೬೧

೭೮. ಎ.ಕ.ಸಂ.V, ಚಾಮರಾಜನಗರ, ೨೯೧, ಕ್ರಿ.ಶ.೧೭೪೪

೭೯. ಎ.ಕ.ಸಂ.V, ಕೃಷ್ಣರಾಜನಗರ, ೧೧೭, ಕ್ರಿ.ಶ.೧೭೪೧

೮೦. ಎ.ಕ.ಸಂ.V, ಟಿ.ನರಸೀಪುರ, ೧೬, ಕ್ರಿ.ಶ.೧೭೪೯

೮೧. ಅದೇ

೮೨. ಎ.ಕ.ಸಂ.III, ನಂಜನಗೂಡು, ೧೦೯, ಕ್ರಿ.ಶ.೧೭೬೧

೮೩. ಕನ್ನಡ ವಿಷಯ ವಿಶ್ವಕೋಶ, ಸಂಪುಟ.೧ ೧, ಪು.೩೫೩

೮೪. Hayavadana Rao C., 1951, **History of Mysore, Vol-III,** Bangalore, Pp.414

೮೫. ನೂರೊಂದ, ಸೌಂದರ್ಯ ಕಾವ್ಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿ.ವಿ., ಮೈಸೂರು, ಸಂಗ್ರಹಿತ ಹಸ್ತಪ್ರತಿ, ಸಂಧಿ-೨

೮೬. ನರಸಿಂಹಾಚಾರ್ ಆರ್., ೧೯೭೩, ಕವಿಚರಿತೆ, ಸಂಪುಟ ೧, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು,

೮೭. ಎ.ಕ.ಸಂ.V, ಟಿ.ನರಸೀಪುರ, ೧೬, ಕ್ರಿ.ಶ.೧೭೪೯

೮೮. ಎ.ಕ.ಸಂ.V, ಚಾಮರಾಜನಗರ, ೨೨೮, ಕ್ರಿ.ಶ.೧೭೫೮

೮೯. ಎ.ಕ.ಸಂ.III, ಹೆಗ್ಗಡದೇವನ ಕೋಟೆ, ೧೬ ಮತ್ತು ೧೭, ಕ್ರಿ.ಶ.೧೭೪೧.

೯೦. ಎ.ಕ.ಸಂ.V, ನರಸೀಪುರ, ೧೬, ೧೮ನೇ ಶತಮಾನ

೯೧. ಅದೇ

೯೨. ಅದೇ

೯೩. ಎ.ಕ.ಸಂ.IV, ಚಾಮರಾಜನಗರ, ೧೧೪, ಕ್ರಿ.ಶ.೧೭೫೮

೯೪. ಫ್ರಾನ್ಸಿಸ್ ಬುಕಾನನ್, ಜರ್ನಿ, ಸಂಪುಟ ೧, ಪು.೮೩

೯೫. ಅದೇ, ಪು.೮೪

೯೬. ಅದೇ, ಪು.೮೪

೯೭. ಅದೇ, ಪು.೮೭

೯೮. ಎ.ಕ.ಸಂ.IV, ಯಳಂದೂರು, ೧೪೩, ಕ್ರಿ.ಶ.೧೭೪೨

೯೯. ಎ.ಕ.ಸಂ.V, ಟಿ.ನರಸೀಪುರ, ೧೬, ೧೮ನೇ ಶತಮಾನ

೧೦೦. ಎ.ಕ.ಸಂ.V, ಮೈಸೂರು, ೭೯, ಕ್ರಿ.ಶ.೧೭೫೬

೧೦೧. ಬುಕಾನಾನ್, ಜರ್ನಿ, ಪು.೮೫-೮೬

೧೦೨. ಎ.ಕ.ಸಂ.III, ಗುಂಡ್ಲುಪೇಟೆ, ೮೦, ಕ್ರಿ.ಶ.೧೭೫೧

೧೦೩. ಬುಕಾನಾನ್, ಪೂರ್ವೋಕ್ತ, ಪು.೧೦೮-೦೯

೧೦೪. ನಂಜುಂಡಾರಾಧ್ಯ ಕೆ.ಸಿ., ಪೂರ್ವೋಕ್ತ, ಪು.೩೦

೧೦೫. ದೇವಿರಪ್ಪ ಹೆಚ್.(ಸಂ), ೧೯೫೯, ನಂಜುಂಡ ಕವಿ ವಿರಚಿತ ರಾಮನಾಥ ಚರಿತ ೧೫, ಪು.೨೭

೧೦೬. ಎಂ.ಎ.ಆರ್., ೧೯೨೮, ನಂಜನಗೂಡು ೪೬, ಪು.೫೩

೧೦೭. ಎಂ.ಎ.ಆರ್., ೧೯೪೨, ಪು.೭೮

೧೦೮. ನೂರೊಂದ, ಸೌಂದರ್ಯ ಕಾವ್ಯ, ೨ನೇ ಸಂಧಿ.

೧೦೯. ಅದೇ, ೯ನೇ ಸಂಧಿ

೧೧೦. ಎಂ.ಎ.ಆರ್., ೧೯೩೪, ಪು.೫೫

೧೧೧. ಅದೇ, ೧೯೧೭, ಪು.೧೮

೧೧೨. ಅದೇ, ೧೯೧೭, ಪು.೬೪

೧೧೩. ಅದೇ, ೧೯೪೬, ಪು.೬೪

೧೧೪. ಅದೇ, ೧೯೧೨, ಪು.೫೮

೧೧೫. ಅದೇ, ೧೯೧೭, ಪು.೩೪

೧೧೬. ಎ.ಕ.ಸಂ.V., ಟಿ.ನರಸೀಪುರ, ೧೬, ಕ್ರಿ.ಶ.೧೮ನೇ ಶತಮಾನ

೧೧೭. ಎಂ.ಎ.ಆರ್., ೧೯೧೧, ಪು.೫೫

೧೧೮. ಎ.ಕ.ಸಂ.III, ನಂಜನಗೂಡು, ೩೫೯, ಕ್ರಿ.ಶ.೧೭೪೩

೧೧೯. ಎಂ.ಎ.ಆರ್., ೧೯೧೧, ಪು.೫೫

೧೨೦. ಎಂ.ಎ.ಆರ್., ೧೯೧೭, ಪು.೫೧

ಅಧ್ಯಾಯ ೪

ಕಲೆ ಮತ್ತು ವಾಸ್ತುಶಿಲ್ಪ

೪

ಕಲೆ ಮತ್ತು ವಾಸ್ತುಶಿಲ್ಪ

ದೇವಾಲಯಗಳು ಸಂಸ್ಕೃತಿಯನ್ನು ಶ್ರೀಮಂತಗೊಳಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಅಲ್ಲದೆ ಧಾರ್ಮಿಕ ಚಟುವಟಿಕೆಗಳನ್ನು ರೂಪಿಸುವಲ್ಲಿ ದೇವಾಲಯಗಳು ಪ್ರಾಚೀನ ಕಾಲದಿಂದಲೂ ಮಹತ್ವವಾದ ಪಾತ್ರವನ್ನು ವಹಿಸುತ್ತಾ ಬಂದಿದೆ. ಉತ್ತಮ ವಾಸ್ತುಗಾರಿಕೆಯ ಮೂಲಕ ದೀರ್ಘಕಾಲದವರೆಗೆ ನಿಲ್ಲುವ ದೇವಾಲಯಗಳ ಚರಿತ್ರೆಯ ವಿವಿಧ ಯುಗಗಳಲ್ಲಿ ಪ್ರಚಲಿತವಾಗಿದ್ದ ಧರ್ಮದ ವಿವಿಧ ಛಾಯೆಗಳನ್ನು ಭೇದಗಳನ್ನು ಪ್ರಧಾನತೆಗಳನ್ನು ಪ್ರಾಂತೀಯ ಮನೋಧರ್ಮಗಳನ್ನು ಯಶಸ್ವಿಯಾಗಿ ಪ್ರತಿನಿಧಿಸುತ್ತದೆ. ಇಷ್ಟೆ ಅಲ್ಲದೆ ಜನರ ಅಭಿರುಚಿ, ಧರ್ಮದಲ್ಲಿನ ಆಸ್ಥೆ, ಸಾಮಾಜಿಕ ಸಂಪ್ರದಾಯಗಳು, ನಂಬಿಕೆಗಳು ಮೊದಲಾದ ವಿಷಯಗಳ ಬಗ್ಗೆ ಬೆಳಕು ಹಾಯಿಸುತ್ತವೆ. ಅರಸರ ಔದಾರ್ಯ, ಶ್ರೀಮಂತರ ಆದರ, ಕೆಲಸಗಾರರ ಕೌಶಲ, ಊರವರ ಸಂಪತ್ತು ಇವನ್ನೆಲ್ಲಾ ಅವಲಂಬಿಸಿ ದೊಡ್ಡ ದೇವಾಲಯಗಳು ನಿರ್ಮಿತವಾದರೆ, ಜನರ ಶ್ರದ್ಧೆ, ನಂಬಿಕೆ, ಪರಂಪರಾಗತ ಆಚರಣೆಗಳ ಮೂಲಕ ದೇವಾಲಯಗಳು ಮೈದಳೆಯುತ್ತವೆ. ಆದರೂ ಎರಡು ರೀತಿಯ ಆಲಯಗಳಿಗೂ ನಂಬಿಕೆ-ಸಂಪ್ರದಾಯಗಳೇ ಅಡಿಪಾಯ ಎನ್ನುವುದನ್ನು ಮರೆಯುವಂತಿಲ್ಲ.

ದೇವಾಲಯಗಳು ಧಾರ್ಮಿಕ ಕೇಂದ್ರವಾಗುವುದರ ಜೊತೆಗೆ ಸಾಮಾಜಿಕ, ಸಾಂಸ್ಕೃತಿಕ ವಿಕಾಸಕ್ಕೂ ನೆರವಾಗುತ್ತವೆ. ಊರಿನವರಿಗೆ ನ್ಯಾಯ ದೊರಕಿಸಿಕೊಡುವಾಗ ನ್ಯಾಯಾಲಯವಾಗಿ, ಸಾಮೂಹಿಕ ಸಮಸ್ಯೆಗಳನ್ನು ಚರ್ಚಿಸುವಾಗ ವೈಚಾರಿಕ ಕೇಂದ್ರವಾಗಿ, ಮದುವೆ ಮುಂತಾದ ಮಂಗಲ ಕಾರ್ಯಗಳಿಗೆ ಕಲ್ಯಾಣ ಮಂಟಪವಾಗಿ, ನೃತ್ಯ ಸಂಗೀತ ಇತ್ಯಾದಿಗಳ ಮೂಲಕ ಮನರಂಜನೆಗೆ ವೇದಿಕೆಯಾಗಿ, ತಾತ್ವಿಕ ವಿಚಾರ ವಿನಿಮಯಗಳಿಗೆ, ಧಾರ್ಮಿಕ ಜಿಜ್ಞಾಸೆಗಳಿಗೆ ಭೋದನ ಶಾಲೆಯಾಗಿ ಬಳಕೆಯಾಗುತ್ತದೆ. ಈ ರೀತಿಯ ಆತ್ಮೀಯ ಒಡನಾಟದಿಂದ ಜನರ ಆಲಯದ ಸಂಬಂಧ ಗಟ್ಟಿಗೊಳ್ಳುತ್ತದೆ.

ಹೀಗೆ ಜನಸಂಸ್ಕೃತಿಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡ ದೇವಾಲಯಗಳನ್ನು ಕುರಿತು ಈವರೆಗೆ ಬಹಳಷ್ಟು ಅಧ್ಯಯನಗಳು ನಡೆದಿವೆ. ದೇವಾಲಯಗಳನ್ನು ವಿವಿಧ ದೃಷ್ಟಿಕೋನಗಳಿಂದ ವಿಶ್ಲೇಷಿಸುವ ಪ್ರಯತ್ನಗಳು ನಡೆದಿವೆ. ಆದರೆ ಇವುಗಳಲ್ಲಿ ಹೆಚ್ಚಿನವು ತಮಿಳುನಾಡು ಮತ್ತು ಆಂಧ್ರ ಪ್ರದೇಶದ ದೇಗುಲಗಳಿಗೇ ವಿಶಿಷ್ಟ ಗಮನ ನೀಡಿದೆ.

ಈ ಶತಮಾನದ ಆರಂಭದ ದಶಕಗಳಲ್ಲಿ ಮೈಸೂರು ಪುರಾತತ್ವ ಇಲಾಖೆಯವರು. ನಡೆಸಿರುವ ಸರ್ವೇಕ್ಷಣೆಯಲ್ಲಿ ರಾಜ್ಯದ ವಿವಿಧ ಭಾಗದ ದೇವಾಲಯಗಳ ಬಗೆಗೆ ಸವಿವರವಾದ ಮಾಹಿತಿಗಳನ್ನು ಎಂ.ಎ.ಆರ್ ವಾರ್ಷಿಕಗಳಲ್ಲಿ ಪ್ರಕಟಪಡಿಸಿದ್ದಾರೆ. ಬೇಲೂರು, ಹಳೇಬಿಡು, ಸೋಮನಾಥಪುರ, ಹಂಪೆ, ಐಹೊಳೆಯಗಳಲ್ಲಿನ ಪ್ರಖ್ಯಾತ ದೇವಾಲಯಗಳನ್ನು ಕುರಿತಂತೆ ಅಧ್ಯಯನಗಳು ನಡೆದಿವೆ. ಗ್ರಾಮದೇವತೆಗಳು ಮತ್ತು ಅವುಗಳಿಗೆ ಸಂಬಂಧಿಸಿದ ಹಬ್ಬ, ಜಾತ್ರೆ, ಆಚರಣೆ, ವಿಧಿವಿಧಾನಗಳ ಬಗೆಗೆ ಹಲವು ಜಾನಪದೀಯ ಅಧ್ಯಯನಗಳು ಪ್ರಕಟವಾಗಿವೆ. ವಿಚಾರ ಸಂಕಿರಣಗಳು ನಡೆದಿವೆ. ಈ ಎಲ್ಲ ಪ್ರಕಟನೆಗಳ ಸಮಗ್ರ ಅವಲೋಕನವು ದೇವಾಲಯಗಳನ್ನು ವಿವಿಧ ದೃಷ್ಟಿಕೋನಗಳಿಂದ ಅಧ್ಯಯನ ಮಾಡಬಹುದಾದ ಸಾಧ್ಯತೆಗಳ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತವೆ.

ವಾಸ್ತುಶಿಲ್ಪದ ದೃಷ್ಟಿಯಿಂದ ಪರಿಶೀಲಿಸಿದಾಗ ಕಳಲೆಯು ಒಂದು ಪ್ರಸಿದ್ಧ ಕೇಂದ್ರವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಇಲ್ಲಿನ ವಾಸ್ತುಶಿಲ್ಪ ಮತ್ತು ಇತರ ಸ್ಮಾರಕಗಳು ಕಳಲೆ ದಳವಾಯಿಗಳು ಮತ್ತು ಇವರ ಅಧೀನದಲ್ಲಿದ್ದ ಪ್ರಜೆಗಳ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಸಂಕೇತಗಳಾಗಿ ಕಂಗೊಳಿಸುತ್ತಿವೆ. ಕಳಲೆಗೆ ತನ್ನದೆ ಆದ ಸ್ಥಳ ಪುರಾಣವೂ ಇದೆ. ವೇಣುಪುರಿ ತುಲಸೀಕಾನನ ಮತ್ತು ಕಪಿಲಾಶ್ರಮ ಎಂಬ ಇಲ್ಲಿಯ ಸ್ಥಳನಾಮಗಳು ಪೌರಾಣಿಕ ಹಿನ್ನಲೆಯಿಂದ ಬಂದಿವೆ. ಲಕ್ಷ್ಮೀಕಾಂತ ದೇವಾಲಯವು ಇಲ್ಲಿನ ದೇವಾಲಯಗಳ ಪೈಕಿ ಅತ್ಯಂತ ಪ್ರಸಿದ್ಧವಾದುದು. ದ್ರಾವಿಡ ಶೈಲಿಯಲ್ಲಿ ಈ ದೇವಾಲಯವನ್ನು ನಿರ್ಮಿಸಲಾಗಿದೆ.

ಈ ದೇವಾಲಯ ನಿರ್ಮಾಣದ ಬಗ್ಗೆ ಕೆಲವು ಸ್ಥಳ ಪುರಾಣಗಳಿವೆ. ಸ್ಥಳ ಪುರಾಣದ ಪ್ರಕಾರ ಪಾಂಡು ವಂಶಕ್ಕೆ ತಿಲಕ ಪ್ರಾಯವಾದ ಜನಮೇಜಯನು ಒಮ್ಮೆ ಬೇಟೆಗಾಗಿ ಕಪಿಲಾ ಕೌಂಡಿನ್ಯ ನದಿಗಳ ತೀರದಲ್ಲಿ ಸಂಚರಿಸುತ್ತಿದ್ದಾಗ ಆತ ಒಂದು ಅದ್ಭುತ ದೃಶ್ಯವನ್ನು ನೋಡಿದನು. ಆಜನ್ಮ ವೈರಿಗಳಾದ ಗೋವ್ಯಾಘ್ರಗಳು ಸಾಮರಸ್ಯದಿಂದ ಕಲೆತಿರುವ ಪ್ರದೇಶವೊಂದರ ಬಳಿ ಬಿದರಿನ ಮೆಳೆಯಾಳಗೆ ಅತ್ಯದ್ಭುತವಾದ ನಾರಾಯಣ ವಿಗ್ರಹವನ್ನು ಕಂಡನಂತೆ. ಅಲ್ಲಿಂದ ಆಮೂರ್ತಿಯನ್ನು ತೆಗೆಸಿ ದೇವಾಲಯವನ್ನು ನಿರ್ಮಿಸಿದನೆಂದು ಸ್ಥಳ ಪುರಾಣ ತಿಳಿಸುತ್ತದೆ. ಅಂತೆಯೇ ಲಕ್ಷ್ಮೀಕಾಂತ ಸ್ವಾಮಿಯ ದಿವ್ಯಮಂಗಳಮೂರ್ತಿಯನ್ನು ಬ್ರಹ್ಮನು ಪೂಜಿಸಿದನೆಂದೂ ಸಪ್ತಮಹರ್ಷಿಗಳಲ್ಲಿ ಅಗ್ರಗಣ್ಯನಾದ ಅತ್ರಿಮಹರ್ಷಿಗಳು ವಿಷ್ಣುವಿನ ಆಜ್ಞೆಯ ಮೇರೆಗೆ ಲಕ್ಷ್ಮೀಕಾಂತನ ಸೇವೆಯನ್ನು ಮಾಡಿದರೆಂದೂ ವಿವರಿಸಲಾಗಿದೆ. ಕಳಲೆಗೆ ಕಪಿಲಾಶ್ರಮವೆಂಬ ಹೆಸರು ಬರಲು ಕಾರಣವಾದ ಘಟನೆಯ ವಿವರವೂ ಇದೆ. ಸ್ಥಳಪುರಾಣದಲ್ಲಿ ಕಪಿಲ ಮಹರ್ಷಿಗಳು ಕರ್ದ ಮಹರ್ಷಿಗಳ ಪುತ್ರರು, ತಪಸ್ಸನ್ನು ಆಚರಿಸಲು ಪ್ರಶಾಂತವಾದ ಪ್ರದೇಶವನ್ನು ಅರಸುತ್ತ ಭೂಲೋಕವನ್ನೆಲ್ಲಾ ಸಂಚರಿಸಿ ವಿಫಲರಾಗಿ, ಕೊನೆಗೆ ವಿಧಿಯಿಲ್ಲದೆ ಪಾತಾಳ ಪ್ರವೇಶಿಸಿ ತಪಸ್ಸನು ಆರಂಭಿಸಿದರು. ಕೆಲವು ಕಾಲಾನಂತರ. ಸಗರನ ಪುತ್ರರು ಕಳೆದು ಹೋಗಿದ್ದ

ಯಜ್ಞಾಶ್ವವನ್ನು ಹುಡುಕಿಕೊಂಡು ಪಾತಾಳಲೋಕವನ್ನು ಪ್ರವೇಶಿಸಿದರು. ಅಲ್ಲಿ ಕಪಿಲಮುನಿಗಳ ಪಕ್ಕದಲ್ಲಿ ನಿಂತಿದ್ದ ಯಜ್ಞಾಶ್ವಯನ್ನು ಕಂಡುಮುನಿಗಳು ಕಳ್ಳನೆಂಬ ತಪ್ಪು ಕಲ್ಪನೆಯಿಂದ ಅವರನ್ನು ನಿಂದಿಸಿ. ಅವರ ತಪೋಭಂಗವನ್ನು ಮಾಡಿದರು. ಇದರಿಂದ ಕಪಿಲಾ ಮಹರ್ಷಿಗಳು ತುಂಬಾ ನೊಂದರು. ಅಲ್ಲಿಂದ ಹೊರಟು ಅವರು ಕಳಲೆಯ ದತ್ತಾತ್ರಯ ಮುನಿಗಳ ಆಶ್ರಮಕ್ಕೆ ಬಂದು ಶ್ರೀ ಲಕ್ಷ್ಮೀಕಾಂತನ ಕರುಣೀಯವಾದ ಹಾಗೂ ಪ್ರಶಾಂತವಾದ ವಾತಾವರಣವನ್ನು ಮೆಚ್ಚಿ ಅಲ್ಲಿಯೇ ನೆಲೆಸಿದರಂತೆ.[೨] ಆದ್ದರಿಂದಲೆ ಈ ಸ್ಥಳಕ್ಕೆ ಕಪಿಲಾಶ್ರಮ ಎಂಬ ಹೆಸರು ಬಂದಿತು.

ವಿಷ್ಣುವಿನ ವಾಹನವಾದ ಗರುಡನೂ ಯಾವುದೋ ಕಾರಣಕ್ಕೆ ತನ್ನ ತಾಯಿಗೆ ಒದಗಿಬಂದಿದ್ದ ಗುಲಾಮಗಿರಿಯನ್ನು ತಪ್ಪಿಸುವುದಕ್ಕೋಸ್ಕರ ಸ್ವರ್ಗದಿಂದ ಅಮೃತ ಕಲಶವನ್ನು ತಂದ ಅದರ ಒಂದು ಬಿಂದುವನ್ನು ಇಲ್ಲಿ ಸಮೀಪದ ಸರೋವರದಲ್ಲಿ ಬಿಟ್ಟನಂತೆ. ಮತ್ತು ಶ್ರೀ ಲಕ್ಷ್ಮೀಕಾಂತವನ್ನು ಪೂಜಿಸಿದನಂತೆ. ಹೀಗೆ ಕಳಲೆಯ ಕೇಂದ್ರ ಬಿಂದುವಾಗಿರುವ ಈ ದೇವಾಲಯದ ಸುತ್ತ ಅನೇಕ ಪೌರಾಣಿಕ ಐತಿಹ್ಯಗಳು ಹುಟ್ಟಿಕೊಂಡಿದೆ. ಸ್ಥಳಪುರಾಣವನ್ನು ವಿಶ್ಲೇಷಿಸಿದಾಗ ಇಲ್ಲಿ ಶ್ರೀ ವೈಷ್ಣವ ಪಂಥದವರ ಪ್ರಭಾವವನ್ನು ಕಾಣಬಹುದು. ಈ ಲಕ್ಷ್ಮೀಕಾಂತ ದೇವಾಲಯದ ವಾಸ್ತುಶಿಲ್ಪವನ್ನು ಕುರಿತು ಕೆಲವು ವಿವರಗಳನ್ನು ನೀಡಬಹುದು.

ಶ್ರೀ ಲಕ್ಷ್ಮೀಕಾಂತ ದೇವಾಲಯ

ಈ ದೇವಾಲಯವು ಕಳಲೆ ಗ್ರಾಮದ ಪಶ್ಚಿಮದ ಭಾಗದಲ್ಲಿದೆ. ದ್ರಾವಿಡ ಶೈಲಿಯಲ್ಲ ನಿರ್ಮಾಣವಾಗಿರುವ ದೇವಾಲಯದ ಮೇಲ್ಛಾವಣಿಯ ಮೇಲೆ ಸುಂದರವಾದ ಕೋಷ್ಟಕಗಳನ್ನು ಗಾರೆಯಿಂದ ತಯಾರಿಸಿಲ್ಪಟ್ಟ ದೇವತೆಗಳ ಶಿಲ್ಪಗಳಿವೆ. ದೇವಾಲಯದ ಗರ್ಭಗೃಹದಲ್ಲಿ ಲಕ್ಷ್ಮೀಕಾಂತನ ಪ್ರಭಾವಳೀ ಸಹಿತ ಮೂರುವರೆ ಅಡಿ ಎತ್ತರವಿರುವ ವಿಗ್ರಹವಿದೆ. ಆದರೆ ಈ ವಿಗ್ರಹವು ನಂಬಿನಾರಾಯಣನ ಮಾದರಿಯಲ್ಲಿದೆ. ವಿಗ್ರಹದ ಅಕ್ಕಪಕ್ಕದಲ್ಲಿ ಪತ್ನಿಯರ ಶಿಲ್ಪಗಳಿವೆ. ಲೋಹದ ಮೂರು ಶಿಲ್ಪಗಳು ಬೇರೆ ಬೇರೆ ಆಕಾರಗಳಲ್ಲಿದ್ದು ನಂಬಿನಾರಾಯಣನ ಪ್ರತಿರೂಪವಾಗಿವೆ. ಬಲಗಡೆಯ ಸುಕನಾಸಿಯ ಬಲಭಾಗದಲ್ಲಿ ಶ್ರೀವೈಷ್ಣವಸಂತರಾದ ಆಳ್ವಾರರ ಮತ್ತು ವಿಶ್ವರ ಸೇನ ಲೋಹದ ಪ್ರತೀಮೆಗಳಿವೆ. ಸುಕನಾಸಿಯಲ್ಲಿ ರಾಮಾನುಜಚಾರ್ಯರ ಮತ್ತು ನಮ್ಮಾಳ್ವರು ಎದುರುಬದಿರಿನಲ್ಲಿ ಪ್ರತಿಷ್ಠಾಪಿಸಿರುವ ಪ್ರತಿಮೆಗಳಿವೆ. ನವರಂಗದಲ್ಲಿ ಉತ್ಸವ ಮೂರ್ತಿಯಿದೆ. ಇದಕ್ಕೆ ಎಡಗಡೆ ರಾಮ, ಲಕ್ಷಣ, ಸೀತೆ, ಮತ್ತು ಹನುಮಂತರ ಲೋಹದ ಪ್ರತಿಮೆಗಳಿವೆ. ದಳವಾಯಿ ಮನೆದೇವರಾದ ರಾಮನ ವಿಗ್ರಹವನ್ನು ದೇವರಾಜಯ್ಯನ ಮರಣ ನಂತರ ದೇವಾಲಯಕ್ಕೆ ನೀಡಲಾಯಿತೆಂದು ಮೈಸೂರು ಪುರಾತತ್ವ ಇಲಾಖೆಯ ವರದಿಯಲ್ಲಿ ತಿಳಿಸಲಾಗಿದೆ[೩](ಎಂ.ಎ.ಆರ್.೧೯೧೩). ಈ ದೇವರ ಪ್ರಭಾವಳಿ ತುಂಬಾ ಸುಂದರವಾಗಿದ್ದು, ವಿಷ್ಣುವಿನ

ಯಜ್ಞಾಶ್ವವನ್ನು ಹುಡುಕಿಕೊಂಡು ಪಾತಾಳಲೋಕವನ್ನು ಪ್ರವೇಶಿಸಿದರು. ಅಲ್ಲಿ ಕಪಿಲಮುನಿಗಳ ಪಕ್ಕದಲ್ಲಿ ನಿಂತಿದ್ದ ಯಜ್ಞಾಶ್ವಯನ್ನು ಕಂಡುಮುನಿಗಳು ಕಳ್ಳನೆಂಬ ತಪ್ಪು ಕಲ್ಪನೆಯಿಂದ ಅವರನ್ನು ನಿಂದಿಸಿ. ಅವರ ತಪೋಭಂಗವನ್ನು ಮಾಡಿದರು. ಇದರಿಂದ ಕಪಿಲಾ ಮಹರ್ಷಿಗಳು ತುಂಬಾ ನೊಂದರು. ಅಲ್ಲಿಂದ ಹೊರಟು ಅವರು ಕಳಲೆಯ ದತ್ತಾತ್ರಯ ಮುನಿಗಳ ಆಶ್ರಮಕ್ಕೆ ಬಂದು ಶ್ರೀ ಲಕ್ಷ್ಮೀಕಾಂತನ ಕರುಣೀಯವಾದ ಹಾಗೂ ಪ್ರಶಾಂತವಾದ ವಾತಾವರಣವನ್ನು ಮೆಚ್ಚಿ ಅಲ್ಲಿಯೇ ನೆಲೆಸಿದರಂತೆ.[೨] ಆದ್ದರಿಂದಲೆ ಈ ಸ್ಥಳಕ್ಕೆ ಕಪಿಲಾಶ್ರಮ ಎಂಬ ಹೆಸರು ಬಂದಿತು.

ವಿಷ್ಣುವಿನ ವಾಹನವಾದ ಗರುಡನೂ ಯಾವುದೋ ಕಾರಣಕ್ಕೆ ತನ್ನ ತಾಯಿಗೆ ಒದಗಿಬಂದಿದ್ದ ಗುಲಾಮಗಿರಿಯನ್ನು ತಪ್ಪಿಸುವುದಕ್ಕೋಸ್ಕರ ಸ್ವರ್ಗದಿಂದ ಅಮೃತ ಕಲಶವನ್ನು ತಂದ ಅದರ ಒಂದು ಬಿಂದುವನ್ನು ಇಲ್ಲಿ ಸಮೀಪದ ಸರೋವರದಲ್ಲಿ ಬಿಟ್ಟನಂತೆ. ಮತ್ತು ಶ್ರೀ ಲಕ್ಷ್ಮೀಕಾಂತವನ್ನು ಪೂಜಿಸಿದನಂತೆ. ಹೀಗೆ ಕಳಲೆಯ ಕೇಂದ್ರ ಬಿಂದುವಾಗಿರುವ ಈ ದೇವಾಲಯದ ಸುತ್ತ ಅನೇಕ ಪೌರಾಣಿಕ ಐತಿಹ್ಯಗಳು ಹುಟ್ಟಿಕೊಂಡಿದೆ. ಸ್ಥಳಪುರಾಣವನ್ನು ವಿಶ್ಲೇಷಿಸಿದಾಗ ಇಲ್ಲಿ ಶ್ರೀ ವೈಷ್ಣವ ಪಂಥದವರ ಪ್ರಭಾವವನ್ನು ಕಾಣಬಹುದು. ಈ ಲಕ್ಷ್ಮೀಕಾಂತ ದೇವಾಲಯದ ವಾಸ್ತುಶಿಲ್ಪವನ್ನು ಕುರಿತು ಕೆಲವು ವಿವರಗಳನ್ನು ನೀಡಬಹುದು.

ಶ್ರೀ ಲಕ್ಷ್ಮೀಕಾಂತ ದೇವಾಲಯ

ಈ ದೇವಾಲಯವು ಕಳಲೆ ಗ್ರಾಮದ ಪಶ್ಚಿಮದ ಭಾಗದಲ್ಲಿದೆ. ದ್ರಾವಿಡ ಶೈಲಿಯಲ್ಲ ನಿರ್ಮಾಣವಾಗಿರುವ ದೇವಾಲಯದ ಮೇಲ್ಛಾವಣಿಯ ಮೇಲೆ ಸುಂದರವಾದ ಕೋಷ್ಟಕಗಳನ್ನು ಗಾರೆಯಿಂದ ತಯಾರಿಸಿಲ್ಪಟ್ಟ ದೇವತೆಗಳ ಶಿಲ್ಪಗಳಿವೆ. ದೇವಾಲಯದ ಗರ್ಭಗೃಹದಲ್ಲಿ ಲಕ್ಷ್ಮೀಕಾಂತನ ಪ್ರಭಾವಳೀ ಸಹಿತ ಮೂರುವರೆ ಅಡಿ ಎತ್ತರವಿರುವ ವಿಗ್ರಹವಿದೆ. ಆದರೆ ಈ ವಿಗ್ರಹವು ನಂಬಿನಾರಾಯಣನ ಮಾದರಿಯಲ್ಲಿದೆ. ವಿಗ್ರಹದ ಅಕ್ಕಪಕ್ಕದಲ್ಲಿ ಪತ್ನಿಯರ ಶಿಲ್ಪಗಳಿವೆ. ಲೋಹದ ಮೂರು ಶಿಲ್ಪಗಳು ಬೇರೆ ಬೇರೆ ಆಕಾರಗಳಲ್ಲಿದ್ದು ನಂಬಿನಾರಾಯಣನ ಪ್ರತಿರೂಪವಾಗಿವೆ. ಬಲಗಡೆಯ ಸುಕನಾಸಿಯ ಬಲಭಾಗದಲ್ಲಿ ಶ್ರೀವೈಷ್ಣವಸಂತರಾದ ಆಳ್ವಾರರ ಮತ್ತು ವಿಶ್ವರ ಸೇನ ಲೋಹದ ಪ್ರತೀಮೆಗಳಿವೆ. ಸುಕನಾಸಿಯಲ್ಲಿ ರಾಮಾನುಜಚಾರ್ಯರ ಮತ್ತು ನಮ್ಮಾಳ್ವರು ಎದುರುಬದಿರಿನಲ್ಲಿ ಪ್ರತಿಷ್ಠಾಪಿಸಿರುವ ಪ್ರತಿಮೆಗಳಿವೆ. ನವರಂಗದಲ್ಲಿ ಉತ್ಸವ ಮೂರ್ತಿಯಿದೆ. ಇದಕ್ಕೆ ಎಡಗಡೆ ರಾಮ, ಲಕ್ಷ್ಮಣ, ಸೀತೆ, ಮತ್ತು ಹನುಮಂತರ ಲೋಹದ ಪ್ರತಿಮೆಗಳಿವೆ. ದಳವಾಯಿ ಮನೆದೇವರಾದ ರಾಮನ ವಿಗ್ರಹವನ್ನು ದೇವರಾಜಯ್ಯನ ಮರಣ ನಂತರ ದೇವಾಲಯಕ್ಕೆ ನೀಡಲಾಯಿತೆಂದು ಮೈಸೂರು ಪುರಾತತ್ವ ಇಲಾಖೆಯ ವರದಿಯಲ್ಲಿ ತಿಳಿಸಲಾಗಿದೆ[೩](ಎಂ.ಎ.ಆರ್.೧೯೧೩). ಈ ದೇವರ ಪ್ರಭಾವಳಿ ತುಂಬಾ ಸುಂದರವಾಗಿದ್ದು, ವಿಷ್ಣುವಿನ

೧೦ ಅವತಾರಗಳನ್ನು ಕೆತ್ತಲಾಗಿದೆ. ನವರಂಗದ ದಕ್ಷಿಣಕ್ಕೆ ಒಂದು ಪ್ರಾಂಗಣವಿದೆ. ಪ್ರಾಕಾರದಲ್ಲಿರುವ ಕೋಷ್ಠಗಳಲ್ಲಿ ನಮ್ಮೊಳ್ವಾರ್, ಪರವಾಸುದೇವರು ಸೇರಿಕೊಂಡಂತೆ ಎಲ್ಲಾ ಆಳ್ವಾರರ ಮತ್ತು ಕೆಲವು ಆಚಾರ್ಯರ ಹಾಗೂ ಶ್ರೀರಾಮ ಲಕ್ಷ್ಮಣ ಸೀತೆ, ಶ್ರೀರಾಮನ ವೇಣುಗೋಪಾಲ, ಲಕ್ಷ್ಮೀ ನಾರಾಯಣ, ಶ್ರೀನಿವಾಸ, ಕೇಶವ, ನಾರಾಯಣ, ಲಕ್ಷ್ಮಣ ಮತ್ತು ಸೀತಾ ಸಮೇತನಾದ ಕೋದಂಡರಾಮ, ರಾಜಮನ್ನಾರ್, ಅಂಡಾಳ್, ರಾಮಾನುಜಾಚಾರ್ಯ ಅವರ ಶಿಷ್ಯ ಕೊರಟ್ಟಾಳ್ವಾನ್ ವೇದಾಂತಾಚಾರ್ಯ ಮತ್ತು ಮಹಾಮುನಿ ಮೊದಲಾದ ಶಿಲ್ಪಗಳಿವೆ.[೪]

ಪ್ರಾಕಾರದ ಒಳಗಡೆಯೇ ದೇವಾಲಯದ ಅಮ್ಮನವರ ಗುಡಿ ಇದೆ. ರಾಜಮನ್ನಾರ್ ಎಂಬುದು ಶ್ರೀಕೃಷ್ಣನ ಒಂದು ಆಕಾರ. ಒಂದು ಕುತೂಹಲಕಾರಯಾದ ಅಂಶವೆಂದರೆ ಈ ದೇವಾಲಯದಲ್ಲಿ ಮೈಸೂರು ಒಡೆಯರ ವಂಶದ ಲಾಂಛನಗಳಾದ, ಶಂಖ, ಚಕ್ರ, ಮತ್ಸ್ಯ ಮತ್ತು ಯಾಳಿಗಳಿವೆ.[೫] ಅವುಗಳ ಪ್ರಕಾರ ಇವುಗಳನ್ನು ದೇವಸ್ಥಾನಕ್ಕೆ ಕಾಂತಯ್ಯನ ಮಗನಾದ ಕಳಲೆ ದಳವಾಯಿ ನಂಜರಾಜನು ದಾನಮಾಡಿದನೆಮದು ತಿಳಿಸುತ್ತದೆ. ದೇವಾಲಯದಲ್ಲಿರುವ ಕೆಲವು ಬೆಳ್ಳಿಯ ಪಾತ್ರೆಗಳನ್ನು ಪರಿಶೀಲಿಸಿದಾಗ ಅವುಗಳನ್ನು ಕಾಣಿಕೆಯಾಗಿ ಅರ್ಪಿಸಿದ ದಳವಾಯಿ ನಂಜರಾಜಯ್ಯ, ಲಕ್ಷ್ಮಮ್ಮಣ್ಣಿ, ಮತ್ತು ಟಿಪ್ಪುಸುಲ್ತಾನರು ದಾನ ನೀಡಿರುವುದು ತಿಳಿದುಬರುತ್ತಿದೆ. ಒಂದು ಗಂಟೆಯ ಮೇಲಿನ ಬರಹದ ಪ್ರಕಾರ ಮೂರನೆ ಕೃಷ್ಣರಾಜ ಒಡೆಯರ ತಂದೆಯಾಗಿದ್ದ ಚಾಮರಾಜ ಒಡೆಯರ ಪಟ್ಟದ ಅರಸಿ ಲಕ್ಷಮ್ಮಣ್ಣಿಯವರು ನೀಡಿದ ದಾನವೆಂದು ಗೊತ್ತಗುತ್ತದೆ. ಶ್ರೀ ಲಕ್ಷ್ಮೀಕಾಂತ ದೇವಾಲಯದ ಹೊರಗಡೆ ಬಂದು ಸುಂದರವಾದ ಮಂಟಪವಿದೆ. ವಸಂತ ಮಂಟಪ, ನವರಾತ್ರಿಯ ಸಂದರ್ಭದಲ್ಲಿ ಉತ್ಸವಮೂರ್ತಿಯನ್ನು ಕರೆತಂದು ಮಂಟಪದಲ್ಲಿ ಕೂರಿಸಿ ವಸಂತೋತ್ಸವವನ್ನು ಆಚರಿಸುತ್ತಿದ್ದರು. ಸುತ್ತಲಿನ ಗ್ರಾಮಗಳಿಂದ ಸಾವಿರಾರು ಜನರು ಸೇರುತ್ತಿದ್ದರು. ಈ ವಸಂತ ಮಂಟಪದ ಮುಂಭಾಗದಲ್ಲಿ ಒಂದು ಕಲ್ಯಾಣಿ ಇದ್ದಿತೆಂದು ತಿಳಿದುಬರುತ್ತಿದೆ. ಆದರೆ ಈಗ ಅದು ಸಂಪೂರ್ಣವಾಗಿ ಮುಚ್ಚಿಹೋಗಿ ಯಾವ ಕುರುಹೂ ಇಲ್ಲದೆ ರಸ್ತೆಯಾಗಿ ಮಾರ್ಪಟ್ಟಿದೆ.

ಶ್ರೀ ಲಕ್ಷ್ಮೀಕಾಂತ ದೇವಾಲಯದಲ್ಲಿ ಕೆಲವು ಮರದ ಮೂರ್ತಿಗಳಿವೆ. ಅವುಗಳಲ್ಲಿ ಪ್ರಮುಖವಾದವು ಹಂಸ ಮತ್ತು ಆದಿಶೇಷ, ಆದಿಶೇಷನ ಕೆಳಗೆ ಅವನನ್ನು ಹೊತ್ತುಕೊಂಡಿರುವ ಭಂಗಿಯಲ್ಲಿ ಆನೆಗಳು ಮತ್ತು ಕುಬ್ಜ ವಿಗ್ರಹಗಳಿವೆ. ಎಲ್ಲಕ್ಕಿಂತ ಕೆಳಗೆ ಅಡಿಪಾಯ ರೂಪದಲ್ಲಿ ಕೂರ್ಮದ ಪ್ರತಿರೂಪವಿದೆ. ಮರದ ಇನ್ನೊಂದು ಆಂಜನೇಯನ ವಿಗ್ರಹವು ರಾಮಾನುಜಪಂಥದ ಬಹುಮುಖ್ಯ ಭಾವನೆಯಾದ "ಪ್ರಪಕ್ತಿಯನ್ನು" ಸಾಂಕೇತಿಸುವಂತ್ತಿದೆ. ಮರದಲ್ಲಿ ಕೆತ್ತಿರುವ ಗರುಡನ ವಿಗ್ರಹವು[೬] ಸುಂದರವಾಗಿದೆ. ಆದರೆ ಕಾಲಮಾನದ ದೆಸೆಯಿಂದ ವಿಗ್ರಹ ಅಲ್ಲಲ್ಲಿ ಸೀಳುಬಿಟ್ಟುಕೊಂಡು ಮುಕ್ಕಾಗಿ ಹೋಗಿದೆ.

ಲಕ್ಷ್ಮೀಕಾಂತ ದೇವಾಲಯದ ಮುಂಭಾಗದಲ್ಲಿ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಎದುರುಬದುರಾಗಿ ಎರಡು ಬೃಹತ್ತಾದ ಮಂಟಪಗಳಿವೆ. ಇವುಗಳನ್ನು ನವರಾತ್ರಿ ಹಾಗೂ ಕಾರ್ತಿಕ ಮಂಟಪಗಳೆಂದು ಕರೆಯಲಾಗಿದೆ. ಈ ಮಂಟಪಗಳ ಕಂಬಗಳು ಗಟ್ಟಿಮುಟ್ಟಾಗಿವೆ. ಬಳಸಿರುವ ಕಲ್ಲು ಗ್ರಾನೈಟ್ ಆಗಿರುವುದರಿಂದ ಸೂಕ್ಷ್ಮ ಕೆತ್ತನೆಗೆ ಇಲ್ಲಿ ಅವಕಾಶವಿಲ್ಲ. ಆದಾಗ್ಯೂ ಈ ಕಂಬಗಳ ಮೇಲೆ ಕೆತ್ತಿರುವ ಕಾಮಧೇನುವಿನ ಚಿತ್ರ ಅತ್ಯಂತ ಸಹಜವಾಗಿ ಮೂಡಿಬಂದಿದೆ. ಅಂತೆಯೇ ಹನುಮಂತ ಕೈಜೋಡಿಸಿಕೊಂಡು ಭಕ್ತಿಯಿಂದ ನಿಂತಿರುವ ಗರುಡ ಹಾಗೂ ಶ್ರೀಮಂತವರ್ಗದ ವ್ಯಕ್ತಿಯೊಬ್ಬನ ಶಿಲ್ಪವು ಸೊಗಸಾಗಿ ಮೂಡಿಬಂದಿದೆ. ತಲೆಯ ಮೇಲೆ ಧರಿಸಿದ ಫೇಟ ಮೈಸೂರಿನ ಪೇಟದಂತಿಲ್ಲ. ಈ ವಿಗ್ರಹದ ಮೇಲೆ ಕಂಬದ ಮಧ್ಯಭಾಗದಲ್ಲಿ ಪ್ರಹ್ಲಾದನಿಗೆ ಹಿರಣ್ಯಕಶಿಪು ನೀಡಿದ ಕ್ರೂರ ಶಿಕ್ಷೆಯನ್ನು ಚಿತ್ರಿಸುವ ಶಿಲ್ಪವಿದೆ. ಈ ಮಂಟಪವನ್ನು ಕಟ್ಟಿಸಿದ ವ್ಯಕ್ತಿಯ ಚಿತ್ರದಂತೆ ತೋರುವ ಕೆತ್ತನೆ ಮತ್ತೊಂದು ಕಂಬದ ಕೆಳಬಾಗದಲ್ಲಿದೆ.[೭] ಈ ವ್ಯಕ್ತಿ ನಿಂತಿರುವ ಭಂಗಿ ಭಕ್ತಿಪೂರ್ಣವಾಗಿ ಕಾಣಿಸುವುದಿಲ್ಲ. ಈ ವಿಗ್ರಹದ ತಲೆಯುಡಿಗೆಯು ಭಿನ್ನವಾಗಿದೆ. ಇದು ಪ್ರಾಯಶಃ ದಳವಾಯಿಗಳ ಶಿಲ್ಪವಿದ್ದಿರಬಹುದು. ಲಕ್ಷ್ಮೀಕಾಂತ ದೇವಾಲಯ ಮುಖಮಂಟಪ ಕಂಬಗಳ ಮೇಲೆ "ಕಿರಾತಾರ್ಜುನ ಪ್ರಸಂಗ" ಮತ್ತು ರಾಮಾಯಾಣದ ಪ್ರಸಂಗವನ್ನು ಬಿಡಿಸಿದ್ದಾರೆ. ಈ ದೇವಾಲಯದಲ್ಲಿ ಚಾಪೆಯ ಮೇಲೆ ಬೃಹತ್ತಾಗಿ ಬಿಡಿಸಿರುವ ರಾಕ್ಷಸನ ಚಿತ್ರವಿದೆ. ಇದು ಜಾನಪದ ಶೈಲಿಯಲ್ಲಿ ಹಿರಣ್ಯಾಕ್ಷನೆಂಬ ರಾಕ್ಷಸನ ಚಿತ್ರವೆಂದು ಪ್ರತೀತಿ. ಇದನ್ನು ಉತ್ಸವ ಸಂದರ್ಭದಲ್ಲಿ ಈಗಲೂ ಬಳಸುತ್ತಾರೆ. ಹೀಗೆ ವಿಜಯನಗರ ಕಾಲದಲ್ಲಿ ಆರಂಭವಾಗಿ ದಳವಾಯಿಗಳ ಕಾಲದವರೆಗೂ, ಅಂದರೆ ಕ್ರಿ.ಶ.ಸುಮಾರು ೧೭ನೇ ಶತಮಾನದ ಆರಂಭ ಕಾಲದಿಂದ ೧೮ನೇ ಶತಮಾನದ ಉತ್ತಾರಾರ್ಧದವರೆಗೂ ಬೇರೆ ಬೇರೆ ಹಂತಗಳಲ್ಲಿ ಈ ದೇವಾಲಯ ನಿರ್ಮಾಣಗೊಂಡಿದೆ ಎಂದು ಹೇಳಬಹುದು.[೮] ಇತ್ತೀಚೀನ ವರ್ಷಗಳಲ್ಲಿ (೧೯೮೬-೮೭) ಕರ್ನಾಟಕ ಪ್ರಾಚ್ಯವಸ್ತು ಇಲಾಖೆಯಿಂದ ದೇವಸ್ಥಾನದ ಪ್ರಾಂಗಣದ ಒಳಗೆ ಕಲ್ಲು ಹಾಸು, ಗೋಪುರವನ್ನು ಸುಸ್ಥಿತಿಯಲ್ಲಿಡುವ ಮತ್ತು ಇತರ ಸಣ್ಣ ಪುಟ್ಟ ಕೆಲಸಗಳು ನಡೆದಿವೆ. ಆದರೂ ಸಹ ಇತ್ತೀಚಿನ ದಿನಗಳಲ್ಲಿ ದೇವಾಲಯವು ಶಿಥಿಲಾವಸ್ಥೆಯನ್ನು ತಲುಪಿದೆ.

ಮಲ್ಲೇಶ್ವರ ದೇವಾಲಯ

ಕಳಲೆಯಲ್ಲಿರುವ ದೇವಾಲಯಗಳ ಪೈಕಿ ಅತ್ಯಂತ ಪ್ರಾಚೀನವೆಂದು ಕಂಡುಬರುವ ಮಲ್ಲೇಶ್ವರ ದೇವಾಲಯವು ತುಂಬಾ ಶಿಥಿಲಾವಸ್ಥೆಗೆ ಒಳಪಟ್ಟಿದ್ದರೂ ತನ್ನ ಸೌಂದರ್ಯವನ್ನು ವ್ಯಕ್ತಪಡಿಸುತ್ತದೆ. ಇದೊಂದು ಸರಳ ಸುಂದರವಾದ ಶಿವನ ಗುಡಿ. ಆದಾಗ್ಯೂ ಈ ದೇವಾಲಯದ ಒಳಗಿರುವ ಕಲ್ಲಿನ ಕಂಬಗಳು ತಮ್ಮ ದೃಢತೆಯಿಂದ ಮನಸ್ಸನ್ನು ಆಕರ್ಷಿಸುತ್ತವೆ. ದೇವಾಲಯದಲ್ಲಿರುವ ಶಿವಲಿಂಗ ಪೂಜೆಯಿಲ್ಲದೆ ಅಂಧಕಾರದಲ್ಲಿ ಮುಳುಗಿದೆ. ದಕ್ಷಿಣಕ್ಕೂ ಪ್ರವೇಶ ದ್ವಾರವಿರುವುದು ಸಮಂಜಸವಾಗಿದೆ.

ಏಕೆಂದರೆ ಶಿವ ಸ್ಮಶಾನವಾಸಿ ಆದುದರಿಂದಲೇ ಅವನಿಗೆ ದಕ್ಷಿಣಮೂರ್ತಿ ಎಂಬ ಹೆಸರು ಬಂದಿಗೆ. ಆ ದಿಕ್ಕಿಗೆ ದ್ವಾರವಿರುವುದು ಸೂಕ್ತವಾಗಿದೆ. ದೇವಾಲಯದ ನವರಂಗದಲ್ಲಿ, ಗರ್ಭಗುಡಿಗೆ ಹೊಂದಿಕೊಂಡಂತೆ, ಎದುರುಬದುರಿಗೆ ಎರಡು ಮುಕ್ಕಾದ ಸಣ್ಣ ಪ್ರಮಾಣದ ಗುಡಿಗಳಿವೆ ಬಹುಶಃ ಒಂದರಲ್ಲಿ ಅಮ್ಮನವರ, ಮತ್ತೊಂದರಲ್ಲಿ ಗಣೇಶನ ವಿಗ್ರಹವಿದ್ದಿರಬಹುದು. ಈ ದೇವಾಲಯದ ಮೇಲ್ಭಾವಣಿಯನ್ನು ಗಮನಿಸಿದರೆ ಅದರ ಇಳಿಜಾರಾದ ಕಲ್ಲಿನ ಸಜ್ಜ ಹೊಯ್ಸಳ ವಾಸ್ತುಶಿಲ್ಪವನ್ನು ನೆನಪಿಗೆ ತರುತ್ತದೆ.

ಈ ದೇವಾಲಯದ ಮುಂಭಾಗದಲ್ಲಿ ನಂದೀಮಂಟಪವಿದೆ. ಈ ನಂದೀಮಂಟಪ ಅನೇಕ ಶಿವಾಲಯಗಳ ನಂದಿಮಂಟಪಗಳಿಗಿಂತ ವೈಶಿಷ್ಟಪೂರ್ಣವಾಗಿದೆ. ಚಚ್ಚಾಕಾರದ ಕಲ್ಲುಮಂಟಪದ ಮೇಲೆ, ದ್ರಾವಿಡ ಶೈಲಿಯಲ್ಲ ಪಿರಮಿಡ್ ಮಾದರಿಯ ಗೋಪುರವಿದೆ. ಈ ದೇವಾಲಯದ ಸುತ್ತಮುತ್ತ ಕೆಲವು ವೀರಗಲ್ಲುಗಳು ಭೂಮಿಯ ಒಳಗೆ ಅರ್ಧಬರ್ಧ ಊತು ಹೋಗಿವೆ. ಈ ವೀರಗಲ್ಲುಗಳಲ್ಲಿ ಶೈವ ಸಂಪ್ರಾದಾಯದ ಚಿಹ್ನೆಗಳಿವೆ. ಅಲ್ಲಿಯೇ ಒಂದು ಮರದ ಕೆಳಗ ಸಾಕಷ್ಟು ದೊಡ್ಡದಾದ ಒಂದು ಅರೆಗಲ್ಲಿದೆ.

ಸೋಮೇಶ್ವರ ದೇವಾಲಯ

ಸುಮಾರು ಕ್ರಿ.ಶ.೧೫೦೦ರಲ್ಲಿ ನಿರ್ಮಿಸಲ್ಪಟ್ಟ ಸೋಮೇಶ್ವರ ದೇವಾಲಯವು ಲಕ್ಷ್ಮೀಕಾಂತ ದೇವಾಲಯದಿಂದ ಸುಮಾರು ೧೦೦ ಗಜ ಈಶಾನ್ಯ ದಿಕ್ಕಿಗೆ ಇದೆ. ಮುಖ್ಯಗುಡಿಯಲ್ಲಿ ಗರ್ಭಗೃಹ ಸುತ್ತ ಮುಚ್ಚಿದ ಸುಕನಾಸಿ, ತೆರೆದ ಮಂಟಪ, ಚಚ್ಚೌಕರ ನವರಂಗ ಮತ್ತು ಮೂರು ಅಂಕಣದ ಮುಖಮಂಟಪಗಳಿವೆ. ಈ ದೇವಾಲಯದಲ್ಲಿ ಹೆಚ್ಚು ಕುಸುರಿ ಕೆಲಸಗಳು ಕಂಡುಬರುವುದಿಲ್ಲ. ಆದರೂ ಶಿವಪುರಾಗಣಗಳಿಂದ ಆಯ್ದ ಕೆಲವು ದೃಶ್ಯಗಳನ್ನು ಕಾಣಬಹುದು. ಇಲ್ಲಿರುವ ಅಮೃತೇಶ್ವರಿ ಅಮ್ಮನ ವಿಗ್ರಹವು ಶಿಥಿಲವಾಗಿದೆ. ಈ ಮೂರ್ತಿಯನ್ನು ಚಿಕ್ಕ ದೇವರಾಜ ಒಡೆಯರ ತಾಯಿಯಾಗಿದ್ದ ಅಮೃತಮ್ಮನ ಹೆಸರಿನಲ್ಲಿ ಇದನ್ನು ನಿರ್ಮಿಸಲಾಗಿದೆ ಎಂದು ಹೇಳಲಾಗುತ್ತದೆ. ಈ ದೇವಾಲಯದಲ್ಲಿ ಪಂಚಲಿಂಗಗಳು ಸಹ ಇವೆ. ದೇವಾಲಯದ ಒಂದು ಕಂಬದ ಮೇಲೆ ಪ್ರಾಯಶಃ ಒಬ್ಬ ದಳವಾಯಿಯನ್ನು ಪ್ರತಿಬಿಂಬಿಸುವ ಉಬ್ಬುಶಿಲ್ಪವಿದೆ.

ರೇವಣಸಿದ್ದೇಶ್ವರ ದೇವಾಲಯ

ಇಂದಿನ ಕಳಲೆ ಗ್ರಾಮದ ದಕ್ಷಿಣ ಅಂಚಿನಲ್ಲಿರುವ ರೇವಣಸಿದ್ದೇಶ್ವರ ದೇವಾಲಯವು ಪ್ರಾಯಶಃ ಕ್ರಿ.ಶ.೧೫೦೦ರಲ್ಲಿ ಕಟ್ಟಲ್ಪಟ್ಟಿರಬಹುದು.' ಈಗ ದೇವಾಲಯ ಹಾಲುಮತಸ್ಥ ಜನಾಂಗದವರ ಹತೋಟಿಯಲ್ಲಿದೆ. ಅವರು ಈ ದೇವಾಲಯವನ್ನು ನವೀಕರಿಸುವ ಕೆಲಸವನ್ನು ಕೈಗೊಂಡಿದ್ದಾರೆ. ಈ ದೇವಾಲಯವು ಗರ್ಭಗೃಹ, ಸುಖನಾಸಿ, ನವರಂಗಗಳನ್ನು, ಹೊಂದಿದೆ. ದ್ವಾರದಲ್ಲಿ ನಂದಿಯ

ವಿಗ್ರಹವನ್ನು ಗಾರೆಯಿಂದ ತಯಾರಿಸಲ್ಪಟ್ಟಿದೆ. ದೇವಾಲಯದಲ್ಲಿ ಯಾವುದೇ ಕುಸುರಿ ಕೆಲಸಗಳು ಕಂಡುಬರುವುದಿಲ್ಲ. ದೇವಾಲಯದ ಸುತ್ತಮುತ್ತ ಅನೇಕ ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು ಚದುರಿಕೊಂಡು ಬಿದ್ದಿವೆ. ಅವುಗಳಲ್ಲಿ ಹೆಚ್ಚಿನವುಗಳಲ್ಲಿ ಶೈವ, ಸಂಪ್ರದಾಯದ ಚಿಹ್ನೆಗಳು ಇವೆ. ಉಳಿದ ಕೆಲವು ಕಲ್ಲುಗಳ ಮೇಲೆ ವೈಷ್ಣವ ಸಂಕೇತಗಳು ಇವೆ. ಕೆಲವು ವೀರಗಲ್ಲುಗಳ ಮೇಲೆ ಜೋಡಿ ವೀರರ ಮರಣವನ್ನು ಮತ್ತು ಅಪ್ಸರೆಯರು ಅವರನ್ನು ಕೈಲಾಸಕ್ಕೆ ಕರೆದೊಯ್ಯುತ್ತಿರುವ ಅಪರೂಪದ ಉಬ್ಬುಚಿತ್ರಗಳು ಕಾಣಸಿಗುತ್ತವೆ.

ಈ ರೇವಣಸಿದ್ದೇಶ್ವರ ದೇವಾಲಯದ ಪಕ್ಕದಲ್ಲಿ ಒಂದು ಸಾವಿರ ಎಕರೆ ಅಚ್ಚುಕಟ್ಟುಳ್ಳ ವಿಸ್ತಾರವಾದ ಚೆಲುವಾಂಬ ಕೆರೆ ಕಾಣಸಿಗುತ್ತದೆ. ಚೆಲುವಾಂಬೆಯು ದೊಡ್ಡ ದೇವರಾಜ ಒಡೆಯರ ಪತ್ನಿಯಾಗಿದ್ದಳು. ಈ ಕೆರೆ ಊರಿಗಿಂತ ಸುಮಾರು ೨ ಅಡಿ ಎತ್ತರದಲ್ಲಿದೆ. ಕೆರೆಯ ದಂಡೆಯ ಮೇಲೆ ಒಂದು ಮಂಟಪವಿದೆ. ಇದನ್ನು ತೆಪ್ಪೋತ್ಸವ ಆಚರಿಸುವ ಸಂದರ್ಭದಲ್ಲಿ ದೇವರನ್ನು ಪ್ರತಿಷ್ಠಾಪಿಸಲು ಬಳಸುತ್ತಿದ್ದರು ಎಂಬುದಾಗಿ ತಿಳಿದುಬರುತ್ತದೆ.

ಪಟ್ಟದ ಚಾವಡಿ

ಕಳಲೆ ಗ್ರಾಮದ ಮಧ್ಯಭಾಗದಲ್ಲಿರುವ ಈ ಪಟ್ಟದ ಚಾವಡಿಯ ಕಳಲೆ ಅರಸರುಗಳು ಈ ಸ್ಥಳದಲ್ಲಿಯೇ ಪಟ್ಟಾಭಿಷಕ್ತರಾಗುತ್ತಿದ್ದರು.[೧೦] ಹತ್ತು ಹಲವು ಮಂದಿಯ ಪಟ್ಟಕ್ಕೆ ಕಾರಣವಾದ ಹಾಗೂ ದಳವಾಯಿಗಳ ಕೇಂದ್ರವಾಗಿದ್ದ ಈ ಪಟ್ಟದ ಚಾವಡಿಯು ಬರೀ ಚಾವಡಿ ಎಂಬ ಹೆಸರನ್ನಷ್ಟೆ ಹೊಂದಿದೆ. ದಿನಗಳೆದಂತೆ ಕೊಂಚ ಕೊಂಚವಾಗಿ ಹಾಳಾಗುತ್ತಿದ್ದ ಕಟ್ಟಡವನ್ನು ಈಗ ಪ್ರೌಢಶಾಲೆಯಾಗಿ ಮಾಡಿರುವುದರಿಂದ ಸದ್ಯ ಈಗ ಉತ್ತಮ ಸ್ಥಿತಿಯಲ್ಲಿ ಉಳಿಸಿಕೊಂಡು ಹೋಗಲಾಗುತ್ತಿದೆ.

ಇಟ್ಟಿಗೆ ಮಾಳಿಗಮ್ಮನ ಗುಡಿ

ಪಟ್ಟದ ಚಾವಡಿಯ ಮುಂಭಾಗದಲ್ಲಿರುವ ಈ ಇಟ್ಟಿಗೆ ಮಾಳಿಗಮ್ಮನ ಗುಡಿಯೆಂದು ಕರೆಯುವ ಇದು ಸಹಗಮನ ಪದ್ಧತಿಯ ಸಂಕೇತವಾಗಿದೆ. ಆಕೆಯ ಗದ್ದಿಗೆಯುಳ್ಳ ಒಂದು ಸಣ್ಣ ಗುಡಿ ಇದೆ. ಇದರ ಮುಖ್ಯ ಆಕರ್ಷಣೆ ಎಂದರೆ, ಶ್ರೀಗಂಧದ ಮರದಲ್ಲಿ ಕೆತ್ತಿರುವ ಅತಿ ಸುಂದರವಾದ ಶೃಂಗಾರ ಭಂಗಿಯಲ್ಲಿರುವ ಪರಂಪರೆಗಳ ಶಿಲ್ಪಗಳು. ಆದರೆ ಈ ಶ್ರೀಗಂಧದ ಬಾಗಿಲನ್ನು ಸಂರಕ್ಷಣೆಯ ದೃಷ್ಟಿಯಿಂದ ಮೈಸೂರು ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಇಡಲಾಗಿದೆ.[೧೧] ಈ ಇಟ್ಟಿಗೆ ಮಾಳಿಗಮ್ಮನ ಗುಡಿಯ ನಿರ್ಮಾಣದ ಬಗ್ಗೆ ಒಂದು ಕಥೆ ಇದೆ. ಕಳಲೆಯ ಅರಸನಾದ ಲಕ್ಷ್ಮೀಕಾಂತ ಒಡೆಯರು ರಾಜ್ಯವಾಳುತ್ತಿದ್ದಾಗ ಆಧಿಕಾರಕ್ಕಾಗಿ ಅವರ ಕುಟುಂಬದಲ್ಲಿ ಉಂಟಾದ ಒಳಜಗಳದಲ್ಲಿ ಲಕ್ಷ್ಮೀಕಾಂತ

ಒಡೆಯರನ್ನು ಕೊಲ್ಲಲಾಗುತ್ತದೆ. ಈ ಲಕ್ಷ್ಮೀಕಾಂತ ಒಡೆಯರ ಪತ್ನಿಯಾದ ಲಿಂಗಾಜ್ಜುಮ್ಮಣ್ಣಿಯವರು ಪತಿಯ ಜೊತೆ ಸಹಗಮನ ಮಾಡಿದಳು ಎಂದು ಹೇಳಲಾಗುತ್ತದೆ.

ಕೈವಲ್ಯದೇವಿ ಗುಡಿ

ಇಂದಿನ ಕಳಲೆ ಗ್ರಾಮದಿಂದ ಎರಡು ಕಿ.ಮೀ. ದೂರದಲ್ಲಿ ಮೈಸೂರು ಊಟಿಯ ಹೆದ್ದಾರಿಯ ಪೂರ್ವಕ್ಕೆ ಗದ್ದೆಗಳ ನಡುವೆ ಆಧುನಿಕ ಮಾದರಿಯಲ್ಲಿ ಇಂದು ಕಾಣಿಸುವ ಪ್ರಸಿದ್ಧ ಗ್ರಾಮದೇವತೆ. ಈ ದೇವಾಲಯವು ಕಳಲೆಯ ದೇವಾಲಯಗಳ ಕಾಲದಲ್ಲಿ ಉತ್ತಮ ಸ್ಥಿತಿಯಲ್ಲಿತ್ತು. ಅಂದರೆ ಗ್ರಾಮ ದೇವತೆಯ ಹಬ್ಬದ ದಿನ ಕಳಲೆಯ ಅರಸರು ಕುಟುಂಬ ಸಮೇತರಾಗಿ ಇಲ್ಲಿ ಪೂಜೆಯನ್ನು ಸಲ್ಲಿಸುತ್ತಿದ್ದರು ಎಂದು ತಿಳಿದು ಬರುತ್ತದೆ. ಈ ದೇವಾಲಯವು ಗರ್ಭಗೃಹ, ಸುಕನಾಸಿ, ನವರಂಗ, ಮುಖಮಂಟಪ ಹಾಗೂ ದೇವಾಲಯದ ಸುತ್ತಲೂ ಪ್ರಾಕಾರದ ಗೋಡೆ ಇದೆ. ಈ ದೇವಾಲಯದಲ್ಲಿ ಅಂತಹ ಯಾವುದೇ ಕುಸುರಿ ಕೆಲಸಗಳು ಕಾಣಸಿಗುವುದಿಲ್ಲ. ಈ ಕೈವಲ್ಯದೇವಿಯ ಜಾತ್ರೆಯೂ ಈಗಲೂ ಸಹ ನಡೆಯುತ್ತಿದೆ ಸುಮಾರು ೩೩ ಹಳ್ಳಿಯ ಜನರು ಸೇರಿ ಈ ಜಾತ್ರೆಯನ್ನು ಇಂದಿಗೂ ಸಹ ನಡೆಸಿಕೊಂಡು ಬರುತ್ತಿದ್ದಾರೆ.

ಇವುಗಳಲ್ಲದೆ ಪ್ರಸಿದ್ಧ ತೀರ್ಥಕ್ಷೇತ್ರವಾದ ಕಳಲೆ ಹತ್ತಿರವಿರುವ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದ ಆವರಣದ ಪ್ರಾಕಾರದಲ್ಲಿ ಕಳಲೆ ದಳವಾಯಿ ನಂಜರಾಜಯ್ಯನಿಂದ ೧೮ನೇ ಶತಮಾನದಲ್ಲಿ ಸ್ಥಾಪಿಸ್ಪಟ್ಟ ೬೩ ಶೈವ ಪುರಾತನವಾದ ಪ್ರತಿಮೆಗಳಿವೆ.[೨] ಅವುಗಳೆಂದರೆ

೧. ಸುಂದರರು

೨. ಅಪ್ಪರುರ

೩. ಮಾಣಿಕ್ಯವಾಚಕರು

೪. ಶಿವಜ್ಞಾನಸಮಂಧುರ

೫. ತ್ರಿಸಹಸ್ರ ಭೂಸುರರು

೬. ನೀಲಕಂಠರು

೭. ಮಹಾಧನರು

೮. ಮಾರರು

೯. ಸತ್ತಾರ್ಥರು

೧೦. ವರಮಿಂದರು

೧೧. ಅಮರನೀತಿ

೧೨. ದಾರುಕರು

೧೩. ಯೋಗಾಧಿನಾಥರು

೧೪. ಕಳಾನಾಥರು

೧೫. ಕಂಪಣ್ಣನವರು

೧೬. ಮಾನಕಂಜರು

೧೭. ಶಂಕುಲದಾಯರು

೧೮. ಗೋನಾಥರು

೧೯. ಮೂರ್ತಿನಾಥರು

೨೦. ಭದ್ರಭಕ್ತರು

೨೧. ರುದ್ರಪಶುಪತಿ

೨೨. ನಂದರು

೨೩. ಚೌಡೀಶ್ವರರು

೨೪. ಕುಪಾಕ್ತರು

೨೫. ವಿಚಾರವಂತರು

೨೬. ವಿದ್ಯಾಶೂರರು

೨೭. ಅಭೂತಿಚಾರರು

೨೮. ನೀಲನಗ್ನರು

೨೯. ನವನಂದಿ

೩೦. ಕಲಿ ಕಾಮರರು

೩೧. ಶ್ರೀ ಮಾಲಿರು

೩೨. ಶಕ್ತಿನಾಥರು

೩೩. ದಂಡಭಕ್ತರು

೩೪. ಮಾರ ಸೋಮಯಾಜಿಗಳು

೩೫. ಶಾಖ್ಯನಾಥರು

೩೬. ನಿರುಶಾರ್ಧೂಲರು

೩೭. ಚರಭೂಪತಿ

೩೮. ಗಣನಾಥರು

೩೯. ಪರಾಂತಕರು

೪೦. ಸತ್ಯದಾಸರು

೪೧. ಧರ್ಮಕೇತನರು

೪೨. ಪ್ರತಾಪಶೂರರು

೪೩. ಅತಿಭಕ್ತರು

೪೪. ಮಾನಧನರು

೪೫. ಕಲಿನೀತಿ

೪೬. ಪಂಚಪಾದರು

೪೭. ಧರ್ಮಭಕ್ತರು(೧)

೪೮. ಗುಣೋಲ್ಲಬರು

೪೯. ಅವಿಕಾರಿ

೫೦. ಅಭಿರಾಮರು

೫೧. ನಿರ್ವಚಕರು

೫೨. ಮೂರ್ಖಭಕ್ತರು

೫೩. ದನಾಧರು

೫೪. ಯಧರರು

೫೫. ಸಾಹಸ ಪ್ರಿಯರರು

೫೬. ಕೀರ್ತಿಸುಖರು

೫೭. ಶೂರವ್ಯಾಘ್ರರು

೫೮. ಶಂಭುಚಿತ್ತರು

೫೯. ಕೀರ್ತಿಕಥಮೃತರು

೬೦. ಗೀತಕಾರರು

೬೧. ಸುಕುಮಾರರು

೬೨. ಲೋಹಿತಾರ್ತಿರು

೬೩. ಮಾನಧನರು

ಈ ಮೇಲಿನ ಎಲ್ಲಾ ವಿಗ್ರಹಗಳ ಕೆಳಗೂ ಮಹಿಶೂರ ದಳವಾಯಿ ನಂಜರಾಜಯ್ಯನ ಸೇವೆ ಎಂದು ಬರೆಯಲಾಗಿದೆ.[೧೩] ಇದರಿಂದ ನಂಜರಾಜಯ್ಯನು ಶೈವ ದೇವಾಲಯಗಳಿಗೂ ಅಪಾರವಾದ ಕೊಡುಗೆಯನ್ನು ನೀಡಿದ್ದ ಎಂಬುದಕ್ಕೆ ನಿದರ್ಶನಗಳಾಗಿವೆ.

ಇದಲ್ಲದೆ ಮೈಸೂರು ಅರಮನೆಯ ಕೋಟೆಯ ಒಳಭಾಗದಲ್ಲಿರುವ ತ್ರಿನಯನೇಶ್ವರ ದೇವಾಲಯದ ಗೋಪುರವನ್ನು ನಂಜರಾಜ ನಿರ್ಮಿಸಿದನು.[೧೪] ತಿರುಮಕೂಡಲ ನರಸೀಪುರದ ಅಗಸ್ತ್ಯೇಶ್ವರ ದೇವಾಲದಲ್ಲಿರುವ ಕಾಮಾಕ್ಷಿ ಅಮ್ಮನವರ ವಿಗ್ರಹವನ್ನು ನಂಜರಾಜಯ್ಯ ಪ್ರತಿಷ್ಠಾಪಿಸಿದನು.[೧೫] ತಲಕಾಡಿನ ವೈದ್ಯೇಶ್ವರ

ದೇವಾಲಯದಲ್ಲಿರುವ ತಾಂಡವೇಶ್ವರ ಮತ್ತು ಚಂಡಿಕಾಂಬಿಕೆಯ ಲೋಹದ ವಿಗ್ರಹಗಳು ನಂಜರಾಜಯ್ಯನ ಕೊಡುಗೆಯಾಗಿವೆ.[೧೨] ಬೆಟ್ಟದ ಪುರದ ಮಲ್ಲಿಕಾರ್ಜುನ ದೇವಾಲಯದ ತಾಂಡವೇಶ್ವರ ಮತ್ತು ಚಂಡಿಕಾಂಬಿಕಾ ವಿಗ್ರಹಗಳ ಪಾದಪೀಠದಲ್ಲಿರುವ ಶಾಸನದಲ್ಲಿ ಅವುಗಳನ್ನು ನಂಜರಾಜಯ್ಯನ ಸೇವೆ ಎಂದು ಉಲ್ಲೇಖಿಸಲಾಗಿದೆ.[೧೩] ಅದೇ ರೀತಿ ಶ್ರೀರಂಗಪಟ್ಟಣದ ಗಂಗಾಧರೇಶ್ವರ ದೇವಾಲಯದ ದಕ್ಷಿಣ ಮೂರ್ತಿಯ ವಿಗ್ರಹ (೧೭೫೦), ಹರದನಹಳ್ಳಿಯ ದಿವ್ಯಲಿಂಗೇಶ್ವರ ದೇವಾಲಯದ ತಾಂಡವೇಶ್ವರ ಮತ್ತು ಮನೋನ್ಮಣಿ ಹಾಗೂ ಪಾರ್ವತಿ ಉತ್ಸವ ಮೂರ್ತಿ, ರಾಮನಾಥಪುರದ ರಾಮೇಶ್ವರ ದೇವಾಲಯದ ತಾಂಡವೇಶ್ವರಮೂರ್ತಿ ನಂಜರಾಜಯ್ಯನ ಸೇವೆ ಎಂದು ಉಲ್ಲೇಖಿಸಲಾಗಿದೆ.[೧೪]

ಹೀಗೆ ಕೆಳಲೆ ದೇವಾಲಯಗಳು ಸಮರ್ಥ ಆಡಳಿತದ ಜೊತೆಗೆ ಕಲೆ ಮತ್ತು ವಾಸ್ತುಶಿಲ್ಪಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿ ಇತಿಹಾಸದ ಪುಟಗಳಲ್ಲಿ ಇಂದಿಗೂ ಸಹ ರಾರಾಜಿಸುತ್ತಿದ್ದಾರೆ.

ಅಡಿಟಿಪ್ಪಣಿಗಳು

೧. ರಾಮಚಂದ್ರರಾವ್ ಎಂ.ಎಸ್., ೧೯೭೮, ಕಪಿಲಾಶ್ರಮ ವೈಭವ, ಮೈಸೂರು, ಪು.೩

೨. ಅದೇ, ಪು.೭

೩. ಎಂ.ಎ.ಆರ್., ೧೯೧೩, ಪು.೧೦೬

೪. ಕನ್ನಡ ವಿಷಯ ವಿಶ್ವಕೋಶ, ಮೈಸೂರು ವಿ.ವಿ., ಮೈಸೂರು, ಸಂಪುಟ ೧, ಪು.೪೯೬

೫. ಅದೇ, ಪು.೪೯೬

೬. ನಂಜುಂಡಾರಾಧ್ಯ ಕೆ.ಸಿ., ೧೯೪೦, ಕಳಲೆ ಅರಸು ವಂಶಾವಳಿ, ಕೆ.ಬಿ.೭೪೪, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು, ವಿ.ವಿ.ಮೈಸೂರು, ಪು.೧೨೭

೭. ಎಂ.ಎ.ಆರ್., ೧೯೦೬-೧೯೧೪, ಪು.೧೦೭

೮. ಕಳಲೆ ಗುರುಸ್ವಾಮಿ, ಕಳಲೆ ಯಾರ ಶಾಪಕ್ಕಾಗಿ ಇಂದಿನ ಈ ತಾಪ, ಕನ್ನಡಪ್ರಭ ದಿನ ಪತ್ರಿಕೆ, ೮-೩-೧೯೮೭

೯. ಅದೇ

೧೦. ಅದೇ

೧೧. ಕರ್ನಾಟಕ ಪ್ರಾಚ್ಯವಸ್ತು ಇಲಾಖೆ ವರದಿ, ೧೯೮೫-೮೬, ಪು.೩೪

೧೨. ಎ.ಕ.ಸಂ.೧೧೧, ನಂಜನಗೂಡು ೨೪-೮೯, ಕ್ರಿ.ಶ.೧೮ನೇ ಶತಮಾನ

೧೩. ಅದೇ

೧೪. ಎ.ಕ.ಸಂ.IV, ನರಸೀಪುರ ೨೩, ಕ್ರಿ.ಶ.೧೮ನೇ ಶತಮಾನ

೧೫. ಎ.ಕ.ಸಂ.V, ಮೈಸೂರು ೮೫, ಕ್ರಿ.ಶ.೧೮ನೇ ಶತಮಾನ

೧೬. ಎ.ಕ.ಸಂ.V, ತಿ.ನರಸೀಪುರ ೧೮೫, ತಲಕಾಡು ಶಾಸನ ಕ್ರಿ.ಶ.೧೭೬೧

೧೭. ಎ.ಕ.ಸಂ.IV, ಪಿರಿಯಪಟ್ಟಣ ೭೯, ಕ್ರಿ.ಶ.೧೭೫೮

೧೮. ಎ.ಕ.ಸಂ.IV, ಚಾಮರಾಜನಗರ, ೨೮೪, ೨೮೫, ೨೮೬, ಕ್ರಿ.ಶ.೧೯ನೇ ಶತಮಾನ

ಅಧ್ಯಾಯ ೫

ಸಾಹಿತ್ಯ

೫.೧. ಕನ್ನಡ ಸಾಹಿತ್ಯ

೫.೨. ಸಂಸ್ಕೃತ ಸಾಹಿತ್ಯ

೫

ಸಾಹಿತ್ಯ

ಕಳಲೆ ದಳವಾಯಿಗಳ ಕಾಲದ ಕನ್ನಡ ಸಾಹಿತ್ಯ

ಕಳಲೆಯ ಅರಸುಗಳ ವಂಶಾವಳಿಯ ಪ್ರಕಾರ ಕಳಲೆ ಅರಸುಗಳ ಮನೆತನದ ಇತಿಹಾಸ ೧೬ನೇಯ ಶತಮಾನದಿಂದ ಆರಂಭವಾಗುತ್ತದೆ. ಆದರೆ ಸಾಹಿತ್ಯ ಕ್ಷೇತ್ರಕ್ಕೆ ೧೬ನೇಯ ಶತಮಾನದಲ್ಲಿ ಯಾವುದೇ ರೀತಿಯ ಪ್ರೋತ್ಸಾಹ ದೊರೆಯುವುದಿಲ್ಲ. ಅಂದರೆ ಮೈಸೂರು ಸಂಸ್ಥಾನದಲ್ಲಿ ೧೭ನೇಯ ಶತಮಾನದಿಂದಲೂ ಈ ಕಳಲೆ ದಳವಾಯಿಗಳಾಗಿದ್ದವರು ಸಹ ಕನ್ನಡ ಸಾಹಿತ್ಯಕ್ಕೆ ಪ್ರತ್ಯಕ್ಷವಾಗಿ ಪೋತ್ರಹ ನೀಡಿದ್ದಾಗಲಿ, ಕೃತಿಯ ರಚನೆಯಲ್ಲಿ ತೊಡಗಿದುದಾಗಲಿ ಕಂಡುಬರುವುದಿಲ್ಲ. ಆ ಅವಧಿಯಲ್ಲಿ ಕನ್ನಡ ಸಾಹಿತ್ಯಕ್ಕೆ ಮೈಸೂರು ಒಡೆಯರೇ ಪ್ರೋತ್ಸಾಹಿಗಳು, ಮಾರ್ಗದರ್ಶಕರು ಆಗಿದ್ದರು. ಆದ್ದರಿಂದ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಕಳಲೆ ದಳವಾಯಿಗಳು ಪ್ರೋತ್ಸಾಹ ಕೊಡುಗೆಗಳು ದೊರೆತದ್ದು ೧೮ನೆಯ ಶತಮಾನದ ಪೂರ್ವಾರ್ಧದಲ್ಲಿ ಎಂದು ಹೇಳಬಹುದು. ಈ ದಿಕ್ಕಿನಲ್ಲಿ ಹೆಸರಿಸಬಹುದಾದ ದಳವಾಯಿಗಳೆಂದರೆ ದಳವಾಯಿ ವೀರರಾಜಯ್ಯ (೧೭೧೪-೧೭೩೪) ದೇವರಾಜಯ್ಯ(೧೭೩೪-೧೭೫೯) ಸರ್ವಾಧಿಕಾರಿ ನಂಜರಾಜಯ್ಯ ಕರಾಚೂರಿ ನಂಜರಾಜಯ್ಯ ಈ ದಳವಾಯಿಗಳ ಅಧಿಕಾರದ ಅವಧಿಯಲ್ಲಿ ಕನ್ನಡ ಸಾಹಿತ್ಯವು ಉನ್ನತ ಶಿಖರವನ್ನೇರಿತು. ಆದರೆ ಕರಾಚೂರಿ ನಂಜರಾಜಯ್ಯ ನಂತರ ಕನ್ನಡ ಸಾಹಿತ್ಯವು ಒಮ್ಮೊಲೆ ಇಳಿಮುಖಗೊಂಡಿತು.

ಕಳಲೆಯ ದಳವಾಯಿಗಳಲ್ಲಿ ಸ್ವತಃ ಕೃತಿ ರಚನೆ ಮಾಡಿದವರು ಇಬ್ಬರೆ. ಒಬ್ಬ ಕಳಲೆಯ ವೀರರಾಜಯ್ಯ, ಮತ್ತೊಬ್ಬ ಈತನ ಕಿರಿಯ ಮಗ ಕರಾಚೂರಿ ನಂಜರಾಜಯ್ಯ. ಈ ಮನೆತನದ ಸಂಪರ್ಕವನ್ನು ಬೆಳಸಿಕೊಂಡ ಇತರ ಕವಿಗಳೆಂದರೆ ಚೆನ್ನಯ್ಯ, ಚೆಲುವಾಂಬೆ, ರಂಗಯ್ಯ, ನೂರೊಂದಯ್ಯ, ವೆಂಕಟೇಶ, ಲಿಂಗರಾಜ ಮೊದಲಾದವರು. ಈ ಎಲ್ಲಾ ಕವಿಗಳು ನೇರವಾಗಿ ದಳವಾಯಿಗಳಿಂದ ಪ್ರೋತ್ಸಾಹಿತರಾಗಿಯೋ, ಪೋಷಿತರಾಗಿಯೋ ಕೃತಿಗಳನ್ನು ರಚಿಸಿದರು. ಇದಕ್ಕೆ ಅಪವಾದವೆಂದರೆ ಕಳಲೆಯ ವೀರರಾಜನ ತಮ್ಮನ ಮಗಳು ದೊಡ್ಡ ಕೃಷ್ಣರಾಜನ ಪತ್ನಿಯು, ಪಟ್ಟಮಹಿಷಿಯೂ ಆದ ಚಲುವಾಂಬೆ. ಈಕೆ ಈ ಅವಧಿಯ ಏಕೈಕ ಸ್ತ್ರೀ ಸಾಹಿತಿ. 'ಪದ್ಮನೀಪರಿಣಯ' ಬರೆದ ಚೆನ್ನಯ್ಯ ಕಳಲೆಯ

ವೀರರಾಜನ ಆಶ್ರಿತನಾದರೆ, ಬಾಮಿನೀ ಷಟ್ಪದಿಯಲ್ಲಿ 'ಕಾವೇರಿ ಮಹತ್ಮ್ಯ' ಬರೆದ ರಂಗಯ್ಯ ಕಳಲೆಯ ದೇವರಾಜಯ್ಯನ ಆಶ್ರಿತ, ಕಳಲೆ ದಳವಾಯಿಗಳ ಸಾಹಸ ವೃತ್ತಾಂತಗಳನ್ನು ಬಣ್ಣಿಸುವ 'ಸೌಂದರಕಾವ್ಯ' ಬರೆದ ನೂರೊಂದು, ಚಂಪೂ ಪ್ರಕಾರದಲ್ಲಿ 'ಹಾಲಾಸ್ಯ ಮಹಾತ್ಮ್ಯ' ಬರೆದ ವೆಂಕಟೇಶ, ಈಗ ಅಲಭ್ಯವಾಗಿರುವ 'ಲಿಂಗಪುರಾಣ' ರಚನಕಾರದ ಲಿಂಗರಾಜನ್ನು ಕರಾಚೂರಿ ನಂಜರಾಜಯ್ಯನ ಆಶ್ರಿತ ಕವಿಗಳಾಗಿದ್ದರು. ಹೀಗಾಗಿ ದಳವಾಯಿಗಳನ್ನೂ ಒಳಪಟ್ಟು ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ನೇರವಾಗಿ ದೊರೆಯುವ ಈ ಮನೆತನದೊಂದಿಗೆ ಸಂಪರ್ಕವಿರಿಸಿಕೊಂಡಿದ್ದ. ಒಟ್ಟು ಕನ್ನಡ ಲೇಖಕರು ಎಂಟು ಮಂದಿ. ಚೆನ್ನಯ್ಯ, ಚೆಲುವಾಂಬೆ, ನಂಜರಾಯ್ಯ, ಇವರನ್ನು ಬಿಟ್ಟು ಇತರರು ಒಂದೊಂದು ಕೃತಿಗಳನ್ನು ಮಾತ್ರ ರಚಿಸಿದ್ದಾರೆ.[೧]

ಈ ಮನೆತನದ ಸಾಹಿತ್ಯಿಕ ಪರಿಶೀಲನೆಯನ್ನು ಮಾಡುವುದಾದರೆ ಎರಡು ಹಂತಗಳಲ್ಲಿ ನಾವು ಪರಿಶೀಲಿಸಬಹುದು. ಮೊದಲ ಹಂತ ಕಳಲೆ ವೀರರಾಜ, ದೇವರಾಜಯ್ಯರ ಕಾಲದ ಸಾಹಿತ್ಯ, ಎರಡನೆಯ ಹಂತ ಕಳಲೆಯ ನಂಜರಾಜಯ್ಯನ ಕಾಲದ ಸಾಹಿತ್ಯ, ವೀರರಾಜಯ್ಯ ಮತ್ತು ದೇವರಾಜಯ್ಯರ ಕಾಲದಲ್ಲಿ ಬರುವ ಸಾಹಿತಿಗಳೆಂದರೆ ವೀರರಾಜಯ್ಯ, ಚೆನ್ನಯ್ಯ, ಚೆಲುವಾಂಬೆ ಮತ್ತು ರಂಗಯ್ಯ ನಾಲ್ವರು ಲೇಖಕರು ಮಾತ್ರ. ಈ ಹಂತದ ಸಾಹಿತ್ಯ ವೈಷ್ಣವಪರವಾಗಿಯೇ ಇದೆ. ವೀರರಾಜಯ್ಯ ತನ್ನ ವೈದ್ಯ ಗ್ರಂಥದಲ್ಲಿ ಶಿವನೊಂದಿಗೆ ಪಶ್ಚಿಮರಂಗ ಮತ್ತು ಶ್ರೀರಾಮನನ್ನು ನೆನೆಯುತ್ತಾನೆ. ತನ್ನ ತೆಲುಗಿನ 'ಆಂಧ್ರ ವಚನ ಭಾರತಮು'ವಿನ ಸಭಾ ಮತ್ತು ಭೀಷ್ಮ ಪರ್ವಗಳ ಆರಂಭದಲ್ಲಿ ಮನೆದೇವರಾದ ಶ್ರೀ ಲಕ್ಷ್ಮೀಕಾಂತಸ್ವಾಮಿಯನ್ನು ಮಾತ್ರವೇ ನೆನೆಯುತ್ತಾನೆ. ಈತನ ತಮ್ಮನಾದ ದೇವರಾಜಯ್ಯನು ಶ್ರೀರಾಜಭಕ್ತಿ, ನಿಷ್ಠಾವಂತ ಅನುಯಾಯಿಯಾಗಿದ್ದನು. ಈತನು ಮಲ್ಲನ ಮೂಲೆಯ ಬಳಿ ಕಪಿಲಾ ನದಿಗೆ ಕಟ್ಟಿಸಿದ ರಾಮ ಸೇತುವೆ, ಶ್ರೀರಂಗಪಟ್ಟಣದ ರಂಗನಾಥ ದೇಶವಾಲಯದ ರಂಗ ಮಂಟಪಕ್ಕೆ ಕೊಟ್ಟ ಹೆಸರು. ಸೀತಾ ವಿಲಾಸ, ಈತ ತೆಗೆಸಿದ ಸೀತಾಸರೋವರ ಕಾಲುವೆ, ನರಸೀಪುರದ ದಕ್ಷಿಣಕ್ಕೆ ನಿರ್ಮಿಸಿದ ರಾಮಚಂದ್ರಪುರ ಎಂಬ ಅಗ್ರಹಾರ - ಈತನ ರಾಮಭಕ್ತಿಯನ್ನು ತಿಳಿಸುತ್ತವೆ. ಈ ಇಬ್ಬರು ದಳವಾಯಿಗಳ ಕಾಲದ ಸಾಹಿತ್ಯ ವೈಷ್ಣವ ಪರವಾಗಿದೆ. ಚೆನ್ನಯ್ಯನ 'ಪದ್ಮಿನೀ ಪರಿಣಯ' ಚೆಲುವಾಂಬೆಯ 'ವೆಂಕಟಚಲ ಮಹಾತ್ಮ್ರೆ', 'ಲಾಲೀಪದ', 'ಅಲಿಮೇಲುಮಂಗೆ ಲಾಲೀಪದ' ಇವು ತಿರುಪತಿಯ ಶ್ರೀನಿವಾಸನನ್ನು ಕುರಿತು ಸಾಹಿತ್ಯ ಕೃತಿಗಳಾಗಿವೆ.[೨] ಅಂದರೆ ಇದರಿಂದ ಆ ಕಾಲದಲ್ಲಿ ವೈಷ್ಣವ ಧರ್ಮ ಪ್ರಾಬಲ್ಯವನ್ನು ಸೂಚಿಸುತ್ತವೆ. ದೊಡ್ಡ ಕೃಷ್ಣರಾಜ ಒಡೆಯರು ತಿರುಪತಿಯಿಂದ ಪರಕಾಲಗುರುವಾದ ಶ್ರೀನಿವಾಸ ಯತೀಂದ್ರನನ್ನು ಬರಮಾಡಿಕೊಂಡು ಶ್ರೀ ವೈಷ್ಣವಮತದ ಮುದ್ರೆ ಲಾಂಛನಗಳನ್ನು ಧರಿಸಿದ್ದ ತಿರುಪತಿಯ ವೆಂಕಟಚಲಪತಿಗೆ ಬಂಗಾರಬಣ್ಣದ ಛತ್ರಿ ರಜಿತಕರಂಡಕೆ ಮತ್ತು ರಜತಹಸ್ತಿಗಳನ್ನು, ಕಂಠೀವರಗಳನ್ನು ದಾನವಾಗಿ ನೀಡಿದನು. ಅಲ್ಲದೆ ಮೇಲುಕೋಟೆಯು ಚೆಲುವ ನಾರಾಯಣ ಹಾಗೂ ಶ್ರೀರಂಗಪಟ್ಟಣದ

ರಂಗನಾಥರಿಗೂ ವಿವಿಧ ಬಗೆಯ ದಾನಗಳನ್ನು ನೀಡಿದ್ದರು. ಈ ಒಂದು ಹಿನ್ನೆಲೆಯಲ್ಲಿ ಈ ಕಾಲದ ಸಾಹಿತ್ಯ ಶ್ರೀನಿವಾಸ ಚೆಲುವ ನಾರಾಯಣ ಹಾಗೂ ಕಾವೇರಿ ನದಿಗಳನ್ನು ಕೇಂದ್ರೀಕರಿಸಿ ರಚಿತವಾಗಿರುವುದು ಸಹಜವಾಗಿಯೇ ಇದೆ. ವೀರಾರಾಜಯ್ಯನ 'ಸಕಲ ವೈದ್ಯ ಸಂಹಿತೆ ಸಾರಾರ್ಣವ' ಎಂಬ ಕೃತಿಯು ಒಂದು ಸಾವಿರ ಪುಟಗಳ ವ್ಯಾಪ್ತಿಯಿರುವ ಗದ್ಯಗಾತ್ರದ ಕೃತಿಯಾಗಿದೆ. ಈ ಕೃತಿಯು ನಾಡೀ ಪರೀಕ್ಷೆಯಿಂದ ಆರಂಭವಾಗಿ ಎಲ್ಲಾ ರೀತಿಯ ರೋಗ ಲಕ್ಷಣಗಳಿಗೆ ಹಾಗೂ ರೋಗಗಳ ಬಗ್ಗೆ ವಿವರವಾಗಿ ಮಾಹಿತಿಯನ್ನು ಕೊಡುವುದಲ್ಲದೆ ಅಂದಿನ ಕಾಲದಲ್ಲಿ ಬಳಕೆಯಲ್ಲಿದ್ದ ಔಷದೋಪಚಾರದ ಬಗ್ಗೆ ಮಾಹಿತಿಯನ್ನು ನೀಡುತ್ತಿದೆ. ಅಂದರೆ ಜ್ವರ, ಸನ್ನಿಪಾತ, ಅಸ್ತಿಸ್ರಾವ, ಕ್ಷಯರೋಗ, ಹೃದ್ರೋಗ, ಆರ್ಶಿರೋಗ, ಉರಾರ್ವ, ಅತಿಸಾರ, ಮೇದರೋಗ, ಗೋಲ್ಮಾರೋಗ, ಕಾಮಾಲೆ ಮುಂತಾದ ರೋಗಗಳಿಗೆ ಔಷಧಗಳ ಪಟ್ಟಿಯನ್ನು ನೀಡುತ್ತದೆ. ಅವೆಂದರೆ ಕಲ್ಕ, ಕಷಾಯ, ಚೂಣರ, ತೈಲಿ, ಲೇಪ, ಲೋಹಸಿಂಧೂರ, ಅಂಜನ, ಪಥ್ಯೆ ಅನುಪಾನ ಇತ್ಯಾದಿಗಳು. ಈ ಕೃತಿಯಲ್ಲಿ ಪ್ರತಿರೋಗಕ್ಕೂ ಚಿಕಿತ್ಸಾಕಾಲದ ಅವಧಿ ಮತ್ತು ಔಷಧ ಪ್ರಮಾಣಗಳನ್ನು ಸೂಚಿಸಿದೆ.[೬] ವೀರರಾಜಯ್ಯನಿಗೆ ತೆಲುಗು ಭಾಷೆಯ ಪರಿಚಯವಿದ್ದುದರಿಂದಲೋ ಏನು ಕೃತಿಯಲ್ಲಿ ಕೆಲವು ತೆಲುಗಿನ ಪದಗಳು ಕಂಡುಬರುತ್ತಿವೆ.

ಈ ಕಾಲದ ಮತ್ತೊಬ್ಬ ಕವಿಯಾದ ಚೆನ್ನಯ್ಯ ಇವನ್ನು ಪದ್ಮಿನೀ ಪರಿಣಯದ ಕರ್ತೃ. ಇವನು ಭಗವದ್ಗೀತೆಯ ಮೊದಲ ೧೫ ಅಧ್ಯಾಯಗಳಿಗೆ ಕನ್ನಡ ಟೀಕನ್ನು ರಚಿಸಿರುವುದನ್ನು ಸಿ. ಹಯವದನ್ ರಾಯರು ಪ್ರಸ್ತಾಪಿಸಿದ್ದಾರೆ. ಈಗ ಈ ಕೃತಿಯ ನೋಡಲು ಸಾಧ್ಯವಿಲ್ಲ ಏಕೆಂದರೆ ಅದು ಸಂಪೂರ್ಣವಾಗಿ ಮಾಸಿ ಹೋಗಿದೆ.

ಕಳಲೆ ದಳವಾಯಿಗಳ ಕಾಲದ ಏಕೈಕ ಸ್ತ್ರೀ ಕವಯಿತ್ರಿಯಾದ ದೊಡ್ಡಕೃಷ್ಣರಾಜನ ಪತ್ನಿ ಚೆಲುವಾಂಬೆಯ ಈಗಿನ ತಿಳುವಳಿಕೆಯ ಮಟ್ಟಿಗೆ ಈಕೆಯು ಐದು ಕೃತಿಗಳನ್ನು ಗುರುತಿಸಲಾಗಿದೆ. 'ವರನಂದೀ ಕಲ್ಯಾಣ', 'ವೆಂಕಟಾಚಲ ಮಹಾತ್ಮ್ಯ ಲಾಲೀಪದ', 'ಆಲಮೇಲುಮಂಗೆ ಲಾಲೀಪದ', 'ಮಂಗಳಾರತಿ ಪದ' ಮತ್ತು ತಲಕಾವೇರಿ ಮಹಾತ್ಮ್ಯ. ಈಕೆಯು ಲೀಲಾಕುಶನ ಕೃಷ್ಣಕರ್ಣಾಮೃತಕ್ಕೆ ಒಂದು ಕನ್ನಡ ಟೀಕನ್ನು ಬರೆದಿದ್ದಳು ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಆದರೆ ಅದು ಈಗ ಲಭ್ಯವಿಲ್ಲ. ತಲಕಾವೇರಿ ಮಹಾತ್ಮೆ ಎಂಬ ಕೃತಿಯನ್ನು ಈಕೆ ರಚಿಸಿಲ್ಲ ಎಂದು ಕೆಲವರು ಹೇಳುತ್ತಾರೆ. ಆದರೆ ಇದಕ್ಕೆ ಯಾವುದೇ ಆಧಾರಗಳು ಇಲ್ಲ. ಈ ಕೃತಿಯ ಕೊನೆಯಲ್ಲಿ ಚೆಲುವಾಂಬಿಕಾ ವಾಣೀವಿಲಾಸವೆಂದು ಹೆಸರಿದೆಯೆಂದೂ ಉಲ್ಲೇಖಿಸಿದೆ. ಆದ್ದರಿಂದ ಇದನ್ನು ಚಲುವಾಂಬೆಯ ರಚನೆಯೆಂದು ಗ್ರಹಿಸುವುದೇ ಸೂಕ್ತ. ವರನಂದೀ ಕಲ್ಯಾಣ ಎಂಬ ಕೃತಿಯ ಪದ್ಯಕಾವ್ಯದಿಂದ ಕೂಡಿದೆ ವರನಂದೀ ಕಲ್ಯಾಣದಲ್ಲಿ ೭ ಸಂಧಿ ೮೮೧ ಪದ್ಯಗಳಿವೆ.[೭] ವೆಂಕಟಾಚಲ ಮಾಹಾತ್ಮ್ಯ ಲಾಲೀಪದದಲ್ಲಿ ೩೫ ಚೌಪದಿಗಳಿವೆ. ಚೆಲುವನಾರಾಯಣವನ್ನು ಕಥೆಯನ್ನು ಮಂಗಳಾರತಿ ೩೫ ಚೌಪದಿಗಳೀವೆ. ಚೆಲುವನಾರಾಯಣನನ

ಕಥೆಯನ್ನು ಮಂಗಳಾರತಿ ಪದಗಳಲ್ಲಿ ಹೇಳಿರುವ ೫ ಪದ್ಯಗಳ ಮಂಗಳಾರತಿ ಪದವೇ ಚೆಲುವಾಂಬೆಯ ಅತ್ಯಂತ ಚಿಕ್ಕ ಕೃತಿ. ಚೆಲುವಾಂಬೆಯು ವಿದ್ವತ್ ಕವಿಯತ್ರಿಯಾಗಿಲ್ಲಾದಿದ್ದರೂ ಸಹ ಸಾಂಗತ್ಯ, ಚೌಪದ, ಶೋಭಾನೆ ಪದಗಳನ್ನು ಸೃಜಿಸಬಲ್ಲ ಸಾಮಾಥ್ಯವೊಳ್ಳ ಲೇಖಕಿಯಾಗಿದ್ದಳು. ಬಿಡಿಬಿಡಿಯಾದ ಕನ್ನಡ ಪದ, ಸರಳವಾದ ಶೈಲಿ, ಅರ್ಥವ್ಯಾಪ್ತಿಯಿರುವ ನಿರೂಪಣೆ ಈಕೆಯ ಕೃತಿಯ ಗುಣಗಳಾಗಿವೆ.

ಕಳಲೆಯ ದಳವಾಯಿಗಳಲ್ಲಿ ಎಲ್ಲ ದೃಷ್ಟಿಗಳಿಂದಲೂ ಪ್ರತ್ಯೇಕ ಉಲ್ಲೇಖ ಹಾಗೂ ಪರಿಶೀಲನೆಗಳಿಗೆ ಅರ್ಹನಾದವನು ನಾಲ್ಕನೆಯ ನಂಜರಾಜಯ್ಯ. ಈತನು ಇತಿಹಾಸದ ಪುಟಗಳಲ್ಲಿ ಕರಾಚೂರಿ ನಂಜರಾಜಯ್ಯನೆಂದೇ ಖ್ಯಾತನಾಗಿದ್ದನು. ಕನ್ನಡ ಸಾಹಿತ್ಯದಲ್ಲಿ ಕಳಲೆಯ ನಂಜರಾಜಯ್ಯನೆಂದೇ ಹೆಸರಾಗಿದ್ದಾನೆ. ಸ್ವತಃ ಸಾಹಿತಿಯಾಗಿದ್ದ ಈತ ಕವಿಜನ ಪೋಷಕನೂ ಆಗಿದ್ದ. 'ಸೌಂದರ್ಯ ಕಾವ್ಯ' ಬರೆದ ನೊರೊಂದಯ್ಯ, ಚಂಪೂ ಪ್ರಕಾರದಲ್ಲಿ 'ಹಾಲಾಸ್ಯ ಮಾಹಾತ್ಮ್ಯ' ಬರೆದ ವೆಂಕಟೇಶ, 'ಲಿಂಗಪುರಾಣ' ಬರೆದ ಪ್ರಾಯಶಃ ಕಳಲೆ ಲಿಂಗರಾಜ ಕೂಡಿ ಈತನ ಕಾಲದಲ್ಲಿ ಇದ್ದ ಕನ್ನಡ ಕವಿಗಳಾಗಿದ್ದಾರೆ. 'ಸೌಂದರ್ಯ ಕಾವ್ಯ' ಕೃತಿಯನ್ನು ಬಿಟ್ಟು ಉಳಿದ ಯಾವ ಕೃತಿಗಳು ಈಗ ದೊರೆಯುವುದಿಲ್ಲ. ಈ ನಂಜರಾಯಜ್ಯನ ಕಾಲದ ಸಾಹಿತ್ಯಿವೆ ಎರಡನೆ ಹಂತದ ಸಾಹಿತ್ಯವಾಗಿದೆ. ಕೆಲವು ಸಂಸ್ಕೃತ ಕೃತಿಗಳಲ್ಲಿ ನಂಜರಾಜಯ್ಯನನ್ನು ಹೊಗಳಿದ್ದಾರೆ. ಅಲ್ಲದೆ ಕನ್ನಡ ಕೃತಿಗಳಲ್ಲೂ ಸಹ ಹೊಗಳಿರುವ ಹಾಗೂ ಈತನ ಹೆಸರಿನಲ್ಲಿ ಹಲಾವರು ಕೃತಿಗಳು ದೊರೆತಿವೆ.

ಕಳಲೆಯ ನಂಜರಾಜಯ್ಯನ ವಿಷಯದಲ್ಲಿರುವ ದೊಡ್ಡ ಸಮಸ್ಯೆ ಎಂದರೆ ಅವನು ರಚಿಸಿದ ಕೃತಿಗಳ ಸಂಖ್ಯೆ ಬಗ್ಗೆ ನಿಖರವಾದ ಮಾಹಿತಿಗಳು ದೊರೆಯುವುದಿಲ್ಲ. ಆದರೂ ಕೆಲವು ವಿದ್ವಾಂಸರು ೧೭ ಕೃತಿಗಳನ್ನು ರಚಿಸಿದ್ದನು ಎಂದು ಹೇಳಿದ್ದಾರೆ. ಸಿ. ಹನುವದನರಾಯರು ಇವರ ೧೮ ಕೃತಿಗಳನ್ನು ಉಲ್ಲೇಖಿಸುತ್ತಿದೆ.[೫] ಮೈಸೂರು ವಿಶ್ವವಿದ್ಯಾನಿಯದ ಕುವೆಂಪು ಕನ್ನಡ ಅಧ್ಯಾಯನ ಸಂಸ್ಥೆಯ ಹಸ್ತಪ್ರತಿ ವಿಭಾಗದಲ್ಲಿ ಸಂಗ್ರಹಿತವಾಗಿರುವ ಕೃತಿಗಳ ಸಂಖ್ಯೆಯು ಸುಮಾರು ೧೮ ಎಂದು ಉಲ್ಲೇಖಗೊಂಡಿವೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಕೆ.ಸಿ.ನಂಜುಂಡಾರಾಧ್ಯರು ತಾವು ೧೯೪೦ರಲ್ಲಿ ಬರೆದ 'ಕಳಲೆ ದಳವಾಯಿಗಳ ವಂಶಾವಳಿ'[೬]ಯಲ್ಲಿ ನಂಜರಾಜಯ್ಯನ ೩೫ ಕನ್ನಡ ಕೃತಿಗಳನ್ನು ಪಟ್ಟಿ ಮಾಡಿದ್ದಾರೆ ಇದಲ್ಲದೆ ೧೫ ತೆಲುಗಿನ ಕೃತಿಗಳನ್ನೂ ೨ ಸಂಸ್ಕೃತ ಕೃತಿಗಳನ್ನೂ ಪಟ್ಟಿ ಮಾಡಿದ್ದಾರೆ. ಇದನ್ನು ಅವರು ಹೇಗೆ ನಿರ್ಣಯಿಸಿದರೋ ತಿಳಿಯುವುದಿಲ್ಲ. ಇವನ ಹೆಸರಿನಲ್ಲಿ ಅವರು ಪಟ್ಟಿ ಹಾಕಿರುವ ದಕ್ಷಾಧ್ವಾರ ಕಥೆ, ದಾನವವ್ರತ ಕಥೆ, ದ್ರೌಪದೀ ಕಾವ್ಯ, ದೂರ್ವಾಸಭೋಜನ, ವೆಂಕಟೇಶ ಮಹಾತ್ಮ್ಯ, ಶ್ರೀರಂಗಚರಿತ್ರೆ, ಸಮುದ್ರಮಥನ, ಹರಿವಂಶ ಮುಂತಾದ ಕೃತಿಗಳು ಈಗ ದೊರೆಯುತಿಲ್ಲ. ಈಗಿನ ಮಟ್ಟಿಗೆ ೧೮ ಕೃತಿಗಳು ಲಭ್ಯವಾಗಿವೆ. ಅವುಗಳಲ್ಲಿ 'ಹಾಲಾಸ್ಯ ಮಹಾತ್ಮ್ಯ'. ಇದನ್ನು ಬಿಟ್ಟು ಇನ್ನುಳಿದ ಯಾವ ಕೃತಿಗಳು ಮುದ್ರಣ ಭಾಗ್ಯವನ್ನು ಪಡೆದಿಲ್ಲ. ಇದೊಂದು ವ್ಯಥೆಯ ಸಂಗತಿಯೇ ಸರಿ.

ದೊರೆತಿರುವ ನಂಜರಾಜಯ್ಯನ ಕೃತಿಗಳನ್ನು ಮೂರು ಗುಂಪುಗಳಾಗಿ ವರ್ಗೀಕರಿಸಲಾಗಿದೆ.

ಅ. ಕ್ಷೇತ್ರ ಮಹಾತ್ಮ್ಯಗಳು

೧. ಕಕುದ್ಗಿರಿ ಮಹಾತ್ಮ್ಯ ೨. ಗರಳಪುರಿ ಮಹಾತ್ಮ್ಯ

೩. ಭದ್ರಗಿರಿ ಮಹಾತ್ಮ್ಯ ೪. ಸೇತುಮಹಿಮಾದರ್ಶ

೫. ಕಾಶೀ ಮಹಿಮಹಿ ಮಾರ್ಥ ದರ್ಪಣ

ಆ. ಶಿವನ ಅಥವಾ ಶಿವಭಕ್ತರ ಮಹಾತ್ಮ್ಯ ಚರಿತ್ರೆಗಳು

೧. ಭಕ್ತ ವಿಲಾಸ ದರ್ಪಣ ೨. ಶಿವಭಕ್ತ ವಿಲಾಸ ದರ್ಪಣ

೩. ಹರದತ್ತಾಚಾರ್ಯ ಚಾರಿತ್ರ ೪. ಹಾಲಾಸ್ಯ ಮಹಾರಾಷ್ಟ್ರ

೫. ಅರುವತ್ತು ಮೂವರ ತ್ರಿವಿಧಿ.

ಇ. ಟೀಕೆ ವ್ಯಾಖ್ಯಾನಗಳು

೧. ಭಾರತ ತಾತ್ಪರ್ಯ ಟೀಕು ೨. ಮಾರ್ಕಡೇಯ ಪುರಾಣಾರ್ಥ ದೀಪಿಕೆ

೩. ಶಿವಧರ್ಮೋತ್ತರ ಟೀಕು ೪. ವಿಘ್ನೇಶ್ವರ ವ್ರತಕಲ್ಪದ ಟೀಕು

೫. ಶಿವಗೀತೆ, ೬. ಲಿಂಗಪುರಾಣ, ೭. ಹರಿವಂಶ"[೭]

ಈ ರೀತಿ ವಿಂಗಡಿಸಲಾಗಿದೆ. ನಂಜರಾಜಯ್ಯನ ಈ ಕೃತಿಗಳಿಗೆ ಖಚಿತವಾದ ಸಂಸ್ಕೃತ ಮೂಲಗಳನ್ನು ಹೊಂದಿವೆ ಎಂದು ಹೇಳಲಾಗಿದೆ. ಈತನ ಬಹುಪಾಲು ಕೃತಿಗಳಿಗೆ ಸ್ಕಂದಪುರಾಣ ಮೂಲವಾಗಿದೆ. ಇವನ ಈ ಕೃತಿಗಳು ಶಿವಪರ ಮನೋಧರ್ಮವನ್ನು, ಆತನ ಶೈವನಿಷ್ಠೆಯನ್ನು ಪ್ರಕಟಿಸುತ್ತವೆ. ನಂಜನಗೂಡಿನಲ್ಲಿ ೬೩ ಪುರಾತನರ ವಿಗ್ರಹಗಳನ್ನು ನಿರ್ಮಿಸಿದ್ದು, ಬೆಟ್ಟದ ಪುರದ ಮಲ್ಲಿಕಾರ್ಜುನ ದೇವಾಲಯದ ತಾಂಡವೇಶ್ವರ ಚಂಡಿಕಾಂಬಿಕೆಯರ ವಿಗ್ರಹಗಳನ್ನು ಸ್ಥಾಪಿಸಿದ್ದು. ಈ ಎಲ್ಲಾ ಆಧಾರಗಳಿಂದ ನಂಜರಾಜಯ್ಯನು ಶೈವ ಧರ್ಮದ ಪೋಷಣೆಯಲ್ಲಿ ಸಕ್ರಿಯವಾಗಿದ್ದ ವಿಷಯವನ್ನು ತಿಳಿಯಬಹುದಾಗಿದೆ.

ಈ ಎರಡು ಹಂತಗಳಲ್ಲಿ ರಚಿತವಾದ ಕನ್ನಡ ಸಾಹಿತ್ಯದ ಬಗ್ಗೆ ವಿಶ್ಲೇಷಣೆಯನ್ನು ಮಾಡಬಹುದಾಗಿದೆ. ಚಿಕ್ಕ ದೇವರಾಜ ಒಡೆಯರ ಕಾಲದಲ್ಲಿ ಆರಂಭವಾದ ವೈಷ್ಣವ ಪರವಾದ ಸಾಹಿತ್ಯ ರಚನೆಯೇ ಕಳಲೆಯ ವೀರರಾಜಯ್ಯನ ಕಾಲದಲ್ಲೂ ಕೂಡ ಮುಂದುವರೆಯಿತು. ಅವನ ಕಾಲದಲ್ಲಿ ಚಿಕೋಪಾಧ್ಯಾಯ ಮತ್ತು ತಿಮ್ಮ ಕವಿಗಳು ತಿರುಪತಿ, ಶ್ರೀರಂಗಪಟ್ಟಣ, ಮೇಲುಕೋಟೆ, ಕ್ಷೇತ್ರ ಹಾಗೂ ಆದಿದೈವಗಳನ್ನು ಆಧರಿಸಿ ಕೃತಿ ರಚಿಸಿದಂತೆ ವೀರರಾಜಯ್ಯನ ಕಾಲದಲ್ಲೂ ಕೂಡ ಕಾಣಬಹುದು. ಮಾಹಾತ್ಮ್ಯ ಮತ್ತು ಪರಿಣಯ

ಕಾವ್ಯಗಳ ಪರಂಪರೆಯೇ ವೀರರಾಜಯ್ಯನ ಅವಧಿಯಲ್ಲೂ ಮುಂದುವರೆದವು. ಶೃಂಗಾರಮ್ಮನ 'ಪದ್ಮಿನೀ ಕಲ್ಯಾಣ'ವೇ ಚೆನ್ನಯ್ಯನ 'ಪದ್ಮನೀ ಪರಿಣಯ'ವಾಗಿದೆ. ಚೆಲುವಾಂಬೆಯ 'ವರನಂದೀ ಕಲ್ಯಾಣ'ದಲ್ಲಿ ವಸ್ತುನಾವೀನ್ಯವಿದ್ದರೂ ಅದೂ ಪರಿಣಯ ಕಾವ್ಯವೇ ಆಗಿದೆ. ಚಿಕ್ಕ ದೇವರಾಜರ ಕಾಲದ 'ವೆಂಕಟಗಿರಿ ಮಾಹತ್ಮ್ಯ' ಚೆಲುವಾಂಬೆಯ ವೆಂಕಟಾಚಲ ಮಹಾತ್ಮ್ಯೆ ಲಾಲಿಪದವಾಗಿ ಕಾಣಿಸಿಕೊಂಡಿದೆ. ಒಟ್ಟಿನಲ್ಲಿ ಕಳಲೆಯ ದಳವಾಯಿಗಳ ಕಾಲದಲ್ಲಿ ಕನ್ನಡ ಸಾಹಿತ್ಯವು ಉತ್ತುಂಗ ಶಿಖರವನ್ನು ಏರಿತ್ತು ಎಂಬ ಅಂಶ ಇವುಗಳಿಂದ ತಿಳಿಯಬಹುದಾಗಿದೆ.

ಕೆಳಲೆ ದಳವಾಯಿಗಳ ಕಾಲದ ಕನ್ನಡ ಸಾಹಿತ್ಯದ ಕೆಲವು ಸಂಗತಿಗಳನ್ನು ಕ್ರೂಢಿಕರಿಸಬಹುದಾಗಿದೆ. ಈ ಹಿಂದಿನ ಮೈಸೂರು ಅರಸರ ಕಾಲದಲ್ಲಿದ್ದ ಮಹಾತ್ಮ್ಯೆ, ಪರಿಣಯ, ಚರಿತ್ರೆ, ಕಾವ್ಯ, ಟೀಕೆ-ವ್ಯಾಖ್ಯಾನ ಕೃತಿಗಳೇ ಈ ದಳವಾಯಿಗಳ ಕಾಲದಲ್ಲೂ ಮುಂದುವರೆದಿದೆ. ಈ ಕಾಲದಲ್ಲಿ ಪದ್ಯಕಾವ್ಯಗಳಿಗಿಂತ ಗದ್ಯಕೃತಿಗಳೇ ಹೆಚ್ಚು. ಪದ್ಯಕಾವ್ಯಗಳಲ್ಲೂ ಚಂಪೂ, ಷಟ್ಪದಿಗಳು ಒಂದೊಂದು ಕೃತಿಯ ಮಟ್ಟಿಗೆ ಬಳಕೆಯಾಗಿದ್ದು ಸಾಂಗತ್ಯವೇ ಪ್ರಧಾನವಾದ ಪದ್ಯಮಾಧ್ಯಮವಾಗಿದೆ. ಮುಂದೆ ಬಂದ ಮುನ್ನುಡಿ ಕೆಂಪು ನಾರಾಯಣನಿಗೆ ಗದ್ಯದ ಶಕ್ತಿ, ಸಾಮರ್ಥ್ಯಗಳನ್ನು ಮನವರಿಕೆ ಮಾಡಿಕೊಡಲು ಬೇಕಾಗಿದ್ದ ಗದ್ಯ ಬಳಕೆಯ ಹಿನ್ನೆಲೆಯನ್ನು ನಂಜರಾಜಯ್ಯ ಅದನ್ನು ಯಶಸ್ವಿಯಾಗಿ ಮಾಡಿದ್ದಾನೆ. ದಳವಾಯಿಗಳ ಕಾಲದ ಏಕೈಕ ಲೌಕಿಕಶಾಸ್ತ್ರ ಕೃತಿ 'ಸಕಲ ವೈದ್ಯ ಸಂಹಿತೆ ಸಾರಾರ್ಣವ'ವಾಗಿದೆ. ತೆಲುಗಿನ ಪ್ರಭಾವದಿಂದಲೂ ಏನೋ ಧಾರ್ಮಿಕ ಶಾಸ್ತ್ರ ಕೃತಿಗಳ ರಚನೆಗೊಂಡಿದೆ. ಕಳಲೆಯ ದಳವಾಯಿಗಳಿಗೆ ತೆಲುಗಿನ ಪರಿಚಯ ಗಾಢವಾಗಿದ್ದುದರಿಂದ ತೆಲುಗು-ಕನ್ನಡಗಳ ನಡುವೆ ಸಂಬಂಧ ಕೃತಿಗಳೇ ಬೆಳೆದಿದೆ. ಸಾಹಿತ್ಯದ ವಿವಿಧ ಪ್ರಕಾರಗಳಾದ ಚಂಪೂ ಷಟ್ಪದಿ, ಸಾಂಗತ್ಯ, ಲಾಲೀಪದ ಗದ್ಯದ ವಿವಿಧ ರೂಪಗಳು ಬಳಕೆಯಾಗಿವೆ. ಭಾರತ, ಭಾಗವತ, ಹರಿವಂಶಗಳ ಕನ್ನಡ ಅನುವಾದದ ಕೆಲಸ ಈ ಹಿಂದಿನಂತೆ ಈಗಲೂ ಮುಂದುವರೆದಿದೆ ಪ್ರಧಾನವಾಗಿ ವೈಷ್ಣವ ಪರವಾಗಿದ್ದ ಮೈಸೂರು ಅರಸರ ಸಾಹಿತ್ಯ ಶೈವಧರ್ಮದೆಡೆ ಹೊರಳಲು ದಳವಾಯಿಗಳ ಕಾಲದ ಸಾಹಿತ್ಯ ಕಾರಣವೂ ಪ್ರೇರಕವೂ ಆಗಿದೆ. ಈ ಕಾಲದ ಕನ್ನಡ ಕೃತಿಗಳನ್ನು ಕಳಲೆ ದಳವಾಯಿಗಳ ಇತಿಹಾಸದ ಪುನರ್ ರಚನೆಗೆ ಒಂದು ಮುಖ್ಯ ಆಕರವಾಗಿ ಕೂಡ ಬಳಸಿಕೊಳ್ಳಬಹುದಾಗಿದೆ.

೫.೨. ಸಂಸ್ಕೃತ ಸಾಹಿತ್ಯ

ಸಂಸ್ಕೃತ ಸಾಹಿತ್ಯಕ್ಕೆ ಕರ್ನಾಟಕದ ಕೊಡುಗೆಯನ್ನು ಬೇರೆ ಪ್ರಾಂತ್ಯಗಳ ಜೊತೆ ಹೋಲಿಸಿ ನೋಡಿದಾಗ ಶ್ರೀಮಂತವು ವೈವಿಧ್ಯಮಯವೂ ಆಗಿದೆ ಕದಂಬ, ಗಂಗ, ಚಾಲುಕ್ಯರ ಕಾಲದಿಂದ ಆರಂಭವಾಗಿ ರಾಷ್ಟ್ರಕೂಟ, ಹೊಯ್ಸಳ, ಸೇವುಣ ಮತ್ತು ವಿಜಯನಗರ ಕಾಲದವರೆಗೆ ಕನ್ನಡ ನಾಡಿನಲ್ಲಿ ನೂರಾರು ಸಂಸ್ಕೃತ ಕವಿಗಳು ಮತ್ತು ಪಂಡಿತರು ರಾಜಾಶ್ರಯದಲ್ಲೂ, ಮಠ, ಅಗ್ರಹಾರ, ಬಸದಿಗಳಲ್ಲಿ ನೆಲೆಸಿ ಸಂಸ್ಕೃತ ಸಾಹಿತ್ಯವನ್ನು ಶ್ರೀಮಂತಗೊಳಿಸಿ ಹೋಗಿದ್ದಾರೆ. ಇಂಥಹವರಲ್ಲಿ ರಾಜರು, ವೈದಿಕ

ಪಂಥದವರು, ಜೈನರು ಮತ್ತು ವೀರಶೈವರು ಸೇರಿದ್ದಾರೆ. ವ್ಯಾಪಕವಾದ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಸಹಜವಾಗಿ ದೊಡ್ಡ ದೊಡ್ಡ ಪ್ರಸಿದ್ಧ ರಾಜಮನೆತನಗಳ ಕಾಣಿಕೆಯನ್ನು ದಾಖಲಿಸುವ ಪ್ರಯತ್ನ ನಡೆದಿದೆ. ಆದರೆ ಸ್ಥಳೀ ಆಡಳಿತ ನಡೆಸಿದ ಚಿಕ್ಕ ಚಿಕ್ಕ ಮನೆತನಗಳೂ ಸಹ ಸಂಸ್ಕೃತವನ್ನು ಪೋಷಿಸಿ ಬೆಳೆಸಿರುವ ವಿಷಯ ಅನೇಕ ಆಕರಗಳಿಂದ ತಿಳಿದು ಬರುತ್ತದೆ. ಈ ದಿಸೆಯಲ್ಲಿ ಸಾಕಷ್ಟು ಕೆಲಸ ಆಗಬೇಕಾಗಿರುವುದರಿಂದ ಈ ಅಧ್ಯಾಯದಲ್ಲಿ ಅಂತಹ ಒಂದು ಪ್ರಯತ್ನ ಮಾಡಲಾಗಿದೆ.

ಕಳಲೆ ಮನೆತನದ ದಳವಾಯಿಗಳ ಬಗೆಗೆ ಸಂಸ್ಕೃತ ಆಕರಗಳಲ್ಲಿ ಸಾಕಷ್ಟು ಮಾಹಿತಿ ದೊರೆಯುತ್ತದೆ. ಇತಿಹಾಸಕಾರರು ಇತ್ತಕಡೆ ಸಾಕಷ್ಟು ಗಮನವನ್ನು ಹರಿಸಬಹುದು. ನೃಸಿಂಹಕವಿ ರಚಿತ 'ನಂಜರಾಜಯಶೋಭೂಷಣ', ನೀಲಕಂಠನ 'ನಂಜರಾಜ ಸಮುಲ್ಲಾಸಚಂಪೂ', ರಾಮಕವಿಯ 'ಗೀತ ಗೋಪಾಲ' ನಂಜರಾಜನದೇ ಆದ 'ಸಂಗೀತ ಗಂಗಾಧರ', ರಾಮಸ್ವಾಮಿ ದೀಕ್ಷಿತನ 'ಕೈತವ ಚಂದ್ರ ಕಲಾಭಾಣ', ಮುಂತಾದ ಕೃತಿಗಳಲ್ಲಿ ಕಳಲೆಯ ಮನೆತನದ ದಳವಾಯಿಗಳ ಅದರಲ್ಲೂ ಪ್ರಮುಖವಾಗಿ ದೇವಾರಾಜಯ್ಯ ಮತ್ತು ನಂಜರಾಜಯ್ಯನನ್ನು ಕುರಿತು ಸಾಕಷ್ಟು ಸ್ವಾರಸ್ಯವಾದ ಮಾಹಿತಿಗಳು ದೊರೆಯುತ್ತವೆ. ಇವಲ್ಲದೆ ಕಳಲೆ ಮನೆತನದ ದಳವಾಯಿಗಳ ವಂಶಾವಳಿ ಮತ್ತು ಸಾಧನೆಗಳನ್ನು ಸ್ಥೂಲವಾಗಿ ತಿಳಿಸುವ ಸಂಸ್ಕೃತ ಶಾಸನಗಳು ದೊರಕುತ್ತದೆ. ಇವುಗಳಲ್ಲಿ ಮುಖ್ಯವಾಗಿ ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲೂಕಿನಲ್ಲಿ ನಂಜರಾಜ ಸಮುದ್ರದ ಅಗ್ರಹಾರ ಮತ್ತು ಟಿ.ನರಸೀಪುರ ತಾಲೂಕಿನಲ್ಲಿ ಕಳಲೆ ದೇವರಾಜಯ್ಯನು ನಿರ್ಮಿಸಿದ ರಾಮಚಂದ್ರಪುರ ಅಗ್ರಹಾರದ ಶಾಸನಗಳು ಇವರ ಬಗೆಗೆ ಕೆಲವು ವಿವರಗಳನ್ನು ನೀಡುತ್ತದೆ. ಈ ಶಾಸನಗಳಲ್ಲಿ ದಾನದ ಭಾಗವನ್ನು ಬಿಟ್ಟು ಉಳಿದ ಭಾಗವೆಲ್ಲಾ ಸಂಸ್ಕೃತ ಭಾಷೆಯಲ್ಲಿದೆ.

ಕಳಲೆ ಮನೆತನದ ದಳವಾಯಿಗಳು ಮುಖ್ಯವಾಗಿ ೧೮ನೇ ಶತಮಾನದ ಪೂರ್ವಾರ್ಧದಲ್ಲಿ ಪ್ರಬಲರಾಗಿದ್ದ ದೇವರಾಜಯ್ಯ ಮತ್ತು ನಂಜರಾಜಯ್ಯರು ಸಂಸ್ಕೃತ ಸಾಹಿತ್ಯವನ್ನು ಪೋಷಿಸಿದವರಲ್ಲಿ ಪ್ರಮುಖವಾಗಿ ಕಂಗೊಳಿಸುತ್ತಾರೆ. ಕಳಲೆ ನಂಜರಾಜಯ್ಯನು ಸ್ವತಃ ಸಂಸ್ಕೃತ ಕವಿಯಾಗಿದ್ದುದಲ್ಲದೆ, ಅನೇಕ ಸಂಸ್ಕೃತ ಕವಿಗಳಿಗೆ ಆಶ್ರಯವನ್ನು ನೀಡಿದ್ದನು ಇದರ ಜೊತೆಗೆ ಅಗ್ರಹಾರಗಳನ್ನು ಸ್ಥಾಪಿಸಿ ಸಂಸ್ಕೃತ ಪಂಡಿತರಿಗೆ ಉದಾರವಾದ ವೃತ್ತಿಗಳನ್ನು ನೀಡಿದ್ದನ್ನು ಅಲ್ಲದೆ ಸಂಸ್ಕೃತ ಸಾಹಿತ್ಯದ ಬೆಳವಣಿಗೆಗೆ ಈ ದಳವಾಯಿಗಳು ಅಪಾರವಾದ ಪ್ರೋತ್ಸಾಹ ನೀಡಿದ್ದರು.

ಕಳಲೆ ನಂಜರಾಜಯ್ಯ

ಮೈಸೂರಿನ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಕಳಲೆಯ ನಂಜರಾಜಯ್ಯನು ಸಾಕಷ್ಟು ಕೀರ್ತಿಶಾಲಿಯಾದ ಸ್ಥಾನವನ್ನು ಪಡೆದಿದ್ದನು. ಮೈಸೂರು ಜಿಲ್ಲೆಯ ನಂಜನಗೂಡು ಬಳಿ ಇರುವ ಕಳಲೆ ಗ್ರಾಮ ಇವನ ಹುಟ್ಟೂರು. ಭಾರಧ್ವಾಜಗೋತ್ರದ ಅಶ್ವಲಾಯನೆ ಸೂತ್ರಕ್ಕೆ ಸೇರಿದ ವೀರಶೈವಧರ್ಮದ

ಅನುಯಾಯಿಯಾಗಿದ್ದ ವೀರರಾಜಯ್ಯನ ಮಗನೆ ಈ ನಂಜರಾಜಯ್ಯ. ಕ್ರಿ.ಶ.ಸು.೧೭೩೪ ರಿಂದ ೧೭೬೦ರವರೆಗೆ ಮೈಸೂರನ್ನು ಆಳಿದ ಇಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸೇನಾಧಿಪತಿಯ ಸ್ಥಾನವನ್ನು ಅಲಂಕರಿಸಿ ಸರ್ವಾಧಿಕಾರಿಯಾಗಿ ಮೇರೆದನು. ಹದಿನೆಂಟನೆಯ ಶತಮಾನದ ಮೈಸೂರಿನ ರಾಜಕೀಯ ಇತಿಹಾಸದಲ್ಲಿ ಈತ ಮಹತ್ವದ ಸ್ಥಾನವನ್ನು ಪಡೆದಿದ್ದನು. ವೀರಶೈವನಾಗಿದ್ದರೂ ನಂಜನಗೂಡಿನ ಶ್ರೀಕಂಠೇಶ್ವರನನ್ನು ತನ್ನ ಆರಾಧ್ಯ ದೈವವೆಂದು ಪರಿಗಣಿಸಿದ್ದನು. ಶಿವಾಗಮಗಳಲ್ಲಿ ಇವನಿಗೆ ಸಾಕಷ್ಟು ಪಾಂಡಿತ್ಯವಿತ್ತೆಂದು ಮತ್ತು ಆಗಾಗ್ಗೆ ಬಂಧು ಜನರೊಡನೆ ಗೋಷ್ಠಿಯನ್ನು ನೆರವೇರಿಸುತ್ತಿದ್ದನೆಂದೂ ಹೇಳಿಕೊಂಡಿದ್ದಾನೆ.[೯]

ಕಳಲೆ ನಂಜರಾಜಯ್ಯನ ವಿದ್ವತ್ತನು ದೈವಭಕ್ತಿಯನ್ನು ಮತ್ತು ಕಾವ್ಯ ಶಕ್ತಿಯನ್ನು ಕವಿಗಳು ಪ್ರಶಂಸಿಸಿದ್ದಾರೆ. ನರಸಿಂಹನು ನಂಜರಾಜಯ್ಯನನ್ನು ನೂತನ ಭೋಜರಾಜನೆಂದೂ ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಬಂಧಗಳನ್ನು ರಚಿಸಿದ್ದನೆಂದೂ[೧೦], ವೆಂಕಟೇಶ ಕವಿಯು ತನ್ನ 'ಹಾಲಾಸ್ಯ ಮಹಾತ್ಮ್ಯ' ಎಂಬ ಕೃತಿಯಲ್ಲಿ ಈತನನ್ನು ಕವಿ ಎಂದು ಹೇಳಿದ್ದಾನೆ. ಅಲ್ಲದೆ ನಂಜನಗೂಡಿನ ದೇಗುಲದ ಗೋಪುರ, ಕೋಟೆ ಮತ್ತು ಅರವತ್ತು ಮೂರು ಪುರಾತನ ಶಿವಭಕ್ತನ ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡಿದನೆಂದು[೧೧] ಹಾಗೂ ಜೈನ ಕವಿಯಾದಿ ದೇವಚಂದ್ರನು ತನ್ನ 'ರಾಜಾವಳೀ ಕಥೆಯಲ್ಲಿ' ಇವನನ್ನು ಸಂಸ್ಕೃತ, ಕನ್ನಡ, ತೆಲುಗು, ಭಾಷೆಗಳಲ್ಲಿ ಕಾವ್ಯರಚನೆ ಮಾಡುವ ಶಕ್ತಿಯುಳ್ಳವನೆಂದೂ ಹೊಗಳಿದ್ದಾರೆ. ಈತನು 'ಹಾಲಾಸ್ಯೇ ಮಹಾತ್ಮ್ಯ', 'ಭದ್ರಗಿರಿ ಮಹಾತ್ಮ್ಯ', 'ಸೌಂದರ ಕಾವ್ಯ' ಮುಂತಾದ ಕನ್ನಡ ಗ್ರಂಥಗಳನ್ನು ರಚಿಸಿದ್ದಾರೆ. ಸಂಸ್ಕೃತದಲ್ಲಿ ಈತನಿಂದ ರಚಿತವಾಗಿರುವ 'ಗೀತಗಂಗಾಧರ'ವೆಂಬ ಒಂದೇ ಒಂದು ಕೃತಿ ಇದೆ. 'ಶಿವಾಷ್ಟಪದಿ' ಎಂಬುದು ಇದರ ಮತ್ತೊಂದು ಹೆಸರು.[೧೨] ಈ ಕಾವ್ಯದಲ್ಲಿ ಆರು ಸರ್ಗಗಳಿದ್ದು ಒಟ್ಟು ಇಪ್ಪತ್ತನಾಲ್ಕು ಅಷ್ಟಪದಿಗಳಿವೆ.

ಗೇಯಕಾವ್ಯದ ಪಿತಾಮಹನಾದ ಮಹಾಕವಿ ಜಯದೇವನ ಗೀತಗೋವಿಂದದ ಪ್ರಭಾವಕ್ಕೊಳಗಾಗದ ಯಾವುದೇ ಗೀತಕಾವ್ಯವೂ ಅತ್ಯಂತ ವಿರಳ. ಅಂತೆಯೇ ಈ ಕೃತಿಯ ಮೇಲೂ ಜಯ ದೇವನ ದಟ್ಟದಾದ ಪ್ರಭಾವ ಬಿದ್ದಿರುವುದು ಸ್ಪಷ್ಟಸವಾಗಿದೆ ಇದನ್ನು ಒಂದೆರಡು ಉದಾಹರಣೆಗಳ ಮೂಲಕ ವಿಶದಗೊಳಿಸಬಹುದು. ಜಯದೇವನು ತನ್ನ ಇಷ್ಟದೈವವಾದ ವಿಷ್ಣುವಿನ ದಶಾವತಾರದಿಂದ ಕಾವ್ಯವನ್ನು ಪ್ರಾರಂಭಿಸಿದರೆ, ಶಿವಭಕ್ತನಾದ ನಂಜರಾಜಯ್ಯನು ತನ್ನ ಇಷ್ಟದೈವವಾದ ಪರಶಿವನ ಅಷ್ಟ ಮೂರ್ತ್ಯಾತ್ಮಕವಾದ ಶರೀರವನ್ನು ವರ್ಣಿಸುವ ಪದ್ಯದಿಂದ ಕಾವ್ಯವನ್ನು ಪ್ರಾರಂಭಿಸುತ್ತಾನೆ.

ನರಸಿಂಹ

ಕಳಲೆ ನಂಜರಾಜಯ್ಯನ ಆಶ್ರಯದಲ್ಲಿದ್ದ ನರಸಿಂಹನು ಹದಿನೆಂಟನೆಯ ಶತಮಾನದ ಶ್ರೇಷ್ಠ ಕವಿಗಳಲ್ಲೊಬ್ಬನಾಗಿ ನಾಟಕಕಾರನಾಗಿ ಪ್ರಸಿದ್ಧಿ ಪಡೆದವನು. ಈತನು ಸನಗರ ಬ್ರಾಹ್ಮಣ ಕುಲದ

ಅಭಿನವ ಶಿವನೆಂಬ ಗೌರವಕ್ಕೆ ಪಾತ್ರನಾಗಿದ್ದ ಶಿವರಾಮದೇಶಿಕನ ಮಗ, ನರಸಿಂಹನು ತನ್ನ ತಂದೆಯಿಂದಲೂ, ಗುರುವಾಗಿದ್ದ ಯೋಗಾನಂದನಿಂದಲೂ ಸಕಲ ಶಾಸ್ತ್ರಸ್ತ್ರಗಳನ್ನು ಮತ್ತು ಸಾಹಿತ್ಯವನ್ನು ಅಭ್ಯಾಸ ಮಾಡಿದ್ದನು. ಈತನ ವಿದ್ವತ್ತನ್ನು ಗುರುತಿಸಿ 'ಅಭಿನವ ಕಾಳಿದಾಸ'ನೆಂದು ಕರೆಯುತ್ತಿದ್ದರು.[೧೩] 'ನಂಜರಾಜ ಯಶೋಭೂಷಣೆಯಲ್ಲಿ ಈತನ 'ಚಂದ್ರಕಲಾಕಲ್ಯಾಣ' ನಾಟಕವು ಅಂತರ್ಗತವಾಗಿದೆ. ವೈದ್ಯನಾಥನ "ಪ್ರತಾಪರುದ್ರೆಯ ಶೋಭೂಷಣ'ದ ಮಾದರಿಯಲ್ಲಿ ರಚಿತವಾಗಿರುವ ನರಸಿಂಹನ 'ನಂಜರಾಜಯ್ಯಶೋಭೂಷಣ'ವೂ ಸಹ ಕಾವ್ಯಮೀಮಾಂಸೆ ಹಾಗೂ ನಾಟಕ ಶಾಸ್ತ್ರಕ್ಕೆ ಸಂಬಂಧಿಸಿದ ವಿವರಗಳನ್ನು ನೀಡಲಾಗಿದೆ.

ಕಾಶೀಪತಿ

ಬೆಂಗಳೂರಿನ ಬಳಿ ಇರುವ ಹೊಸೂರಿನವನಾದ ಕಾಶೀ ಪತಿಯ 'ಮುಕುಂದಾನಂದ ಬಾಣ' ಎಂಬ ರೂಪಕವನ್ನು ರಚಿಸಿದ್ದಾನೆ.[೧೪] ಇವನ ತಂದೆ ಕೌಂಡನ್ಯಗೋತ್ರದ ಉಮಾಪತಿ. ಕಾಶೀ ಪತಿಯು ಮೃದುವಾದ ಕಾವ್ಯರಚನೆಯಲ್ಲಿ ಪರಿಣಿತನಾಗಿದ್ದನು. ಹಾಗೂ ತರ್ಕ ಶಾಸ್ತ್ರದಲ್ಲೂ ಪರಿಣತಿಯನ್ನು ಪಡೆದಿದ್ದನು.[೧೫] ಎಲ್ಲಾ ಭಾಗಗಳಲ್ಲಿರುವಂತೆ ಇಲ್ಲಿಯೂ ಉಚ್ಛುಂಖಲ ಶೃಂಗಾರವೇ ಮೆರೆದಿದೆ. ಆದರೆ ಕವಿಯು ಇದರಲ್ಲಿ, ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಗಳೆಂದುಕೊಂಡು ಕಟಪಜೀವನವನ್ನು ನಡೆಸುವವರನ್ನು ವಿಡಂಬಿಸುತ್ತಾನೆ. ಹಗಲಿನಲ್ಲಿ ವೈಧಿಕ ಕರ್ಮಗಳನ್ನು ಮಾಡಿಸಿ ಜೀವನ ಮಾಡಿ, ರಾತ್ರಿಯ ವೇಳೆ ವೇಶ್ಯಾವಾಟಿಕೆಯಲ್ಲಿ ವಿಹರಿಸುವ ಶ್ರೋತ್ರಿಯ ವರಾಹಭಟ್ಟನ ನಡವಳಿಕೆ, ಅಂತೆಯೇ ಪ್ರತಿಷ್ಠಿತ ವ್ಯಕ್ತಿಯನಿಸಿದ ರತ್ನಗುಪ್ತನ ಸೊಸೆ ಸಮಾಜದಲ್ಲಿ ತನ್ನ ತೋರಿಕೆಯ ನಡೆ ನುಡಿ ವಿನಯಗಳಿಂದ ಮೆಚ್ಚುಗೆಗೆ ಪಾತ್ರಳಾಗಿ, ಯಾರಿಗೂ ತಿಳಿಯದಂತೆ ಮಾಡುವ ಅಕ್ರಮ ಅನೀತಿ, ವ್ಯವಹಾರ ಮುಂತಾದವನ್ನು ತನ್ನ ಕೃತಿಯಲ್ಲಿ ಚಿತ್ರಿಸಿದ್ದಾನೆ.[೧೬]

ಈ ಕವಿಗೆ ಸಂಸ್ಕೃತ ಭಾಷೆಯ ಮೇಲೆ ಅಸಾಧಾರಣ ಪ್ರಭುತ್ವವಿತ್ತೆಂಬುದನ್ನು ಅವನು ವಾಚಕವನ್ನು ವರ್ಣಿಸುವ ರೀತಿಯಿಂದ ಮನಗಾಣಬಹುದು. ಈ ಮೇಲಿನ ಕೃತಿಯಲ್ಲದೆ ತನಗೆ ಆಶ್ರಯ ದಾತನಾಗಿದ್ದ, ನಂಜರಾಜಯ್ಯನ 'ಗೀತಗಮಗಾಧರಕ್ಕೆ' ಶ್ರವಣಾನಂದಿನೀ ಎಂಬ ಟೀಕೆಯನ್ನು ಬರೆದಿದ್ದಾನೆ.

ರಾಮಕವಿ

ಜಯದೇವನ 'ಗೀತಗೋವಿಂದ'ದ ಮಾರ್ಗವನ್ನನುಸರಿಸಿ ರಾಮ ಕವಿಯು 'ಸಂಗೀತ ರಾಘವ' ಅಥವಾ 'ರಾಮಾಷ್ಟಪದಿ' ಎಂಬ ಕೃತಿಯನ್ನು ರಚಿಸಿದ್ದಾನೆ.[೧೭] ಈತನ ಜನ್ಮಸ್ಥಳ ಮಯಸೂರು ಜಿಲ್ಲೆಯ ಪಿರಿಯಪುರ ಅಥವಾ ಘನಪುರ.[೧೮] ಇದು ಇಂದಿನ ಮೈಸೂರು ಜಿಲ್ಲೆಯ ಪಿರಿಯಪಟ್ಟಣವಾಗಿರಬಹುದು. ಈತನ ತಂದೆ ನರಸಿಂಹ. ಮೈಸೂರು ಅರಸನಾದ ಇಮ್ಮಡಿ ಕೃಷ್ಣರಾಜನು ಶ್ರೀರಂಗಪಟ್ಟಣವನ್ನು

ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿರುವಾಗ, ಈತನ ಸರ್ವಾಧಿಕಾರಿಯಾದ ದಳವಾಯಿ ದೇವರಾಜಯ್ಯನ ಶೌರ್ಯ ಔದಾರ್ಯದಿ ಗುಣಗಳನ್ನು ಬಹುವಾಗಿ ಪ್ರಶಂಸಿಸಿದ್ದಾನೆ. ರಾಮಕವಿಯು ಶ್ರೀರಾಮಚಂದ್ರನ ಚರಣಾಂಬುಜದಲ್ಲಿ ಭಕ್ತಿಯುಳ್ಳವನು, ವಿನಯಶೀಲನು ಹಾಗೂ ಈತನು ವಾಗ್ವಿಲಾಸವು ಕದಳೀರಸಾಯನಕ್ಕೆ ಸಮಾನ ಎಂದು ಹೊಗಳಿದ್ದಾನೆ.

ಏಕಪತ್ನೀವ್ರತನಾದ ರಾಮನು ಜಯಲಕ್ಷ್ಮೀಯೆಂಬ ಕಲ್ಪಿತ ನಾಯಿಕೆಯಲ್ಲಿ ಅನುರಕ್ತನಾಗುವಂತೆ ಮಾಡಿ ಸ್ವಲ್ಪಕಾಲ ಸೀತೆಯ ವಿರಹವನ್ನು ಸೃಷ್ಟಿಸಿ ಅವರಿಬ್ಬರ ಪ್ರೇಮವೆಷ್ಟು ಗಹನವೆಂಬುದನ್ನು ಪ್ರದರ್ಶಿಸುವ ಸಲುವಾಗಿ ರಾಮಕವಿಯು ಈ ಗೇಯ ಕಾವ್ಯದಲ್ಲಿ ವಿಶಿಷ್ಟವಾದ ಕಲಾತ್ಮಕವಾದ ಚಾತುರ್ಯವನ್ನು ಮಾಡಿದ್ದಾನೆ.

ಮೊದನೆಯ ಅಷ್ಟಪದಿಯಲ್ಲಿ ಕವಿಯು ಸಂಕ್ಷೇಪವಾಗಿ, ಸುಂದರವಾಗಿ ಇಡೀ ರಾಮಾಯಣದ ಕಥೆಯನ್ನು ಇಪ್ಪತ್ತು ಪದ್ಯಗಳಲ್ಲಿ ಅಳವಡಿಸಿದ್ದಾನೆ. ಗೀತ ಗೋವಿಂದದಂತೆಯ ಇದರ ಶೈಲಿ ವಸ್ತುವಿಗೆ ಅನುಗುಣವಾದ ಲಲಿತ ಕೋಮಲ ಪದಾವತಿಗಳಿಂದ ಕೂಡಿದ್ದು ಸಹೃದಯರ ಹೃದಯವನ್ನು ಉಲ್ಲಾಸಗೊಳಿಸುತ್ತದೆ. ಅಲ್ಲಿ ಒಂದು ಉದಾಹರಣೆಯನ್ನು ನೋಡಬಹುದು. ರಾತ್ರಿಯೆಲ್ಲಾ ಹೇಗೋ ಕಳೆದ ಸೀತೆಯು ಪ್ರಭಾತಕ್ಕೆ ಸರಿಯಾಗಿ ಬಂದ ವಿಜಯರಮಾ ಪರಿಣಿತನಾದ ರಾಮನೊಡನೆ ಮುನಿಸಿನಿಂದ ಮಾತನಾಡಲಿಲ್ಲ. ಇದನ್ನು ಕಂಡ ಗೆಳತಿಯರು ಅವಳಿಗೆ ಸಮಾಧಾನ ಮಾಡುತ್ತಿದ್ದರು ಎಂದು ತನ್ನ ಕೃತಿಯಲ್ಲಿ ಬರೆದಿದ್ದಾನೆ.[೧೯]

ನೀಲಕಂಠ

ಹದಿನೆಂಟನೆಯ ಶತಮಾನದಲ್ಲಿ ಬದುಕಿದ್ದ ನೀಲಕಂಠ ಕವಿಯು ಕಳಲೆ ಸರ್ವಾಧಿಕಾರಿ ನಂಜರಾಜಯ್ಯನ ಆಶ್ರಯದಲ್ಲಿದ್ದು 'ನಂಜರಾಜಶಸ್ಸಮುಲ್ಲಾಸಚಂಪೂ'[೨೦] ಎಂಬ ರಾಜಕೀಯ ವಸ್ತುವನ್ನುಳ್ಳ ಕೃತಿಯನ್ನು ರಚಿಸಿದ್ದಾನೆ. ಇದು ಇನ್ನೂ ಪ್ರಕಟವಾಗಿಲ್ಲ ಆಶ್ರಯದಾತನಾದ ನಂಜರಾಜನೇ ಈ ಕಾವ್ಯದ ನಾಯಕ.

ಈ ಚಿಕ್ಕ ಕೃತಿಯಲ್ಲಿ ಮೂರು ಉಲ್ಲಾಸಗಳಿವೆ ತನ್ನ ಆಶ್ರಯದಾತನಾಗಿದ್ದ ನಂಜರಾಜನಲ್ಲಿದ್ದ ಔದಾರ್ಯ, ಶೌರ್ಯ, ಕವಿಜನರಿಗೆ ನೀಡುತ್ತಿದ್ದ ಆಶ್ರಯ ಮತ್ತು ಸ್ವತಃ ಅವನಲ್ಲಿದ್ದ ಪಾಂಡಿತ್ಯ ಇವುಗಳನ್ನು ದಾಖಲೆಗೊಳಿಸುವುದೇ ಕವಿಯ ಉದ್ದೇಶವಾಗಿದೆ. ಇತಿಹಾಸದ ಪ್ರಮುಖ್ಯವನ್ನು ಪ್ರಸ್ತಾಪಿಸುತ್ತ ನೀಲಕಂಠನು ಗತಕಾಲದ ಶ್ರೇಷ್ಠ ವ್ಯಕ್ತಿಗಳನ್ನು ಕುರಿತು ಕವಿಗಳು ಕಾವ್ಯ ನಿರ್ಮಾಣ ಮಾಡಿದಿದ್ದ ಪಕ್ಷದಲ್ಲಿ ಅವರೆಲ್ಲ ಆಧಾರವಿಲ್ಲದ ಗಗನ ಕುಸುಮಗಳಂತಾಗುತ್ತಿದ್ದರು ಎಂದಿದ್ದಾನೆ. ಕವಿಗಳಿಂದ ತಮ್ಮ ಕಾವ್ಯಗಳಲ್ಲಿ ಸ್ಥಾನವನ್ನು ಪಡೆದ ರಾಜರು ಅವರ ಯಶಃಕಾಲದ ಮೂಲಕ ಇಹದಲ್ಲಿ ಸ್ಥಿರವಾದ

ನೆಲೆಯನ್ನು ಪಡೆದು ಆ ಚಂದ್ರಾರ್ಕವಾಗಿ ಶೋಭಿಸುತ್ತಾರೆ. ಕವಿಗಳು ಈ ರೀತಿ ಅಂಕಿತಗೊಳಿಸದಿದ್ದರೆ ರಾಜರು ಯಾರ ಕಣ್ಣಿಗೂ ಬೀಳದೆ ಅರಣ್ಯದಲ್ಲಿ ಬೆಳೆದ ತರುಗಳಂತೆ ಮರೆಯಾಗುತ್ತಾರೆ.[೨೧]

ನಂಜರಾಜಯ್ಯನು ಶ್ರೀರಂಗದ ಮೇಲೆ ದಂಡೆತ್ತಿ ಹೋದ ಐತಿಹಾಸಿಕ ಘಟನೆಯು ಇಲ್ಲಿ ಸೂಚಿತವಾಗಿದೆ. ಒಟ್ಟಿನಲ್ಲಿ ಐತಿಹಾಸಿಕ ಪ್ರಜ್ಞೆಯನ್ನು ಮತ್ತು ಮೈಸೂರು ಅರಸರಿಂದ ಕಾಲದ ಚರಿತ್ರೆಗೆ ಸಂಬಂಧಿಸಿದ ವಿಷಯವನ್ನು ದಾಖಲಿಸಲು ಇವನ ಕೃತಿಯು ಮಹತ್ವದ ಮಾಹಿತಿಯನ್ನು ಒದಗಿಸುತ್ತದೆ.

ರಾಮಸ್ವಾಮಿ ದೀಕ್ಷಿತ

ಇಮ್ಮಡಿ ಕೃಷ್ಣರಾಜನ ಕಾಲದಲ್ಲಿ ಶ್ರೀರಂಗಪಟ್ಟಣದಲ್ಲಿ ಜೀವಿಸಿದ್ದ ರಾಮಸ್ವಾಮಿ ದೀಕ್ಷಿತನು ಹದಿನೆಂಟನೆಯ ಶತಮಾನದ ಶ್ರೇಷ್ಠ ವಿದ್ವಾಂಸ. ಈತನ ತಂದೆ ವೆಗಿನಾಟಿನ ಮುಂಡುರು ನಾರಾಯಣ ಅಥವಾ ವೆಂಕಟ ನಾರಾಯಣ. ತಾಯಿ ಅಂಬಾ. ಈ ವಿಷಯವು ಅಪ್ರಕಟಿತ ಕೃತಿಯಾದ ಛಂದಶಾಸ್ತ್ರಕ್ಕೆ ಸಂಬಂಧಪಟ್ಟ 'ಛಂದಸ್ಸುಧಾ' ಎಂಬ ಕೃತಿಯಿಂದ ತಿಳಿದುಬರುತ್ತದೆ. ಈತನ ತಮ್ಮ ನಾರಾಯಣ ಸ್ವಾಮಿಯು ಇದಕ್ಕೆ ಟೀಕೆಯನ್ನು ಬರೆದಿದ್ದಾನೆ.[೨೨] ಇದಲ್ಲದೆ ಸ್ವತಂತ್ರವಾದ 'ಕೈತವಚಂದ್ರಕಲಾಭಾಣ' ಎಂಬ ರೂಪಕವನ್ನು ರಚಿಸಿದ್ದಾನೆ. ಈ ಅಪ್ರಕಟಿತ ಕೃತಿಯಲ್ಲಿ ಕವಿಯು ದಳವಾಯಿ ನಂಜರಾಜಯ್ಯನು ಅನೇಕ ಕವಿಗಳಿಗೆ ಆಶ್ರಯದಾತನಾಗಿದ್ದನೆಂದು ಪ್ರಶಂಸಿಸಿದ್ದಾನೆ. ಆದ್ದರಿಂದ ಈತನೂ ಆತನ ಆಶ್ರಯ ಪಡೆದ ಕವಿ ಎನ್ನಬಹುದು. ಈತನು ತನ್ನ ಶೈಲಿಯನ್ನು ಕುರಿತು ಪೀಯೂಷ ದ್ರವಸಾರಶೀತಮಧುರೋ ಯಸ್ಯೋಕ್ತಿ ಮುಕ್ತಾಸರಃ' ಎಂದು ಹೇಳಿಕೊಂಡಿದ್ದಾನೆ. ಶ್ರೀರಂಗಪಟ್ಟಣದ ಶ್ರೀರಂಗನಾಥನಿಗೆ ಡೋಲೋತ್ಸವ ಮಾಡುತ್ತಿದ್ದ ಸಂದರ್ಭದಲ್ಲಿ ಕವಿರಾಜ ನರಸಿಂಹನ ಎದುರಿನಲ್ಲಿ ಈತನ ನಾಟಕವನ್ನು ಆಡುತ್ತಿದ್ದರೆಂದು ಕೃತಿಯ ಪ್ರಸ್ತಾವನೆಯ ಭಾಗದಿಂದ ತಿಳಿದುಬರುತ್ತದೆ.

ಇತನು ಕೇವಲ ಕವಿಯಾಗಿರದೆ ತರ್ಕಶಾಸ್ತ್ರದಲ್ಲೂ ವಿದ್ವಾಂಸನಾಗಿದ್ದನು ಆತನೇ ಹೇಳಿರುವಂತೆ ದೀಧಿತೆಗೆ ವ್ಯಾಖ್ಯಾನ ಮಾಡಿದ್ದನು. ಇದು ಪ್ರಾಯಶಃ ನವ್ಯನ್ಯಾಯದ ಪ್ರವರ್ತಕರೆನಿಸಿದ ವಂಗದೇಶದ ಗಂಗೇಶೋಪಾಧ್ಯಾಯನ 'ತತ್ವ ಚಿಂತಾಮಣಿ' ಗ್ರಂಥಕ್ಕೆ ರಘುನಾಥನು ರಚಿಸಿರುವ ದೀಧಿತಿಯ ಟೀಕೆಯಾಗಿರಬಹುದು. ಈ ರೂಪಕದ ಪ್ರಾರಂಭದಲ್ಲಿ ಸದ್ಯುಕ್ತಿಯಿಂದ ಅಥವಾ ಸದುಕ್ತಿಯಿಂದ ಅರಿತವರನ್ನು ತೃಪ್ತಿಪಡಿಸಬಹುದು. ಆದರೆ ಸದಾ ಹೊಸದನ್ನೆ ಬಯಸುವ ಮೂರ್ಖರನ್ನು ತೃಪ್ತಿಪಡಿಸಲಾಗದು ರಂದು ತಾನು ಬರೆಯುತ್ತಿರುವ ವಸ್ತು ಹೊಸದಲ್ಲ ಎಂದು ಪರೋಕ್ಷ ಸಮರ್ಥಿಸಿಕೊಂಡಿದ್ದಾನೆ. ಮತ್ಸರಗ್ರಸ್ತರು ಹೇಗೂ ಈ ಕೃತಿಯನ್ನು ಮೆಚ್ಚುವುದಿಲ್ಲ. ಘೋರ ರೋಗಗ್ರಸ್ತನಾದವನು ಮಂಗಳಾಂಗಿಯನ್ನು ಆಲಿಂಗನ ಮಾಡಿಕೊಳ್ಳದಿದ್ದರೆ ಅದಕ್ಕಿಂತ ಭಾಗ್ಯ ಯಾವುದಿದೆ ಎಂದು ಅಂಥವರನ್ನು ಮೊದಲಿಸುತ್ತಾನೆ.[೨೩]

ವೆಂಕಾಮಾತ್ಯ

ವೆಂಕಾಮಾತ್ಯನು ಹದಿನೆಂಟನೆಯ ಶತಮಾನದ ಅತ್ಯಂತ ಪ್ರತಿಭಾನ್ವಿತ ಕವಿಯಾಗಿ ನಾಟಕಕಾರನಾಗಿ, ರಾಜಕೀಯ ಮುತ್ಸದ್ಧಿಯಾಗಿ ಕಂಗೊಳಿಸಿದ್ದಾನೆ. ಈತನನ್ನು ಮಧುಗಿರಿ ವೆಂಕಟಪ್ಪಯ್ಯ ಅಥವಾ ವೆಂಕಮಾತ್ಯ ಎಂದು ಕರೆದಿದ್ದರೂ ಈತನ ಜನ್ಮಸ್ಥಳ ಮೈಸೂರಿನ ಸಮೀಪದಲ್ಲಿರುವ ರಾಮಪುರ, ಈತನು ತನ್ನ ಜೀವನದ ಕೆಲವು ವಿವರಗಳನ್ನು ತನ್ನ ಗ್ರಂಥದಲ್ಲಿ ನೀಡಿದ್ದಾನೆ. ಈತನ ತಂದೆ ಭಾರಧ್ವಜಗೋತ್ರದ ಹಂಪಯ್ಯ, ತಾಯಿ ವಾಮಾಬಾ.[೨೪] ಈತನು ಮೈಸೂರು ಒಡೆಯರ ರಾಜ್ಯದಲ್ಲಿ ಮಂತ್ರಿಯಾಗಿದ್ದನ್ನು, ಅಲ್ಲದೆ ದಳವಾಯಿ ನಂಜರಾಜಯ್ಯ ಮತ್ತು ಸರ್ವಾಧಿಕಾರಿ ಹೈದರಾಲಿಯ ಬಳಿ ಇದ್ದು ಸೇವೆಸಲ್ಲಿಸಿದ್ದನು. ಮೈಸೂರು ಜಿಲ್ಲೆಯ ಕೃಷ್ಣರಾಜನಗರದಲ್ಲಿ ಕ್ರಿ.ಶ.೧೭೪೧ ನಂಜರಾಜ ಸಮುದ್ರದ ಅಗ್ರಹಾರ ಶಾಸನ ಈತನ ಕುರಿತು 'ದೇವರಾಜಯ್ಯ-ನಂಜರಾಜಯ್ಯಗಳ ಹೊರಗಡೆ ಸಂಚರಿಸುತ್ತಿರುವ ಪ್ರಾಣ'ವೆಂದು ಹೇಳುತ್ತದೆ. ಇದರಿಂದ ಕಳಲೆಯ ಈ ದಳವಾಯಿ ಸಹೋದರರು ಎಷ್ಟು ನಿಕಟವರ್ತಿಯಾಗಿದ್ದರೆಂದು ಊಹಿಸಿಕೊಳ್ಳಬಹುದಾಗಿದೆ. ಆದರೆ ಅವನ ಕೀರ್ತಿ ಅಮರವಾಗಿರುವುದು ಆತನ ರಾಜಕೀಯ ಸೇವೆಗಿಂತ ಸಾಹಿತ್ಯ ಸೇವೆಯೆಂದೇ ಹೇಳಬಹುದು. ಈತನ ವಿದ್ವತ್ತು ಅಪಾರವಾಗಿದ್ದು, ಸಂಸ್ಕೃತ, ಕನ್ನಡಗಳೆರಡಲ್ಲೂ ನಿರರ್ಗಳವಾಗಿ ಬರೆಯುವ ಶಕ್ತಿ ಇತ್ತು. ಆಂಜನೇಯ ಈತನ ಆರಾಧ್ಯ ದೈವ. ಈತನು ತನ್ನ ಪಾಂಡಿತ್ಯ ಹಾಗೂ ಪ್ರತಿಭೆಯನ್ನು ಕುರಿತು ಹೇಳಿಕೊಂಡಿದ್ದಾನೆ. ಈತನ ಸಮಕಾಲೀನ ಕವಿಗಳು ಈತನನ್ನು "ಪುಂಭಾವ ಸರಸ್ವತಿ" ಎನ್ನುತ್ತಿದ್ದರು. ಷಡ್ ದರ್ಶನಗಳಲ್ಲಿ ಅಪಾರವಾದ ಪರಿಣತಿಯನ್ನು ಪಡೆದಿದ್ದನು. ಅನೇಕ ಪ್ರಕಾರಗಳನ್ನೊಳಗೊಂಡ ವೈವಿಧ್ಯಮಯವಾದ ಈತನ ಕೃತಿಗಳು ಇಂತಿವೆ.

ರೂಪಕಗಳು : ಕಾಲಕಲಾವಿಲಾಸಭಾಣ, ಕುಕ್ಷಿಂಭರ ಪಹಸನ, ಮಹೇಂದ್ರ ವಿಜಯಡಿಮ, ವೀರರಾಘವ ವ್ಯಾಯೋಗ, ಲಕ್ಷ್ಮೀಸ್ವಯಂವರ ಸಮವಕಾರ, ಸೀತ ಕಲ್ಯಾಣವೀಧೀ, ರುಕ್ಮಿಣೀ ಮಾಧವಾಂಕ, ಉರ್ವಶ್ರೀ ಸಾರ್ವಭೌಮ ಈಹಾಮೃಗ, ಚಂಪೂ: ಕುಶಲವ ಚಂಪೂ, ಗದ್ಯಕಾವ್ಯ : ಸುಧಾಝುರೀ, ಪದ್ಯಕಾವ್ಯ : ಜಗನ್ನಾಥವಿಜಯ, ಅಲಂಕಾರ : ಅಲಂಕರಮಣಿದರ್ಪಣ. ಶತಕ : ಹನುಮತ ಶತಕ. ಇವಲ್ಲದೆ ಕನ್ನಡ ಕೃತಿಗಳನ್ನೂ ರಚಿಸಿದ್ದಾನೆ. ಅವು ಇಂತಿದೆ ಕರ್ಣಾಟ ರಾಮಾಯಣ, ಇಂದಿರಾಭ್ಯುದಯ ಅಥವಾ ರಾಮಾಭ್ಯುದಯ ಮತ್ತು ಹನುಮದ್ವಿಲಾಸ.[೨೫] ರೂಪಕದ ಪ್ರಭೇದವಾದ ಭಾಣವರ್ಗಕ್ಕೆ ಸೇರಿದ ಕಾಮಕಲಾವಿಲಾಸವೆಂಬುದು ಈತನ ಕೃತಿ.[೨೬]

ವೆಂಕಾಮಾತ್ಯನು ಈ ನಾಟಕದ ಮೂಲಕ ಸಮಾಜದಲ್ಲಿರುವ ಕಪಟವನ್ನು ಗುರುತಿಸಿ ಅದನ್ನು ಅನಾವರಣಗೊಳಿಸುತ್ತಾನೆ. ಪುರೋಹಿತರು, ಜೋತಿಷ್ಯರು, ಪುರಾಣಿಕರು, ಬಾಹ್ಯ ಪತಿಪರಾಯಣೆಯರು ಇವರ ಅಂತರಂಗ-ಬಹಿರಂಗ ನಡವಳಿಕೆಯನ್ನು ವಿಡಂಬಿಸಿದ್ದಾನೆ. ರೂಪಕದ ಪ್ರಭೇದವಾದ ಪ್ರಹಸನದ

ಮಾದರಿಯಲ್ಲಿ ವೆಂಕಾಮಾತ್ಯನ ಮತ್ತೊಂದು ಕೃತಿ 'ಕುಕ್ಷಿಂಭರವೈಕ್ಷವ ಪ್ರಹಸನ'(೨೭) ಇದು ಅಪ್ರಕಟಿತ ಕೃತಿಯಾಗಿದೆ. ವಿದೇಶಿಯರನ್ನು ಪಾತ್ರಗಳಾಗಿ ತಂದಿರುವುದು ಈ ನಾಟಕದ ಏಕೈಕ ನವೀನ ಅಂಶವೆಂಬುದು ಗಮನಾರ್ಹ.

ಹೀಗೆ ವೆಂಕಾಮಾತ್ಯನು ಕಳಲೆ ದಳವಾಯಿಗಳ ಕಾಲದ ಸಮಕಾಲೀನನಾಗಿದ್ದುದಲ್ಲದೆ ಅವರೊಡನೆ ಆಡಳಿತದಲ್ಲಿ ಭಾಗಿಯಾಗಿ 'ಆಡು ಮುಟ್ಟದ ಗಿಡವಿಲ್ಲ' ಎಂಬ ಕನ್ನಡದ ಗಾದೆಯಂತೆ ಗದ್ಯ, ಪದ್ಯ, ಚಂಪೂ, ರೂಪಕದ ಎಂಟು ಪ್ರಭೇದಗಳು, ಅಲಂಕಾರ, ವ್ಯಾಕರಣ, ಶತಕ ಈ ಪ್ರಕಾರಗಳಲ್ಲಿ ಶ್ರೇಷ್ಠಮಟ್ಟದ ಸಾಕಷ್ಟು ಕೃತಿಗಳನ್ನು ರಚಿಸಿ ಅಪರೂಪದ ಪ್ರತಿಭಾವಂತ ವಿದ್ವಾಂಸನಾಗಿ ಕಂಗೊಳಿಸುತ್ತಾನೆ.

ಕಪಿಲಾಶ್ರಮ ವೈಭವ ಎಂಬ ಹೆಸರಿನಲ್ಲಿ ಸಂಸ್ಕೃತದಲ್ಲಿ ರಚಿತವಾಗಿರುವ ಒಂದು ಸ್ಥಳ ಪುರಾಣ ಗ್ರಂಥ ದೊರೆಯುತ್ತಿದೆ. ಪುರಾಣಗಳ ಮಾದರಿಯಲ್ಲಿ ರಚಿತವಾದ ಇದು ಸ್ವರೂಪ ಋಷಿಗಳ ಕಥೆಗಳನ್ನು ಇದಕ್ಕೆ ಹೊಂದಿಸಿಕೊಂಡು, ವೈಭವೀಕರಣದ ಕಾರ್ಯವೆನ್ನಸಗಿದೆ ಎನಿಸುತ್ತದೆ. ಕಳಲೆಯನ್ನು ತೀರ್ಥಕ್ಷೇತ್ರ ವನ್ನಾಗಿ ಪರಿವರ್ತಿಸುವ ಭಾವ ಇದರ ಹಿಂದೆ ಅಡಗಿದೆ. ಆದರೆ ಇದರಲ್ಲಿ ಕಳಲೆ ಮನೆತನದ ದಳವಾಯಿಗಳಿಗೆ ಸಂಬಂಧಿಸಿದ ಯಾವ ವಿಚಾರವು ಸೇರಿರುವುದಿಲ್ಲ. ಲಕ್ಷ್ಮೀಕಾಂತಸ್ವಾಮಿ ದೇಗುಲವನ್ನೇ ಕೇಂದ್ರ ಬಿಂದುವನ್ನಾಗಿಟ್ಟುಕೊಂಡು ರಚಿತವಾಗಿರುವ ಕೃತಿ.

ಪುರಾಣಗಳ ಹಿನ್ನಲೆಯಿಂದ ಸೃಷ್ಟಿಸಿದ ತುಳಸೀಕಾಸಿನ ಅತಿಕ್ಷೇತ್ರ, ವೇಣುಪುರೀ, ಕಪಿಲಾಶ್ರಮ ಮುಂತಾದ ಹೆಸರುಗಳು ಈ ಸ್ಥಳಕ್ಕೆ ಅನ್ವಯಿಸ್ಪಟ್ಟಿವೆ. ಈ ಸ್ಥಳ ಪುರಾಣದ ಕರ್ತೃ ಯಾರೆಂದು ತಿಳಿದು ಬಂದಿಲ್ಲ.

ಬ್ರಹ್ಮಂಡ ಪುರಾಣದಲ್ಲಿ ಅಂತರ್ಗತವಾಗಿರುವ ಭಾಗವಷ್ಟೆ ಎಂದಿದೆ. ಇದರ ಕಾಲದ ವಿಷಯದಲ್ಲಿ ಹೇಳುವುದಾದರೆ ಇತ್ತೀಚಿನ ವೈಷ್ಣವ ಭಕ್ತರೊಬ್ಬರಿಂದ ರಚಿತವಾಗಿದೆಯೆಂದು ಭಾವಿಸಬಹುದು. ಕಳಲೆಯ ಪ್ರಕೃತಿಯ ಸೌಂದರ್ಯ ವರ್ಣಿಸುವಾಗ ಸ್ವಲ್ಪ ಮಟ್ಟಿಗೆ ಕಾವ್ಯಾಂಶವನ್ನು ಗುರುತಿಸಬಹುದು.

ಮೇಲಿನ ಅಧ್ಯಯನದಿಂದ ಒಂದೆರಡು ಪ್ರಮುಖ ತೀರ್ಮಾನಗಳನ್ನು ಮಾಡಬಹುದು. ಸ್ಥಳೀಯ ಮಟ್ಟದಲ್ಲಿ ರಾಜ್ಯಾಡಳಿತವನ್ನು ನಡೆಸಿದ ಮನೆತನವೊಂದು ಅಲ್ಪಾವಧಿಯಲ್ಲಿ ವೈವಿಧ್ಯಮಯವಾದ ಹಾಗೂ ಶ್ರೀಮಂತವಾದ ಸಂಸ್ಕೃತ ಸಾಹಿತ್ಯ ಕೃತಿಗಳ ರಚನೆಗೆ ಪ್ರೇರಕ ಶಕ್ತಿಯಾಗಿ ನಿಂತರು. ಈ ದೃಷ್ಟಿಯಿಂದ ಕಳಲೆ ಮನೆತನದ ದಳವಾಯಿಗಳಿಗೆ ಕರ್ನಾಟಕದ ಸಂಸ್ಕೃತ ಸಾಹಿತ್ಯ ಚರಿತ್ರೆಯಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಕೊಡಬೇಕಾಗುತ್ತದೆ. ಕಳಲೆ ಮನೆತನದ ದೇವರಾಜಯ್ಯ, ನಂಜರಾಜಯ್ಯನವರ ಕೀರ್ತಿ ಅಮರವಾಗಿರುವುದು ಅವರು ಸರ್ವಾಧಿಕಾರಿಗಳಾಗಿದ್ದರು. ಮತ್ತು ದಳವಾಯಿಗಳಾಗಿದ್ದರು ಎಂಬುದಕ್ಕಿಂತ ಅವರು ಪೋಷಿಸಿ ಬೆಳೆಸಿದ ಕೃತಿಕಾರರಿಂದ ಎಂದು ತೀರ್ಮಾನಿಸಬಹುದು. ಕಳಲೆ

ನಂಜರಾಜಯ್ಯನ ವ್ಯಕ್ತಿತ್ವವನ್ನೆ ವಸ್ತುವಾಗಿಟ್ಟುಕೊಂಡು ಸಾಹಿತ್ಯದ ಕೃತಿಗಳು ಒಡಮೂಡಿರುವುದು ಈ ಕಾಲದ ಮತ್ತೊಂದು ವಿಶೇಷ. ಒಟ್ಟಿನಲ್ಲಿ ಕಳಲೆ ಮನೆತನದ ದಳವಾಯಿಗಳು ಸಂಸ್ಕೃತ ಸಾಹಿತ್ಯ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ನೀಡಿ ಹೋಗಿದ್ದಾರೆ.

ಅಡಿಟಿಪ್ಪಣಿಗಳು

೧. ನರಸಿಂಹಚಾರ್ ಆರ್., ೧೯೭೩, ಕರ್ನಾಟಕ ಕವಿ ಚರಿತ್ರೆ, ಸಂಪುಟ ೩, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ಪು.೪೧

೨. ಅದೇ, ಪು.೬೮

೩. ರಾಮಕೃಷ್ಣರಾವ್ ಬಿ., ೧೯೧೬, ಮೈಸೂರು ಸಂಸ್ಥಾನದ ಪ್ರಭುಗಳು, ಶ್ರೀ ಮನ್ಮಹಾರಾಜ ವಂಶಾವಳಿ, ಭಾಗ ೧, ಮೈಸೂರು, ಪು.೧೭

೪. Hayadana Rao C., **History of Mysore, Vol-II,** Bongalore, 1941, Pp.504

೫. ಅದೇ, ಪು.೫೦೮

೬. ನಂಜುಂಡಾರಾಧ್ಯ ಕೆ.ಸಿ., ೧೯೪೦, ಕಳಲೆ ಅರಸುಮನೆತನದ ವಂಶಾವಳಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿ.ವಿ. ಮೈಸೂರು, ಪು.೧೮೪

೭. ಅದೇ, ಪು.೨೧೪

೮. ಎ.ಕ.ಸಂ.V, ಟಿ.ನರಸೀಪುರ, ೧೬, ಕ್ರಿ.ಶ.೧೭೪೯

೯. ನರಸಿಂಹಚಾರ್ ಆರ್., ಪೂರ್ವೋಕ್ತ, ಪು.೪೯

೧೦. ನೃಸಿಂಹ, ನಜರಾಜಯಶೋಭೂಷಣ (ಸಂ), ೧೯೩೦, ಕೃಷ್ಣಚಾರ್ಯರ ಎಂ.ಆರ್., ಜಿ.ಬಿ.ಎಸ್., ಪು.೮೯

೧೧. ನರಸಿಂಹಚಾರ್ ಆರ್., ಪೋರ್ವೋಕ್ತ, ಪು.೫೨

೧೨. ದೇವಚಂದ್ರ, ರಾಜಾವಳೀ ಕಥಾಸಾರ(ಸಂ), ೧೯೮೮, ಸಣ್ಣಯ್ಯ ಬಿ.ಎಸ್., ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ.ಮೈಸೂರು, ಪು.೨೮೮

೧೩. ನೃಸಿಂಹ, ಪೂರ್ವೋಕ್ತ, ಪು.೮೯

೧೪. ಕಾಶೀಪತಿ, ಮುಕುಂದಾನಂದಭಾಣ, ಕಾವ್ಯಮಾಲಾ(ಸಂ), ೧೮೮೯, ಭೊಂಬಾಯಿ, ಪು.೫೪

೧೫. ಅದೇ, ಪು.೭

೧೬. ಅದೇ, ಪು.೫೪

೧೭. ರಾಮಕವಿ, ಸಂಗೀತ ರಾಘವ(ಸಂ) ಚಾರಕ್ ಎನ್.ಜಿ., ೧೯೮೦, ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು ಪು.೧೪

೧೮. ಅದೇ, ಪು.೧೫

೧೯. ಅದೇ, ಪು.೪೫

೨೦. ನೀಲಕಂಠ, ನಂಜರಾಜಯಶಸ್ತಿ ಮುಲ್ಲಾ ಚಂಪೂ(ಅಪ್ರಕಟಿತ) DC, VII, ORI ಮೈಸೂರು, ಪು.೧೮

೨೧. ಅದೇ, ಪು.೨೩

೨೨. ರಾಮಸ್ವಾಮಿ ದೀಕ್ಷಿತ, ಛಂದಸ್ಸುಧಾ(ಅಪ್ರಕಟಿತ), DC, VII, ORI Mysore, SINO 28940/ 843/1

೨೩. ವೆಂಕಾಮಾತ್ಯ, ನಿತ್ಯಕಲ್ಯಾಣ ವೀಧೀ, (ಸಂ) ರಾಘವೇಂದ್ರ ರಾವ್ ಆರ್., ೧೯೮೭, ಪ್ರಾಚ್ಯ ಸಂಶೋಧನಾಲಯ, ಮೈಸೂರು, ಪು.೫

೨೪. ವೆಂಕಾಮಾತ್ಯ, ಲಕ್ಷ್ಮೀ ಸ್ವಯಂವರ ಸಮಬಕಾರ(ಸಂ) ರಾಘವೇಂದ್ರರಾವ್ ಆರ್., ೧೯೮೭, ಪ್ರಾಚ್ಯ ಸಂಶೋಧನಾಲಯ, ಮೈಸೂರು, ಪು.೫

೨೫. ನರಸಿಂಹಚಾರ್ ಆರ್., ಪೂರ್ವೋಕ್ತ, ಪು.೨೩-೨೪

೨೬. ವೆಂಕಾಮಾತ್ಯ ಕಾಮಕಲಾವಿಲಾ ಸಭಾಣ(ಅಪ್ರಕಟಿತ) D.C, VII, ORI, Mysore, SI 27529, ಪು.೨೫೮೬/೫

೨೭. ವೆಂಕಾಮಾತ್ಯ, ಕುಕ್ಷಿಂಭರಭೈಕ್ಷದ ಪ್ರಹಸನ, DC VII ORI Mysore SI 27527 MS No B 342

ಅಧ್ಯಾಯ ೬

ಸಮಾರೋಪ

೬

ಸಮಾರೋಪ

ಕಳಲೆ ದಳವಾಯಿಗಳು ಚಾರಿತ್ರಿಕ ಅಧ್ಯಯನ ಎಂಬ ಶೀರ್ಷಿಕೆಯುಳ್ಳ ಪ್ರಸ್ತುತ ಅಧ್ಯಯನವು ಕಳಲೆ ದಳವಾಯಿಗಳು ಮೈಸೂರು ಸಂಸ್ಥಾನಕ್ಕೆ ನೀಡಿದ ಕೊಡುಗೆಯನ್ನು ಈ ಸಂಪ್ರಬಂಧದಲ್ಲಿ ಕಟ್ಟಿಕೊಡಲಾಗಿದೆ.

ಮೈಸೂರು ಸಂಸ್ಥಾನವು ಚಾರಿತ್ರಿಕವಾಗಿ ಮತ್ತು ಐತಿಹಾಸಿಕವಾಗಿ ಮಹತ್ವವನ್ನು ಪಡೆದಿರುವ ಪ್ರದೇಶವಾಗಿದೆ. ಈ ಪ್ರದೇಶವು ಹಲವು ವೈಶಿಷ್ಟಗಳಿಂದ ಕೂಡಿದ್ದು, ಇತಿಹಾಸದ ಆರಂಭದ ಕಾಲದಿಂದಲೂ ತನ್ನ ಸ್ಥಾನವನ್ನು ಗುರುತಿಸಿಕೊಂಡು ಬಂದಿದೆ. ಮುಖ್ಯವಾಗಿ ವಿಜಯನಗರ ಕಾಲದಿಂದ ಮೈಸೂರು ಪ್ರಾಂತ್ಯವು ತನ್ನ ಸ್ಥಾನವನ್ನು ಗುರ್ತಿಸಿಕೊಳ್ಳುವುದರೊಂದಿಗೆ ೧೬ನೇ ಶತಮಾನದಿಂದ ೧೯ನೇ ಶತಮಾನದವರೆಗೆ ರಾಜಕೀಯವಾಗಿ, ಸಾಂಸ್ಕೃತಿಕವಾಗಿ ತನ್ನ ಸ್ಥಾನವನ್ನು ವಿಶಿಷ್ಟವಾಗಿ ಗುರ್ತಿಸಿಕೊಂಡಿದೆ.

ಕಳಲೆಯ ಅರಸು ಮನೆತನವು ೧೬ನೇ ಶತಮಾನದಲ್ಲಿ ಸ್ಥಾಪನೆಯಾಗಿದ್ದು, ವಿಜಯನಗರದ ಸಾಮಂತರಾಗಿ ಇವರು ಆಡಳಿತವನ್ನು ಆರಂಭಿಸಿದರು. ಹಾಗೆಯೇ ಇವರು ವಿಜಯನಗರ ಪತನ ನಂತರ ಮೈಸೂರು ಒಡೆಯರ ಸಾಮಂತರಾಗಿ ಆಡಳಿತವನ್ನು ಮುಂದುವರೆಸಿದರು. ಕಳಲೆಯ ಅರಸರುಗಳು ರಾಜಕೀಯವಾಗಿ ತಮ್ಮದೇ ಆದ ಮುದ್ರೆಯನ್ನು ಮೈಸೂರು ಸಂಸ್ಥಾನದಲ್ಲಿ ಹೊತ್ತಿ ಹೋಗಿದ್ದಾರೆ ಎಂದು ಹೇಳಬಹುದಾಗಿದೆ. ಇವರು ಸಂಸ್ಥಾನದಲ್ಲಿ ತಮ್ಮ ಆಡಳಿತವನ್ನು ಭದ್ರಪಡಿಸಿಕೊಳ್ಳಲು ಮೈಸೂರಿನ ದೊರೆಗಳೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸಿಕೊಳ್ಳುವುದರೊಂದಿಗೆ ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಿದರು.

ಇವರು ಮೈಸೂರು ಸಂಸ್ಥಾನಕ್ಕೆ ವಂಶಪಾರಂಪರ್ಯವಾಗಿ ದಳವಾಯಿಗಳಾಗಿ ಸೇವೆ ಸಲ್ಲಿಸಿದ್ದಾರೆ. ದಳವಾಯಿ ಎಂಬ ಪದವಿಗೆ ಅರ್ಥಪೂರ್ಣವಾಗಿ ಬಳಸಿಕೊಂಡು ಸೈನ್ಯದ ದಂಡನಾಯಕನಾಗಿ ದಳಪತಿಯಾಗಿ ತಮ್ಮ ಅಧಿಕಾರವನ್ನು ಚಲಾಯಿಸುವ ಮೂಲಕ ಜನಸಾಮಾನ್ಯರ ಸಂಕಷ್ಟಗಳಿಗೆ ಸ್ಪಂಧಿಸುವುರೊಂದಿಗೆ ರಾಜಕೀಯವಾಗಿ, ಆಡಳಿತಾತ್ಮಕವಾಗಿ ಕಳಲೆಯ ಅರಸರು ಮೈಸೂರು ಸಂಸ್ಥಾನದಲ್ಲಿ ತಮ್ಮ ಹಿಡಿತವನ್ನು ಹಂತ ಹಂತವಾಗಿ ಸಾಧಿಸಿದರು.

ರಾಜಕೀಯವಾಗಿ ಕಳಲೆ ದಳವಾಯಿಗಳು ಅಧಿಕಾರಕ್ಕಾಗಿ ಇವರ ಕುಟುಂಬದಲ್ಲಿ ಒಳ ಜಗಳಗಳು ನಡೆದು ಕೆಲವೊಮ್ಮೆ ಅವು ಕೊಲೆಗಳ ಹಂತದವರೆಗೂ ತಲುಪಿದ್ದವು. ಈ ರೀತಿಯ ಒಳಜಗಳಗಳಿಂದ ಇವರ ರಾಜಕೀಯ ಚರಿತ್ರೆಯ ಮೇಲೆ ಕಪ್ಪು ಚುಕ್ಕೆಯನ್ನಿಟ್ಟಿದೆ. ಇವರು ಮೈಸೂರು ಸಂಸ್ಥಾನಕ್ಕೆ ದಳವಾಯಿಗಳಾಗಿ ಕಾರ್ಯ ನಿರ್ವಹಿಸುವ ಒಪ್ಪಂದ ಮಾಡಿಕೊಂಡ ಮೇಲೆ ಸಂಸ್ಥಾನದಲ್ಲಿ ತಮ್ಮದೇ ಆದ ಘನತೆ ಗೌರವಗಳನ್ನು ಸಂಪಾದಿಸಿದ್ದರು. ದುರ್ಬಲ ಅರಸರು ಅಧಿಕಾರಕ್ಕೆ ಬಂದಾಗ ಆ ಅರಸರನ್ನು ಮೂಲೆಗುಂಪು ಮಾಡಿ ತಮ್ಮ ಅಧಿಕಾರವನ್ನು ಚಲಾಯಿಸುತ್ತಿದ್ದರು. ಇದರಿಂದ ಇವರಿಗೆ ಅಧಿಕಾರದ ಆಸೆಯು ಮಿತಿಮೀರಿತ್ತು ಎಂದು ಹೇಳಬಹುದು.

ಮೈಸೂರಿನ ಸಂಸ್ಥಾನದಲ್ಲಿ ದಳವಾಯಿಗಳ ಯುಗ ಎಂದೇ ಪ್ರಸಿದ್ಧವಾದ ಅವಧಿಯೆಂದರೆ ೧೭೦೪ ರಿಂದ ೧೭೫೯ರ ನಡುವಿನ ಕಾಲವಾಗಿದೆ. ಈ ವೇಳೆಯಲ್ಲಿ ದಳವಾಯಿಯಾಗಿದ್ದ ದೇವರಾಜಯ್ಯ, ಸರ್ವಾಧಿಕಾರಿ ನಂಜರಾಜಯ್ಯ ಮತ್ತು ಕರಾಚೂರಿ ನಂಜರಾಜಯ್ಯ ಈ ಮೂವರು ಅಧಿಕಾರ ನಡೆಸಿದ ರೀತಿ ಎಲ್ಲರನ್ನು ಬೆರಗುಗೊಳಿಸುತ್ತಿದೆ. ಇವರು ಅಧಿಕಾರಕ್ಕೆ ಬಂದ ಸಮಯದಲ್ಲಿ ಸಂಸ್ಥಾನವು ಹಲವಾರು ದಂಗೆಗಳನ್ನು ಎದುರಿಸಬೇಕಾಗಿತ್ತು. ಪ್ರಮುಖವಾಗಿ ಮೊಘಲ್ ಮತ್ತು ಮರಾಠ ಸೈನ್ಯಗಳು ಸಂಸ್ಥಾನದ ಮೇಲೆ ದಾಳಿ ಮಾಡಿದರು. ಈ ದಾಳಿಗಳನ್ನು ಸಮರ್ಥವಾಗಿ ಎದುರಿಸಿದರಲ್ಲದೆ ಮೈಸೂರಿನ ಸಂಸ್ಥಾನದಲ್ಲಿ ನಿಜವಾದ ಅಧಿಕಾರ ಸೂತ್ರವನ್ನು ತಮ್ಮ ಕೈಗೆ ತೆಗೆದುಕೊಂಡರು. ಆದರೆ ಇವರ ಕೆಲವು ಅತುರದ ನಿರ್ಧಾರಗಳಿಂದ ರಾಜ್ಯವನ್ನು ದಿವಾಳಿಯಂಚಿಗೆ ತಂದು ನಿಲ್ಲಿಸಿದರು. ಸೈನ್ಯದ ಮೇಲೆ ಹಿಡಿತವನ್ನು ಸಾಧಿಸಲು ವಿಫಲರಾದರು. ಮುಂದಾಲೋಚನೆ ಇಲ್ಲದ ಇವರ ಯುದ್ಧಗಳು ದುರ್ಬಲರಾಗಲು ಕಾರಣವಾದವು. ಮರಾಠರೊಂದಿಗೆ ಯುದ್ಧ ಮಾಡಿದ ದೇವರಾಜಯ್ಯನು ತನ್ನ ಸೈನ್ಯದಲ್ಲಿನ ಒಳಜಗಳಗಳಿಂದ ಗೆಲುವು ಕಾಣಲಾಗದೆ ಯುದ್ಧದಲ್ಲಿ ಸೋಲಬೇಕಾಯಿತು. ಅಲ್ಲದೆ ಮರಾಠರಿಗೆ ೩೨ ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿ ಬಂದಾಗ ಅಷ್ಟೊಂದು ಹಣವನ್ನು ಕೊಡಲಾಗದೆ ಕೆಲವು ಜಿಲ್ಲೆಗಳನ್ನು ಅವರಿಗೆ ಬಿಟ್ಟು ಕೊಟ್ಟಿದ್ದು ಸರಿಯಾದ ಕ್ರಮವಲ್ಲ ಎಂದು ಹೇಳಬಹುದು.

ದಳವಾಯಿ ದೇವರಾಜಯ್ಯನು ಸಂಸ್ಥಾನದಲ್ಲಿ ಸಹಾಯಕ ಸೈನ್ಯಪದ್ಧತಿ ಜಾರಿಗೆ ತಂದನು. ಇದರಿಂದ ಬ್ರಿಟೀಷರ ಒಂದು ಅಧ್ಯಾಯವನ್ನು ಇವರೆ ಸೇರಿಸಿದಂತಾಯಿತು. ಇಂತಹ ನೀತಿಗಳು ದಳವಾಯಿ ಸಹೋದರರ ಹಿತಶಕ್ತಿಗೆ ಪೂರಕವಾಗಿರಲಿಲ್ಲ. ಈ ನೀತಿಯಿಂದ ಹೈದರನನ್ನು ಸಂಸ್ಥಾನದಲ್ಲಿ ಬೆಳೆಯಲು ಇವರೆ ಅವಕಾಶ ಮಾಡಿಕೊಟ್ಟರು. ಇದು ಮುಂದೆ ದಳವಾಯಿಗಳು ಅಧಿಕಾರವನ್ನು ಕಳೆದುಕೊಳ್ಳಲು ಒಂದು ಪ್ರಮುಖವಾದ ಕಾರಣವಾಯಿತು.

ದಳವಾಯಿಗಳ ಆಡಳಿತ ವ್ಯವಸ್ಥೆಯು ಎರಡು ಕಡೆ ಕೇಂದ್ರೀಕೃತವಾಗಿತ್ತು. ಒಂದು ಕಳಲೆಯಲ್ಲಿ ಇನ್ನೊಂದು ಶ್ರೀರಂಗಪಟ್ಟಣದಲ್ಲಿ. ಇವರು ತಮ್ಮ ಕೈ ಕೆಳಗಿನ ಅಧಿಕಾರ ವರ್ಗವನ್ನು ಮೇಲ್ ವರ್ಗದ

ಜನರಿಗೆ ನೀಡುತ್ತಿದ್ದರು. ಅಲ್ಲದೆ ತಮ್ಮ ಸಂಬಂಧಿಕರನ್ನು ನೇಮಿಸುತ್ತಿದ್ದರು. ಇದರಿಂದ ಇವರು ಆಡಳಿತದಲ್ಲಿ ಹಿಡಿತವನ್ನು ಸಾಧಿಸಿದರು. ಇವರ ಆಡಳಿತವಾಧಿಯಲ್ಲಿ ಎರಡು ಪ್ರಮುಖವಾದ ಅಂಗಗಳಿದ್ದವು. ಕೋಶ, ಬಲ ಈ ಎರಡು ಅಂಗಗಳು ದಳವಾಯಿಗಳ ಕೈಯಲ್ಲಿದ್ದವು. ಈ ರೀತಿಯ ದ್ವಂದ್ವ ನಿಯಂತ್ರಣಕ್ಕೆ ಒಳಪಟ್ಟ ಮೈಸೂರಿನ ಸಂಸ್ಥಾನದ ಆಡಳಿತವು ಅಧಿಕಾರದ ಹಂಚಿಕೆಗಿಂತ ದಳವಾಯಿ ಮತ್ತು ಒಡೆಯರ ನಡುವಿನ ದ್ವೇಷ, ಪೈಪೋಟಿ, ಒಳಸಂಚು ಮತ್ತಿತರ ಕಾರಣಗಳಿಂದ ರಾಜ್ಯದ ಆಡಳಿತದ ಮೇಲೆ ಕೆಟ್ಟ ಪರಿಣಾಮವನ್ನು ಉಂಟು ಮಾಡಿದವು. ಇದಲ್ಲದೆ ದಳವಾಯಿ ಮತ್ತು ಅಮಾತ್ಯ ಇಬ್ಬರೂ ಸೇರಿಕೊಂಡು ಒಡೆಯನನ್ನು ಕಡೆಗಣಿಸುತ್ತಿದ್ದರು ಮತ್ತು ಒಡೆಯನು ದುರ್ಬಲನಾಗಿದ್ದರೆ, ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದನು. ಇದರಿಂದ ಒಡೆಯ ಮತ್ತು ದಳವಾಯಿಗಳ ನಡುವಿನ ಕಿತ್ತಾಟದಿಂದ ಶತ್ರುರಾಜ್ಯಗಳು ಸಂಸ್ಥಾನದ ಮೇಲೆ ದಾಳಿಮಾಡಲು ಇವರೆ ಆಹ್ವಾನವನ್ನು ನೀಡಿದಂತಾಯಿತು. ಇದರಿಂದ ರಾಜ್ಯದ ಆಡಳಿತದ ಮೇಲೆ ಕೆಟ್ಟ ಪರಿಣಾಮ ಉಂಟಾಯಿತು.

ಇವರ ಆಡಳಿತ ವ್ಯವಸ್ಥೆಯು ಅಷ್ಟೊಂದು ಸುಭದ್ರವಾಗಿರಲಿಲ್ಲ ಎಂದು ಹೇಳಬಹುದು. ಏಕೆಂದರೆ ಯುದ್ಧದಿಂದ ಆದ ನಷ್ಟವನ್ನು ತುಂಬಲು ಇವರು ಜನಸಾಮಾನ್ಯರ ಮೇಲೆ ಅಧಿಕ ತೆರಿಗೆಯನ್ನು ವಿಧಿಸುತ್ತಿದ್ದರು. ಕೆಲವು ವೇಳೆ ದೇವಾಲಯಗಳನ್ನು ಸಹ ಲೂಟಿ ಮಾಡುತ್ತಿದ್ದರು ಮತ್ತು ಶತ್ರು ರಾಜ್ಯಗಳ ಮೇಲೆ ಆಕ್ರಮಣ ಮಾಡಿ ಹಣವನ್ನು ಸಂಗ್ರಹಿಸುತ್ತಿದ್ದರು. ಇವರ ಈ ರೀತಿಯ ನೀತಿಗಳು ಆಡಳಿತದ ಮೇಲೆ ಕೆಟ್ಟ ಪರಿಣಾಮವನ್ನು ಉಂಟು ಮಾಡುವುದರೊಂದಿಗೆ ಜನ ಸಾಮಾನ್ಯರಿಗೂ ಸಹ ಇವರ ಆಡಳಿತ ಬೇಸರವನ್ನು ಉಂಟು ಮಾಡಿತ್ತು.

ಇವರ ಆಡಳಿತ ವ್ಯವಸ್ಥೆಯಲ್ಲಿ ಕೆಲವು ನ್ಯೂನ್ಯತೆಗಳನ್ನು ಗುರುತಿಸಬಹುದಾಗಿದೆ. ದಳವಾಯಿಗಳು ತಮ್ಮ ಕೈಕೆಳಗಿನ ಅಧಿಕಾರಿಗಳ ನೇಮಕಾತಿಯಲ್ಲಿ ಪಕ್ಷಪಾತ ಹಾಗೂ ಇವರ ಆಡಳಿತದ ಅವಧಿಯಲ್ಲಿ ಇದ್ದಂತಹ ಅನೀತಿಯುತ ಮಾರ್ಗದಲ್ಲಿ ಹಣವನ್ನು ಸಂಗ್ರಹಿಸುತ್ತಿದ್ದುದು, ಅಲ್ಲದೇ ಇವರು ಆಡಳಿತದ ಅನುಕೂಲಕ್ಕಾಗಿ ಅನೇಕ ಪ್ರಾಂತ್ಯಗಳಾಗಿ ಮಾಡಿಕೊಂಡಿದ್ದರು ಸಹ ಪ್ರಾಂತ್ಯಾಧಿಕಾರಿಗಳ ನೇಮಕಾತಿಯಲ್ಲಿ ಲೋಪದೋಷಗಳು ಇದ್ದುದರಿಂದ ಇವರ ಆಡಳಿತ ಕುಸಿಯಲು ಮತ್ತೊಂದು ಪ್ರಮುಖವಾದ ಕಾರಣವಾಯಿತು.

ದಳವಾಯಿಗಳ ಕಾಲದ ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿದಾಗ ಅದು ಕೃಷಿಯನ್ನೆ ಅವಲಂಭಿಸಿತ್ತು. ಇದರಿಂದ ನಮಗೆ ತಿಳಿಯುವುದೇನೆಂದರೆ ಕೃಷಿಗೆ ಅವರು ಹೆಚ್ಚಿನ ಆದ್ಯತೆಯನ್ನು ನೀಡಿದ್ದರು ಎಂದು ಹೇಳಬಹುದು. ಈ ವೇಳೆಯಲ್ಲಿ ಗ್ರಾಮವಾಸಿಗಳು ಅಧಿಕವಾಗಿದ್ದರಿಂದ ಕೃಷಿಯು ಆರ್ಥಿಕತೆಯ ಬೆನ್ನೆಲುಬಾಗಿತ್ತು. ನೀರಾವರಿಯ ಸೌಲಭ್ಯಗಲನ್ನು ದಳವಾಯಿಗಳು ವ್ಯವಸ್ಥಿತವಾದ ರೀತಿಯಲ್ಲಿ ಮಾಡಿದ್ದರು. ಅಣೆಕಟ್ಟುಗಳು ಕೆರೆ ಕಾಲುವೆಗಳನ್ನು ನಿರ್ಮಿಸುವ ಮೂಲಕ ಕೃಷಿಗೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದರು.

ರಾಜನ ಬೊಕ್ಕಸವು ಬರಿದಾದಾಗ ನಜರಾನ ಎಂಬ ವಿಶೇಷ ತೆರಿಗೆಯನ್ನು ಜನರ ಮೇಲೆ ವಿಧಿಸುತ್ತಿದ್ದರು. ಆರ್ಥಿಕ ವ್ಯವಸ್ಥೆಯ ಮತ್ತೊಂದು ಆದಾಯದ ಮೂಲವೆಂದರೆ ಭೂಕಂದಾಯವಾಗಿತ್ತು. ಈ ಕಂದಾಯ ವ್ಯವಸ್ಥೆಯಲ್ಲಿ ಭೂಮಿಯನ್ನು ಅಳೆದು ಸಾಗುವಳಿಗೆ ಯೋಗ್ಯವಾದ ಹಾಗೂ ಯೋಗ್ಯವಲ್ಲದ ಭೂಮಿಯಾಗಿ ವಿಭಾಗಿಸಿದ್ದು, ಬೇರೆ ಬೇರೆ ರೀತಿಯ ಕಂದಾಯವನ್ನು ವಿಧಿಸುತ್ತಿದ್ದರು.

ಕೈಗಾರಿಕೆಯು ಸಹ ಆರ್ಥಿಕತೆಯ ಪ್ರಮುಖವಾದ ಆದಾಯದ ಮೂಲವಾಗಿತ್ತು. ಇವುಗಳ ಮೇಲೆ ವಿಧಿಸುತ್ತಿದ್ದ ಸುಂಕದಿಂದ ರಾಜ್ಯದ ಆದಾಯ ಹೆಚ್ಚಾಗಿತ್ತು. ದಳವಾಯಿಗಳ ರಾಜಕೀಯ ವ್ಯವಸ್ಥೆಯ ಗೊಂದಲಗಳ ನಡುವೆಯೂ ವಾಣಿಜ್ಯೋದ್ಯಮವು ಹೆಚ್ಚಿನ ಆದಾಯವನ್ನು ತರುವ ಮೂಲವಾಗಿತ್ತು. ರಾಜ್ಯದಲ್ಲಿ ಆಂತರಿಕ ಮತ್ತು ಬಾಹ್ಯ ವ್ಯಾಪಾರಗಳು ಸುಲಲಿತವಾಗಿ ನಡೆಯುತ್ತಿದ್ದವು. ವಿದೇಶದೊಂದಿಗೂ ಸಹ ಉತ್ತಮವಾದ ವ್ಯಾಪಾರ ಸಂಬಂಧವನ್ನು ರಾಜ್ಯ ಹೊಂದಿತ್ತು. ಇದರಿಂದ ರಾಜ್ಯದ ಬೊಕ್ಕಸಕ್ಕೆ ಹೇರಳವಾಗಿ ಹಣವು ಹರಿದು ಬರುತ್ತಿತ್ತು. ಆದರೆ ಮುಂದೆ ಈ ವಿದೇಶಿಯರೊಡನೆಯೂ ವ್ಯಾಪಾರ ಸಂಬಂಧವು ಸಂಸ್ಥಾನವನ್ನು ಆಕ್ರಮಿಸುವ ಹಂತವನ್ನೇ ತಲುಪಿದ್ದು, ದುರದೃಷ್ಟಕರ ಎಂದು ಹೇಳಬಹುದು.

ಸಾಮಾಜಿಕ ಸ್ಥಿತಿಗತಿಗಳನ್ನು ಗಮನಿಸಿದಾಗ ದಳವಾಯಿಗಳ ಕಾಲ ಅಷ್ಟೊಂದು ಉತ್ತಮವಾಗಿರಲಿಲ್ಲ ಎಂದು ಹೇಳಬಹುದು. ಏಕೆಂದರೆ ಮೇಲ್ ವರ್ಗದ ಜನರು ಕೆಳವರ್ಗದ ಜನರ ಮೇಲೆ ತಮ್ಮ ಅಧಿಕಾರವನ್ನು ಚಲಾಯಿಸುತ್ತಿದ್ದರು. ದಳವಾಯಿಗಳು ಜನಸಾಮಾನ್ಯರಿಗೆ ಹತ್ತಿರವಾಗಿದ್ದರೂ ಸಹ ಇವರಿಂದ ನೇಮಕವಾಗಿದ್ದ ಬ್ರಾಹ್ಮಣ ಅಧಿಕಾರಿಗಳು ಸಾಮಾನ್ಯ ಜನರನ್ನು ನಿರ್ಲಕ್ಷಿಸುತ್ತಿದ್ದರು. ಇದರಿಂದ ಜನ ಸಾಮಾನ್ಯರ ಸ್ಥಾನಮಾನಗಳು ಅಷ್ಟೊಂದು ಉತ್ತಮವಾಗಿರಲಿಲ್ಲ ಎಂದು ಹೇಳಬಹುದಾಗಿದೆ. ಬ್ರಾಹ್ಮಣರು ಸಮಾಜದಲ್ಲಿ ಅತ್ಯಂತ ಉನ್ನತ ಸ್ಥಾನದಲ್ಲಿದ್ದರು. ಅರಸರು ನಂತರದ ಸ್ಥಾನದಲ್ಲಿದ್ದರು. ಇನ್ನುಳಿದವರೆಲ್ಲರು ಕೆಳವರ್ಗಕ್ಕೆ ಸೇರಿದ್ದರು. ಕೆಲಲೆಯ ದಳವಾಯಿಗಳು ವೀರಶೈವ ಮತಾವಲಂಭಿಗಳಾಗಿದ್ದರೂ ಸಹ ಬೇರೆ ಧರ್ಮಗಳಿಗೂ ಪ್ರೋತ್ಸಾಹವನ್ನು ನೀಡಿದ್ದರು. ಎಲ್ಲಾ ವರ್ಗದ ಜನರಿಗೂ ಸಹ ದೇವಾಲಯಗಳನ್ನು ಕಟ್ಟಿಸಿಕೊಟ್ಟಿದ್ದರು. ಎಲ್ಲಾ ವರ್ಗದ ಜನರು ಸಾಮರಸ್ಯದಿಂದ ಜೀವನ ನಡೆಸುತ್ತಿದ್ದರು. ಈ ಕಾಲದಲ್ಲಿ ಉಡುಗೆ ತೊಡುಗೆಗಳಲ್ಲಿ ಮೇಲ್ವರ್ಗದವರಿಗೂ ಕೆಳವರ್ಗದವರಿಗೂ ತುಂಬ ವ್ಯತ್ಯಾಸಗಳಿದ್ದವು.

ಹಬ್ಬ ಹರಿದಿನ, ಜಾತ್ರೆ ಉತ್ಸವಗಳನ್ನು ಬಹಳ ಸಂಭ್ರಮದಿಂದ ಆಚರಿಸುತ್ತಿದ್ದರು. ಜಾತ್ರೆಯ ಸಮಯದಲ್ಲಿ ಎಲ್ಲಾ ಜನರು ಒಂದು ಕಡೆ ಸೇರಿ ಸಾಮರಸ್ಯದಿಂದ ಹಬ್ಬಗಳನ್ನು ಆಚರಿಸುತ್ತಿದ್ದರು. ಗ್ರಾಮ ದೇವತೆಯ ಹಬ್ಬಗಳನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಈ ಸಮಯದಲ್ಲಿ ದೇವಾಲಯಗಳಲ್ಲಿ ವಿದ್ವತ್ ಘೋಷ್ಠಿಗಳನ್ನು ನಡೆಸಲಾಗುತ್ತಿತ್ತು. ಧರ್ಮೋಪದೇಶವನ್ನು ಜನರಿಗೆ ಬೋಧಿಸಲಾಗುತ್ತಿತ್ತು.

ಶಿಕ್ಷಣಕ್ಕೆ ದಳವಾಯಿಗಳು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದರು. ಅಗ್ರಹಾರಗಳನ್ನು ನಿರ್ಮಿಸಿ ಅವುಗಳ ಮುಖಾಂತರ ಶಿಕ್ಷಣವನ್ನು ನೀಡುತ್ತಿದ್ದರು. ಅಗ್ರಹಾರಗಳು ಅಂದಿನ ಕಾಲದ ವಿದ್ಯಾಕೇಂದ್ರ ಗಳಾಗಿದ್ದವು. ಅಗ್ರಹಾರಗಳನ್ನು ವೃತ್ತಿಗಳಾಗಿ ವಿಂಗಡಿಸಿ ಬ್ರಾಹ್ಮಣರಿಗೆ ನೀಡಲಾಗಿತ್ತು. ಮಠಗಳು ಸಹ ಶಿಕ್ಷಣ ಸಂಸ್ಥೆಗಳಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಸ್ತ್ರೀಯರು ಸಹ ಉನ್ನತ ಶಿಕ್ಷಣವನ್ನು ಪಡೆಯ ಬಹುದಾಗಿತ್ತು. ಅಂದಿನ ಸಮಾಜದಲ್ಲಿ ಬಹುಪತ್ನಿತ್ವ ಪದ್ಧತಿಯು ರೂಢಿಯಲ್ಲಿತ್ತು. ಅಂದರೆ ರಾಜವರ್ಗ ಹಾಗೂ ಉನ್ನತ ಅಧಿಕಾರಿಗಳು ಬಹುಪತ್ನಿತ್ವ ಪದ್ಧತಿಯನ್ನು ಅನುಸರಿಸುತ್ತಿದ್ದರು. ಸಾಮಾನ್ಯ ಜನರು ಏಕಪತ್ನಿತ್ವ ಪದ್ಧತಿಯನ್ನೇ ಅನುಸರಿಸಿ ಸಾಮಾನ್ಯ ಜೀವನವನ್ನು ನಡೆದುತ್ತಿದ್ದರು.

ಧಾರ್ಮಿಕ ದೃಷ್ಟಿಯಿಂದ ನೋಡಿದಾಗ ಮೈಸೂರು ಸಂಸ್ಥಾನವು ಎಲ್ಲಾ ಧರ್ಮದ ಜನರ ಸಂಗಮವಾಗಿತ್ತು. ಎಲ್ಲಾ ಧರ್ಮಗಳು ಸಹ ಅವರವರ ಆಚಾರಣೆಗಳನ್ನು ಮಾಡಲು ಯಾವುದೇ ರೀತಿಯ ಅಡ್ಡಿ ಆತಂಕಗಳು ಇರಲಿಲ್ಲ. ಎಲ್ಲಾ ಧರ್ಮೀಯರು, ದೇವಾಲಯಗಳನ್ನು ನಿರ್ಮಿಸಿಕೊಳ್ಳಲು ಅವಕಾಶವಿತ್ತು. ದಳವಾಯಿಗಳು ಹಿಂದೂ ಧರ್ಮೀಯರಾಗಿದ್ದರು. ಸಹ ಇತರ ಧರ್ಮಗಳಾದ ಜೈನ, ಇಸ್ಲಾಂ ಧರ್ಮಗಳಿಗೂ ಅಪಾರವಾದ ಪ್ರೋತ್ಸಾಹವನ್ನು ನೀಡಿದ್ದರು. ಒಟ್ಟಿನಲ್ಲಿ ದಳವಾಯಿಗಳ ಕಾಲ ಸಾಮರಸ್ಯದಿಂದ ಕೂಡಿತ್ತು ಎಂದು ಹೇಳಬಹುದು.

ಕಲೆ ಮತ್ತು ವಾಸ್ತುಶಿಲ್ಪದ ದೃಷ್ಟಿಯಿಂದ ದಳವಾಯಿಗಳ ಕಾಲವು ಸ್ವಲ್ಪಮಟ್ಟಿಗೆ ಹಿನ್ನಡೆಯನ್ನು ಕಂಡಿತು ಎಂದು ಹೇಳಬಹುದು. ಸಂಸ್ಥಾನದ ಅಧಿಕಾರವು ಎರಡು ಕಡೆ ಕೇಂದ್ರೀಕೃತವಾಗಿದ್ದರಿಂದ ಇವರ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಲಿಲ್ಲ. ಕೇವಲ ಕಳಲೆಯಲ್ಲಿ ಮಾತ್ರ ದೇವಾಲಯಗಳನ್ನು ನಿರ್ಮಿಸಿದರು. ಬೇರೆ ಕಡೆಯಲ್ಲಿ ದೇವಾಲಯಗಳನ್ನು ನಿರ್ಮಿಸಿರುವುದು ಕಂಡುಬರುವುದಿಲ್ಲ.

ಸಾಹಿತ್ಯ ಕ್ಷೇತ್ರಕ್ಕೆ ದಳವಾಯಿಗಳ ಕೊಡುಗೆಯು ಅಪಾರವಾದುದು. ಈ ಕಾಲದಲ್ಲಿ ಸಾಹಿತ್ಯವು ಉತ್ತಮ ಪ್ರೋತ್ಸಾಹವನ್ನು ಪಡೆಯುವುದರೊಂದಿಗೆ ಕೆಲವು ಉತ್ತಮ ಕೃತಿಗಳ ರಚನೆಗೆ ಕಾರಣರಾದರು. ದಳವಾಯಿಗಳು ಸ್ವತಃ ಕವಿಗಳಾಗಿದ್ದರಿಂದ ಸಾಹಿತ್ಯದ ಬೆಳವಣಿಗೆಗೆ ಸಹಾಯಕಾರಿಯಾದರು. ಕೆಲವು ಕೃತಿಗಳನ್ನು ಸ್ವತಃ ರಚಿಸಿದರು. ಇದರಲ್ಲಿ ಪ್ರಮುಖರೆಂದರೆ ವೀರರಾಜಯ್ಯ ಮತ್ತು ನಂಜರಾಜಯ್ಯ. ಇವರುಗಳು ಕನ್ನಡ ಸಾಹಿತ್ಯಕ್ಕೆ ನೀಡಿದಷ್ಟು ಕೊಡುಗೆಯನ್ನು ಸಂಸ್ಕೃತ ಸಾಹಿತ್ಯಕ್ಕೂ ನೀಡಿದ್ದರು. ಅಂದು ರಚನೆಯಾದ ಕೆಲವು ಕನ್ನಡ ಹಾಗೂ ಸಂಸ್ಕೃತ ಕೃತಿಗಳಿಂದ ದಳವಾಯಿಗಳ ಚರಿತ್ರೆಯನ್ನು ಕಟ್ಟಲು ತುಂಬ ಸಹಾಯಕವಾದ ಮೂಲ ಆಧಾರಗಳಾಗಿವೆ.

ಒಟ್ಟಾರೆಯಾಗಿ ಈ ಅಧ್ಯಯನದಿಂದ ಕಂಡುಕೊಂಡ ಕೆಲವು ಪ್ರಮುಖವಾದ ಅಂಶಗಳೆಂದರೆ, ಕಳಲೆಯ ದಳವಾಯಿಗಳು ಒಂದು ಸಣ್ಣ ರಾಜಮನೆತನವಾಗಿದ್ದುಕೊಂಡು ಮೈಸೂರು ಸಂಸ್ಥಾನದ ಆಡಳಿತ

ಚುಕ್ಕಾಣಿಯನ್ನು ಹಿಡಿದು ಸಂಸ್ಥಾನಕ್ಕೆ ಉತ್ತಮ ಕೊಡುಗೆಯನ್ನು ನೀಡುವುದರ ಜೊತೆಗೆ ಜನಸಾಮಾನ್ಯರ ಬದುಕಿನಲ್ಲಿ ಒಂದಾಗಿ ಅವರ ಸಮಸ್ಯೆಗಳನ್ನು ಹತ್ತಿರದಿಂದ ಗಮನಿಸಿದ್ದಲ್ಲದೆ, ಅದಕ್ಕೆ ಸ್ಪಂಧಿಸುತ್ತಿದ್ದರು. ಅಲ್ಲದೇ ರಾಜಕೀಯವಾಗಿ ಆಡಳಿತಾತ್ಮಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ ಇವರ ಕೊಡುಗೆಗಳು ಇಂದಿಗೂ ಸಹ ಇತಿಹಾಸದ ಪುಟಗಳಲ್ಲಿ ಉಳಿದುಕೊಂಡು ಬಂದಿದೆ ಎಂದು ಹೇಳಬಹುದು.

ಅನುಬಂಧ

೧. ನಕ್ಷೆ

೨. ಪರಾಮರ್ಶನ ಗ್ರಂಥ


೩. ಛಾಯಾಚಿತ್ರ


ನಕ್ಷೆ

ಮೈಸೂರು ಸಂಸ್ಥಾನ




1. ಮೈಸೂರು
೨. ಮಂಡ್ಯ
3. ಬೆಂಗಳೂರು
4. ಕೋಲಾರ
5. ತುಮಕೂರು
6. ಹಾಸನ
7. ಚಿಕ್ಕಮಗಳೂರು
8. ಶಿವಮೊಗ್ಗೆ
9. ಚಿತ್ರದುರ್ಗ





ಮೈಸೂರು ಜಿಲ್ಲಾ ನಕ್ಷೆ





ಗ್ರಂಥಋಣ

೧. ಅಪರ್ಣ ಕೂ.ಸ., ಕರ್ನಾಟಕ ವಾಸ್ತುಶಿಲ್ಪ ಪರಿಚಯ, ೧೯೯೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಇತಿಹಾಸ ದರ್ಶನಗಳು, ಸಂಪುಟ ೧ ರಿಂದ ೨೩, ೧೯೮೬-೨೦೦೮, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

೩. ಇಮ್ಮಡಿ ಶಿವಬಸವಸ್ವಾಮಿ, ಸಂಸ್ಕೃತ ಸಾಹಿತ್ಯಕ್ಕೆ ಕರ್ನಾಟಕದ ಕೊಡುಗೆ, ೧೯೯೧(ಅಪ್ರಕಟಿತ ಮಹಾಪ್ರಬಂಧ), ಮೈಸೂರು ವಿಶ್ವವಿದ್ಯಾಲಯ, ಮೈಸೂರು

೪. ಕನ್ನಡ ವಿಷಯ ವಿಶ್ವಕೋಶಗಳು, ಸಂಪುಟ ೧ ಮತ್ತು ೨, ೨೦೦೫-೨೦೦೭, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೫. ಕರ್ನಾಟಕದ ಪರಂಪರೆ, ಸಂಪುಟ ೨, ೨೦೦೭, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

೬. ಕಲಬುರ್ಗಿ ಎಂ.ಎಂ., ೧೯೭೦, ಶಾಸನಗಳಲ್ಲಿ ಶಿವಶರಣರು, ಸಿರಿಗನ್ನಡ ಪ್ರಕಾಶನ, ಧಾರವಾಡ

೭. ಕಲಬುರ್ಗಿ ಎಂ.ಎಂ., ೧೯೯೪, ಕರ್ನಾಟಕ ಕೈಫಿಯತ್ತುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ

೮. ಕೃಷ್ಣರಾವ್ ಎಂ.ವಿ ಮತ್ತು ಕೇಶವ ಭಟ್ಟ ಎಂ., ೧೯೭೦, ಕರ್ನಾಟಕ ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ, ಬೆಂಗಳೂರು

೯. ಗುಂಡಪ್ಪ ಡಿ.ವಿ., ೧೯೭೧, ಮೈಸೂರಿನ ದಿವಾನರುಗಳು, ಕಾವ್ಯಾಲಯ ಪ್ರಕಾಶನ, ಮೈಸೂರು

೧೦. ಗುರುರಾಜ್‌ರಾವ್ ಬಿ.ಕೆ., ೧೯೭೧, ಕರ್ನಾಟಕ ಲೋಹಯುಗ ಸಂಸ್ಕೃತಿಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೧೧. ಚಂದ್ರಶೇಖರ ಕಂಬಾರ, ೧೯೮೫, ಕನ್ನಡ ಜಾನಪದ ವಿಶ್ವಕೋಶ, ಕನ್ನಡ ಸಾಹಿತ್ಯ ಪರಿಷತ್, ಸಂಪುಟ ೧-೨, ಬೆಂಗಳೂರು

೧೨. ಚಂದ್ರಶೇಖರ ರಾ.ನಂ., ೨೦೦೫, ಇದು ನಮ್ಮ ಕರ್ನಾಟಕ, ನವಕರ್ನಾಟಕ ಪ್ರಕಾಶನ, ಬೆಂಗಳೂರು

೧೩. ಚಿದಾನಂದಮೂರ್ತಿ ಎಂ., ೧೯೭೬, ಶ್ರೀಕಂಠತೀರ್ಥ, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು

೧೪. ಚಿದಾನಂದಮೂರ್ತಿ ಎಂ., ೧೯೭೯, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೧೫. ಚಿದಾನಂದಮೂರ್ತಿ ಎಂ., ೨೦೦೨, ಸಂಶೋಧಾನ ತರಂಗ, ಸರಸ ಸಾಹಿತ್ಯ ಪ್ರಕಾಶನ, ಬೆಂಗಳೂರು

೧೬. ಚಿದಾನಂದಮೂರ್ತಿ ಎಂ., ೨೦೦೨, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ(ಕ್ರಿ.ಶ.೪೫೦-೧೧೫೦), ಸ್ವಪ್ನ ಬುಕ್ ಹೌಸ್, ಬೆಂಗಳೂರು, ತೃತೀಯ ಮುದ್ರಣ

೧೭. ಚಿದಾನಂದಮೂರ್ತಿ ಎಂ., ೨೦೦೪, ಬಸವಣ್ಣ ಕರ್ನಾಟಕ ಭಾರತ, ಸಪ್ನ ಬುಕ್ ಹೌಸ್, ಬೆಂಗಳೂರು

೧೮. ಚಿದಾನಂದಮೂರ್ತಿ ಎಂ., ೨೦೦೪, ಸ್ಥಾವರ : ಜಂಗಮ, ಸಂಪುಟ IV, ಸಪ್ನ ಬುಕ್ ಹೌಸ್, ಬೆಂಗಳೂರು

೧೯. ಚಿನ್ನಸ್ವಾಮಿ ಸೋಸಲೆ ಎನ್., ೧೯೯೭, ಸಾಮ್ರಾಜ್ಯ ಮತ್ತು ಸಂಸ್ಥಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦. ಚಿನ್ನಸ್ವಾಮಿ ಸೋಸಲೆ ಎನ್., ೨೦೦೪, ನಾಲ್ವಡಿ ಕೃಷ್ಣನ ಮೈಸೂರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೧. ಜೋಷಿ ಶಂ.ಬಾ., ೧೯೬೬, ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ, ಸಮಾಜ ಪುಸ್ತಕಾಲಯ, ಧಾರವಾಡ

೨೨. ತಿಪ್ಪೇರುದ್ರಸ್ವಾಮಿ ಎಚ್., ೧೯೬೮, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು

೨೩. ತಿರುಮಲೆ ತಾತಾಚಾರ್ಯ ಶರ್ಮ, ೧೯೯೭, ಮೈಸೂರು ಇತಿಹಾಸದ ಹಳೆಯ ಪುಟಗಳು, ನವನೀತ ಪ್ರಕಾಶನ, ಬೆಂಗಳೂರು

೨೪. ದಯಾನಂದ ತೂರ್ಕೆ, ೧೯೭೬, ಮೈಸೂರು ಒಡೆಯರು, ಕೀರ್ತಿ ಪ್ರಕಾಶನ, ಧಾರವಾಡ,

೨೫. ದೇವಚಂದ್ರ, ಸಣಯ್ಯ ಬಿ.ಎಸ್.(ಸಂ), ೧೯೮೮, ರಾಜಾವಳಿ ಕಥಾಸಾರ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೨೬. ದೇವರಕೊಂಡಾರೆಡ್ಡಿ, ೧೯೮೪, ತಲಕಾಡಿನ ಗಂಗರ ದೇವಾಲಯಗಳ ಒಂದು ಅಧ್ಯಯನ, ಕರ್ನಾಟಕ ಸಾಹಿತ್ಯ ಪರಿಷತ್, ಬೆಂಗಳೂರು

೨೭. ನರಸಿಂಹಾಚಾರ್ ಎಸ್.ಜಿ., ೧೮೯೫, ಚಿಕ್ಕದೇವರಾಜ ವಂಶಾವಳಿ, ಕರ್ನಾಟಕ ಕಾವ್ಯಾಮಂಜರಿ ಸದ್ವಿದ್ಯಾ ಮಂದಿರ, ಮೈಸೂರು

೨೮. ನರಸಿಂಹಚಾರ್ಯ ಆರ್., ೧೯೬೧, ಕರ್ನಾಟಕ ಕವಿಚರಿತ್ರೆ, ಸಂಪುಟ ೧, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

೨೯. ನರಸಿಂಹಾರ್ಯ ಆರ್., ೧೯೭೬, ಕರ್ನಾಟಕ ಕವಿ ಚರಿತ್ರೆ, ಸಂಪುಟ ೨, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

೩೦. ನಂಜಮ್ಮಣಿ ಎಂ., ೧೯೮೬, ಅರಸು ಜನಾಂಗ ಒಂದು ಅಧ್ಯಯನ, ಮೈಸೂರು ಅರಸು ಪರಿಷತ್, ಮೈಸೂರು

೩೧. ನಂಜರಾಜ ಅರಸು ಪಿ.ವಿ., ೨೦೦೭, ಮೈಸೂರು ನೂರಿನ್ನೂರು ವರ್ಷಗಳ ಹಿಂದೆ, ಅಭಿರುಚಿ ಗಣೇಶ, ಮೈಸೂರು

೩೨. ನಂಜುಂಡಸ್ವಾಮಿ ಎ.ಎಸ್., ೧೯೮೬, ಕರ್ನಾಟಕ ಪಾಳೆಗಾರರು ಮತ್ತು ಒಡೆಯರ ಇತಿಹಾಸ, ಸಮಾಜ ಪುಸ್ತಕಾಲಯ, ಧಾರವಾಡ

೩೩. ನಂಜುಂಡಾರಾಧ್ಯ ಕೆ.ಸಿ., ೧೯೪೦, ಕಳಲೆ ಅರಸು ವಂಶಾವಳಿ, ಹಸ್ತಪ್ರತಿ ಕೆ.ಬಿ.೭೭೬, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೩೪. ನಾಗರಾಜಯ್ಯ ಹಂ.ಪ., ೧೯೭೭, ತಿರುಮಾಲಾರ್ಯ ವಿರಚಿತ ಚಿಕ್ಕದೇವರಾಯ ವಂಶಾವಳಿ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

೩೫. ನಾಗರಾಜು ಹು.ಭೀ., ೧೯೮೮, ಹುಲ್ಲಹಳ್ಳಿ ದರ್ಶನ, ತೃಣಪುರಿ ಪ್ರಕಾಶನ, ಹುಲ್ಲಹಳ್ಳಿ

೩೬. ನಿರಂಜನ ಅರಸು ಎ.ಎನ್., ೧೯೯೩, ಮುಮ್ಮಡಿ ಶ್ರೀಕೃಷ್ಣರಾಜ ಮಹೀಪಾಲ, ವಂಶರತ್ನಾಕರ, ರಘುವೀರ ಪ್ರಿಂಟಿಂಗ್ ಪ್ರೆಸ್, ಮೈಸೂರು

೩೭. ಪರಮಶಿವಮೂರ್ತಿ ಡಿ.ವಿ., ೧೯೯೯, ಕನ್ನಡ ಶಾಸನ ಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೮. ಪರಮಶಿವಯ್ಯ ಜಿ.ಶಂ., ೧೯೭೯, ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೩೯. ಪಂಚಮುಖಿ ಆರ್.ಎಸ್., ೧೯೬೧, ಕರ್ನಾಟಕ ಅರಸು ಮನೆತನಗಳು, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ

೪೦. ಪಾಟೀಲ ಎಂ.ಬಿ.(ಸಂ), ೧೯೯೬, ಕರ್ನಾಟಕ ಕೈಪಿಡಿ, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು

೪೧. ಪುಟ್ಟಣ್ಣ ಎಂ.ಎಸ್., ೧೯೨೩, ಪಾಳೆಗಾರರ ಐದು ಉಪನ್ಯಾಸಗಳು, ದಿ ಪವರ್ ಪ್ರೆಂಟಿಂಗ್ ವರ್ಕ್ಸ್, ಚಿಕ್ಕಪೇಟೆ, ಬೆಂಗಳೂರು

೪೨. ಪ್ರಭಾಕರ್ ಎಂ.ಎಸ್., ೨೦೦೦, ದೇವಾಲಯ ವಾಸ್ತುಚಂದ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೩. ಬರಗೂರು ರಾಮಚಂದ್ರಪ್ಪ(ಸಂ), ೨೦೦೨, ಕರ್ನಾಟಕ ಸಂಗಾತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು,

೪೪. ಮಹಾದೇವ ದೇವನೂರು, ೧೯೭೬, ದೇವನೂರು ಮಹಾದೇವ ಅವರ ಕೃತಿಗಳು, ಪತ್ರಿಕೆ ಪ್ರಕಾಶನ, ಬೆಂಗಳೂರು,

೪೫. ಮಂಜುಳ ಹೆಚ್.ಪಿ., ೧೯೯೫, ಹೆಡತಲೆ ಗ್ರಾಮ ಜಾನಪದ ಒಂದು ಅಧ್ಯಯನ(ಅಪ್ರಕಟಿತ ಸಂಶೋಧನ ವರದಿ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೪೬. ಮಂಜುಳ ಹೆಚ್.ಪಿ., ೨೦೦೦, ನಂಜನಗೂಡು ಒಂದು ಸಾಂಸ್ಕೃತಿಕ ಅಧ್ಯಯನ, ಪ್ರೌಢ ಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೪೭. ಮೈಸೂರು ವಿದ್ಯಾಶಾಖೆ ಪ್ರಕಟಿತ, ೧೯೩೭, ಮೈಸೂರು ಕೈಪಿಡಿ, ಸರ್ಕಾರಿ ಮುದ್ರಣಲಾಯ, ಬೆಂಗಳೂರು

೪೮. ರಂಗನಾಥ್, ೧೯೯೯, ಪ್ರಾಕೃತಿಕ ಭೂಗೋಳ ಶಾಸ್ತ್ರ, ವಿದ್ಯಾನಿಧಿ ಪ್ರಕಾಶನ, ಗದಗ

೪೯. ರಂಗಸ್ವಾಮಯ್ಯ ಜಿ.ಎಸ್., ೧೯೮೬, ಕರ್ನಾಟಕದ ಸಂಕ್ಷಿಪ್ತ ಚರಿತ್ರೆ, ಅನಂತ ಪ್ರಕಾಶನ, ಮೈಸೂರು

೫೦. ರಾಮಕೃಷ್ಣರಾವ್ ಬಿ., ೧೯೧೬, ಶ್ರೀ ಮನ್ಮಹರಾಜರ ವಂಶಾವಳಿ, ಭಾಗ ೧, ಸರ್ಕಾರಿ ಮುದ್ರಾಣಾಲಯ, ಮೈಸೂರು

೫೧. ರಾಮಚಂದ್ರರಾವ್ ಎಂ.ಎಸ್., ೧೯೬೮, ಕಪಿಲಾಶ್ರಮ ವೈಭವ, ಎಚ್.ಬಿ.ಪ್ರಕಾಶನ, ಮೈಸೂರು

೫೨. ರಾಮಚಂದ್ರರಾವ್ ಎಸ್.ಕೆ., ೧೯೭೮, ಮೂರ್ತಿ ಶಿಲ್ಪ ನೆಲೆ ಹಿನ್ನೆಲೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೫೩. ರಾಜಶೇಖರ್ ಎಸ್., ೧೯೮೮, ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಸುಜಾತಾ ಪಬ್ಲಿಕೇಶನ್ಸ್, ಧಾರವಾಡ

೫೪. ರಾಮಯ್ಯ ಬಿ., ೧೯೩೨, ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿ, ದೇವಸ್ಥಾನದ ಮ್ಯಾನ್ಯೂಯಲ್ ಕೈಪಿಡಿ, ಗವರ್ನಮೆಂಟ್ ಪ್ರೆಸ್, ಮೈಸೂರು

೫೫. ರಾಮಶೇಷ ದೀಕ್ಷಿತ್ ಆಗಮಿಕ್, ೨೦೦೨, ನಂಜನಗೂಡು ಶ್ರೀ ಕಂಠೇಶ್ವರ ಕ್ಷೇತ್ರ, ಮಹಾತ್ಮ (ಶ್ರೀಗರಳಪುರಿ), ಚಿತ್ರಾ ಪ್ರಿಂಟರ್ಸ್, ಬೆಂಗಳೂರು

೫೬. ಲಿಂಗಯ್ಯ ಎಂ.ಕೆ., ೧೯೮೨, ಮೈಸೂರು ಒಂದು ಅಧ್ಯಯನ, ಪ್ರಸಾರಾಂಗ, ಮೈಸೂರು. ವಿಶ್ವವಿದ್ಯಾಲಯ, ಮೈಸೂರು

೫೭. ವೆಂಕಟರಾಮಯ್ಯ ಸಿ.ಕೆ., ೧೯೪೧, ಆಳಿದ ಮಹಾಸ್ವಾಮಿಯವರು, ಬೆಂಗಳೂರು ಪ್ರೆಸ್, ಬೆಂಗಳೂರು

೫೮. ವೇಣುಪುರದ ಕ್ಷತ್ರೀಯರ ವಂಶಾವಳಿ, ಹಸ್ತಪ್ರತಿ ಕೆ.ಬಿ.೪೨೪, ೧೮೫೦, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೫೯. ಶಾಲಿನಿ ರಘುನಾಥ, ಸ್ಥಳನಾಮ, ೨೦೦೧, ಸ್ಥಳೀಯ ಚರಿತ್ರ ಪುರಾತತ್ವ ಮಾಲೆ ೨, ಹಾನಗಲ್ಲು, ವಾಸುದೇವ ಬಡಿಗೇರ (ಸಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೦. ಶಿವಕಾರತ್ ಕೆ.ಬಿ., ಕರ್ನಾಟಕದ ಪುರಾತತ್ವ ನೆಲೆಗಳು, ೨೦೦೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೧. ಶೇಷಗಿರಿರಾವ್ ಎಲ್.ಎಸ್., ೧೯೯೪, ಕಿರಿಯರ ಕರ್ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೨. ಶೇಷಶಾಸ್ತ್ರಿ ಆರ್., ೧೯೮೨, ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

೬೩. ಶ್ರೀಧರ್ ಬಿ.ಎಚ್., ೧೯೮೮, ಭಾರತೀಯ ಮೂರ್ತಿಶಿಲ್ಪ, ರಂಗಸಂಗ ಮತ್ತು ಕಲಾರಂಗ, ಶಿರಸಿ

೬೪. ಸೂರ್ಯನಾಥ ಯು. ಕಾಮತ್, ೧೯೮೫, ಕರ್ನಾಟಕ ಗ್ಯಾಸೆಟಿಯರ್, ಸಂಪುಟ-೨, ಕರ್ನಾಟಕ ಸರ್ಕಾರ, ಬೆಂಗಳೂರು,

೬೫. ಜ್ಞಾನಾನಂದ ಜಿ., ೨೦೦೧, ಶಿಲ್ಪಾದರ್ಶ, ಭಾಗ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬೬. ಜ್ಞಾನಾನಂದ ಜಿ., ೨೦೦೪, ಶಿಲ್ಪಾದರ್ಶ, ಭಾಗ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಇಂಗ್ಲೀಷ್ ಗ್ರಂಥಗಳು

1. Agrawala P.K., 1994, **Studres in Indian Iconograplogy,** Publication Scheme, Jaipur

2. Buchenen Francis, **A Journey from Madras through the countries of Mysore,** Canara and Malaber, Vol.2, Fist edition 1800, Revised edition 1980

3. Burgess James, 1972, **The Chronology of Indian History Medival and Modern,** Cosmo Publications, Delhi,

4. Gopinatha Rao T.A., **Elements of Hindu Iconography, Vol.1, Part 1,** Motilal Banarasidass Publisers, Delhi, First Published 1914, Reprint 1985, 1993

5. Hayavadan Rao C., 1928, 1942, 1948, **History of Mysore, Vol.1,2,3,** Government Press, Bangalore

6. Herbar H., 1980, **South Indian under the Vijayanagar Empire,** Part-II, Cosmo Publications, New Delhi

7. Srinivasn P.R., 1982, **The Indian Temple Art and Architecture,** Prasaranga, Mansagangothri, Mysore

8. Subba Rao N., 1976, **Two Centaries of Woderyors Rule in Mysore,** Abinava Prakshan, Mysore

9. Vikram Sampath, 2008, **The Splendours of Royal Mysore,** Rupa Company Published, New Delhi

ಛಾಯಾಚಿತ್ರಗಳು



ಶ್ರೀ ಲಕ್ಷ್ಮೀಕಾಂತ ದೇವಾಲಯ



ಉತ್ಸವ ಮಂಟಪ



ಕಾರ್ತಿಕ ಮಂಟಪ



ನವರಾತ್ರಿ ಮಂಟಪ



ಶ್ರೀ ಲಕ್ಷ್ಮೀಕಾಂತ ಸ್ವಾಮಿ ಶಿಲ್ಪ



ಶ್ರೀ ಲಕ್ಷ್ಮೀಕಾಂತ ಸ್ವಾಮಿಯತೇರು



ಪುಷ್ಕಾರಣಿ (ಕಲ್ಯಾಣಿ)



ಸೋಮೇಶ್ವರ ದೇವಾಲಯ



ಪಟ್ಟದ ಚಾವಡಿ



ಇಟ್ಟಿಗೆ ಮಾಳಿಗಮ್ಮ ಗುಡಿ



ಕೈವಲ್ಯದೇವಿಶಿಲ್ಪ



ಕೈವಲ್ಯದೇವಿ ದೇವಾಲಯ



ರೇವಣಸಿದ್ಧೇಶ್ವರ ದೇವಾಲಯ



ರೇವಣಸಿದ್ಧೇಶ್ವರ ದೇವಾಲಯದ ಮುಂದೆ
ಇರುವ ವೀರಗಲ್ಲು



ಉತ್ಸವ ಮೂರ್ತಿ



ಚಲುವಾಂಬುದಿ ಕೆರೆ